ಭಾನುವಾರ, ಜೂನ್ 22, 2025 ₹ 7.00 • www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಾರಿ ಕಳ್ಳ

ಸುಮಾರು ₹2 ಕೋಟಿ ಮೊತ್ತದ 11 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಕೆಕಿಟುವೊ ಎಂಬ ಸರ್ಕಾರಿ ನೌಕರನನ್ನು ನಾಗಾಲ್ಯಾಂಡ್ ಪೊಲೀಸರು ಬಂಧಿಸಿದ್ದಾರೆ

ಪಂತ್ ಶತಕ



ಭಾರತದ ಬ್ಯಾಟರ್– ವಿಕೆಟ್ ಕೀಪರ್ ರಿಷಭ್ ಪಂತ್ ಅವರು ಲೀಡ್ಸ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಶತಕ ದಾಖಲಿಸಿದರು

134ರನ್ 178 ಎಸೆತ
12 ಬೌಂಡರಿ, 6 ಸಿಕ್ಸರ್

2.5 ಲಕ್ಷ ಟನ್ ಮಾವು ಖರೀದಿಗೆ ಕೇಂದ್ರ ಒಪ್ಪಿಗೆ 8

ವಿರಳ ಗುಂಪಿನ ರಕ್ತದಾನಿಗಳ 'ರಿಜಿಸ್ಟ್ರಿ' ಸಿದ್ಧ 9



ಗೌರವಾನ್ವಿತ ಮಾಜಿ ಪ್ರಧಾನಮಂತ್ರಿಗಳಾದ

ಶ್ರೀ ಹೆಚ್.ಡಿ. ದೇವೇಗೌಡ

ಅವರಿಗೆ

ಶ್ರೀ ಗಂಗ ಸಾಮ್ರಾಟ ಶ್ರೀ ಪುರುಷ ಪ್ರಶಸ್ತಿ ಪ್ರದಾನ ಸಮಾರಂಭ



ಹಾಗೂ ಮಾಜಿ ಪ್ರಧಾನಮಂತ್ರಿ
ಶ್ರೀ ಹೆಚ್.ಡಿ ದೇವೇಗೌಡ
ಅವರ ಬದುಕು ಮತ್ತು ಸಾಧನೆ ಪುಸ್ತಕದ
ಜನಾರ್ಪಣೆ ಹಾಗೂ ಗೀತ ನಮನ ಮತ್ತು

93 ವಿವಿಧ ಸಾಧಕರಿಗೆ


ಶ್ರೀ ಹೆಚ್.ಡಿ. ದೇವೇಗೌಡ ಪ್ರಶಸ್ತಿ ಪ್ರದಾನ ಸಮಾರಂಭ



ದಿನಾಂಕ : 22 ಜೂನ್ 2025, ಭಾನುವಾರ **ಸಮಯ :** ಮಧ್ಯಾಹ್ನ 2:00 ಗಂಟೆಗೆ
ಸ್ಥಳ : ಡಾ. ಬಾಬು ಜಗಜೀವನ್ ರಾಮ್ ಭವನ, ಹೊರವರ್ತುಲ ರಸ್ತೆ,
ಸುಮ್ಮನಹಳ್ಳಿ, ಜಂಕ್ಷನ್ ಹತ್ತಿರ, ಬೆಂಗಳೂರು- 560091

ಶ್ರೀ ಹೆಚ್. ಡಿ. ದೇವೇಗೌಡ ಅಭಿನಂದನಾ ಸಮಿತಿ
ಬೆಂಗಳೂರು ವತಿಯಿಂದ

ಸರ್ವರಿಗೂ ಆದರದ ಸ್ವಾಗತ



ಶ್ರೀ ಟಿ.ಎನ್. ಜವರಾಯಿಗೌಡರು
ಮಾನ್ಯ ವಿಧಾನ ಪರಿಷತ್ ಸದಸ್ಯರು

ಭಾನುವಾರ, ಜೂನ್ 22, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 172 | ಪುಟ 20
www.prajavani.net prajavani.net prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಿವ್ವಳ ನೇರ ತೆರಿಗೆ ಸಂಗ್ರಹ ಇಳಿಕೆ 8 | ರಾಹುಲ್–ಚುನಾವಣಾ ಆಯೋಗ ಜಟಾಪಟಿ 9

ಕಂದನ ಯೋಗ



ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ನವದೆಹಲಿಯ ಕರ್ತವ್ಯಪಥದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬಾಲಕ ಯೋಗಾಭ್ಯಾಸ ನಡೆಸಿದ ಪರಿ

ಚೋಪ್ರಾ ಮಿಂಚು



ಭಾರತದ ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಅವರು ಪ್ಯಾರಿಸ್‌ನಲ್ಲಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ 88.16 ಮೀಟರ್ ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದರು

ಇ–ಹಾಜರಾತಿ ಕಡ್ಡಾಯ

ಇದೇ ಶೈಕ್ಷಣಿಕ ಸಾಲಿನಿಂದಲೇ ಜಾರಿಗೆ ಆದೇಶ • ₹5 ಕೋಟಿ ವೆಚ್ಚಕ್ಕೆ ಸಮ್ಮತಿ

> ಇ–ಹಾಜರಾತಿಯು ಪ್ರತಿಯೊಬ್ಬ ವಿದ್ಯಾರ್ಥಿಯೂ ಶಾಲೆಗೆ ಬರುವುದನ್ನು ಖಾತರಿಪಡಿಸಲಿದೆ. ಇದರಿಂದ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ಸಿಗಲಿದೆ
> **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

46,460	6,226	52,686	40.74 ಲಕ್ಷ	11.81 ಲಕ್ಷ	52.55 ಲಕ್ಷ
ಸರ್ಕಾರಿ ಶಾಲೆಗಳು	ಅನುದಾನಿತ ಶಾಲೆಗಳು	ಒಟ್ಟು ಶಾಲೆಗಳು	ಸರ್ಕಾರಿ ಶಾಲೆ ವಿದ್ಯಾರ್ಥಿಗಳು	ಅನುದಾನಿತ ಶಾಲಾ ಮಕ್ಕಳು	ಒಟ್ಟು ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ, ನಕಲಿ ದಾಖಲಾತಿ ತೋರಿಸಿ ಸರ್ಕಾರದ ವಿವಿಧ ಸೌಲಭ್ಯ ಪಡೆಯುತ್ತಿರುವ ಶಾಲೆಗಳ ಕಲ್ಯಾಟಕ್ಕೆ ತಡೆ ಹಾಕಲು ಮುಂದಾಗಿರುವ ಶಿಕ್ಷಣ ಇಲಾಖೆ, 'ಇ–ಹಾಜರಾತಿ' ಕಡ್ಡಾಯದತ್ತ ಹೆಜ್ಜೆ ಇಟ್ಟಿದೆ.

ಇದೇ ಶೈಕ್ಷಣಿಕ ಸಾಲಿನಿಂದಲೇ ಸರ್ಕಾರಿ ಹಾಗೂ ಸರ್ಕಾರದ ಅನುದಾನ ಪಡೆಯುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳಿಗೆ 'ಇ–ಹಾಜರಾತಿ' ಕಡ್ಡಾಯಗೊಳಿಸುವ ಆದೇಶವನ್ನೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಮಕ್ಕಳ ಮುಖಚರ್ಯೆ ಗುರುತಿಸುವ ಮೂಲಕ ಇ–ಹಾಜರಾತಿ ದಾಖಲಿಸುವ 'ನಿರಂತರ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಾಗಿ ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ ಅವರನ್ನು ಯೋಜನೆಯ ಅನುಷ್ಠಾನಾಧಿಕಾರಿಯನ್ನಾಗಿ ನೇಮಿಸಿದೆ.

9

ಮುಖ್ಯಾಂಶಗಳು

- ಇ–ಹಾಜರಾತಿ ಜಾರಿಗೆ ಮಾಡಿದ ಮೂರನೇ ರಾಜ್ಯ ಕರ್ನಾಟಕ
- ಈಗಾಗಲೇ ಅನುಷ್ಠಾನ ಮಾಡಿದ ರಾಜ್ಯ ತೆಲಂಗಾಣ, ಅಸ್ಸಾಂ

'ಮರು ಗಣತಿಗೆ ಶಿಕ್ಷಕರ ಬಳಕೆ ಇಲ್ಲ'



ಶಿವಮೊಗ್ಗ: 'ರಾಜ್ಯ ಸರ್ಕಾರ ಮತ್ತೊಮ್ಮೆ ನಡೆಸಲಿರುವ ಜಾತಿ ಗಣತಿಗೆ ಸರ್ಕಾರಿ ಶಾಲಾ ಶಿಕ್ಷಕರನ್ನು ಬಳಕೆ ಮಾಡುವುದಿಲ್ಲ. ಬದಲಿಗೆ ಗಣತಿಯ ಹೊಣೆಯನ್ನು ಹೊರಗುತ್ತಿಗೆಗೆ ವಹಿಸಲು ಯೋಚಿಸಲಾಗಿದೆ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

'ಸಮೀಕ್ಷೆ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸಿದರೆ ವಿದ್ಯಾರ್ಥಿಗಳ ಪಾಠ– ಪ್ರವಚನಕ್ಕೆ ತೊಂದರೆಯಾಗಲಿದೆ ಎಂಬುದನ್ನು ಈಗಾಗಲೇ ಸಂಬಂಧಿಸಿದ ಇಲಾಖೆಗಳಿಗೆ ಸ್ಪಷ್ಟಪಡಿಸಿದ್ದೇನೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 'ಎಐಸಿಸಿ ನಾಯಕ ರಾಹುಲ್ ಗಾಂಧಿ ಹಾಗೂ ಜನಾಭಿಪ್ರಾಯದ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ಜಾತಿ ಸಮೀಕ್ಷೆಗೆ ಮುಂದಾಗಿದೆ. ಬಿಜೆಪಿ ರಾಜಕೀಯ ಲಾಭದ ಆಶಯದೊಂದಿಗೆ ಈ ಸಮೀಕ್ಷೆ ನಡೆಸಲಿದೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ, ಸಂವಿಧಾನದತ್ತ ಅವಕಾಶಗಳು ರಾಜ್ಯದ ಕಟ್ಟಕಡೆಯ ವ್ಯಕ್ತಿಗೂ ದೊರೆಯಲಿ ಎಂಬ ಆಶಯದೊಂದಿಗೆ ಮತ್ತೊಮ್ಮೆ ಜಾತಿಗಣತಿಗೆ ಮುಂದಾಗಿದೆ. ಹೀಗಾಗಿ ರಾಜ್ಯದ ಜಾತಿಗಣತಿಯೇ ಹೆಚ್ಚು ನಿಖರ, ಸ್ಪಷ್ಟ ಹಾಗೂ ವಿಶ್ವಾಸಾರ್ಹವಾಗಿರಲಿದೆ' ಎಂದು ಹೇಳಿದರು.

9

ಕೋಟಿ ಸುರಿದರೂ ಸರಿಯಾಗದ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವಸತಿಶಾಲೆಗಳು

ಹದಗೆಟ್ಟ ಹಾಸ್ಟೆಲ್ 'ಆರೋಗ್ಯ'

• ರಾಜೇಶ್ ರೈ ಚಟ್ಲ

ಒಳನೋಟ

ಬೆಂಗಳೂರು: 'ಸೋಲಾರ್ ವ್ಯವಸ್ಥೆ ಇದ್ದರೂ ಬಿಸಿನೀರು ಸಿಗುವುದಿಲ್ಲ. ಮತ್ತಷ್ಟು ಅನ್ನ ಕೇಳಿದರೆ ಸೌಟಿನಿಂದ ಹೊಡೆಯುತ್ತಾರೆ...'– ಕೊಪ್ಪಳ ನಗರದಲ್ಲಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದ ವಿದ್ಯಾರ್ಥಿಗಳು ತೋಡಿಕೊಂಡ ನೋವಿದು.

'ಶೌಚಾಲಯ, ಸ್ನಾನಗೃಹದ ಕೋಣೆಗಳಿಗೆ ಬಾಗಿಲುಗಳಿಲ್ಲ. ಸ್ವಚ್ಛತೆ ಮೊದಲೇ ಇಲ್ಲ. ನೀರಿನ ಬಾಟಲಿ, ತಂಬಿಗೆ ಹಿಡಿದುಕೊಂಡು ಶೌಚಕ್ಕೆ ಬೆಟ್ಟ ಗುಡ್ಡವೇ ಆಶ್ರಯ'– ಯಾದಗಿರಿ ನಗರದ ಸರ್ಕಾರಿ ಸಾರ್ವಜನಿಕ ಬಾಲಕರ ವಸತಿ ನಿಲಯವೊಂದರ ವಿದ್ಯಾರ್ಥಿಗಳ ಅಳಲಿದು.

'ಹುಳು ಹತ್ತಿದ ದಿನಸಿ, ಕಲ್ಲು ಮಿಶ್ರಿತ ಅಕ್ಕಿ, ಕಡಲೆ, ನುಸಿತಿಂದ ಕಾಳು, ರವೆಯಲ್ಲೂ ಹುಳಗಳ ಕಾಟ, ಬೂಸ್ಟ್ ಹಿಡಿದ ಶೇಂಗಾ, ಕೊಳೆತ ತರಕಾರಿ. ಪ್ರಶ್ನಿಸಿದರೆ ವಾರ್ಡನ್ ಧಮ್ಕಿ ಹಾಕುತ್ತಾರೆ... ಗದಗದ ಮೆಟ್ರಿಕ್ ನಂತರ ವಸತಿ ನಿಲಯವೊಂದರ ವಿದ್ಯಾರ್ಥಿಗಳ ಗೋಳು.

ನಿಲಯದ ಊಟ ತೀರ ಕಳಪೆಯಾಗಿದೆ. ಬೇಳೆ ಕಾಳುಗಳು ಬೆಂದಿರುವುದಿಲ್ಲ. ತರಕಾರಿ ಬೇಕಾಬಿಟ್ಟಿಯಾಗಿ ಮಾಡಲಾಗುತ್ತಿದೆ. ಗುಣಮಟ್ಟದ ಊಟ ನೀಡುವಂತೆ ಮನವಿ ಮಾಡಿಕೊಂಡರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ... ತಿಪಟೂರಿನಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವೊಂದರ ವಿದ್ಯಾರ್ಥಿಗಳ ಆರೋಪ.


ಹುಳು ಇರುವ ಅನ್ನ. ನೀರೇ ಸಾಂಬರ್. ಅರೆಬೆಂದ ದೋಸೆ, ಉಪಾಹಾರ. ಕಳಪೆ ಊಟ ಮಾಡಲು ಸಾಧ್ಯವಾಗದೆ ಅನೇಕ ಬಾರಿ ಉಪವಾಸ ಮಲಗಿದ್ದೇವೆ– ಕುಷ್ಟಗಿಯ ಮೆಟ್ರಿಕ್ ಪೂರ್ವ ವಸತಿ ನಿಲಯದ ವಿದ್ಯಾರ್ಥಿನಿಯರ ನೋವು

ಇವು ಕೆಲವು ಉದಾಹರಣೆಗಳಷ್ಟೆ. ವಿದ್ಯಾರ್ಥಿಗಳ ಈ ಮಾತಿಗೆ ಅಲ್ಲಿ ಸಾಕ್ಷ್ಯಗಳೂ ಇವೆ. ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿರುವ ಬಹುತೇಕ ವಿದ್ಯಾರ್ಥಿನಿಲಯಗಳು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ (ಕ್ರೈಸ್) ಅಧೀನದಲ್ಲಿರುವ ವಸತಿಶಾಲೆಗಳಲ್ಲಿ ಇಂತಹ ನೂರಾರು ಕಥೆಗಳಿವೆ.


ಬಾಗಿಲೇ ಇಲ್ಲದ ಶೌಚಾಲಯಗಳು. ಆವರಣ ಗೋಡೆ ಇಲ್ಲದ ಶಿಥಿಲ ಕಟ್ಟಡಗಳು. ಮುರಿದ ಮೇಜು, ಕುರ್ಚಿ. ಕಾಲುಗಳಿಲ್ಲದ ಮಂಚ. ಹರಿದ ಹಾಸಿಗೆ– ದಿಂಬು, ಚಾಪೆಗಳು.

6

1,972	1,87,200
ರಾಜ್ಯದಲ್ಲಿರುವ ವಿದ್ಯಾರ್ಥಿನಿಲಯ	ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳು
860	2.43 ಲಕ್ಷ
ರಾಜ್ಯದಲ್ಲಿರುವ ವಸತಿ ಶಾಲೆಗಳು	ವಸತಿ ಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳು



ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸದಲಗಾದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡದ ದುಸ್ಥಿತಿ ಇದು



> ವಸತಿಶಾಲೆಗಳಲ್ಲಿ ಮೂಲಸೌಲಭ್ಯಗಳ ಕೊರತೆ ನಿವಾರಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಬಾಡಿಗೆ ಮತ್ತು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ವಸತಿಶಾಲೆಗಳು ಸಲ್ಲಿಸಿರುವ ಬೇಡಿಕೆಗಳ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ವಿದ್ಯಾರ್ಥಿಗಳಿಗೆ ಬೇಕಾಗುವ 13 ಬಗೆಯ ಪರಿಕರಗಳ ಪೈಕಿ 7 ಪರಿಕರಗಳ ಖರೀದಿಗೆ ಈಗಾಗಲೇ ಕೆಟಿಟಿಪಿ ಕಾಯ್ದೆಗೆ ಅನುಗುಣವಾಗಿ ಟೆಂಡರ್ ಆಹ್ವಾನಿಸಲಾಗಿದೆ. ಉಳಿದ ವಸ್ತುಗಳ ಖರೀದಿಗೆ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.
> **ಪಿ.ಎಸ್. ಕಾಂತರಾಜು,** ಕಾರ್ಯನಿರ್ವಾಹಕ ನಿರ್ದೇಶಕ, ಕ್ರೈಸ್

ಇಂಡಿಗೊ ವಿಮಾನ ತುರ್ತು ಭೂಸ್ಪರ್ಶ

ಇಂಧನ ಕಡಿಮೆ ಇದ್ದ ಕಾರಣ 'ಮೇಡೇ' ಎಂದಿದ್ದ ಪೈಲಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು/ಚೆನ್ನೈ: ಗುವಾಹಟಿಯಿಂದ ಚೆನ್ನೈಗೆ ಹೊರಟಿದ್ದ ಇಂಡಿಗೊ ವಿಮಾನವು 'ಇಂಧನ ಕೊರತೆ'ಯಿಂದಾಗಿ ಗುರುವಾರ ರಾತ್ರಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿತ್ತು.

ಗುವಾಹಟಿಯಿಂದ 168 ಪ್ರಯಾಣಿಕರೊಂದಿಗೆ ಟೇಕಾಫ್ ಆಗಿದ್ದ ಇಂಡಿಗೊ ಏರ್‌ಬಸ್ ಎ–312 ವಿಮಾನವು ಚೆನ್ನೈ ವಿಮಾನ ನಿಲ್ದಾಣದಲ್ಲಿ ರಾತ್ರಿ 7.45ಕ್ಕೆ ಇಳಿಯಬೇಕಿತ್ತು. ಆದರೆ, ದಟ್ಟಣೆಯಿಂದಾಗಿ ನಿಗದಿತ ಸಮಯದಲ್ಲಿ ಚೆನ್ನೈನಲ್ಲಿ ಲ್ಯಾಂಡಿಂಗ್ ಸಾಧ್ಯವಾಗದ ಕಾರಣ ಆಗಸದಲ್ಲೇ ಸುತ್ತುವಂತೆ ಸೂಚಿಸಲಾಯಿತು.

9

ಏರ್ ಇಂಡಿಯಾ ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಆದೇಶ

ನವದೆಹಲಿ: ಟಾಟಾ ಸಮೂಹ ಒಡೆತನದ ಏರ್ ಇಂಡಿಯಾ ಸಂಸ್ಥೆಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಎರಡು ನೋಟಿಸ್ ರವಾನಿಸಿದೆ.

ಕರ್ತವ್ಯಲೋಪದ ಕಾರಣ ಏರ್ ಇಂಡಿಯಾದ ವಿಭಾಗೀಯ ಉಪಾಧ್ಯಕ್ಷ ಸೇರಿ ಮೂವರು ಹಿರಿಯ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕು, ಸಿಬ್ಬಂದಿಯ ಕರ್ತವ್ಯ ಅವಧಿಯ ಮಿತಿ (ಎಫ್‌ಡಿಟಿಎಲ್) ನಿಯಮವನ್ನು ಉಲ್ಲಂಘಿಸಿದ ಕುರಿತು ವಿವರಣೆ ನೀಡಬೇಕು ಎಂದು ಕೇಳಿದೆ..

ಇನ್ನಷ್ಟು ವಿವರ 9

ಸಿಇಟಿ ಕೌನ್ಸೆಲಿಂಗ್ ಮತ್ತಷ್ಟು ವಿಳಂಬ

ಪ್ರಜಾವಾಣಿ ವಾರ್ತೆ


ಬೆಂಗಳೂರು: ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ–2025) ಫಲಿತಾಂಶ ಪ್ರಕಟವಾಗಿ ಒಂದು ತಿಂಗಳಾದರೂ ವಿವಿಧ ಕೋರ್ಸ್‌ಗಳಲ್ಲಿ ಲಭ್ಯವಿರುವ ಸೀಟುಗಳ ಪಟ್ಟಿ ಅಂತಿಮಗೊಂಡಿಲ್ಲ. ಹಾಗಾಗಿ, ಕೌನ್ಸೆಲಿಂಗ್ ಪ್ರಕ್ರಿಯೆ ಇನ್ನೂ ಒಂದು ವಾರ ವಿಳಂಬವಾಗಲಿದೆ.

2025–26ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಬಯಸಿ 3.11 ಲಕ್ಷ ವಿದ್ಯಾರ್ಥಿಗಳು ಸಿಇಟಿ ಬರೆದಿದ್ದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೇ 24ರಂದು ಫಲಿತಾಂಶ ಪ್ರಕಟಿಸಿತ್ತು. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿದ್ದ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ (ನೀಟ್)–2025ರ ಫಲಿತಾಂಶವೂ ಇದೇ ಜೂನ್ 14ರಂದು ಪ್ರಕಟವಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೀಟ್ ಅಂಕಗಳ ಆಧಾರದಲ್ಲಿ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಮಾಡುತ್ತದೆ. ಮೊದಲ ಸುತ್ತು ಮುಗಿಯುತ್ತಿದ್ದಂತೆ ಎಂಜಿನಿಯರಿಂಗ್ ಸೇರಿದಂತೆ ಇತರೆ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಆರಂಭಿಸುತ್ತದೆ.

9

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ನಗರದಲ್ಲಿ ಸಂಭ್ರಮದ ಯೋಗಾಭ್ಯಾಸ



ಅಕ್ಷರ ಯೋಗ ಕೇಂದ್ರ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಗರದ ಜನರೊಂದಿಗೆ ವಿದೇಶಿಗರು ಯೋಗಾಭ್ಯಾಸ ಮಾಡಿದರು

20 ಸಾವಿರ ಜನರಿಂದ ಯೋಗ

ಆರ್ಟ್ ಆಫ್ ಲಿವಿಂಗ್ ಅಂತರ ರಾಷ್ಟ್ರೀಯ ಕೇಂದ್ರದಲ್ಲಿ ಶ್ರೀ ಶ್ರೀ ರವಿಶಂಕರ ವಿದ್ಯಾ ಮಂದಿರ ಟ್ರಸ್ಟ್‌ನ 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ (ಆನ್‌ಲೈನ್ ವೇದಿಕೆ ನೆರವು) ಯೋಗಾಭ್ಯಾಸ ಮಾಡಿದರು. ಬಳಿಕ ಸಾಮೂಹಿಕ ಧ್ಯಾನ ನಡೆಸಲಾಯಿತು.

ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ಯೋಗ ಶಿಕ್ಷಕರ ನೇತೃತ್ವದಲ್ಲಿ 1,500ಕ್ಕೂ ಹೆಚ್ಚು ಸ್ಥಳಗಳಲ್ಲಿ ಯೋಗಾಸನಗಳು ನಡೆದವು.

ವಿವಿಧೆಡೆ ಯೋಗ ದಿನ ಆಚರಣೆ ಗಮನ ಸೆಳೆದ ಯೋಗ ಪಟುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯ ರಶ್ಮಿ ಭೂ ಸ್ಪರ್ಶ ಮಾಡುವ ಮುನ್ನವೇ ಸಿಲಿಕಾನ್ ಸಿಟಿಯ ಹಲವೆಡೆ ‘ಉತ್ತಮ ಆರೋಗ್ಯ’ಕ್ಕಾಗಿ ಜನರು ಶನಿವಾರ ಯೋಗಾಭ್ಯಾಸ ಮಾಡಿದರು. ಯೋಗಪಟುಗಳ ಮಾರ್ಗದರ್ಶನದಲ್ಲಿ ವಿವಿಧ ಆಸನಗಳನ್ನು ಮಾಡುವ ಮೂಲಕ ಸಂಭ್ರಮಿಸಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ವಿವಿಧ ಸಂಘ–ಸಂಸ್ಥೆಗಳು, ಯೋಗ ತರಬೇತಿ ಕೇಂದ್ರಗಳು, ಶಾಲಾ–ಕಾಲೇಜುಗಳು ಸಾಮೂಹಿಕ ಯೋಗಾಸನ ಹಮ್ಮಿಕೊಂಡಿದ್ದವು. ಮುಂಜಾನೆಯೇ ಜನರು ಯೋಗ ಮ್ಯಾಟ್ ಹಿಡಿದು ಮೈದಾನ, ಉದ್ಯಾನಗಳಿಗೆ ತೆರಳಿ, ವಿವಿಧ ಆಸನ, ಸೂರ್ಯ ನಮಸ್ಕಾರ, ಪ್ರಾಣಾಯಾಮ ಮಾಡಿದರು. ಯೋಗಪಟುಗಳು ಸೂಕ್ತ ಮಾರ್ಗದರ್ಶನ ನೀಡಿದರು.

ಆಯುಷ್ ಇಲಾಖೆಯು ವಿಧಾನ ಸೌಧದ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸುಮಾರು ಮೂರು ಸಾವಿರ ಮಂದಿ ಪಾಲ್ಗೊಂಡಿದ್ದರು. ಬೆಳಿಗ್ಗೆ 6 ಗಂಟೆಗೆ ನಗರದ ವಿವಿಧೆಡೆಯಿಂದ ಬಂದ ಯೋಗಾಸಕ್ತರು, 9 ಗಂಟೆವರೆಗೂ ಯೋಗಾಭ್ಯಾಸ ಮಾಡಿದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಗಡಿಯಾರ ಗೋಪುರದ ಬಳಿ ಯೋಗ ದಿನ ಆಚರಿಸಿತು. ಯೋಗಾಭ್ಯಾಸದಲ್ಲಿ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ಕೆ.ಆರ್. ಜಲಜಾ, ಕುಲಸಚಿವ ಪ್ರೊ.ಬಿ.ರಮೇಶ್, ಡೀನ್ ಪಿ.ಆರ್. ಚೇತನ ಉಪಸ್ಥಿತರಿದ್ದರು.

‘ಪ್ರಾಚೀನ ಕಾಲದಿಂದಲೂ ದೇಶದಲ್ಲಿ ಆಚರಣೆಯಲ್ಲಿರುವ ಯೋಗ ಕಲೆಯು, ಈಗ ವಿಶ್ವದಾದ್ಯಂತ ಪಸರಿಸಿ ಅಪಾರ ಮನ್ನಣೆ ಗಳಿಸಿದೆ. ಆರೋಗ್ಯಕರ ಜೀವನಕ್ಕೆ ಸಹಕಾರಿಯಾದ ಯೋಗಾಭ್ಯಾಸದ ಪ್ರಯೋಜನವನ್ನು ಯುವಜನರು ಪಡೆದುಕೊಳ್ಳಬೇಕು’ ಎಂದು ಪ್ರೊ.ಕೆ.ಆರ್.ಜಲಜಾ ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಯೋಗ ತರಬೇತುದಾರ ರಾಜೇಶಾಚಾರಿ ಅವರ ಮಾರ್ಗದರ್ಶನದಲ್ಲಿ ಯೋಗಾಭ್ಯಾಸ ನಡೆಯಿತು. ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

‘ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ಯೋಗ ಸಹಕಾರಿ. ಮನಸ್ಸು ಮತ್ತು ದೇಹವನ್ನು ಪುನರುಜ್ಜೀವನಗೊಳಿಸುತ್ತದೆ’ ಎಂದು ವಿಶ್ವವಿದ್ಯಾಲಯದ ಕುಲಸಚಿವ ಕೆ.ಎಸ್. ಶ್ರೀಧರ್ ಅಭಿಪ್ರಾಯಪಟ್ಟರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಡಾ. ಸಿ. ಎನ್. ಅಶ್ವತ್ಥನಾರಾಯಣ್, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್, ಅಂತರರಾಷ್ಟ್ರೀಯ ಯೋಗ ಪಟು ರಾಘವೇಂದ್ರ ಪೈ, ಚಲನಚಿತ್ರ ನಟ ಕೋಮಲ್ ಕುಮಾರ್, ನಟಿ ಸುಧಾರಾಣಿ ಹಾಗೂ ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು.

ರೈಲು ಗಾಲಿ ಕಾರ್ಖಾನೆ, ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗ ವತಿಯಿಂದ ಬೆಂಗಳೂರಿನ ಅನುಗ್ರಹ ಸಮುದಾಯ ಕೇಂದ್ರದಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆಯಿತು. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಓಂಸೇವಾ ಕೇಂದ್ರ, ಎಸ್. ವ್ಯಾಸ ಸೇರಿ ವಿವಿಧ ಸಂಸ್ಥೆಗಳು ಯೋಗ ದಿನ ಆಚರಿಸಿದವು.



ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ ಯೋಗ ದಿನ ಆಚರಿಸಲಾಯಿತು

12 ಗಿನ್ನೆಸ್ ವಿಶ್ವದಾಖಲೆ

ಅಕ್ಷರ ಯೋಗ ಕೇಂದ್ರವು 12 ಗಿನ್ನೆಸ್ ವಿಶ್ವದಾಖಲೆಗಳೊಂದಿಗೆ ಯೋಗ ದಿನ ಆಚರಿಸಿತು. ತೈವಾನ್, ಮಲೇಶಿಯಾ, ಇಟಲಿ, ಅಮೆರಿಕ, ಬ್ರಿಟನ್, ದುಬೈ, ಸಿಂಗಪುರ ಸೇರಿ 30ಕ್ಕೂ ಅಧಿಕ ದೇಶಗಳಿಂದ ಸುಮಾರು 2,500 ಮಂದಿ ಪಾಲ್ಗೊಂಡಿದ್ದರು. ಅಧೋಮುಖ ಶ್ವಾನಾಸನ ಸೇರಿ ವಿವಿಧ ಆಸನಗಳನ್ನು ಮಾಡುವ ಮೂಲಕ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಲಾಯಿತು. ಕೇಂದ್ರದ ಹಿಮಾಲಯ ಸಿದ್ಧಾ ಅಕ್ಷರ್ ಅವರು ಗಿನ್ನೆಸ್ ವಿಶ್ವ ದಾಖಲೆ ಪ್ರತಿನಿಧಿಗಳಿಂದ ಪ್ರಮಾಣ ಪತ್ರ ಸ್ವೀಕರಿಸಿದರು.



ಆಯುಷ್ ಇಲಾಖೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿಧಾನಸೌಧದ ಮುಂಭಾಗ ಯೋಗ ಪಟುಗಳು ವಿವಿಧ ಆಸನಗಳನ್ನು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಯೋಗ, ಸಂಗೀತ ಹಾಗೂ ನೃತ್ಯ

ಅರಮನೆ ಮೈದಾನದಲ್ಲಿ ಲೈಫ್ ಎಟರ್ನಲ್ ಟ್ರಸ್ಟ್ ವತಿಯಿಂದ ಸಹಜ ಯೋಗ, ಸಂಗೀತ ಹಾಗೂ ನೃತ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಕೇಂದ್ರ ಸಚಿವ ಪ್ರತಾಪ್‌ರಾವ್ ಜಾಧವ್ ಅವರು ವರ್ಚುವಲ್ ಆಗಿ ಉದ್ಘಾಟಿಸಿದರು.

‘ಯೋಗವು ಕೇವಲ ವ್ಯಾಯಾಮವಲ್ಲ, ಇದು ದೇಹ ಮತ್ತು ಆತ್ಮವನ್ನು ಸಮತೋಲನಗೊಳಿಸುವ ದಾರಿ. ಭಾರತದ ಆಧ್ಯಾತ್ಮಿಕ ಪರಂಪರೆ ಮತ್ತು ವಸುದೈವ ಕುಟುಂಬಕಂ ತತ್ವವನ್ನು ಸಾರಿ ಹೇಳುತ್ತದೆ’ ಎಂದು ಪ್ರತಾಪ್‌ರಾವ್ ಜಾಧವ್ ಹೇಳಿದರು.

ಧನ್ವಂತರಿ ಯೋಗ ತಂಡದ ನೇತೃತ್ವದಲ್ಲಿ ಯೋಗ ಕಾರ್ಯಾಗಾರ ನಡೆಯಿತು. ಇದೇ ವೇಳೆ ವಿಶ್ವ ಸಂಗೀತ ದಿನದ ಪ್ರಯುಕ್ತ 20ಕ್ಕೂ ಹೆಚ್ಚು ದೇಶಗಳ 200 ಕಲಾವಿದರು, 100ಕ್ಕೂ ಹೆಚ್ಚು ಸಂಗೀತ ವಾದ್ಯಗಳೊಂದಿಗೆ ಸಂಗೀತ ಪ್ರಸ್ತುತಪಡಿಸಿದರು.

ಚಿತ್ರಾವಳಿ



ಆರ್ಟ್ ಆಫ್ ಲಿವಿಂಗ್ ಕೇಂದ್ರದ ವಿಶಾಲಾಕ್ಷಿ ಮಂಟಪದ ಎದುರು ಸಾಮೂಹಿಕ ಯೋಗಾಭ್ಯಾಸ ಮಾಡಲಾಯಿತು



ಮಲ್ಲಸಂದ್ರದ ವಿಶಾಲ್ ಪಬ್ಲಿಕ್ ಶಾಲಾ ಮಕ್ಕಳು ಹಾಗೂ ಶಿಕ್ಷಕರು ಯೋಗದ ವಿಶಿಷ್ಟ ಭಂಗಿ ಪ್ರದರ್ಶಿಸಿದರು



ಹೇರೋಹಳ್ಳಿ ಸಮೀಪದ ಸಿಂಡಿಕೇಟ್ ಬ್ಯಾಂಕ್ ಲೇಔಟ್‌ನಲ್ಲಿ ಓಂ ಸೇವಾ ಕೇಂದ್ರದಲ್ಲಿ ಚಕ್ರಾಸನ ಪ್ರದರ್ಶಿಸಲಾಯಿತು



ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮೂಳೆ ಶಸ್ತ್ರಚಿಕಿತ್ಸಕ ಡಾ.ಜಾನ್ ಎಬ್ನೇಜ್ಜರ್, ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ.ಸಂಜಯ್ ಆರ್‌ಚಿಟ್ನಿಸ್, ಕುಲಸಚಿವ ಡಾ.ಕೆ.ಎಸ್‌ನಾರಾಯಣಸ್ವಾಮಿ ಉಪಸ್ಥಿತರಿದ್ದರು



ನಗರದ ಬಾಣಸವಾಡಿಯಲ್ಲಿರುವ ಗೋರ್ಖಾ ಕಾರ್ಯಪಡೆಯ ಸೇನಾ ತರಬೇತಿ ಕೇಂದ್ರದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಸಹಯೋಗದಲ್ಲಿ ಸೈನಿಕರು ಹಾಗೂ ಅವರ ಕುಟುಂಬದವರು ಯೋಗ ದಿನ ಆಚರಿಸಿದರು

ಚಿಟಿಕೆ ಸುದ್ದಿ

ನೇಪಾಳಿ ಯುವಕ ಆತ್ಮಹತ್ಯೆ

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ಕಾರ್ ಶೋರೂಂನಲ್ಲಿ ಕೆಲಸ ಮಾಡುತ್ತಿದ್ದ ನೇಪಾಳದ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಾಬುಸಾಪಾಳ್ಯ ನಿವಾಸಿ ಸುಶಾಂತ್ (19) ಆತ್ಮಹತ್ಯೆ ಮಾಡಿಕೊಂಡ ಯುವಕ.

'ಮೂರು ವರ್ಷದ ಹಿಂದೆ ಕುಟುಂಬ ಸಮೇತ ನಗರಕ್ಕೆ ಬಂದಿದ್ದ ಸುಶಾಂತ್, ನಗರದ ಕಾರ್ ಶೋರೂಂನಲ್ಲಿ ಕೆಲಸ ಮಾಡುತ್ತಿದ್ದ. ವಿಪರೀತ ಮದ್ಯ ಸೇವನೆ ಮಾಡುತ್ತಿದ್ದ. ತಂದೆ, ತಾಯಿ ಜತೆ ಹೆಚ್ಚು ಮಾತನಾಡುತ್ತಿರಲಿಲ್ಲ. ಕೆಲಸ ಮುಗಿದ ಬಳಿಕ ಕೆಲವೊಮ್ಮೆ ಮನೆಗೂ ಬರುತ್ತಿರಲಿಲ್ಲ, ಸ್ನೇಹಿತರ ಮನೆಯಲ್ಲಿ ತಂಗುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಶುಕ್ರವಾರ ಮನೆಯಿಂದ ಹೊರಗೆ ಹೋಗುವುದಾಗಿ ಹೇಳಿ, ಸರ್ವಿಸ್ ರಸ್ತೆಯಲ್ಲಿರುವ ಉದ್ಯಾನದಲ್ಲಿನ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದ ಎಂಬುದು ಪ್ರಾಥಮಿಕ ವಿಚಾರಣೆ ವೇಳೆ ಗೊತ್ತಾಗಿದೆ. ಮೃತನ ಸಹೋದರರು ನೇಪಾಳದಲ್ಲಿ ವಾಸವಾಗಿದ್ದಾರೆ' ಎಂದು ಹೇಳಿದರು.

ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಶವವನ್ನು ಹಸ್ತಾಂತರಿಸಲಾಯಿತು. ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕತ್ತರಘಟ್ಟ ಪ್ರಕರಣ ಸಿಐಡಿಗೆ ಹಸ್ತಾಂತರ

ಮಂಡ್ಯ: ತಾಲ್ಲೂಕಿನ ಕತ್ತರಘಟ್ಟ ಗ್ರಾಮದ ದಲಿತ ಯುವಕನ ಅನುಮಾನಾಸ್ಪದ ಸಾವಿನ ಗಂಭೀರ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ಹಸ್ತಾಂತರಿಸಿದ್ದು, ತನಿಖೆ ಚುರುಕುಗೊಂಡಿದೆ.

ಡಿವೈಎಸ್ಪಿ ಉಮೇಶ್ ನೇತೃತ್ವದ ತನಿಖಾ ತಂಡ ಗ್ರಾಮಕ್ಕೆ ಶನಿವಾರ ಭೇಟಿ ನೀಡಿತು. ದಲಿತ ಸಮುದಾಯದ ಜಯ ಕುಮಾರ್ ಮೃತಪಟ್ಟ ಸ್ಥಳದ ಮಹಜರು ನಡೆಸಿತು. ನಂತರ ಅವರ ಮನೆಗೂ ಭೇಟಿ ನೀಡಿ, ಮೃತರ ಪತ್ನಿ ಲಕ್ಷ್ಮಿ ಅವರಿಂದಲೂ ಮಾಹಿತಿ ಪಡೆದುಕೊಂಡಿತು. 'ಸಿಐಡಿ ತಂಡ ಭೇಟಿ ನೀಡಿದ ವಿಷಯ ತಿಳಿದು ಕತ್ತರಘಟ್ಟಕ್ಕೆ ಹೋಗಿದ್ದೆವು. ಆದರೆ ಸಿಐಡಿ ತಂಡ 'ನಾವು ಕರೆದಾಗ ಬನ್ನಿ' ಎಂದು ವಾಪಸ್ ಕಳುಹಿಸಿತು' ಎಂದು ಕಂದಾಯ ನಿರೀಕ್ಷಕ ಜ್ಞಾನೇಶ್ ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಕಡತಗಳನ್ನು ಸಿಐಡಿ ತಂಡಕ್ಕೆ ಹಸ್ತಾಂತರಿಸಿದ್ದೇವೆ ಎಂದು ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಅಪಘಾತದ ಹೆಸರಲ್ಲಿ ಸುಲಿಗೆ

ವೃದ್ಧರನ್ನು ನಂಬಿಸಿ ವಂಚಿಸಿದ ಆರೋಪಿಗಾಗಿ ಪೊಲೀಸರ ಶೋಧ

ಪ್ರಜಾವಾಣಿ ವಾರ್ತೆ


ಜಮೀಲ್

ಬೆಂಗಳೂರು: ಅಪಘಾತ ಮಾಡಿರುವುದಾಗಿ ನಂಬಿಸಿ ವೃದ್ಧ ಚಾಲಕನಿಂದ ಹಣ ಸುಲಿಗೆ ಮಾಡುತ್ತಿದ್ದ ವ್ಯಕ್ತಿಯ ವಿರುದ್ಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಶಾಂತಿನಗರದ ಭಂಗಿಯಪ್ಪ ಗಾರ್ಡನ್ ನಿವಾಸಿ 78 ವರ್ಷದ ಚಂದ್ರಶೇಖರ್ ಅವರ ದೂರಿನ ಮೇರೆಗೆ ಆರೋಪಿ ಜಮೀಲ್ ಖಾನ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಆತನ ಪತ್ತೆಗಾಗಿ ಪೊಲೀಸರು ಶೋಧ ಕಾರ್ಯ ಕೈಗೊಂಡಿದ್ದಾರೆ.

ಅಪರಾಧ ಸುದ್ದಿ

ಜೂನ್ 2ರಂದು ಎಂ.ಜಿ.ರಸ್ತೆಯಲ್ಲಿ ಕಾರಿನಲ್ಲಿ ಬರುವಾಗ ಹಿಂಬದಿಯಿಂದ ಬಂದ ವ್ಯಕ್ತಿಯು, 'ನಿಮ್ಮ ಕಾರು ನನ್ನ ಸ್ಕೂಟರ್‌ಗೆ ತಾಗಿದೆ. ಇದರಿಂದ ನನ್ನ ತಮ್ಮನಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಲಾಗಿದೆ. ಕಂಪನಿಯೊಂದರಲ್ಲಿ ಮಾಸಿಕ ₹37 ಸಾವಿರ ವೇತನ ಪಡೆಯುತ್ತಿದ್ದು, ಮೂರು ತಿಂಗಳು ಚಿಕಿತ್ಸೆ ಕೊಡಿಸಬೇಕಿದೆ. ₹1 ಲಕ್ಷ ಹಣ ನೀಡುವಂತೆ ಸುಳ್ಳು ಹೇಳಿ ಬೆದರಿಕೆ ಹಾಕಿದ್ದ' ಎಂದು ದೂರುದಾರರು ತಿಳಿಸಿದ್ದಾರೆ.

'ಕಾರಿನ ಡ್ಯಾಶ್ ಬೋರ್ಡ್‌ನಲ್ಲಿದ್ದ ₹2,500 ನಗದು ಕಸಿದುಕೊಂಡ. ಬಳಿಕ ಹೆಚ್ಚು ಹಣ ನೀಡುವಂತೆ ಪೀಡಿಸಿದ್ದರಿಂದ ಎಟಿಎಂನಿಂದ ತೆಗೆದಿದ್ದ ₹3 ಸಾವಿರ ಹಣವನ್ನು ಸುಲಿಗೆ ಮಾಡಿ ಪರಾರಿಯಾಗಿದ್ದ' ಎಂದು ಚಂದ್ರಶೇಖರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರೋಪಿ ವಿರುದ್ಧ 16 ಪ್ರಕರಣ ದಾಖಲು: ಅಪಘಾತ ಮಾಡಿರುವುದಾಗಿ ನಂಬಿಸಿ 68 ವರ್ಷದ ವೃದ್ಧರೊಬ್ಬರನ್ನು ಬೆದರಿಸಿ ₹1 ಲಕ್ಷ ಹಣ ಸುಲಿಗೆ ಮಾಡಿದ್ದ ಪ್ರಕರಣ ಸಂಬಂಧ ಬನಶಂಕರಿ ಪೊಲೀಸರು ಜನವರಿಯಲ್ಲಿ ಆರೋಪಿಯನ್ನು ಬಂಧಿಸಿ ಜೈಲಿಗಟ್ಟಿದ್ದರು. ಜಾಮೀನು ಪಡೆದ ಬಳಿಕ ಜಮೀಲ್ ಮತ್ತೆ ಕೃತ್ಯ ಮುಂದುವರೆಸಿದ್ದಾನೆ.

ಮೈಸೂರಿನ ರಾಜೇಂದ್ರನಗರದ ನಿವಾಸಿ ಜಮೀಲ್, 2018ರಿಂದ ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ. ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ, ಮದ್ದೂರು ರಾಮನಗರ ಹಾಗೂ ಬೆಂಗಳೂರು ನಗರ ಸೇರಿದಂತೆ ಒಟ್ಟು 16 ಪ್ರಕರಣಗಳು ದಾಖಲಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬನಶಂಕರಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಜಾಮೀನು ಪಡೆದಿರುವ ಆರೋಪಿಯು ಈವರೆಗೂ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದಾನೆ. ಜಾಮೀನು ರದ್ದು ಕೋರಿ ಕಾನೂನು ಹೋರಾಟ ನಡೆಸಲಾಗುವುದು ಎಂದು ಬನಶಂಕರಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮಚ್ಚಿನಿಂದ ಹಲ್ಲೆ: ಮೂವರು ವಶಕ್ಕೆ

ಚಿಕ್ಕಮ್ಮನ ಮನೆಗೆ ಬಂದಿದ್ದ ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ಘಟನೆ ಎಚ್‌ಎಎಲ್ ಠಾಣೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿರುವ ನಯೀಮ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರಿಸ್ಥಿತಿ ಗಂಭೀರವಾಗಿದೆ. ಘಟನೆ ಸಂಬಂಧ ಗಾಯಾಳುವಿನ ತಂದೆಯ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಶಫೀಕ್, ಸದ್ದಾಂ ಮತ್ತು ಇಮ್ರಾನ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಎಚ್‌ಎಎಲ್‌ನ ಅನ್ನಸಂದ್ರಪಾಳ್ಯದಲ್ಲಿ ಎರಡು ವರ್ಷದ ಹಿಂದೆ ನಡೆದ ಗಲಾಟೆಯಲ್ಲಿ ಶಫೀಕ್ ಮೇಲೆ ನಯೀಮ್ ಹಲ್ಲೆ ನಡೆಸಿದ್ದ. ಬಳಿಕ ನಯೀಮ್ ಕುಟುಂಬ ಸಮೇತ ಕೆಂಗೇರಿಗೆ ಸ್ಥಳಾಂತರವಾಗಿದ್ದರು. ಆದರೆ, ನಯೀಮ್ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಶಫೀಕ್ ಕಾಯುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ .

'ಮೂರು ದಿನಗಳ ಹಿಂದೆಯಷ್ಟೇ ಎಚ್‌ಎಎಲ್‌ನಲ್ಲಿರುವ ತನ್ನ ಚಿಕ್ಕಮನ ಮನೆಗೆ ನಯೀಮ್ ಬಂದಿರುವ ವಿಚಾರ ಶಫೀಕ್‌ಗೆ ಗೊತ್ತಾಗಿತ್ತು. ರಾತ್ರಿ ಸಹೋದರನ ಜತೆ ಬೈಕ್‌ನಲ್ಲಿ ಕಸ ಬಿಸಾಡಲು ಶ್ರೀರಾಮ ದೇವಸ್ಥಾನ ಬಳಿ ಬರುತ್ತಿದ್ದಂತೆ ಮೊದಲೇ ಹೊಂಚು ಹಾಕಿ ಕುಳಿತಿದ್ದ ಶಫೀಕ್, ಸದ್ದಾಂ ಮತ್ತು ಇಮ್ರಾನ್ ಅವರು ಮಚ್ಚು ಮತ್ತು ಲಾಂಗ್‌ನಿಂದ ಹಲ್ಲೆ ನಡೆಸಿದರು. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ನಯೀಮ್‌ನನ್ನು, ಸಹೋದರ ಆಸ್ಪತ್ರೆಗೆ ದಾಖಲಿಸಿದರು' ಎಂದು ಪೊಲೀಸರು ಹೇಳಿದ್ದಾರೆ.

ಸಿ.ವಿ.ರಾಮನ್ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಯಿತು. ತಲೆಗೆ ಗಂಭೀರ ಗಾಯವಾಗಿದ್ದು, ಚಿಂತಾಜನಕ ಸ್ಥಿತಿಯಲ್ಲಿದ್ದಾನೆ. ವಶಕ್ಕೆ ಪಡೆದಿರುವ ಮೂವರ ವಿರುದ್ಧವೂ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

ಬೆಂಗಳೂರಿನಲ್ಲಿ 'ಐಡಿಸಿಸಿ' ಕಚೇರಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಯರ್ ಮತ್ತು ಇತರ ಪಾನೀಯ ತಯಾರಿಸುವ ಡೆನ್ಮಾರ್ಕ್‌ನ ಜಾಗತಿಕ ಕಂಪನಿ ಕಾರ್ಲ್ಸ್‌ಬರ್ಗ್ ಗ್ರೂಪ್, ರಾಜ್ಯದಲ್ಲಿ ₹350 ಕೋಟಿ ಬಂಡವಾಳ ಹೂಡಿಕೆಯ ಒಪ್ಪಂದದ ಪ್ರಗತಿಯನ್ನು ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಪರಿಶೀಲಿಸಿದರು.

ಡೆನ್ಮಾರ್ಕ್‌ಗೆ ಭೇಟಿ ನೀಡಿರುವ ರಾಜ್ಯದ ಉನ್ನತ ಮಟ್ಟದ ನಿಯೋಗದ ನೇತೃತ್ವ ವಹಿಸಿರುವ ಸಚಿವರು, ಕಂಪನಿಯ ಸಿಇಒ ಜಾಕೊಬ್ ಆರಪ್ ಆ್ಯಂಡರ್ಸನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಕಾರ್ಲ್ಸ್‌ಬರ್ಗ್ ಸೇರಿದಂತೆ ಕೆಕೆ ವಿಂಡ್ ಸೊಲುಷನ್ಸ್, ನೊವೊನೆಸಿಸ್, ನೊವೊ ನಾರ್ಡಿಸ್ಕ್, ಡೆನ್ಮಾರ್ಕ್ ಕೈಗಾರಿಕಾ ಒಕ್ಕೂಟ (ಡಿಐ) ಮತ್ತು ಭಾರತ ಹಾಗೂ ಡೆನ್ಮಾರ್ಕ್ ವಾಣಿಜ್ಯೋದ್ಯಮ ಸಂಘ (ಐಡಿಸಿಸಿ) ಜೊತೆ ಸಭೆ ನಡೆಸಿದರು.

ಔಷಧಿ ತಯಾರಿಕೆಯ ಜಾಗತಿಕ ಪ್ರಮುಖ ಕಂಪನಿ ನೊವೊ ನಾರ್ಡಿಸ್ಕ್ ಜೊತೆಗಿನ ಸಭೆಯಲ್ಲಿ ಸಚಿವ ಪಾಟೀಲ ಅವರು ರಾಜ್ಯದಲ್ಲಿ ತಯಾರಿಕಾ ಘಟಕ ಸ್ಥಾಪಿಸಲು ಕೋರಿದರು.

ವಾಣಿಜ್ಯ ಬಾಂಧವ್ಯ ವೃದ್ಧಿಸಲು ಬೆಂಗಳೂರಿನಲ್ಲಿ ಕಚೇರಿ ಆರಂಭಿಸಲು ಸಚಿವ ಪಾಟೀಲ ಅವರು 'ಐಡಿಸಿಸಿ'ಗೆ ಆಹ್ವಾನ ನೀಡಿದರು. ರೋಡ್‌ಷೋನಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್, ಕೈಗಾರಿಕಾ ಅಭಿವೃದ್ಧಿ ಆಯುಕ್ತರಾದ ಗುಂಜನ್, ಕೆಐಎಡಿಬಿ ಮುಖ್ಯ ಎಂಜಿನಿಯರ್ ವೀರಭದ್ರಯ್ಯ ಉಪಸ್ಥಿತರಿದ್ದರು.

'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ಸಾಹಿತಿ ರಹಮತ್ ತರೀಕೆರೆ ಅಭಿಮತ

'ಶಾಲೆಗಳಿಂದಲೇ ರಾಜ್ಯ ಭಾಷೆಯ ಏಳ್ಗೆ ಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲೆಗಳಿಂದಲೇ ರಾಜ್ಯ ಭಾಷೆಯ ಏಳ್ಗೆ ಸಾಧ್ಯ. ಸರ್ಕಾರವು ಶಿಕ್ಷಣವನ್ನು ವ್ಯಾಪಾರೀಕರಿಸಿ, ಸರ್ಕಾರಿ ಶಾಲೆಗಳನ್ನು ಅನಾಥಗೊಳಿಸಬಾರದು' ಎಂದು ಸಾಹಿತಿ ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.



ಕಾರ್ಯಕ್ರಮದಲ್ಲಿ ರಹಮತ್ ತರೀಕೆರೆ ಅವರನ್ನು ಗೌರವಿಸಲಾಯಿತು. ಇಲಾಖೆ ಜಂಟಿ ನಿರ್ದೇಶಕಿ ಬನಶಂಕರಿ ವಿ. ಅಂಗಡಿ ಮತ್ತು ಕೆ.ಎಂ.ಗಾಯತ್ರಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಅತ್ಯುತ್ತಮ ಮೂಲಸೌಕರ್ಯ ಹೊಂದಿರುವ ಖಾಸಗಿ ಶಾಲೆಗಳು, ಮೂಲಸೌಕರ್ಯದ ಕೊರತೆ ಎದುರಿಸುತ್ತಿರುವ ಸರ್ಕಾರಿ ಶಾಲೆಗಳ ನಡುವೆ ಹೋಲಿಕೆ ಮಾಡಿದರೆ, ಅತ್ಯುತ್ತಮ ಮೌಲ್ಯಗಳನ್ನು ಸರ್ಕಾರಿ ಶಾಲೆಗಳೇ ಒದಗಿಸುತ್ತಿವೆ. ಆಧುನಿಕ ಶಿಕ್ಷಣವು ಮನುಷ್ಯತ್ವ ಮತ್ತು ತಾಯ್ತನದ ಕೊರತೆ ಎದುರಿಸುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ವಿಷಕಕ್ಕುವ ಆಧುನಿಕ ವಿದ್ಯಾವಂತರನ್ನು ನೋಡಿದರೆ ಹೀಗೆ ಅನಿಸುತ್ತದೆ' ಎಂದು ಹೇಳಿದರು.

'ಬಹು ಭಾಷೆ, ಬಹು ಸಂಸ್ಕೃತಿ, ಬಹು ಧರ್ಮಗಳು ಒಟ್ಟಿಗೆ ಸಾಗುವುದು ಭಾರತ ಹಾಗೂ ಕರ್ನಾಟಕ ಸಂಸ್ಕೃತಿಯ ರಹಸ್ಯ. ಭಾರತದ ಅತ್ಯಂತ ಶ್ರೇಷ್ಠ ಸಂಗೀತ, ಸಾಹಿತ್ಯ, ಸಂಸ್ಕೃತಿ ಹುಟ್ಟಿರುವುದೇ ಅತ್ಯುತ್ತಮವಾದುದ್ದರ ಒಳಗೊಳ್ಳುವಿಕೆಯಿಂದ. ಬಹುತ್ವ ಈ ದೇಶವನ್ನು ಉಳಿಸಿಕೊಳ್ಳುವ ಆತ್ಮ. ಕರ್ನಾಟಕವು ಸಾವಿರಾರು ವರ್ಷಗಳಿಂದ ಬಹುತ್ವದ ಪ್ರಯೋಗ ಮಾಡಿದೆ' ಎಂದು ಅಭಿಪ್ರಾಯಪಟ್ಟರು.

'ನನ್ನ ಪಾಲಿಗೆ ತಂದೆಯೇ ನನ್ನ ಹಿರೋ. ನನ್ನ ಮತ್ತು ಸಹೋದರನನ್ನು ಅವರು ಕನ್ನಡ ಮಾಧ್ಯಮ ಶಾಲೆಗೆ ಸೇರಿಸದಿದ್ದರೆ ಈಗ ಎಲ್ಲಿ ಇರುತ್ತಿದ್ದೆವೋ ತಿಳಿದಿಲ್ಲ. ನನ್ನ ಮಕ್ಕಳೂ ಕನ್ನಡ ಮಾಧ್ಯಮದಲ್ಲಿಯೇ ಪ್ರಾಥಮಿಕ, ಪ್ರೌಢ ಶಿಕ್ಷಣ ಪಡೆದುಕೊಂಡಿದ್ದರು. ಕನ್ನಡ ನಮ್ಮನ್ನು ಪೊರೆದ ತಾಯಿ. ಮುಸ್ಲಿಮರು ಕನ್ನಡ ಕಲಿಯದವರು ಎಂಬ ಪೂರ್ವಾಗ್ರಹ ಈಗಲೂ ಇದೆ. ಉತ್ತರ ಕರ್ನಾಟಕದಲ್ಲಿ ಮನೆಯಲ್ಲಿ ಕನ್ನಡ ಮಾತನಾಡುವ ಅನೇಕ ಮುಸ್ಲಿಮರಿದ್ದಾರೆ' ಎಂದರು.

ಇದೇ ವೇಳೆ ತಮ್ಮ ಬರವಣಿಗೆ ಬಗ್ಗೆಯೂ ಸ್ಮರಿಸಿಕೊಂಡ ಅವರು, ನನಗೆ 'ಪ್ರಜಾವಾಣಿ'ಯ 'ನಡೆದಷ್ಟೂ ನಾಡು' ಅಂಕಣ ವಿಶಿಷ್ಟ ಅಸ್ಮಿತೆ ನೀಡಿತು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ, ಜಂಟಿ ನಿರ್ದೇಶಕಿ ಬನಶಂಕರಿ ವಿ. ಅಂಗಡಿ ಉಪಸ್ಥಿತರಿದ್ದರು.

ಮನೆ ಮಾಲೀಕನ ವಿರುದ್ಧ ಪ್ರಕರಣ

ಬೆಂಗಳೂರು: ಹೈಟೆನ್ಷನ್ ವಿದ್ಯುತ್ ಪ್ರವಹಿಸಿ ಗಾಯಗೊಂಡಿದ್ದ ಬಾಲಕ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಕೆ.ಆರ್.ಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೃತ ಬಾಲಕ ಅನಂತ್‌ನ (10) ತಾಯಿ ತುಲಾವ್ರೋರ್ ನೀಡಿರುವ ದೂರಿನ ಮೇರೆಗೆ ಮನೆ ಮಾಲೀಕ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಬೆಸ್ಕಾಂ ಎಂಜಿನಿಯರ್‌ಗಳು, ಬಿಬಿಎಂಪಿಯ ಸಹಾಯಕ ಎಂಜಿನಿಯರ್‌ಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಾಯ್ದೆ 106 (ನಿರ್ಲಕ್ಷ್ಯತನದಿಂದ ಸಾವಿಗೆ ಕಾರಣ) ಆರೋಪದಡಿ ಪ್ರಕರಣ ದಾಖಲಾಗಿದೆ.

'ಅನಧಿಕೃತವಾಗಿ, ಸುರಕ್ಷತಾ ಕ್ರಮಗಳನ್ನು ಪಾಲಿಸದೇ ಮೂರು ಅಂತಸ್ತಿನ ಕಟ್ಟಡ ನಿರ್ಮಿಸಿರುವ ಮನೆ ಮಾಲೀಕ ಬಾಲರಾಜ್, ಹೈಟೆನ್ಷನ್ ತಂತಿಗಳಿಗೆ ಕವರಿಂಗ್ ಅಳವಡಿಸದ ಕೆಪಿಟಿಸಿಎಲ್, ಬೆಸ್ಕಾಂ ಎಂಜಿನಿಯರ್‌ಗಳು ಹಾಗೂ ಬಿಬಿಎಂಪಿಯ ಸಹಾಯಕ ಎಂಜಿನಿಯರ್‌ಗಳ ನಿರ್ಲಕ್ಷ್ಯದಿಂದ ಮಗನ ಸಾವು ಸಂಭವಿಸಿದೆ' ಎಂದು ತುಲಾವ್ರೋರ್ ದೂರು ನೀಡಿದ್ದಾರೆ.

ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದ ತುಲಾವ್ರೋರ್ ಅವರು ಹೌಸ್‌ಕೀಪಿಂಗ್ ಕೆಲಸ ಮಾಡಿಕೊಂಡು ಮಕ್ಕಳನ್ನು ಪೋಷಿಸುತ್ತಿದ್ದರು. ಮೇ 15ರಂದು ಸಂಜೆ ಅವರು ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಮನೆಯ ಆವರಣದಲ್ಲಿ ಆಟವಾಡುತ್ತಿದ್ದ ಬಾಲಕ, ಪೊರಕೆ ಎಸೆಯಲು ತೆರಳಿದ್ದ. ಆ ವೇಳೆ ಬಾಲಕನ ಕೈಯಲ್ಲಿದ್ದ ಪೊರಕೆ ಮನೆಯ ಪಕ್ಕದಲ್ಲಿ ಹಾದು ಹೋಗಿರುವ ಹೈ ಟೆನ್ಷನ್ ವಿದ್ಯುತ್ ತಂತಿಗೆ ತಗುಲಿತ್ತು. ಇದರಿಂದ ತೀವ್ರವಾಗಿ ವಿದ್ಯುತ್ ಶಾಕ್ ಹೊಡೆದಿತ್ತು. ತಕ್ಷಣ ಬಾಲಕನನ್ನು ಆತನ ಚಿಕ್ಕಪ್ಪ ಕೆ.ಆರ್.ಪುರಂ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದರು.

'ವಿಕ್ಟೋರಿಯಾ ಆಸ್ಪತ್ರೆಯ ಮರಣೋತ್ತರ ಪರೀಕ್ಷೆ ವಿಭಾಗಕ್ಕೆ ಪೊಲೀಸರಿಂದ ಅನುಮತಿ ದೊರೆಯದ ಕಾರಣ ಆಸ್ಪತ್ರೆ ಸಿಬ್ಬಂದಿ ಮರಣೋತ್ತರ ಪರೀಕ್ಷೆ ನಡೆಸಿಲ್ಲ' ಎಂದು ಪೋಷಕರು ಆರೋಪಿಸಿದರು. ಬಳಿಕ ಕೆ.ಆರ್.ಪುರಂ ಠಾಣೆ ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿ, ಮುಂದಿನ ಕ್ರಮ ಕೈಗೊಂಡರು.

ವಿಮಾನ ಸಿಬ್ಬಂದಿ ಜತೆ ಅನುಚಿತ ವರ್ತನೆ: ವೈದ್ಯೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಲಗೇಜ್ ವಿಚಾರಕ್ಕೆ ಸಂಬಂಧಿಸಿದಂತೆ ವಿಮಾನ ಸಿಬ್ಬಂದಿಯೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ನಗರದ ವೈದ್ಯೆಯೊಬ್ಬರನ್ನು ವಿಮಾನದಿಂದ ಕೆಳಗೆ ಇಳಿಸಿರುವ ಘಟನೆ ನಡೆದಿದೆ.

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಜೂನ್ 17ರಂದು ಸೂರತ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನದಲ್ಲಿ ಈ ಘಟನೆ ನಡೆದಿದ್ದು, ಘಟನೆಗೆ ಕಾರಣರಾದ ಯಲಹಂಕ ನಿವಾಸಿ ವೈದ್ಯೆ ಮೋಹನ್ ಭಾಯಿ (36) ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಸೂರತ್‌ಗೆ ಹೊರಟಿದ್ದ ಆಯುರ್ವೇದ ವೈದ್ಯೆ ಮೋಹನ್‌ಭಾಯಿ ಅವರು ಬೋರ್ಡಿಂಗ್ ನಂತರ, ಬ್ಯಾಗೇಜ್ ಅನ್ನು ವಿಮಾನದ ಮೊದಲ ಸಾಲಿನಲ್ಲಿ ಬಿಟ್ಟಿದ್ದರು. ಈ ಬಗ್ಗೆ ವಿಮಾನ ಸಿಬ್ಬಂದಿ ಪ್ರಶ್ನಿಸಿದಾಗ, 'ಬ್ಯಾಗ್ ಅನ್ನು ಸೀಟ್ ನಂ.20 ಎಫ್‌ನಲ್ಲಿ ಇಡುವಂತೆ' ಹೇಳಿದ್ದಾರೆ. ತಾನು ಹೇಳಿದಂತೆ ಮಾಡದಿದ್ದರೆ, ವಿಮಾನ ಪತನಗೊಳಿಸುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ದೂರಲಾಗಿದೆ.

ಬಳಿಕ ಕ್ಯಾಪ್ಟನ್ ತಿಳಿ ಹೇಳಲು ಪ್ರಯತ್ನಿಸಿದರೂ ಮಹಿಳೆ ವಿಮಾನದಲ್ಲಿ ಕೂಗಾಡಿ ಇತರ ಪ್ರಯಾಣಿಕರಿಗೆ ತೊಂದರೆ ಆಗುವಂತೆ ನಡೆದುಕೊಂಡಿದ್ದರು. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವಿಮಾನ ನಿಲ್ದಾಣದ ಭದ್ರತಾ ವಿಭಾಗದ ಅಸೋಸಿಯೇಟ್ ಮ್ಯಾನೇಜರ್ ಅಗ್ನಿಮಿತ್ರ ಬಹಿನಿಪತಿ ಅವರು ಬಿಐಎಎಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ಮಹಿಳೆಯನ್ನು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು. ನಂತರ ಅವರಿಗೆ ಜಾಮೀನು ಮಂಜೂರಾಗಿದೆ. ಮಹಿಳೆಯ ಅನುಚಿತ ವರ್ತನೆಯಿಂದಾಗಿ ಆ ದಿನ ವಿಮಾನ ಸಂಚಾರ ವಿಳಂಬವಾಯಿತು ಎಂಬುದು ಗೊತ್ತಾಗಿದೆ.

'ಯುವ ಸಮೂಹ ಜಾಗೃತಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭವಿಷ್ಯದಲ್ಲಿ ಕೈಮಗ್ಗ ಕ್ಷೇತ್ರ ಉಳಿಯಲು ಯುವ ಸಮುದಾಯವನ್ನು ಸಂವೇದನಶೀಲರನ್ನಾಗಿಸುವುದೊಂದೇ ಸದ್ಯಕ್ಕಿರುವ ತುರ್ತು ಮಾರ್ಗ ಎಂದು ಫ್ಯಾಷನ್ ವಿನ್ಯಾಸಕಾರ ಪ್ರಸಾದ್ ಬಿದ್ದಪ್ಪ ಅಭಿಪ್ರಾಯಪಟ್ಟರು.

ಚರಕ ಮತ್ತು ದೇಸಿ ಟ್ರಸ್ಟ್ ಸಂಯುಕ್ತವಾಗಿ ಶನಿವಾರ ಆಯೋಜಿಸಿದ್ದ ಎರಡು ದಿನಗಳ 'ಕೊಡು-ಕೊಳ್ಳುವವರ ಸಮಾವೇಶ'ದಲ್ಲಿ 'ಸುಸ್ಥಿರ ವಸ್ತ್ರ: ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರ ತಗ್ಗಿಸುವ ಸವಾಲು' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಕೈಮಗ್ಗ ಬಟ್ಟೆ ಧರಿಸುವುದು ಆರೋಗ್ಯದಾಯಕ ಎಂದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಈ ಕುರಿತಂತೆ ಯುವ ಸಮುದಾಯವನ್ನು ಜಾಗೃತಗೊಳಿಸಬೇಕಾಗಿದೆ' ಎಂದು ಸಲಹೆ ನೀಡಿದರು.

'ಆದ್ಯಮ್' ಸಂಸ್ಥೆಯ ಪ್ರಮುಖ ಸಲಹೆಗಾರ ಮನೀಶ್ ಸಕ್ಸೇನಾ ಮಾತನಾಡಿ, ಕೈಮಗ್ಗ ಅತ್ಯಂತ ಕಡಿಮೆ ಮೂಲಸೌಕರ್ಯ ಬೇಡುವ ಕ್ಷೇತ್ರ. ಸರ್ಕಾರದ ಈ ಇಲಾಖೆಯ ಅಧಿಕಾರಿಗಳು ಇಚ್ಛಾಶಕ್ತಿಯಿಂದ ಈ ಕ್ಷೇತ್ರವನ್ನು ಗಮನಿಸಿದಾಗ ಮಾತ್ರ ಇದರ ಪುನರುಜ್ಜೀವನ ಸಾಧ್ಯ ಎಂದು ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡ ಟೈಟಾನ್ ಸಿಎಸ್‌ಆರ್‌ನ ಮುಖ್ಯಸ್ಥೆ ರಿತಿಕಾ ಗಾಂಧಿ, 'ಕೈಮಗ್ಗ ಕ್ಷೇತ್ರವನ್ನು ಕೈಗಾರಿಕೆ ರೀತಿಯಲ್ಲಿ ಕಾಣಬಾರದು; ಸರ್ಕಾರ ತಜ್ಞರ ಸಲಹೆ ಮೇರೆಗೆ ಮಾರುಕಟ್ಟೆ ಒದಗಿಸಿ ಈ ಕ್ಷೇತ್ರವನ್ನು ರಕ್ಷಿಸಬೇಕು' ಎಂದು ಸಲಹೆ ನೀಡಿದರು.

ಸುಸ್ಥಿರ ಅಭಿವೃದ್ಧಿ ಪ್ರತಿಪಾದಕಿ ಭಾರ್ಗವಿ ರಾವ್ ಸಂವಾದ ನಿರ್ವಹಿಸಿದರು. ವೀಣಾ ಹೆಗಡೆ, ಗೋಪಿ, ಅಮೃತಾ ಮತ್ತಿತರರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

General

South

WANTED/ AVAILABLE Residential Sites Commercial Property PG Buildings 5to25Cr. With Rental Income. In South Bangalore. Any Measurement. Call-9900399006

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

"ANJANAPURA WANTED 20x30, 30x40, 40x60, 50x80 BDA Site for Immediate Settlement. "Anugraha Constructions"- 9886294610"

BDA, RESIDENTIAL & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

COMMERCIAL SITES For Sale Anjanapura 8th Block 50x80, 3rd Block 40x60 Genuine Buyers Contact: 9880776950

Banashankari

"AVAILABLE WANTED BDA Sites Banashankari 6TH Stg,Anjanapura Vishweswaraiah Lyt 50x80 40x60 30x40 20x30,Value Properties Call Raju:9901315949, 9731814437

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BDA, RESIDENTIAL, Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

SITE SALE BDA Banashankari 5th Stage Near NPS SCHOOL 30x40 North 40ft Road: 9448531837/ 9241082155

Bannerghatta Road

2,400_SQFT PLOT FOR SALE RESIDENTIAL WEST FACING IN AREKERE SHANTHI-NIKETHAN LAYOUT. CALL OWNER 7483853190

NISARGA LAYOUT 35x60 EAST FACING 75x80 SOUTH EAST CORNER NANDANAVANA 30x40 EAST FACING 5000/-: 9449655947

Basaweshwaranagar

SALE SITE 1600 SQFT A KHATHA WITH EASTHI READY FOR REGISTRATION CLEAR TITLES 1 CRORE 90 LAKHS ONLY: 9035883017

Chandra Layout

SITE FOR SALE 1125sft, W/F 40feet road,BCCLayout Near Water Tank, Chandra Layout. Direct Owner: 9880311959.

Jakkur

YELAHANKA SAMPIGEHALLI 30X35 Site With 5- BHK Triplex House For-Sale, 2.40 Crore. 9900001973. Brokers Strictly Excused

Kempegowda Layout

KEMPEGOWDA LAYOUT 50x80,Site #4233,West-facing 3rd Block"L"sector 300feet-road,40x60 Site #547,East-facing 1st Block"K"sector 40feet-road. Contact Owner:8095002424

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Magadi Road

***BDA APPROVED** LAYOUT 20×30 EAST FACING SITE SALE NEAR MAGADI MAIN ROAD KANNALLI. CONTACT: 9611988112*

Mysore Road

NADAPRABHU KEMPEGOWDA Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

Rajajinagar

RAJAJINAGAR 1ST BLOCK, 25x45, 30x40 SITE SALE Near METRO Station, Vidyavardhaka School Good Location: 9980501366

FOR SALE Rajajinagar 2STG A block 18x45 North 30x40 South 30x50 East Rs. 23000/- Service charges 2%: 8884255563

Rajarajeshwari Nagar

EAST FACING, Corner Plot, 2735 SFT, Ideal Homes- RR Nagar Phase-1. Brokers excuse. Contact 9845578838

Tumkur Road

BDA BBMP Site for Sale HMT Layout – Nagasandra 40×60 NF 40ft Roads opp: proposed BDA complex owner: 9449081178

Uttarahalli

FOR SALE: West Facing 30x40 BDA SITE at BHCS Layout, Uttarahalli. Contact: 9845569053

Vasanth Nagar

853SQFT PLOT for sale, Vasanth Nagar near MCC. Contact Kushal 8105838403 / Thejus 7304665569.

Vishweshwariah Layout

"40X60 WEST_FACEING Residential Site`for`sale Vishveshwaraiah Layout 1st Block 40`feet wide Road near 100`Feet Road, 15`Minutes drive`to`Metro. 9880031654"

"VISVESHWARAIAH 6TH_BLOCK near KLE Law College 2315 Sqft West South Corner 100% Vasthu Auction`Site. 9448432633"

"VISVESHWARAIAH 6TH_BLOCK 40x60 East Opp.KLE College. & BEL 2nd Stage 35x59 East 40`ft Road. 9739395078"

"BDA SITE for-sale in Vishveshwaraiah Layout and Nada Prabhu Kempagowda Layout Contact: "Sai Adhar Properties" - 7795531787"

"VISVESHWARAIAH LAYOUT 30x40 SF 1st Block, & 50x80 SF 6th Block with 7500`Sqft Building. 9845500019/ 7019314962"

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

30*40 SITE for sale EF with 30 ft road Rs 12500/- Vishweshwaraiah Layout opposite to park facing. Contact:- 9916826976.

Mysore

KHB ALLOTTED 30x40 Site at Kenchalgudu, Mysore City 46 Lakhs Clear Documents Owner Contact: 9606866368

Others

EAST FACING 30X40 SITE AT ANJANAADRI LAYOUT NEAR SAPTHAGIRI NPS UNIVERSITY SHETTIHALLI FOR SALE CONTACT 9886034439

House

BTM Layout

BTM_2ND 40x46, East, Ground 2 BHK, 1st 3 BHK Duplex, 2nd floor 2 BHK House, 5,76,00000/- -9739995042

J P Nagar

SALE 60X90 With old House J.P.Nagar 3rd Phase 50feet Wide Road Excellent Location Call:9066399102

SALE 20X30 old Building West Facing J.P.Nagar 4th Phase 23500/- Per sft Negotiable Call:9880425607

JPNAGAR 40X65 East, 45x50 North, 40x60 South, 60x90 South Facing Houses, Site's Sale Call: 9845069739

J.P.NAGAR_2ND Phase, Behind Woodys 30x40, Duplex 4 BHK House, BDA, Marble, Teak, 2,80,00,000/- 9845094369

BDAN/E,CORNER,1550SFT 3BHK Duplex NrForam 4.10cr.30x50,N/W14500/- 2150Sft,3BHKFlrwise_Flat 1.65Cr,35x40 N/W ,13500/-30x40,3units 3.10cr:8904210201

Koramangala

KORAMANGALA 3RD Block, 40x60, Basement, Ground-3 Shops, 1st- 3 Bedrooms, 2nd- 1 Bedroom Two Portion, 3rd- 4 Bedrooms, 9845855663.

Magadi Road

20*31.5, EAST facing 4 BHK Duplex House for Sale, Kempegowda Nagar, Police Quarters. Sathya: 9844651365.

Nagarabhavi

"30X40 HOUSE for Sale in NGEF Layout, Mallathahalli Good location, Genuine`Buyers Contact: 7760388034/ 9242135834"

Flat

Banashankari

"LUXURY NEW_FLATS 3BHK Banashankari 2nd Stage near K.R.Road for more details. 9845286505"

Basavanagudi

REQUIRED FOR Rent And Purchase 3BHK & 2BHK Flats in Basavanagudi, NR-Colony, Hanumanth Nagar, VV- Puram, Shankarapuram, Chamarajpet, Owners Call: 9886019240

Chandra Layout

PENTHOUSE 3 Bedroom Flat for Sale , 1600sft Super Built- up, 50Mtr from Attiguppe Metro Station, Chandra layout, Vijaynagar. 1.5Cr Negotiable- 9844060483

Indiranagar

NEAR DEFENCE Colony 3BHK Flat 3450 Sqft with 2 Carpark Flat for Sale for details Call: 9845004248

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Commercial Building

Koramangala

KORAMANGALA 50X80 Site Commercial Multi Purpose 80 Feet Main Road Hotel/ traning institute eventure. 9113040843

Commercial Land

Mysore

2.22 ACRE land for Sale at Gundlupet 2 acres 22 Guntas Commercial converted (Hotel purpose) land for Sale at Agathagowdanahalli off. Mysore Ooty National Highway. Contact; Mysore Estates Vishwanath Gowda 9590911111

Out-Station

PETROL BUNK SALE with Land 3 Acres, Bangalore to Chennai Highway near Sulagiri. Call: 9443225303, 8660719986.

Commerical

Jayanagar

SALE COMMERCIAL Jayanagar 5th Block 45x90 With old House on 40feet Road Excellent Location Ct: 9844134068 8073859758

SALE COMMERCIAL 40x60 Jayanagar 4th Block on 40feet Road With old House Excellent Location Ct: 9844134068 8073859758

J P Nagar

J.P.NAGAR RING ROAD, near Metro Station: ILLYASNAGAR COMMERCIAL CORNER PLOT 2424sft BBMP A Katha Sale 16,500/-. 9900202047/ 9980565516

M G Road And Around

SALE INDEPENDENT Commercial Property Vittal Mallya Road, Built 9000 sqft. Only Genuine Buyers. amlathans@gmail.com

Vishweshwariah Layout

BDA COMMERCIAL 40X60 Sale KLE Law College Circle South SMV 5th Block 80ft Road: 9945694783/ 9980433004

Farm House/ Land/ Resorts

Devanahalli

5000 SQFT farm plot at Devanahalli, Woodrich enclave is available for sale call 9441282281

Industrial & Factory

Mysore Road

SALE 1ACRES-14-GUNTAS INDUSTRIAL CONVERSION LAND AT BIDADI, BANGALORE MYSORE ROAD 7019708767 9844125465

Out-Station

FOR SALE
Factory for sale
Plot Area 20322 m2
Builtup Area 4156 m2
Panjim Ponda National Highway,
Kundaim Ind Estate
Kundaim Ponda-Goa.
7020793947
7972608348

Villas/Bunglows

M G Road And Around

SALE 11000 sqft. with Two Roads, Near Garuda Mall, Brigade Road Cross with a Built in 5 Bedroom Luxurious Bunglow. Only Genuine Buyers. amlathans@gmail.com

REAL ESTATE BUYING

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase and joint venture for MNC Company and NRI investors in and around Doddaballapura Devanahalli Chikkaballpur Sarjapura Road Hoskote- Chintamani-Malur surroundings, minimum road width 40 feet plus. Payment flexible. Elite Group 9916592400/ 9986682400elitegroupsrealtors@gmail.com

General

General

FOR ALL REAL ESTATE REQUIREMENTS; RENTAL/ BUYING/ SELLING/LEASE OF ALL KINDS OF RESIDENTIAL/ COMMERCIAL/ INDUSTRIAL/ AGRICULTURAL PROPERTIES, PROPERTY MANAGEMENT, PROPERTY MONITORING, FARMLAND PROPERTIES, HOUSING LOANS, WANTED BDA SITES FOR RESALE CONTACT: VICTORY PROPERTIES 7411692219, 8618576685. info@victoryproperties.in, www.victoryproperties.in

Resedential/ Commercial

Mysore

0% BROKERAGE for Buying and Selling any properties in Mysore city. Contact: Mysore Estates Vishwanath Gowda 9590911111

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Jayanagar

WANTED 30X40,40X60 & above, Sites or House for Purchase in Jayanagar, Basavangudi, BSK 1st & 2nd Stage. for Doctors & NRI immediate settlement. Verna Developers Barton Center MG Road 9353128035/ 9916310226 brokers excuse

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

Villas/Bunglows

Jayanagar

BUY / Sale / Rent- Prestige Falcon City, Total Environment Mantri Serenity Sobha Indraprastha Purvankara Prestige West Woods Brigade Tata Promont Embassy and many more and several protects Plotted, Apartment and Villa projects in Koramangala, Jayanagar, Basavangudi, RMV Layout, Vijayanagar, Rajajinagar. 9591932400.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

1100SQFT PRIME Commercial Space for Rent in Chamrajpet. Same`building as SBI, Sundaram Finance, HP.Gas.High footfall. Ideal`for CAs,Lawyers, Financial Services. Immediate Occupancy.Call: 9900207023/ 9611116464.

JAYANAGAR 4TH BLOCK AVAILABLE FOR RENT OFFICE SPACE 1100SQFT, 2ND FLOOR, PRIME CIRCLE RS. 45000/ PER MONTH, VICTORY PROPERTIES. 7411692219/ 8618576685.

SHOPS FOR RENT 1 BHK & 3 BHK VIDYARANYAPURA GOOD LOCATION CONTACT: 8296895858 GENUINE BUYERS

Flats

FULLY FURNISHED 3 BHK Flat with Servant Rm at CARDINAL ONE, Yeshvanthpur.Private Lobby with access controlled elevators, Metro Adjacent, Prime loc. Rent: 1.5 lakh, Contact: 9845025305

JOB OPPORTUNITIES

Teachers/ Professors

URGENT REQUIREMENT Computer Science and Primary Teachers Royal English School Manjunatha Nagar Blr-10: 9611878492/ 8861406060

THE MYSORE EDUCATION SOCIETY
"Brahmi", KISHORA KENDRA, 10th MAIN,
15th CROSS, MALLESWARAM, BANGALORE – 560 003
Website: www.mesinstitutions.org.in

Applications are invited for the post of teaching faculty for the following departments in MES Institute of Management, #25/1, 17th Main, 2nd Block, Rajajinagar, Bengaluru- 560 010

A. Assistant Professor (Full Time):
Subjects: Commerce & Management
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable:(i) 3 years of teaching experience
(ii) Knowledge of Computers. Usage of ICT in teaching

B. Assistant Professor (Part Time):
Subjects: Sanskrit / Kannada / English / Commerce / Computer Science (Data Science or Data Analyst) / Environmental studies
i) Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
ii) Subject Computer Science (Data Science or Data Analyst)
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject. Should be competent in C programming and Data Analysis using Tableau
iii) Subject: Environmental Studies
Essential Qualification: (i) Post-graduate in relevant discipline in Biological Sciences from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable: (i) 3 years of teaching experience (ii) Knowledge of Computers & usage of ICT in teaching.

1.The regular full-time posts carry scales of pay and allowances such as HRA, fixed Travel allowance. Besides this, contribution towards PF and Gratuity as terminal benefits, Health Insurance cover.
2.Applications with BIO-DATA and copies of certificates of their qualifications and experience etc., should reach the Chief Executive, MES at the above address on or before 07.07.2025 duly superscribing the envelope with "Application for the post of ____________________".
3.Decision of the selection committee is final.
4.Resorting to any sort of influence will be deemed as a disqualification of the candidature.
5.Download the application form from the MES website: https://mesinstitutions.org.in

Advt. No. MES/19-1/ADM-1/2025 Dated 22.06.2025 **CHIEF EXECUTIVE**

THE MYSORE EDUCATION SOCIETY
"Brahmi", KISHORA KENDRA, 10th MAIN,
15th CROSS, MALLESWARAM, BANGALORE – 560 003
Website: www.mesinstitutions.org.in

Applications are invited for the post of teaching faculty for the following departments in MES College of Arts, Commerce & Science, 15th Cross, Malleswaram, Bengaluru- 560 003

A. Professor (Full Time):
Subject: Commerce / Computer Science
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree (with course work included as part of the doctoral program) in the relevant subject.
Experience: Teaching experience of minimum 10 years.
Desirable: NET/SLET qualification, Research publications, Funded Projects, Post-doctoral experience, Knowledge of Computer Applications & usage of ICT in teaching.

B. Associate Professor (Full Time):
Subjects: Commerce / Computer Science
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree (with course work included as part of the doctoral program) in the relevant subject.
Experience: Teaching experience of minimum 6 years.
Desirable: NET/SLET qualification, Research publications, Funded Projects, Post-doctoral experience, Knowledge of Computer Applications & usage of ICT in teaching.

C. Assistant Professor (Full Time):
Subjects: Kannada / Sanskrit / Hindi / Commerce / Computer Science Political Science / Psychology
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable: (i) 3 years of teaching experience (ii) Knowledge of Computers & usage of ICT in teaching.

D. Assistant Professor (Part Time):
Subjects: Commerce / Computer Science / History / Journalism / Physics Statistics / Biotechnology / Political Science / Sanskrit / Hindi / Psychology
Essential Qualification: (i) Post-graduate in relevant discipline from a recognized university with a minimum of 55% marks or equivalent grade
(ii) Should have cleared NET/SLET examination or Ph.D. degree (with course work included as part of the doctoral program) in the relevant subject.
Desirable: (i) 3 years of teaching experience (ii) Knowledge of Computers & usage of ICT in teaching

1.The regular full-time posts carry scales of pay and allowances such as HRA, fixed Travel allowance. Besides this, contribution towards PF and Gratuity as terminal benefits, Health Insurance cover.
2.Applications with BIO-DATA and copies of certificates of their qualifications and experience etc., should reach the Chief Executive, MES at the above address on or before 07.07.2025 duly superscribing the envelope with "Application for the post of ____________________".
3.Decision of the selection committee is final.
4.Resorting to any sort of influence will be deemed as a disqualification of the candidature.
5.Download the application form from the MES website: https://mesinstitutions.org.in

Advt. No. MES/19-1/ADM-1/2025 Dated 22.06.2025 **CHIEF EXECUTIVE**

WANTED KANNADA (FULLTIME) ENGLISH (PARTTIME) TEACHERS for ABDUL BARIS HIGH SCHOOL Near Coles Park, Frazer Town Whatsapp 9353111888

WANTED TRAINED lady teachers for Primary/High school for all subjects shrimaitri@gmail.com 8892949404

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 Social & Computer Teacher for High-School. STATE & ICSE. Qualification: B.A. B.Ed/ M.A.,M.Ed, BCA.,MCA. Only English Medium Candidates need to apply

REQUIRED TEACHERS for high school English medium, free food and accomodation for Devanahalli Rakums and Indiranagar Rakums. Maths and science BSc BEd Salary 30k English BA, BEd Salary 30k Primary school teachersTch/ DEd Salary 25k Montessori/ NTT teachers Rs 20k Contact: Acharya Sri Rakum High School Margondanahalli Devanahalli Taluk Bangalore. Tel: 9459482777 Email: rakumacharya@gmail.com

URGENTLY REQUIRED: Experienced TEACHERS for High school Kannada, Primary Science, Maths, Social and P.T.Teacher (Male/Female) for MOTHER MARY ENGLISH_SCHOOL, Thippasandra, Bangalore. Contact: 080-25281661, 8762038545

WANTED EXPERIENCED PRINCIPAL and LECTURES for Suryodaya PU_and degree college Female_Typist near Eletronicity Bangalore. Contact 9632081875, 7975796544

Sir M. Visvesvaraya Composite PU College
#60, Konenagrahara, HAL, Bangalore-17
Immediately Required Teachers & Lecturers for
English, Hindi, Political Science, Science (PCM), Commerce, Economics, Computer Science.
Qualification: BA, MA, B.Sc, B.Com, M.Com, B.Ed.
Contact: Ph No: 080-25236250
Post / E-mail: m.vishweshwaraiah@gmail.com

HARWARD PRE- UNIVERSIRY COLLEGE, Dasanapura, Tumkur Road, Bengaluru North 562162, REQUIRED LECTURERS for English, Computer Science, Economics, Chemistry. Contact: 9880112833, 9945230285

MORE **Classifieds** Ads on Subsequent Pages

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RAJESHWARI AASHIRVAD

your dream! our goal...

Develop | Build | Sale

www.aashirvad.net

ಮೈಸೂರು ರಸ್ತೆಯಲ್ಲಿರುವ BMRDA/BMICAPA ಮಾನ್ಯತೆ ಪಡೆದ ಸೈಟುಗಳ ಮೇಲೆ ಇಂದೇ ಹೂಡಿಕೆ ಮಾಡಿ

LAYOUT PICTURES

LAYOUT PICTURES



SPOT BOOKING OFFER ₹2 Lakhs DISCOUNT

₹ 4599 per sft

₹ 2699 per sft

Aashirvad Aprameya

BMICAPA & RERA
ಅನುಮೋದನೆ ಆದ ಸೈಟುಗಳು

ಬಿಡದಿ

ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಹೈವೇಗೆ ಹೊಂದಿಕೊಂಡಿದೆ

RERA No.PRM/KA/RERA/1270/302/PR/290125/007448

Aashirvad Siddhi Priya

BMRDA & RERA
ಅನುಮೋದನೆ ಆದ ನಿವೇಶನಗಳು

ದೊಡ್ಡ ಆಲದ ಮರದ ಹತ್ತಿರ

ಮೈಸೂರು ರಸ್ತೆ

RERA No. PRM/KA/RERA/1251/310/PR/030125/007344

READY FOR REGISTRATION*
WORLD CLASS AMENITIES

FULLY DEVELOPED LAYOUT
BANK LOAN AVAILABLE

Call for Free Site Visit : **63 99 88 99 11**

SITE DIMENSIONS: 30X35, 30X40 ODD DIMENSIONS

NARGUND COLLEGE OF PHYSIOTHERAPY

Dattatreyanagar, Hosakerehalli,BSK-3rd Stage ,Bengaluru-560085.



APPLY NOW – LIMITED SEATS!

ADMISSION NOW OPEN

ACADEMIC YEAR 2025 | 2026

COURSE WE OFFER

- Bachelors in Physiotherapy
- Master's in Physiotherapy

WHY US



- ISO 9001:2015 Certified Physiotherapy College
- Clinical Training in 10+ Multispecialty Hospitals
- Expert Faculty & Industry Tie-ups
- 100% Results & Placement Support
- Scholarships for Meritorious Students

SCAN FOR REGISTRATION

AFFLIATIONS & RECOGNITIONS

Contact Us

9590210991, 7019425622 www.nargund.edu.in nargundcop@gmail.com

---

KARNATAKA REDDYJANA SANGHA® (Estd -1925)

KRJS GROUP OF INSTITUTIONS

#1, Mahayogi Vemana Road, 3rd Block, Koramangala, Bengaluru - 560034

VEMANA INSTITUTE OF TECHNOLOGY

Approved by AICTE-New Delhi, Affiliated to VTU-Belagavi, Recognised by Govt. of Karnataka

#1, Mahayogi Vemana Road, 3rd Block, Koramangala, Bengaluru - 560 034.| Off : 080-25529874/75

Website : www.vemanait.edu.in

25 YEARS OF ACADEMIC EXCELLENCE

CET CODE E092

COMED-K CODE E145

NBA NATIONAL BOARD of ACCREDITATION CSE | ISE | ECE

Scholarship Opportunities



U.G. PROGRAMMES

- Computer Science & Engineering • Information Science & Engineering
- Electronics & Communication Engineering • Mechanical Engineering
- Civil Engineering • Computer Science & Engineering (Data Science)
- Artificial Intelligence & Machine Learning • Computer Science & Engineering (Cyber Security)



"Fostering innovation and skill-building!"
Esteemed Governing Council members visit the Toyota Skill Development Centre.

KEY FEATURES: Highly Motivated & Experienced Faculty | Consistent Academic Excellence | State-of-the-Art Laboratories | Centers of Excellence in Emerging Technologies | Indigenously Designed and Developed Projects | MSME - Business Incubation Centre | Drone Development Lab | IPR Cell - Fueling Innovation and Entrepreneur Development | Sports & Cultural Eco System | Student Welfare Scholarships | Well stocked library with Digital facilities | Vemana ReddyCubSat

Vemana Institute of Technology Major Recruiters

DELL, WIPRO, Tech Mahindra, SUBEX, IBM, Infosys, amazon, HUAWEI, accenture, vtiger, MICROLAND, SONATA, JUSPAY, Mindtree, Radel, tcs, SG, HARMAN, TATA ELXSI, VOLVO

For Admissions Contact:
95354 44571 / 63617 50682 / 683 / 686
Email: **admissions@vemanait.edu.in**

RJS INSTITUTE OF MANAGEMENT STUDIES, Koramangala

Affiliated to Bengaluru City University, Recognized by Govt. of Karnataka, Approved by AICTE, New Delhi.

COURSES OFFERED

- **BBA** (General)
- **B.Com** (Logistics & Supply Chain Management)
- **MBA** (General)

Mrs. AMBIKA G (U18JP21M0006) 3rd Rank 94.63% (BBA)

- NAAC accreditation
- Value-added certificates: Advanced Excel and Power BI, Digital Marketing, Soft Skill Training
- Transportation and hostel facilities
- Fees concession for merit students

BEST PRACTICES

- 50% Academics
- 50% Innovative Activities
- 100% Placement Assistance

For Admission Contact:
080- 25539648 | 63617 50675 | 90352 44615
Email: **rjsimsbschool@gmail.com | principalrjsims@gmail.com**
Website: **www.rjsims.edu.in**

VEMANA INSTITUTE OF PHYSIOTHERAPY, Koramangala

Affiliated to Rajiv Gandhi University of Health Sciences and Recognized by Govt. of Karnataka

Bachelor of Physiotherapy (BPT)
Eligibility: Passed 10+2 with not less than 45% in Physics, Chemistry and Biology (Course Duration: 4.5 Years)
Master of Physiotherapy (MPT)

For Admission Contact: **74830 00727 | 90351 53162**
Email: **principal@vipt.edu.in | principalvipt@gmail.com**
Website: **www.vipt.edu.in**

RJS FIRST GRADE COLLEGE, Koramangala

Permanently Affiliated to BCU,Approved by AICTE, Re-Accredited by NAAC with B++, 2(f) & 12(B) Recognised by UGC

NISARGA K (U18FR21S0027) 9th Rank 96.12% (B.SC)

PROGRAMMES OFFERED:

- **B.Com** (General)
- **B.Com** (Business Data Analytics)
- **B.Com** (Integrated CA)
- **BCA** (Bachelor of Computer Applications)
- **B.Sc** (Physics, Mathematics, Computer Science)
- **B.Sc** (Biochemistry, Genetics, Biotechnology)
- **MCA** (Master of Computer Applications)
- **M.Com** (Master of Commerce)

HIGHLIGHTS OF FACILITIES

- Scholarship Opportunities
- Add on Courses
- 100% Placements
- Transport Facility
- Hostel Facility etc.

For Admission Contact:
080 2552 5534 | 94814 51695
Email: **rjsfgc@yahoo.com**
Website: **www.rjsfgc.edu.in**

Transport and Hostel Facilities

For Admissions : **6361 750 682 / 683 / 686 | www.rjsschools.edu.in**

ಭಾನುವಾರ • ಜೂನ್ 22, 2025
ಪ್ರಜಾವಾಣಿ

ಭೂಮಿಕಾದಲ್ಲಿ ಪಸರಿಸಿದ ‘ಹೃದಯ’ದ ಮಾತು

ಸಂಭ್ರಮ ಮೂಡಿಸಿದ ಅಡುಗೆ, ಕಿವಿಗೆ ಇಂಪು ನೀಡಿದ ಹಾಡು, ಅಂಕಿತ ಅಮರ್ ಮಾತು • ಮೇಕಪ್ ಪ್ರಾತ್ಯಕ್ಷಿಕೆ



ನಟಿ ಅಂಕಿತಾ ಅಮರ್ ಮಾತನಾಡಿದರು



ದಿವ್ಯಾ ರಾಮಚಂದ್ರ ಹಾಡುಗಳ ಮೂಲಕ ರಂಜಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಎಲ್ಲ ಕೆಲಸಗಳ ನಡುವೆ ಹೃದಯದ ಆರೋಗ್ಯದ ಕಾಳಜಿ ವಹಿಸಬೇಕಾದ ಮಾಹಿತಿ, ಘಮಘಮಿಸಿದ ಅಡುಗೆ, ಇಂಪಾದ ಹಾಡುಗಳು, ನಡು ನಡುವೆ ರಸಪ್ರಶ್ನೆಗಳು...

ಕೋರಮಂಗಲ ಕ್ಲಬ್‌ನಲ್ಲಿ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ಭೂಮಿಕಾ ಕ್ಲಬ್ ಶನಿವಾರ ಆಯೋಜಿಸಿದ್ದ 28ನೇ ಆವೃತ್ತಿಯ ಕಾರ್ಯಕ್ರಮದ ಇಣುಕುನೋಟ ಇದು.

‘ಫ್ರೀಡಂ ಆಯಿಲ್’, ‘ಮಣಿಪಾಲ್ ಆಸ್ಪತ್ರೆಗಳ ಸಮೂಹ’, ‘ಇಕೊ ಕ್ರಿಸ್ಟಲ್’ ಸಹಕಾರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಉದ್ಘಾಟಕರ ಮಾತು, ಮೇಕಪ್ ಪ್ರಾತ್ಯಕ್ಷಿಕೆ ಉತ್ಸಾಹ ತುಂಬಿದವು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಟಿ ಅಂಕಿತಾ ಅಮರ್ ಮಾತನಾಡಿ, ‘ಹೆಣ್ಣುಮಕ್ಕಳು 23-25 ನೇ ವಯಸ್ಸಿನಲ್ಲಿ ಸಂಗಾತಿಯನ್ನು ಹುಡುಕಲು ಆರಂಭಿಸುತ್ತಾರೆ. ಜೀವನದುದ್ದಕ್ಕೂ ನಮ್ಮ ಕೈ ಹಿಡಿಯಬಲ್ಲವರು ಯಾರು ಎಂದು ಮನಸ್ಸಲ್ಲೇ ಕೇಳಿಕೊಳ್ಳುತ್ತಾರೆ. ಸಂಗಾತಿ ಆಗುವವರಿಂದ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಳ್ಳುತ್ತೇವೆ. ನಮ್ಮನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಬಯಸುತ್ತೇವೆ. ನಮ್ಮ ಭಾವನೆಗೆ ಸ್ಪಂದಿಸಬೇಕು ಎಂದು ಆಸೆ ಪಡುತ್ತೇವೆ. ಜೊತೆಗೆ ನಾವು ನಮ್ಮನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ’ ಎಂದು ಸಲಹೆ ನೀಡಿದರು.

‘ಭೂಮಿಕಾ ಕ್ಲಬ್ ಆತ್ಮಾವಲೋಕನ ಗುಣವನ್ನು ಬೆಳೆಸುತ್ತದೆ. ಮಹಿಳೆಯರು ತಮ್ಮನ್ನು ತಾವು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ’ ಎಂದರು.

ಮಹಿಳೆಯರು ಪುರುಷರಿಗಿಂತ ಉತ್ತಮರು ಎಂದು ಭಾವಿಸಬಾರದು. ಹಾಗೆ ಪುರುಷರೂ ಮಹಿಳೆಯರಿಗಿಂತ ಶ್ರೇಷ್ಠರಲ್ಲ. ತಮ್ಮದೇ ಆದ ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಸಹಾನುಭೂತಿ, ಕಾಳಜಿ ಮತ್ತು ಭಾವನಾತ್ಮಕ ವಿಚಾರಗಳಲ್ಲಿ ಮಹಿಳೆಯರು ಮುಂದಿರುತ್ತಾರೆ ಎಂದರು. ಹಾಡು ಹಾಡಿ ಅಂಕಿತಾ ರಂಜಿಸಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ದಿಕ್ಸೂಚಿ ಭಾಷಣ ಮಾಡಿದರು. ‘ಚಂದನವನ’ ರಸಪ್ರಶ್ನೆಯಲ್ಲಿ ಪಾಲ್ಗೊಂಡು ಸರಿ ಉತ್ತರ ನೀಡಿದವರು ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಾರ್ಯಕ್ರಮದಲ್ಲಿ ಭಾಗವಹಿಸಲು ಪಾಸ್ ಪಡೆದರು.

ಒಗ್ಗರಣೆ ಡಬ್ಬಿ ಮುರಳಿ ಮತ್ತು ಸುಚಿತ್ರಾ ಅವರು ಅಡುಗೆ ಪ್ರಾತ್ಯಕ್ಷಿಕೆ ನೀಡಿದರು. ಶೋಭಾ ಬಿ.ಜಿ. ಮೇಕಪ್ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ನಿರೂಪಕರಾದ ಆರ್.ಜೆ. ಅಕ್ಷಯ್ ಮತ್ತು ಸ್ನೇಹಾ ನೀಲಪ್ಪ ಗೌಡ ಪ್ರೇಕ್ಷಕರಿಗೆ ವಿವಿಧ ಆಟಗಳನ್ನು ಆಡಿಸಿ ಹುರಿದುಂಬಿಸಿದರು. ದಿವ್ಯಾ ರಾಮಚಂದ್ರ ಅವರ ಇಂಪಾದ ಸಂಗೀತದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.



ಭೂಮಿಕಾ ಕ್ಲಬ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಸ್ತೋಮ ಪ್ರಜಾವಾಣಿ ಚಿತ್ರ

ಉತ್ತಮ ಆಹಾರ, ಪ್ರತಿದಿನ ನಡಿಗೆ ಇರಲಿ



ಹೃದಯದ ಆರೋಗ್ಯದ ಬಗ್ಗೆ ಡಾ.ಅನುಷಾ ಎ.ರಾವ್ ಮಾಹಿತಿ ನೀಡಿದರು

ಹೃದಯದ ಆರೋಗ್ಯ ಕಾಪಾಡಿಕೊಳ್ಳುವುದು ಎಂದರೆ ಪೂರ್ತಿ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳುವುದಾಗಿದೆ. ಮನೆಯಿಂದ ಹೊರಗೆ ಊಟ ಮಾಡುವುದನ್ನು ಬಿಡಬೇಕು. ಎಣ್ಣೆ ಪದಾರ್ಥಗಳಿಂದ ದೂರ ಇರಬೇಕು. ದಿನಕ್ಕೆ ಕನಿಷ್ಠ ಅರ್ಧಗಂಟೆ ನಡೆಯಬೇಕು ಎಂದು ಮಣಿಪಾಲ್ ಆಸ್ಪತ್ರೆಯ ಹೃದ್ರೋಗ ತಜ್ಞೆ ಡಾ. ಅನುಷಾ ಎ. ರಾವ್ ಸಲಹೆ ನೀಡಿದರು.

‘ಬೆಳಿಗ್ಗೆಯಿಂದ ಸಂಜೆವರೆಗೆ ಅಡುಗೆ ಇನ್ನಿತರ ಕೆಲಸ ಮಾಡುತ್ತಿದ್ದೇವೆ. ಮತ್ತಿನ್ನೇಕೆ ವಾಕಿಂಗ್ ಎಂದು ಕೇಳುವುದನ್ನು ಬಿಟ್ಟುಬಿಡಿ. ನಿಮ್ಮ ಆರೋಗ್ಯದ ಬಗ್ಗೆ ನೀವಲ್ಲದೇ ಬೇರೆ ಯಾರೂ ಕಾಳಜಿ ವಹಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ತಂಬಾಕಿನ ಉತ್ಪನ್ನಗಳನ್ನು ಸೇವಿಸಬೇಡಿ. ಮದ್ಯಪಾನ ಮಾಡಬೇಡಿ. 40 ವರ್ಷ ದಾಟಿದವರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ. ಹೃದಯದ ಸಮಸ್ಯೆ ಉಂಟಾಗದಂತೆ ಮೊದಲೇ ಎಚ್ಚರವಹಿಸಿ. ಮಂಡಿ ನೋವು ಇರುವವರು ಐದು ನಿಮಿಷ ನಡೆದು ವಿಶ್ರಾಂತಿ ಪಡೆಯಬೇಕು. ಮತ್ತೆ ಐದು ನಿಮಿಷ ನಡೆಯಬೇಕು. ಇದೇ ರೀತಿ ಆರೇಳು ಬಾರಿ ನಡೆಯಬೇಕು’ ಎಂದು ತಿಳಿಸಿದರು.



ಶೋಭಾ ಬಿ.ಜಿ. ಅವರು ಮೇಕಪ್ ಪ್ರಾತ್ಯಕ್ಷಿಕೆ ನೀಡಿದರು



ಒಗ್ಗರಣೆ ಡಬ್ಬಿ ಮುರಳಿ ಮತ್ತು ಸುಚಿತ್ರಾ ಅವರು ಅಡುಗೆ ಪ್ರಾತ್ಯಕ್ಷಿಕೆ ನೀಡಿದರು

ಏಕಸಂಸ್ಕೃತಿ ಹೇರಿಕೆಯೇ ತುರ್ತುಪರಿಸ್ಥಿತಿ: ಪ್ರಬೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪಾರ ಭಾಷಿಕ ಮತ್ತು ಸಾಂಸ್ಕೃತಿಕ ವೈವಿಧ್ಯ ಇರುವ ಭಾರತ ಉಪಖಂಡವನ್ನು ಈಗಿನ ಪ್ರಭುತ್ವವು ಏಕಭಾಷಿಕ ಸಂಸ್ಕೃತಿಯಾಗಿಸಲು ಯತ್ನಿಸುತ್ತಿದೆ. ಇದು ಈಗಿನ ಸಂಘರ್ಷ ಮತ್ತು ತಳಮಳಕ್ಕೆ ಕಾರಣ. ಇದೇ ಈ ಹೊತ್ತಿನ ತುರ್ತುಪರಿಸ್ಥಿತಿ’ ಎಂದು ಹಿರಿಯ ಪತ್ರಕರ್ತ ಪ್ರಬೀರ್ ಪುರಕಾಯಸ್ತ ಪ್ರತಿಪಾದಿಸಿದರು.

ಅಭಿರುಚಿ ಪ್ರಕಾಶನ ಮತ್ತು ಕ್ರಿಯಾ ಮಾಧ್ಯಮವು ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಪ್ರಬೀರ್ ಅವರು ತಮ್ಮ ‘ಕೀಪಿಂಗ್ ಅಪ್ ದಿ ಗುಡ್ ಫೈಟ್’ನ ಕನ್ನಡಾನುವಾದ ‘ಆರದ ಹೋರಾಟದ ಕಿಚ್ಚು’ ಪುಸ್ತಕದ ಬಿಡುಗಡೆಯ ನಂತರ ಮಾತನಾಡಿದರು.

‘ಇಂದಿರಾಗಾಂಧಿ ಅವರು ತುರ್ತು-ಪರಿಸ್ಥಿತಿ ಹೇರಿದ್ದಾಗ, ಅದು ಎಲ್ಲರ ಅನುಭವಕ್ಕೂ ಬಂದಿತ್ತು. ಅದರ ವಿರುದ್ಧ ಸಾಮಾನ್ಯ ಜನರು ಮಾತನಾಡದೇ ಇದ್ದರೂ, ಚುನಾವಣೆಯಲ್ಲಿ ಇಂದಿರಾ ಅವರನ್ನು ಸೋಲಿಸಿದರು. ಆದರೆ ಈಗ ಅಂತಹ ಸ್ಥಿತಿ ಇಲ್ಲ’ ಎಂದರು.

‘ಇಂದಿನ ಪ್ರಭುತ್ವವು ಭಾರತವನ್ನು ಏಕಸಂಸ್ಕೃತಿಯಾಗಿಸಲು ಹೊರಟಿದೆ. ಇದಕ್ಕಾಗಿ ಬಂಡವಾಳಶಾಹಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದನ್ನು ಪ್ರಶ್ನಿಸಬೇಕಿದ್ದ ಬೃಹತ್ ಮಾಧ್ಯಮ ಸಂಸ್ಥೆಗಳು ಒಂದಲ್ಲಾ ಒಂದು ರೀತಿಯಲ್ಲಿ ಪ್ರಭುತ್ವದ ಹಿಡಿತದಲ್ಲಿವೆ. ಪ್ರಭುತ್ವದ ಉದ್ದೇಶದ ಕಾರಣಕ್ಕೇ ಒಂದು ಅಲ್ಪಸಂಖ್ಯಾತ ಸಮುದಾಯವನ್ನು ಮಾತ್ರ ಗುರಿ ಮಾಡಲಾಗುತ್ತಿದೆ’ ಎಂದರು.

> ಇಂದಿರಾ ಗಾಂಧಿ ಅವರು ಹೇರಿದ್ದ ತುರ್ತುಪರಿಸ್ಥಿತಿಗೆ ಕೋಮುವಾದದ ಸೋಂಕು ಇರಲಿಲ್ಲ. ಈಗಿನ ಅಘೋಷಿತ ತುರ್ತುಪರಿಸ್ಥಿತಿಗೆ ಕೋಮುವಾದದ ಸೋಂಕು ಇದೆ
> **ಎ.ನಾರಾಯಣ,** ಲೇಖಕ

> ಅನ್ಯಾಯದ ವಿರುದ್ಧ ಬೀದಿಯಲ್ಲಿ ನಿಂತು ಶಾಂತವಾಗಿ ಪ್ರತಿಭಟನೆ ನಡೆಸುವಂತಹ ಸ್ಥಿತಿ ಕರ್ನಾಟಕದಲ್ಲೂ ಇಲ್ಲ ಎಂಬುದು ಚೋದ್ಯ
> **ಕೆ.ಎಸ್.ವಿಮಲಾ,** ಹೋರಾಟಗಾರ್ತಿ

ಪತ್ರಕರ್ತ ದಿನೇಶ್ ಅಮಿನ್‌ಮಟ್ಟು, ‘ಇಂದಿರಾ ಗಾಂಧಿ ತುರ್ತುಪರಿಸ್ಥಿತಿ ಹೇರಿದ ಆರಂಭದ ದಿನಗಳಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕರು ವಿರೋಧಿಸಿದ್ದರು. ನಂತರದ ದಿನಗಳಲ್ಲಿ ಕ್ಷಮಾಪಣೆ ಪತ್ರ ಬರೆದು, ಅವರಿಗೆ ಬೆಂಬಲ ಸೂಚಿಸಿದ್ದರು. ಅಡ್ವಾಣಿ ಸಹ ಕ್ಷಮಾಪಣೆ ಪತ್ರ ಬರೆದಿದ್ದರು. ಅಂದು, ಆ ರೀತಿಯಲ್ಲಿ ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ್ದವರೇ ಇಂದು ಅಘೋಷಿತ ತುರ್ತುಪರಿಸ್ಥಿತಿಯನ್ನು ಬೆಂಬಲಿಸುತ್ತಿದ್ದಾರೆ’ ಎಂದು ಅವರು ಹೇಳಿದರು.

ಒಳಮೀಸಲಾತಿ: ಶೀಘ್ರ ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯಡಿ ಒಳಮೀಸಲಾತಿಗೆ ಕೈಗೊಂಡಿರುವ ಸಮೀಕ್ಷೆಯ ಅವಧಿಯನ್ನು ಮತ್ತೆ ವಿಸ್ತರಿಸದೆ, ಲಭ್ಯವಿರುವ ದತ್ತಾಂಶದ ಅನ್ವಯ ಒಳಮೀಸಲಾತಿ ಅನುಷ್ಠಾನಗೊಳಿಸಬೇಕು’ ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ ರಾಜ್ಯ ಸಮಿತಿಯು ಸರ್ಕಾರಕ್ಕೆ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಪ್ರಧಾನ ಸಂಚಾಲಕ ಬಸವರಾಜ್ ಕೌತಾಳ್, ‘ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಧ್ಯಕ್ಷತೆಯ ಏಕಸದಸ್ಯ ವಿಚಾರಣಾ ಆಯೋಗವು ಕೆಲ ಜಿಲ್ಲೆಗಳಲ್ಲಿ ಶೇ 100 ರಷ್ಟು ಸಮೀಕ್ಷೆ ಪೂರ್ಣಗೊಳಿಸಿದೆ. ಆಯೋಗದ ಪ್ರಕಾರ ಒಟ್ಟಾರೆ ರಾಜ್ಯದಲ್ಲಿ ಶೇ 91ರಿಂದ 92 ರಷ್ಟು ಸಮೀಕ್ಷೆಯಾಗಿದೆ. ಆದ್ದರಿಂದ ವರದಿಯನ್ನು ಸರ್ಕಾರ ಕೂಡಲೇ ಸ್ವೀಕರಿಸಬೇಕು’ ಎಂದು ಅವರು ಹೇಳಿದರು.

‘ಬೆಂಗಳೂರು ನಗರದಲ್ಲಿ ಸಮೀಕ್ಷೆಗೆ ಒಳಪಟ್ಟವರ ಶೇಕಡಾವಾರು ಸಂಖ್ಯೆ ಕಡಿಮೆ ಇರುವ ಕಾರಣ, ಈ ಹಿಂದೆ ಎರಡು ಬಾರಿ ಸಮೀಕ್ಷೆಯ ಕಾಲಾವಧಿ ವಿಸ್ತರಿಸಲಾಗಿದೆ. ಆದರೂ ಜನರು ನಿರೀಕ್ಷಿತ ಮಟ್ಟದಲ್ಲಿ ಸಮೀಕ್ಷೆಯಲ್ಲಿ ಪಾಲ್ಗೊಳುತ್ತಿಲ್ಲ. ಆದ್ದರಿಂದ ಪುನಃ ಸಮೀಕ್ಷೆಯ ಕಾಲಾವಧಿ ವಿಸ್ತರಣೆ ಮಾಡುವುದು ಸರಿಯಲ್ಲ’ ಎಂದು ಅವರು ಹೇಳಿದರು.

ಒಕ್ಕೂಟದ ಸದಸ್ಯರಾದ ಶಿವಣ್ಣ ಕನಕಪುರ, ಚಂದ್ರು ತರಹುಣಿಸೆ, ವೇಣುಗೋಪಾಲ್ ಮೌರ್ಯ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ವಿಶ್ವ ಮುಟ್ಟಿನ ನೈರ್ಮಲ್ಯ ದಿನಾಚರಣೆ ಪ್ರಯುಕ್ತ ಜಾಗೃತ ನಡಿಗೆಗೆ ಚಾಲನೆ: ಕುಸುಮಾ ಹನುಮಂತರಾಯಪ್ಪ, ಅಧ್ಯಕ್ಷತೆ: ಡಿ. ಹೇಮಲತಾ ಇಂದ್ರೇಶ್, ಅತಿಥಿಗಳು: ಡಾ. ನಾಗಲಕ್ಷ್ಮಿ ಚೌಧರಿ, ಹನುಮಂತರಾಯಪ್ಪ, ಆಯೋಜನೆ: ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್, ಸ್ಥಳ: ಕೆಂಗುಂಟೆ ಆಟದ ಮೈದಾನ, ಬೆಳಿಗ್ಗೆ 7

‘ಕನ್ನಡ ಕಾಯಕ ಶ್ರೀ’ ಪ್ರಶಸ್ತಿ ಪ್ರದಾನ: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಅಧ್ಯಕ್ಷತೆ: ವಿ. ಶ್ರೀಕೃಷ್ಣಪ್ರಸಾದ್, ಉಪಸ್ಥಿತಿ: ಟಿ.ಎನ್. ನರಸಿಂಹಮೂರ್ತಿ, ಪ್ರಶಸ್ತಿ ಸ್ವೀಕರಿಸುವವರು: ಬಿ.ಆರ್. ಲಕ್ಷ್ಮಣರಾವ್, ಆಯೋಜನೆ: ವಿಮಾನ ಕನ್ನಡ ಸಂಘ, ಸ್ಥಳ: ಡಾ.ವಿ.ಎಂ. ಘಾಟ್ಗೆ ಸಭಾಂಗಣ, ಎಚ್‌ಎಎಲ್ ಮಧ್ಯ ಬಡಾವಣೆ, ಬೆಳಿಗ್ಗೆ 8ರಿಂದ

ಆರ್ಗ್ಯಾನಿಕ್ ಸಂತೆ, ವಿಶ್ವ ಸಂಗೀತ ದಿನಾಚರಣೆ: ಅತಿಥಿ: ಕಾಳಿದಾಸ್ ರಾಜ್ ಎಂ., ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 9

‘ಭದ್ರಾಚಲ ರಾಮದಾಸು ನೃತ್ಯ ಪ್ರದರ್ಶನ: ಅತಿಥಿಗಳು: ಎಸ್. ಸಡಗೋಪನ್, ರಾಧಾಕೃಷ್ಣ, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 9.30

ಹೊಯ್ಸಳ ಬಾಂಧವರ ಸಮ್ಮಿಲನ ಕಾರ್ಯಕ್ರಮ: ಅತಿಥಿಗಳು: ಎಸ್.ವಿ. ರಂಗನಾಥ್, ಡಿ.ವಿ. ಗುರುಪ್ರಸಾದ್, ಅಧ್ಯಕ್ಷತೆ: ಎಚ್.ವಿ. ಸತ್ಯನಾರಾಯಣ, ಆಯೋಜನೆ: ಹೊಯ್ಸಳ ಕರ್ನಾಟಕ ಸಂಘ, ಸ್ಥಳ: ಚಾಮರಾಜು ಕಲ್ಯಾಣ ಮಂದಿರ, ಮೂರನೇ ಬ್ಲಾಕ್, ಜಯನಗರ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ಆರ್. ಎಸ್. ಜೈಶಂಕರ್, ಪಿ.ಸಿ. ಮಹೇಶ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಏಳನೇ ಮುಖ್ಯರಸ್ತೆ, ಸಹಕಾರ ನಗರ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸೌಖ್ಯ ವೇಮರಾಜು, ಉಪಸ್ಥಿತಿ: ನಾಗರಾಜ ಉಪಾಧ್ಯಾಯ, ಲೀಲಾವತಿ ಉಪಾಧ್ಯಾಯ, ಕಾಮಾಕ್ಷಿ, ರೂಪಾ ಶ್ರೀಧರ್, ಆಯೋಜನೆ: ನಟರಾಜರಂಗಮ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

‘ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್’ ಪ್ರಶಸ್ತಿ ಪ್ರದಾನ: ಮಲ್ಲಿಕಾ ಘಂಟಿ, ಪ್ರಶಸ್ತಿ ಸ್ವೀಕರಿಸುವವರು: ಶಿವಗಂಗಾ ರುಮ್ಮ, ಕವಿತಾ ರೈ, ನಂದಿನಿ ಜಯರಾಮ್, ಪ್ರಾಸ್ತಾವಿಕ ನುಡಿ: ಎಚ್.ಎಲ್. ಪುಷ್ಪ, ಉಪಸ್ಥಿತಿ: ಗಂಗಮ್ಮ ಬಳಿಗಾರ್, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

‘ಒಪೇರಾ’ ಸಾಹಿತ್ಯ, ರಂಗಭೂಮಿ, ಸಂಗೀತದ ಮಿಲನೋತ್ಸವ: ಭಾಗವಹಿಸುವವರು: ಇಂದ್ರಕುಮಾರ್ ಎಚ್.ಬಿ., ಎಂ.ಎಸ್. ವಿದ್ಯಾ, ಲಲಿತಾ ಸಿದ್ಧಬಸವಯ್ಯ, ಗೀತಗಾಯನ: ಪ್ರವೀಣ್ ಡಿ. ರಾವ್ ಮತ್ತು ತಂಡ, ಆಯೋಜನೆ: ತಾರಅರೇನಾ, ಸ್ಥಳ: ಸನಾತನ ಕಲಾಕ್ಷೇತ್ರ, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 10.30

ಟಿ.ಪಿ. ಕೈಲಾಸಂ ನೆನಪಿನ ಪ್ರಯುಕ್ತ ಗೀತಗಾಯನ, ಕವಿಗೋಷ್ಠಿ, ಏಕಪಾತ್ರಾಭಿನಯ, ರಸಪ್ರಶ್ನೆ: ಅಧ್ಯಕ್ಷತೆ: ಪಾರ್ಶ್ವನಾಥ್, ಅತಿಥಿಗಳು: ಅಂಕಲ್ ಶ್ಯಾಂ, ಸುಮಲತಾ ಎಚ್. ಎನ್., ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಟಿ. ನಾರಾಯಣ ಅವರು ರಚಿಸಿರುವ ‘ಪ್ರಾಚೀನ ಕರ್ನಾಟಕ ಕಲಾಕೃತಿಗಳ’ ಪ್ರದರ್ಶನ: ಅತಿಥಿಗಳು: ರಾಮಕೃಷ್ಣಪ್ಪ ಎ., ಶಶಿಧರ್ ಎಸ್.ಎನ್., ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ

‘ಸುಗ್ಗಿ–2025, ಶತಮಾನೋತ್ಸವ ವಿದ್ಯಾರ್ಥಿವೇತನ ವಿತರಣೆ ಸಮಾರಂಭ: ಸಾನ್ನಿಧ್ಯ: ಚಂದ್ರಶೇಖರ್ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಎಲ್. ರೇವಣಸಿದ್ಧಯ್ಯ, ಟಿ.ಎಸ್. ಚಂದ್ರಶೇಖರಯ್ಯ, ಆಯೋಜನೆ: ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮ ಸಂಸ್ಥೆ, ಸ್ಥಳ: ಸಿದ್ಧಗಂಗಾ ಪಬ್ಲಿಕ್ ಸ್ಕೂಲ್, ಚಂದ್ರಲೇಔಟ್, ಬೆಳಿಗ್ಗೆ 10.30

ಕೇಶವರೆಡ್ಡಿ ಹಂದ್ರಾಳ ಅವರ ‘ಆಸ್ಕರ್ ವೈಲ್ಡನ ನೈಟಿಂಗೇಲ್ಸ್’, ‘ವರ್ಣಭೇದ’, ಗುರುರಾಜ ಕೊಡ್ಕಣಿ ಅವರ ‘ಶ್–ಇಲ್ಯಾರೋ ಇದ್ದಾರೆ’, ‘ಪ್ಯಾರಾನಾರ್ಮಲ್’, ಬಿ. ಜನಾರ್ದನ ಭಟ್ ‘ಮನೆಯೊಳಗೆ ಮನೆಯೊಡೆಯ’ ಪುಸ್ತಕಗಳ ಬಿಡುಗಡೆ: ಎಂ. ಕೃಷ್ಣಪ್ಪ, ಅತಿಥಿಗಳು: ರಶ್ಮಿ ಎಸ್., ಶ್ರೀನಿವಾಸಪ್ರಭು, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

‘ವೀರಶೈವ ಸಿದ್ಧಾಂತದಲ್ಲಿ ಗೋತ್ರ ಪುರುಷರ ಕಲ್ಪನೆ’ ಉಪನ್ಯಾಸ: ಎಂ.ಜಿ. ನಾಗರಾಜ್, ಅಧ್ಯಕ್ಷತೆ: ವಿ. ಅನುರಾಧಾ, ಉಪಸ್ಥಿತಿ: ವಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ‘ಶ್ರೀ ಗಂಗ ಸಾಮ್ರಾಟ ಶ್ರೀಪುರುಷ’ ಪ್ರಶಸ್ತಿ ಪ್ರದಾನ, ‘ಎಚ್.ಡಿ. ದೇವೇಗೌಡ ಅವರ ಬದುಕು ಮತ್ತು ಸಾಧನೆ’ ಪುಸ್ತಕ ಬಿಡುಗಡೆ, ‘93 ವಿವಿಧ ಸಾಧಕರಿಗೆ ಎಚ್.ಡಿ. ದೇವೇಗೌಡ’ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ವೀರೇಶಾನಂದ ಸರಸ್ವತಿ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಸನ್ಮಾನಿತರು: ಎಚ್.ಡಿ. ದೇವೇಗೌಡ, ಅಭಿನಂದನಾ ನುಡಿ: ಸುಗತ ಶ್ರೀನಿವಾಸರಾಜು, ಸಾಧಕರಿಗೆ ಪ್ರಶಸ್ತಿ ಪ್ರದಾನ: ಎಚ್.ಡಿ. ದೇವೇಗೌಡ, ಅಧ್ಯಕ್ಷತೆ: ಎಂ.ಎನ್. ವೆಂಕಟಾಚಲಯ್ಯ, ಆಯೋಜನೆ: ಶ್ರೀ ಎಚ್.ಡಿ. ದೇವೇಗೌಡ ಅಭಿನಂದನಾ ಸಮಿತಿ, ಸ್ಥಳ: ಡಾ. ಬಾಬೂ ಜಗಜೀವನ್‌ರಾಮ್ ಭವನ, ಹೊರವರ್ತುಲ ರಸ್ತೆ, ಸುಮ್ಮನಹಳ್ಳಿ ಜಂಕ್ಷನ್ ಹತ್ತಿರ, ಮಧ್ಯಾಹ್ನ 2ರಿಂದ

‘ಪೂತನಿ’ ಏಕವ್ಯಕ್ತಿ ಪ್ರದರ್ಶನ: ನಿರ್ದೇಶನ: ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಅಭಿನಯ: ನಿರ್ಮಲಾ ನಾದನ್, ಭಾಗವತ: ಅರಳಗುಪ್ಪೆ ಪುಟ್ಟಸ್ವಾಮಿ, ಆಯೋಜನೆ: ರಂಗಮಂಡಲ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

‘ಬಾಯ್ಬಡ್ಕಿ’ ನಾಟಕ ಪ್ರದರ್ಶನ: ನಿರ್ದೇಶನ: ಭೀಷ್ಮ ರಾಮಯ್ಯ, ‘ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್’ ನಾಟಕ ಪ್ರದರ್ಶನ: ನಿರ್ದೇಶನ: ಬಾಷ್ ರಾಘವೇಂದ್ರ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 4ರಿಂದ

‘ನಾಯಿ ಕಳೆದಿದೆ’ ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ದೆ ನಟನೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಪಂಜೆ ಮಂಗೇಶರಾಯ ಸಾಹಿತ್ಯ’ ವಿಶೇಷ ಉಪನ್ಯಾಸ: ಎಸ್.ಪಿ. ಮಹಾಲಿಂಗೇಶ್ವರ ಭಟ್, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ತರಳಬಾಳು ಮಿನಿ ಸಭಾಂಗಣ, ತರಳಬಾಳು ಕೇಂದ್ರ, ಬಿಡಿಎ ಕಾಂಪ್ಲೆಕ್ಸ್, ಆರ್.ಟಿ. ನಗರ, ಸಂಜೆ 4

‘ಜೀವನ್ಮುಖಿ’ ಪ್ರಶಸ್ತಿ ಪ್ರದಾನ: ಗೊ.ರು. ಚನ್ನಬಸಪ್ಪ, ವಿಶೇಷ ಸಂಚಿಕೆ ಬಿಡುಗಡೆ: ಎಂ.ಎನ್. ಅನುಚೇತ್, ಪ್ರಶಸ್ತಿ ಸ್ವೀಕರಿಸುವವರು: ಶಿವರಾಜ ವಿ. ಪಾಟೀಲ, ಎಂ.ವಿ. ವೆಂಕಟೇಶ್, ಎಚ್.ಕೆ. ರಾಮು, ಎನ್. ರಾಜೇಂದ್ರ, ಅಧ್ಯಕ್ಷತೆ: ಟಿ. ತಿಮ್ಮೇಗೌಡ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30

ಯುವ ಸಂಗೀತೋತ್ಸವ: ಕೊಳಲು: ಕೆ.ಪಿ. ಪ್ರಣವ್, ಪಿಟೀಲು: ಗೋವಿಂದ ಮಾಧವ್, ಮೃದಂಗ: ನಂದನ್ ಕಶ್ಯಪ್, ಘಟ: ಶಮಿತ್ ಎಸ್. ಗೌಡ, ಗಾಯನ: ವೇದಾಂತ ಪದ್ಮರಾಮನ್, ಪಿಟೀಲು: ನಿಶಾಂತ್ ಟಿ. ರಾವ್, ಮೃದಂಗ: ಬಿ.ಎಸ್. ಸಮರ್ಥ, ಖಂಜೀರಾ: ಅರ್ನವ್ ಜಗದೀಶ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30ರಿಂದ

ನೃತ್ಯಾಂಗನ: ಅತಿಥಿ: ಜಯಪ್ರದಾ, ಉಪಸ್ಥಿತಿ: ಹೀನಾ ಜೈನ್, ಆಯೋಜನೆ: ನೃತ್ಯಗಂಗಾ ಡಾನ್ಸ್ ಫೆಸ್ಟಿವೆಲ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 5.30

‘ಎಚ್‌ಎಸ್‌ವಿ ಅಮರ’ ಮಾತು, ಹಾಡು, ನೆನಪು: ಸಂಗೀತ: ರಮ್ಯಾ ವಸಿಷ್ಠ ಮತ್ತು ತಂಡ, ಭಾಗವಹಿಸುವವರು: ಬಿ.ಆರ್. ಲಕ್ಷ್ಮಣರಾವ್, ಎಚ್.ಎನ್. ನರಹರಿರಾವ್, ಟಿ.ಎಸ್. ನಾಗಾಭರಣ, ಲಹರಿ ವೇಲು, ಜೋಗಿ, ರವಿ ಹೆಗಡೆ, ಸಭಾಪತಿ ಆನಂದ್, ಆಯೋಜನೆ ಮತ್ತು ಸ್ಥಳ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ ಎರಡನೇ ಹಂತ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

‘ಮಕ್ಕಳಿಗೆ ಜಾತಿ, ಮತ ಭೇದವಿಲ್ಲ’

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ

ಪ್ರಜಾವಾಣಿ ವಾರ್ತೆ



ಬಿ.ವೈ. ವಿಜಯೇಂದ್ರ, ಆರ್. ಅಶೋಕ ಅವರು ಮಕ್ಕಳಿಗೆ ನೋಟ್‌ಬುಕ್, ಲ್ಯಾಪ್‌ಟಾಪ್ ವಿತರಿಸಿದರು. ಸಿ.ಕೆ. ರಾಮಮೂರ್ತಿ, ಪ್ರಥಮ್ ಉಪಸ್ಥಿತರಿದ್ದರು

ಬೆಂಗಳೂರು: ‘ಮಕ್ಕಳು ದೇವರ ಸಮಾನ, ಅವರ ಮನಸ್ಸಿನಲ್ಲಿ ಕೆಟ್ಟ ಚಿಂತನೆ ಇರುವುದಿಲ್ಲ. ಜಾತಿ, ಮತ, ಪಂಥದ ಭೇದವಿರುವುದಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ರಕ್ಷಾ ಫೌಂಡೇಷನ್‌ನ 13ನೇ ವಾರ್ಷಿಕೋತ್ಸವದಲ್ಲಿ ಸಾವಿರಾರು ವಿದ್ಯಾರ್ಥಿ, ವಿದ್ಯಾರ್ಥಿಯರಿಗೆ ಉಚಿತವಾಗಿ ಎರಡು ಲಕ್ಷ ನೋಟ್ ಪುಸ್ತಕಗಳು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಅನಾಥ ಆಶ್ರಮದ ವಿದ್ಯಾರ್ಥಿಗಳ ದತ್ತು ಸ್ವೀಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದಶಕಗಳಿಂದ ಸಿ.ಕೆ. ರಾಮಮೂರ್ತಿ ಅವರ ನೇತೃತ್ವದಲ್ಲಿ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ, ಸಹಕಾರ ನೀಡಲಾಗುತ್ತಿದೆ. ಸಾಧನೆ ಇಲ್ಲದೇ ಹೋದರೆ ಸಾವಿಗೆ ಅರ್ಥವಿಲ್ಲ. ಹುಟ್ಟಿದ ಮೇಲೆ ಸಾಧನೆ ಮಾಡಿ ನಿಲ್ಲಬೇಕು’ ಎಂದು ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ‘ಗುರುಗಳು ಪಾಠ ಮಾಡುತ್ತಾರೆ, ತಂದೆ, ತಾಯಿ ಹೇಳಿಕೊಡುತ್ತಾರೆ. ಆದರೆ ಪರೀಕ್ಷೆಯನ್ನು ನಾವೇ ಬರೆಯಬೇಕು. ಆತ್ಮಸ್ಥೈರ್ಯದಿಂದ ಪರೀಕ್ಷೆ ಬರೆದು ಉತ್ತಮ ಅಂಕಗಳಿಸಿದರೆ ಜೀವನದಲ್ಲಿ ಸಾಧನೆ ಮಾಡಬಹುದು’ ಎಂದರು.

‘ವಿದ್ಯಾವಂತರಾದರೆ ಸಮಾಜದಲ್ಲಿ ಗೌರವ, ಮಾನ್ಯತೆ ಸಿಗುತ್ತದೆ, ಸಮಾಜದಲ್ಲಿ ಉತ್ತಮ ಪ್ರಜೆಯಾಗಲು ವಿದ್ಯಾವಂತರಾಗಬೇಕು. ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದು ಎಂದು ರಕ್ಷಾ ಫೌಂಡೇಷನ್ ಉಚಿತ ನೋಟ್ ಪುಸ್ತಕ ಮತ್ತು ಉನ್ನತ ವ್ಯಾಸಂಗದ ನೆರವು ನೀಡಲಾಗುತ್ತಿದೆ’ ಎಂದು ಶಾಸಕ ಸಿ.ಕೆ. ರಾಮಮೂರ್ತಿ ತಿಳಿಸಿದರು.

ಜಯದೇವ ಆಸ್ಪತ್ರೆಗೆ ₹2 ಲಕ್ಷ ದೇಣಿಗೆಯನ್ನು ಜಯದೇವ ಆಸ್ಪತ್ರೆ ನಿರ್ದೇಶಕ ರವೀಂದ್ರನಾಥ್ ಅವರಿಗೆ ಬಿಬಿಎಂಪಿ ಮಾಜಿ ಸದಸ್ಯೆ ನಾಗರತ್ನ ರಾಮಮೂರ್ತಿ ನೀಡಿದರು.

ಶಾಸಕ ಉದಯ್ ಗರುಡಾಚಾರ್, ನಟರಾದ ಪ್ರಥಮ್, ವಸಿಷ್ಠ ಸಿಂಹ ಭಾಗವಹಿಸಿದ್ದರು.

ಕಿವುಡ, ಮೂಕ ಮಕ್ಕಳ ವಸತಿ ಶಾಲೆಗೆ ಪ್ರವೇಶ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಇಂದಿರಾ ನಗರದಲ್ಲಿರುವ ಕಿವುಡು ಮತ್ತು ಮೂಕ ಮಕ್ಕಳ ಸರ್ಕಾರಿ ವಸತಿ ಶಾಲೆಗೆ 2025–26ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. 1 ರಿಂದ 10ನೇ ತರಗತಿಗಳಿಗೆ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ವಸತಿ ಶಾಲೆ, ನಂ.32, ಹಳೆಬಿನ್ನಮಂಗಲ, ಒಂದನೇ ಹಂತ, ಇಂದಿರಾನಗರ, ಬೆಂಗಳೂರು–560 038. ಮಾಹಿತಿಗೆ: 94839 86023, 90197 28336ಗೆ ಸಂಪರ್ಕಿಸಿ.

ಸತ್ಯಾಗ್ರಹ ಮುಂದೂಡಿಕೆ

ಬೆಂಗಳೂರು: ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವ ಆಟೊ ಚಾಲಕರು, ಸಹಾಯಕರು, ಲೋಡರ್‌ಗಳು ಜೂನ್ 24ರಂದು ನಡೆಸಲು ಉದ್ದೇಶಿಸಿದ್ದ ಉಪವಾಸ ಸತ್ಯಾಗ್ರಹವನ್ನು ಮುಂದೂಡಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೇಡಿಕೆ ಈಡೇರಿಸುವ ಬಗ್ಗೆ ಮುಂದಿನ 15 ದಿನಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಆದ್ದರಿಂದ, ಹೋರಾಟ ಮುಂದೂಡಿದ್ದೇವೆ’ ಎಂದು ಕಾರ್ಮಿಕ ಸಂರಕ್ಷಣಾ ಟ್ರೇಡ್ ಯೂನಿಯನ್ ಅಧ್ಯಕ್ಷ ತ್ಯಾಗರಾಜ್ ತಿಳಿಸಿದರು.

ಗ್ರೀನ್ ಪೀಸ್ ವಿರುದ್ಧದ ಇ.ಡಿ ದೂರು ವಜಾ

ಬೆಂಗಳೂರು: ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ-2000 (ಫೆಮಾ) ನಿಬಂಧನೆಗಳನ್ನು ಉಲ್ಲಂಘಿಸಿದ ಆರೋಪದಡಿ ‘ಗ್ರೀನ್ ಪೀಸ್ ಎನ್ವಿರಾನ್ಮೆಂಟ್ ಟ್ರಸ್ಟ್’ ಮತ್ತು ಸಂಬಂಧಿತ ಸಂಸ್ಥೆಯಾದ ‘ಗ್ರೀನ್ ಪೀಸ್ ಇಂಡಿಯಾ ಸೊಸೈಟಿ’ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿದ್ದ ದೂರನ್ನು ಹೈಕೋರ್ಟ್ ವಜಾಗೊಳಿಸಿದೆ.

ದೂರು ರದ್ದುಪಡಿಸುವಂತೆ ಕೋರಿ ‘ಗ್ರೀನ್ ಪೀಸ್ ಎನ್ವಿರಾನ್ಮೆಂಟ್ ಟ್ರಸ್ಟ್’ ಮತ್ತು ‘ಗ್ರೀನ್ ಪೀಸ್ ಇಂಡಿಯಾ ಸೊಸೈಟಿ’ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಜಾರಿ ಮಾಡಿದ್ದ ಷೋಕಾಸ್ ನೋಟಿಸ್ ಅನ್ನು ನ್ಯಾಯಪೀಠ ವಜಾಗೊಳಿಸಿದೆ.

ಪ್ರಕರಣವೇನು?: ‘ಗ್ರೀನ್ ಪೀಸ್ ಸಂಸ್ಥೆಯು ದೇಶದ ಅಭಿವೃದ್ಧಿ ವಿರೋಧಿ ಚಟುವಟಿಕೆಯಲ್ಲಿ ತೊಡಗಿದೆ’ ಎಂದು ಕೇಂದ್ರ ಗೃಹ ಇಲಾಖೆ ಆರೋಪಿಸಿತ್ತು. ಇದರ ಆಧಾರದಲ್ಲಿ ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆ-2010 (ಎಫ್‌ಸಿಆರ್‌ಎ) ಪರವಾನಗಿ ರದ್ದುಪಡಿಸಲಾಗಿತ್ತು.

ಬಾಲ ಪುರಸ್ಕಾರ ಅರ್ಜಿ ಆಹ್ವಾನ

ಬೆಂಗಳೂರು: ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ 2025ನೇ ಸಾಲಿನ ರಾಷ್ಟ್ರೀಯ ಪ್ರಧಾನ ಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

2025ರ ಜುಲೈ 31ಕ್ಕೆ ಐದು ವರ್ಷ ಮೇಲ್ಪಟ್ಟ ಹಾಗೂ 18 ವರ್ಷದೊಳಗಿನ ಆಸಕ್ತ ಮಕ್ಕಳು ಜುಲೈ 30ರೊಳಗೆ ಅರ್ಜಿ ಸಲ್ಲಿಸಬಹುದು. ಧೈರ್ಯ, ಸಾಹಸದಿಂದ ಇತರರನ್ನು ರಕ್ಷಿಸಿದ ಕ್ರೀಡೆ, ಸಮಾಜ ಸೇವೆ, ತಂತ್ರಜ್ಞಾನ, ಪರಿಸರ ಸಂರಕ್ಷಣೆ, ಕಲೆ, ಸಂಸ್ಕೃತಿ ಮತ್ತು ನೂತನ ಆವಿಷ್ಕಾರಗಳನ್ನು ಮಾಡಿದ ಉತ್ತಮ ಸಾಧನೆ ಮಾಡಿದ ಬೆಂಗಳೂರು ನಗರ ಜಿಲ್ಲೆಯ ಮಕ್ಕಳು https://awards.gov.in ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ನಗರ ಕೇಂದ್ರ, ಮಕ್ಕಳ ಪಾಲನಾ ಸಂಸ್ಥೆಗಳ ಸಂಕೀರ್ಣ, ಡಾ.ಎಂ.ಹೆಚ್.ಮರೀಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಹಿಂಭಾಗ, ಬೆಂಗಳೂರು-560 029- 080-29919017.

ಕರ್ನಾಟಕ ಸರ್ಕಾರ

ಅತ್ತಿಬೆಲೆ ಪುರಸಭೆ ಕಾರ್ಯಾಲಯ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆ–562 107 Ph: 080–27821501
ಇ–ಮೇಲ್: itstaff_ulb_attibele@yahoo.com ವೆಬ್ ಸೈಟ್: www.attibeletown.mrc.gov.in

ಸಂಖ್ಯೆ: ಅಪುಕಾ/ಕಂ.ಶಾ/ಸಿಆರ್/22/2025–26 ದಿನಾಂಕ: 20–06–2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಪುರಸಭೆ ಅತ್ತಿಬೆಲೆ ಆಸ್ತಿ ಮಾಲೀಕರಿಗೆ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪುರಸಭೆ ಅಧಿನಿಯಮ 1964 ರ ನಿಯಮಾವಳಿಗಳನ್ವಯ ಪುರಸಭೆ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡುವಲ್ಲಿ ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ ಬೆಂಗಳೂರು ರವರ ನಕ್ಷೆ ಅನುಮೋದನೆಯೊಂದಿಗೆ ಪುರಸಭೆಯಲ್ಲಿ ಕಟ್ಟಡ ಪರವಾನಿಗೆ ಪಡೆದ ನಂತರ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಆದರೆ ಈ ನಿಯಮಾವಳಿಗಳನ್ನು ಅನುಸರಿಸದೆ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದು, ಈ ಬಗ್ಗೆ ಈ ಕಛೇರಿಯಿಂದ ಕರ್ನಾಟಕ ಪುರಸಭೆ ಕಾಯ್ದೆ 1964 ರ ಅಧಿನಿಯಮ 187 ರ ರೀತ್ಯಾ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಲು ನೋಟೀಸ್ ಜಾರಿ ಮಾಡಿ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಕಾಮಗಾರಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಸಂಖ್ಯೆ 14604/2024 SLP(C) ಸಂಖ್ಯೆ 36440/2024 ರಲ್ಲಿ ನೀಡಿರುವ ಆದೇಶ ದಿನಾಂಕ: 17–12–2024 ರಂತೆ ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಈ ಕಛೇರಿಯಿಂದ ನೀರಿನ ಸಂಪರ್ಕ, ಒಳಚರಂಡಿ ಸಂಪರ್ಕ ಮತ್ತು ವಿದ್ಯುತ್ ನಿರಾಕ್ಷೇಪಣ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ. ಅಲ್ಲದೆ ಅಂತಹ ಅನಧಿಕೃತ ಕಟ್ಟಡಗಳ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕಾನೂನು ಕ್ರಮ ಜರುಗಿಸಲಾಗುವುದು. ಆದ್ದರಿಂದ ಅನಧಿಕೃತ ಕಟ್ಟಡಗಳ ಕಾಮಗಾರಿಯನ್ನು ಪ್ರಾರಂಭಿಸದೆ ಸ್ಥಗಿತಗೊಳಿಸಲು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಮುಖ್ಯಾಧಿಕಾರಿ,
ಪುರಸಭೆ, ಅತ್ತಿಬೆಲೆ

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/20/2025–26 ದಿನಾಂಕ: 20–06–2025

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ನಗರಸಭೆ ನಿಧಿ ಅನುದಾನದಲ್ಲಿ ನೊಂದಾಯತ ಅರ್ಹ ದರ್ಜೆ ಏಜೆನ್ಸಿದಾರರಿಂದ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಮೊಹರಾದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ: DMA/2025-26/IND4976.

1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 05–07–2025 ಸಂಜೆ 4:30 ಗಂಟೆಯವರೆಗೆ 2) ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 07–07–2025 ಸಂಜೆ 5:00 ವರೆಗೆ. 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08–07–2025 ಸಂಜೆ 5:15 ಗಂಟೆಗೆ. 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 10–07–2025 ಬೆಳಿಗ್ಗೆ 11:00 ಗಂಟೆಗೆ 4) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/1389/ಸ್ಕ್ಯಾನ್/2025–26

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110

ಸಂಖ್ಯೆ: ಬಿಐಎಪಿಎ/ಟಿಪಿ/ಭೂಪ/147 ರಿಂದ 149/2025–26/821
ದಿನಾಂಕ : 21.06.2025

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ಪಿ. ಮಂಜುಣ್ಣ ಬಿನ್ ಪಿಳ್ಳಣ್ಣ, ರವರು ದೇವನಹಳ್ಳಿ ತಾಲ್ಲೂಕು, ವಿಜಯಪುರ ಹೋಬಳಿ, ಗೊಡ್ಲುಮುದ್ದೇನಹಳ್ಳಿ ಗ್ರಾಮದ ಸರ್ವೆ ನಂ.44/7, 44/10, 44/1 ರಲ್ಲಿ ಒಟ್ಟು 1ಎ–37.08ಗು ವಿಸ್ತೀರ್ಣದ ಜಮೀನನ್ನು "ಶೈಕ್ಷಣಿಕ (Educational Institutions (School/ College) (ಗರಿಷ್ಠ ಶೇ 15 ರಷ್ಟು ಕ್ಷೇತ್ರಾವರಿಸುವಿಕೆ (Coverage) ಹಾಗೂ ನೆಲ+ಮೊದಲ ಅಂತಸ್ತು ಮಿತಿಗೆ ಒಳಪಡಿಸಿ)" ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ. ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110 ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಸಂಇ/ಸಿಪಿ/ಎಎಎ/1406/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ಕಾಪಾಅ/ಉತ್ತರ/ಟೆಂಡರ್/ಟಿ–12/2025–26 ದಿನಾಂಕ: 21–06–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಓಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೆಂಗಳೂರು ಇವರು ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪರವಾಗಿ, ಈ ಕೆಳಗೆ ವಿವರಿಸಿದ ನಿರ್ಮಾಣ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿ ಹೆಸರು: **ಬೆಂಗಳೂರಿನ ಅರ್ಕಾವತಿ ಬಡಾವಣೆಯ 7ನೇ ಬ್ಲಾಕ್‌ನ ಜಕ್ಕೂರು ಗ್ರಾಮದ ಸರ್ವೆ ನಂ. 76/2, 76/6, 76/7ಎ ಮತ್ತು 76/7ಎ1 ರಲ್ಲಿ ವಿನ್ಯಾಸ ರಚನೆ ಕಾಮಗಾರಿ.** ಟೆಂಡರಿಗಿಟ್ಟ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ): **57.26**, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): **86,000/–**, ಟೆಂಡರ್ ಪ್ರೊಸೆಸ್ಸಿಂಗ್ ಫೀ: **ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನೋಡುವುದು,** ಪೂರ್ಣಗೊಳಿಸುವ ಅವಧಿ: **6 ತಿಂಗಳು.**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **23–06–2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **25–06–2025 ರಂದು 16.00 ಗಂಟೆವರೆಗೆ.** 3) ಪ್ರಸ್ತಾವನೆಯನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **03–07–2025 ರಂದು 16.00 ಗಂಟೆವರೆಗೆ.** 4) 1ನೇ ಎಲೆಕ್ಟ್ರಾನಿಕ್ ಡಾಕ್ಯೂಮೆಂಟ್ (ತಾಂತ್ರಿಕ ಪ್ರಸ್ತಾವನೆ) ತೆರೆಯುವ ದಿನಾಂಕ ಮತ್ತು ಸಮಯ: **04–07–2025 ರಂದು 16.30 ಗಂಟೆಗೆ.** 5) 1ನೇ ಎಲೆಕ್ಟ್ರಾನಿಕ್ ಡಾಕ್ಯೂಮೆಂಟ್ (ತಾಂತ್ರಿಕ ಪ್ರಸ್ತಾವನೆ) ತೆರೆಯುವ ಸ್ಥಳ: **ಕಾರ್ಯಪಾಲಕ ಅಭಿಯಂತರರ ಕಛೇರಿ, ಉತ್ತರ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿಡಿಎ ಶಾಪಿಂಗ್ ಕಾಂಪ್ಲೆಕ್ಸ್, ಆರ್.ಟಿ. ನಗರ, ಬೆಂಗಳೂರು – 560020.** 6) 2ನೇ ಎಲೆಕ್ಟ್ರಾನಿಕ್ ಡಾಕ್ಯೂಮೆಂಟ್ (ಆರ್ಥಿಕ ಪ್ರಸ್ತಾವನೆ) ತೆರೆಯುವ ದಿನಾಂಕ ಮತ್ತು ಸಮಯ: **ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು.** 7) 2ನೇ ಎಲೆಕ್ಟ್ರಾನಿಕ್ ಡಾಕ್ಯೂಮೆಂಟ್ (ಆರ್ಥಿಕ ಪ್ರಸ್ತಾವನೆ) ತೆರೆಯುವ ಸ್ಥಳ: **ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್: **https://kppp.karnataka.gov.in** ಅನ್ನು ಸಂಪರ್ಕಿಸಬಹುದು.

ಸೂಚನೆ: ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ವಿಳಂಬವಾದಲ್ಲಿ ಟೆಂಡರ್‌ನ ಪರಿಷ್ಕೃತ/ಮರು–ನಿಗದಿತ ವೇಳಾಪಟ್ಟಿಯನ್ನು ಕೆಪಿಪಿ ಪೋರ್ಟಲ್ ಮೂಲಕ ನೀಡಲಾಗುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಉತ್ತರ ವಿಭಾಗ, ಬಿಡಿಎ, ಬೆಂಗಳೂರು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂಖ್ಯೆ: ಬಿಐಎಪಿಎ/ಟಿಪಿ/ಭೂಉಬ/36/2025–26/817 ದಿನಾಂಕ: 21.06.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ವೈಶಾಲಿ ಅಶೋಕ್ ಸುವರ್ಣ ಕೋಂ ಅಶೋಕ್ ಸುವರ್ಣ & ಶ್ರೀ ಅಶೋಕ್ ಸುವರ್ಣ ಬಿನ್ ಸೋಮಪ್ಪ ಸುವರ್ಣ	ದೇವನಹಳ್ಳಿ	ಕುಂದಾಣ	ಮೂಡಿ –ಗಾನಹಳ್ಳಿ	3/3	0–19	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ–ವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ಡಿಐಪಿಆರ್/ಸಿಪಿ/1378/ಸಿಸಿಎಲ್/2025–26

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಪಿಎ/ಟಿಪಿ/ಭೂಉಬ/09/2025–26/848 ದಿನಾಂಕ: 21–06–2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **‘ವ್ಯವಸಾಯ’** ಭೂಉಪಯೋಗ ವಲಯದಿಂದ **‘ವಸತಿ’** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಜಾಸ್ತೀ ಲಕ್ಷೀ ಕೋಂ ಜೆ. ವಿ.ಆರ್. ಜೀತೇಂದ್ರ	ದೇವನಹಳ್ಳಿ	ಕುಂದಾಣ	ಜುಟ್ಟನಹಳ್ಳಿ	90/11	0–14.12	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ವ್ಯವಸಾಯ ಭೂಉಪಯೋಗ ವಲಯ’** ದಿಂದ **‘ವಸತಿ ವಲಯ’** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/1407/ಅಡ್ವರ್ಟೋ/2025–26

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ.333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110.

ಸಂ: ಬಿಐಎಪಿಎ/ಟಿಪಿ/ಭೂಉನಿ/05/2025–26/846 ದಿನಾಂಕ : 20.06.2025

ಪ್ರಕಟಣೆ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 **ದಿನಾಂಕ : 27.01.2009** ಮತ್ತು ತಿದ್ದುಪಡಿ ಆದೇಶ **ದಿನಾಂಕ : 29.01.2009** ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1.	ಶ್ರೀ ಬೈರೇಗೌಡ ಆರ್ ಬಿನ್ ರಾಜಣ್ಣ ಕೆ.	ಯಲಹಂಕ	ಜಾಲ	ದೊಡ್ಡಜಾಲ	52/10	0–08	ಸಾರ್ವಜನಿಕ/ಅರೆಸಾರ್ವಜನಿಕ	ವಸತಿ

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾಪ್ರ/1383/2025–26

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಪಿಎ/ಟಿಪಿ/ಭೂಉಬ/35/2025–26/820 ದಿನಾಂಕ: 21.06.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ರವಿಕುಮಾರ್ ಪಿ ಬಿನ್ ಪಟ್ಟಾಬಿ	ದೇವನಹಳ್ಳಿ	ಕುಂದಾಣ	ಪಂಡಿತಪುರ	12/3	1–23	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ಭೂಉಪಯೋಗ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾಪ್ರ/ಜಿಎ/1382/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳು–2, ನಂ.14/3, 1ನೇ ಮಹಡಿ,
ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಕೆಐಎಡಿಬಿ/ಕೆಆರ್‌ಐಡಿಇ/ಭೂಸ್ವಾ/197/2025–26 ದಿನಾಂಕ: 12.06.2025

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ /ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು **"ಬೆಂಗಳೂರು ಉಪ–ನಗರ ರೈಲ್ವೆ ಯೋಜನೆಗಾಗಿ"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: **ಸಿಐ 81ಎಸ್‌ಪಿಕ್ಯೂ 2025 ದಿನಾಂಕ: 06.06.2025** ನ್ನು ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ **ದಿನಾಂಕ: 11.06.2025** ರಂದು ಪ್ರಕಟಣೆ ಹೊರಡಿಸಿದೆ. ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರು/ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ **(ಕೆ.ಆರ್.ಐ.ಡಿ.ಇ.,) ನಂ.14/3,** 1ನೇ ಮಹಡಿ, ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–1 ರವರ ಕಛೇರಿಯಲ್ಲಿ **ದಿನಾಂಕ: 14.07.2025 ರಂದು ಬೆಳಿಗ್ಗೆ 11.00 ಗಂಟೆಗೆ** ವಿಚಾರಣೆ ನಿಗದಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ, ಹಕ್ಕುಬಿಡುಗಡೆ ವಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರ ಧನ ನಿಗದಿಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ವಿಚಾರಣೆ ದಿನಾಂಕ: 14.07.2025 — **ವಿಚಾರಣೆ ಸಮಯ : ಬೆಳಿಗ್ಗೆ 11.00 ರಿಂದ**

ಕ್ರ. ಸಂ.	ಗುರುತಿನ ಸಂಖ್ಯೆ	ಖಾತಾದಾರರ ಹೆಸರು	ಎಲ್‌ಎ/ ಸಿಟಿಎಸ್ ಸರ್ವೆ ನಂಬರ್	ಸ್ವತ್ತಿನ ಒಟ್ಟು ವಿಸ್ತೀರ್ಣ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ–ಚ.ಮೀ.
	ಗ್ರಾಮ: ಕಾಡುಗೊಂಡನಹಳ್ಳಿ ಹೋಬಳಿ: ಕಸಬಾ ತಾಲ್ಲೂಕು: ಬೆಂಗಳೂರು ಉತ್ತರ ಜಿಲ್ಲೆ : ಬೆಂಗಳೂರು ನಗರ				
1	C2/R/6/8/Kadugondanahalli/01	ರಸ್ತೆ	73		35.23
2	C2/R/6/8/Kadugondanahalli/02	ಮೀನಾ ಕೋಂ ಮುರುಗನ್	73	21953.89	0.37
3	C2/R/6/8/Kadugondanahalli/03	ಕಾವೇರಿ ಕೋಂ ದೇವರಾಜ್	73		2.15
4	C2/R/6/8/Kadugondanahalli/04	ಪೂಮಣಿ ಕೋಂ ಗೋವಿಂದರಾಜು	73		0.95
5	C2/R/6/9-0/kadugondanahalli/01	ರಸ್ತೆ	70		12.00
6	C2/R/6/9-0/kadugondanahalli/02	1. ಜೆ. ಸುಲೋಚನ 2. ಕಾರ್ತಿಕೇಯನ್ ಜಯಪಾಲ್, 3. ಜೈಸುದನ್ ಜೈಪಾಲ್	70		33.26
7	C2/R/6/9-0/kadugondanahalli/03	ರಸ್ತೆ	70	5058.5	20.91
8	C2/R/6/9-0/kadugondanahalli/04	1. ಟಿ. ಮುರುಗನ್ 2. ಆನಂದ್ .ಟಿ 3. ಸಂಪಾ	70		47.31
9	C2/R/6/9-0/kadugondanahalli/05	ಮಲರ್	70		5.52
	ಗ್ರಾಮ: ಮತ್ತಿಕೆರೆ ಹೋಬಳಿ: ಕಸಬಾ ತಾಲ್ಲೂಕು: ಬೆಂಗಳೂರು ಉತ್ತರ ಜಿಲ್ಲೆ: ಬೆಂಗಳೂರು ನಗರ				
10	C2/R/15/6/Mathikere/01	1. ಶ್ಯಾಮ್ ಬಿಆರ್, 2. ಚೇತನ್ 3. ಪವನ್ ಟಿ ಮುನಿರಾಜು	CTS1229	-	31.50
11	C2/R/15/6/Mathikere/01	ಎ ಜಗದೀಶನ್ ಬಿನ್ ಲೇ ಈಶ್ವರಪ್ಪ	CTS1188	-	31.50
12	C2/R/15/3-4/Mathikere/01	ಈಶ್ವರ್ ರಾವ್ ಮೊರೆ ಬಿನ್ ಅಂಪಾಜಿರಾವ್	CTS 2061/1	-	44.00
13	C2/R/15/1/Mathikere/01	ಅಶ್ವಥ್ ಎಂಜೆಬಿನ್ ಗೋವಿಂದರಾಜು	135/1	2023.4	26.00
	ಗ್ರಾಮ: ತಣ್ಣೀರನಹಳ್ಳಿ ಹೋಬಳಿ: ಯಶವಂತಪುರ ತಾಲ್ಲೂಕು: ಬೆಂಗಳೂರು ಉತ್ತರ ಜಿಲ್ಲೆ: ಬೆಂಗಳೂರು ನಗರ				
14	C2/R/17/800-900/ Thaniranahalli/01	ಕೇಂದ್ರೀಯ ಉತ್ಪಾದನಾ ತಂತ್ರಜ್ಞಾನ ಸಂಸ್ಥೆ	CTS1424	-	100.00
15	C2/R/17/800-900/ Thaniranahalli/01	M/s BNA DIGITAL ENTERTAINMENT SYSTEMS PRIVATE LTD.	CTS1426	-	100.00
16	C2/R/17/800-900/Thaniranahalli/01	TATA FINLY LIMITED	CTS1425	-	100.00
	ಗ್ರಾಮ: ಯಶವಂತಪುರ ಹೋಬಳಿ: ಯಶವಂತಪುರ ತಾಲ್ಲೂಕು: ಬೆಂಗಳೂರು ಉತ್ತರ ಜಿಲ್ಲೆ: ಬೆಂಗಳೂರು ನಗರ				
17	C2/R/16/5-6/YPR/01	ಸಂಪಂಗಿರಾಮಕ್ಕ ಮತ್ತು ಎಸ್ ರಾಮಮೂರ್ತಿ	CTS No.119/3	-	12.00

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2, ಕೆ.ಐ.ಎ.ಡಿ.ಬಿ (ಕೆ.ಆರ್.ಐ.ಡಿ.ಇ.,) ನೃಪತುಂಗ ರಸ್ತೆ, ‘ಬೆಂಗಳೂರು.

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ.: BE-29-2025-26-OT-04
(ಇ–ಟೆಂಡರಿಂಗ್ ಮೂಲಕ)

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕೆಡಿಎಜಿ ಗುಡ್ಸ್ ಶೆಡ್ (ಕ್ಯಾತ್ಸಂದ್ರ) ದಲ್ಲಿ ಮೂಲಭೂತ ಸೌಕರ್ಯಗಳ ಮೇಲೆ ಪ್ರಮುಖ ಉನ್ನತೀಕರಣ/ ನವೀನೀಕರಣ – ವಿದ್ಯುತ್ ವ್ಯವಸ್ಥೆಗಳು.	ರೂ. 1,09,84,232/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.07.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ
PUB/210/AAF/PRB/SWR/2025-26 ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. 04-XEN-WS-UBLS-ZONAL/25-26 ದಿನಾಂಕ: 17.06.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕ್ಯಾರಿಯೇಜ್ ರಿಪೇರಿ ಕಾರ್ಯಾಗಾರ, ಹುಬ್ಬಳ್ಳಿ – 580 020 ರಲ್ಲಿ 12 ತಿಂಗಳುಗಳ ಅವಧಿಗೆ ಅಂದರೆ 01.07.2025 ರಿಂದ 30.06.2026 ರ ವರೆಗೆ ಕಾಮಗಾರಿಗಳ ಚಾಲನೆ ಮತ್ತು ಸಾಮಗ್ರಿಗಳ ಪೂರೈಕೆಗಾಗಿ ವಲಯವಾರು ಟೆಂಡರು.	ರೂ. 2,00,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.07.2025, 11:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ಸಹಾಯಕ ವಿಭಾಗೀಯ ಇಂಜಿನಿಯರ್
ಕ್ಯಾರಿಯೇಜ್ ರಿಪೇರಿ ಕಾರ್ಯಾಗಾರಿ/ಹುಬ್ಬಳ್ಳಿ
PUB/212/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRRLY

ಅಂತರರಾಷ್ಟ್ರೀಯ ಯೋಗ ದಿನ ಆಚರಣೆ

ದೇಶದ ಎಲ್ಲೆಡೆ ಯೋಗವೇ ಯೋಗ



ವಿಧಾನಸೌಧದ ಮುಂಭಾಗದಲ್ಲಿ ಪ್ರಾಣಾಯಾಮ ನಿರತ ಯೋಗಾಸಕ್ತರು –ಪ್ರಜಾವಾಣಿ ಚಿತ್ರ

ನವದೆಹಲಿ (ಪಿಟಿಐ): ಜಗತ್ತಿಗೇ ಯೋಗದ ಅನುಭೋಗ, ಮಹತ್ವದ ಅರಿವು ಹಂಚಿದ ಭಾರತದ ವಿವಿಧೆಡೆ ಶನಿವಾರ ಅಂತರರಾಷ್ಟ್ರೀಯ ಯೋಗದಿನವನ್ನು ಸಾಮೂಹಿಕವಾಗಿ, ಸಂಭ್ರಮದಿಂದ ಆಚರಿಸಲಾಯಿತು.

ಜನಪ್ರತಿನಿಧಿಗಳು, ಅಧಿಕಾರಿಗಳು, ನೌಕರರು, ವಿದ್ಯಾರ್ಥಿಗಳು, ಸಾರ್ವಜನಿಕರು, ಶ್ರಮಿಕರು, ವೈದ್ಯರು ಹೀಗೆ ವಿವಿಧ ವರ್ಗಗಳ ಜನಗಣ ದೇಶದ ಉದ್ದಗಲಕ್ಕೂ ಬೆಳಿಗ್ಗೆಯೇ ಸಾಮೂಹಿಕವಾಗಿ ಯೋಗಾಸಕ್ತರಾದರು.

'ಒಂದು ಭೂಮಿ ಮತ್ತು ಒಂದು ಆರೋಗ್ಯಕ್ಕಾಗಿ ಯೋಗ' ಎಂಬುದು ಈ ವರ್ಷದ ಧ್ಯೇಯವಾಕ್ಯವಾಗಿತ್ತು.

ಆಂಧ್ರಪ್ರದೇಶದ ವಿಶಾಖಪಟ್ಟಣದ ಆರ್.ಕೆ.ಬೀಚ್‌ನಲ್ಲಿ ನಡೆದ ಸಾಮೂಹಿಕ ಯೋಗ ದಿನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಶ್ವೇತವಸ್ತ್ರ ಧರಿಸಿ ಪಾಲ್ಗೊಂಡರು.

'ಉಸಿರಾಟ, ಸಮತೋಲನ, ಎಲ್ಲರೂ ಒಗ್ಗೂಡಲು ಯೋಗ ಎಂಬುದು ಪ್ರಸಕ್ತ ಕಾಲದ ಒತ್ತುಗುಂಡಿಯಾಗಿದೆ. ಶಾಂತಿ ಜಾಗತಿಕ ನೀತಿಯಾಗಲಿ, ಯೋಗ ಇದಕ್ಕೆ ನಾಂದಿಯಾಗಲಿ' ಎಂದು ಪ್ರಾರ್ಥಿಸುತ್ತೇನೆ' ಎಂದರು.

ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಸೇರಿ ರಾಜ್ಯದ ಹಲವು ಪ್ರಮುಖರು ಈ ಸಂದರ್ಭದಲ್ಲಿ ಭಾಗಿಯಾದರು.

ಡೆಹ್ರಾಡೂನ್‌ನಲ್ಲಿ ರಾಷ್ಟ್ರಪತಿ ಯೋಗ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆದ ಯೋಗ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ಯೋಗವನ್ನು ನಿತ್ಯದ ಆಚರಣೆಯಾಗಿಸಿಕೊಳ್ಳಬೇಕು' ಎಂದು ಮುರ್ಮು ಈ ಸಂದರ್ಭದಲ್ಲಿ ಸಲಹೆ ಮಾಡಿದರು.

ಯೋಧರಿಂದ ಯೋಗ, ಸಚಿವರ ಸಾಥ್: ಸಿಯಾಚಿನ್‌ನಲ್ಲಿ ಎತ್ತರದಲ್ಲಿರುವ ಹಿಮ ನದಿಯ ಪ್ರದೇಶದಿಂದ ವಿಶಾಖಪಟ್ಟಣದ ನೌಕಾ ನೆಲೆಯವರೆಗೂ ವಿವಿಧೆಡೆ ಯೋಧರು ಯೋಗ ದಿನ ಆಚರಿಸಿದರು. ಜಮ್ಮು ಕಾಶ್ಮೀರದಲ್ಲಿ ಯೋಧರ ಜೊತೆಗೂಡಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಯೋಗಾಭ್ಯಾಸ ಮಾಡಿದರು. ಸೇನಾಪಡೆಗಳ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಅವರೂ ಸಾಥ್ ನೀಡಿದರು.


ದೇಶದ ವಿವಿಧ ರಾಜ್ಯಗಳ ರಾಜಧಾನಿ ಮತ್ತು ಪ್ರಮುಖ ನಗರಗಳಲ್ಲಿ ನಡೆದ ಯೋಗ ದಿನ ಆಚರಣೆಯಲ್ಲಿ ಕೇಂದ್ರ ಸಚಿವರು, ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಚಿವರು, ನ್ಯಾಯಮೂರ್ತಿಗಳು ಪಾಲ್ಗೊಂಡರು.

ಕರ್ತವ್ಯಪಥದಲ್ಲಿ ಸಚಿವರ ಸಾರಥ್ಯ: ರಾಜಧಾನಿಯ ಕರ್ತವ್ಯಪಥದಲ್ಲಿ ನಡೆದ ಯೋಗ ದಿನ ಕಾರ್ಯಕ್ರಮದ ಸಾರಥ್ಯವನ್ನು ಆರೋಗ್ಯ ಸಚಿವ ಜೆ.ಪಿ.ನಡ್ಡಾ ವಹಿಸಿದ್ದರು. ವಿದೇಶಾಂಗ ಸಚಿವ ಎಸ್.ಜೈಶಂಕರ್ ವಿವಿಧ ದೇಶಗಳ ರಾಯಭಾರಿಗಳು, ರಾಜತಾಂತ್ರಿಕ ಬಣದ ಸದಸ್ಯರ ಜೊತೆಗೂಡಿ ನೆಹರೂ ಪಾರ್ಕ್‌ನಲ್ಲಿ ಯೋಗ ಮಾಡಿದರು.

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಹರಿಯಾಣದ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಬಿಹಾರದ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಹೀಗೆ ವಿವಿಧ ಗಣ್ಯರು ಆಯಾ ರಾಜ್ಯಗಳಲ್ಲಿ ನಡೆದ ಪ್ರಮುಖ ಕಾರ್ಯಕ್ರಮದಲ್ಲಿ ಭಾಗಿಯಾದರು. ಹರಿಯಾಣದಲ್ಲಿ ಯೋಗಗುರು ರಾಮದೇವ್ ಜೊತೆಯಾದರು.


ಜೂನ್ 21 ಅನ್ನು ಅಂತರರಾಷ್ಟ್ರೀಯ ಯೋಗ ದಿನವಾಗಿ ಆಚರಿಸುವ ನಿರ್ಣಯವನ್ನು 2014ರ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆ ಕೈಗೊಂಡಿತು. ಈ ಕುರಿತು ಭಾರತದ ಪ್ರಸ್ತಾವವನ್ನು 175 ರಾಷ್ಟ್ರಗಳ ಪ್ರತಿನಿಧಿಗಳು ಅಂದಿನ ಸಭೆಯಲ್ಲಿ ಒಕ್ಕೊರಲಿನಿಂದ ಅನುಮೋದಿಸಿದ್ದರು.

'ಮಿಲೇನಿಯಲ್ಸ್'ಗಳ ಯೋಗ ಪ್ರೀತಿ



ನವದೆಹಲಿ (ಪಿಟಿಐ): ದೇಶದಲ್ಲಿ ಯುವಜನರಲ್ಲಿ ಶೇ 74ರಷ್ಟು ಜನರು ಯೋಗವನ್ನು ನಿತ್ಯದ ಬದುಕಿನ ಭಾಗವಾಗಿ ಅಳವಡಿಸಿಕೊಂಡಿದ್ದಾರೆ.

ಐಸಿಐಸಿಐ ಲೊಂಬಾರ್ಡ್ ವಿಮಾ ಸಂಸ್ಥೆಯು ಮಹಾ ನಗರ, ನಗರಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದೆ. 1000 ಮಂದಿ ಈ ಸಮೀಕ್ಷೆಗೆ ಸ್ಪಂದಿಸಿದ್ದರು ಎಂದು ಸಂಸ್ಥೆಯು 'ಎಕ್ಸ್' ನಲ್ಲಿ ಪ್ರಕಟಿಸಿದೆ. ಯೋಗ ಒತ್ತಡವನ್ನು ನಿವಾರಿಸುತ್ತದೆ. ಇದು, ನಿತ್ಯ ಜೀವನದ ಅಗತ್ಯ ಎಂಬ ಅಭಿಪ್ರಾಯ ವ್ಯಕ್ತವಾಗಿದೆ ಎಂದು ಸಂಸ್ಥೆಯ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥೆ ಶೀನಾ ಕಪೂರ್ ಅವರು ತಿಳಿಸಿದ್ದಾರೆ.



ವಿಶಾಖಪಟ್ಟಣದಲ್ಲಿ ಯೋಗ ನಿರತ ಪ್ರಧಾನಿ ನರೇಂದ್ರ ಮೋದಿ



ಡೆಹ್ರಾಡೂನ್‌ನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಯೋಗ



ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರಿಂದ ಯೋಗ

'ಇಡೀ ಜಗತ್ತು ಈಗ ಒಂದು ರೀತಿ ಸಂಘರ್ಷದ ಕಾಲಘಟ್ಟದಲ್ಲಿದೆ. ಇಂತಹ ಹೊತ್ತಿನಲ್ಲಿ ಯೋಗವು ಶಾಂತಿ ಮತ್ತು ಒಗ್ಗಟ್ಟಿನ ಮಾರ್ಗವನ್ನು ತೋರಲಿ

ನರೇಂದ್ರ ಮೋದಿ, ಪ್ರಧಾನಿ

ಆಂಧ್ರಪ್ರದೇಶದಲ್ಲಿ ಶುಕ್ರವಾರ ಒಂದೇ ಸ್ಥಳದಲ್ಲಿ 3.03 ಲಕ್ಷ ಜನರಿಂದ ಯೋಗ ಮತ್ತು 22 ಸಾವಿರ ಬುಡಕಟ್ಟು ವಿದ್ಯಾರ್ಥಿಗಳು 108 ಸೂರ್ಯ ನಮಸ್ಕಾರ ಮಾಡಿದ್ದು, ಎರಡು ದಾಖಲೆ ಸೃಷ್ಟಿಯಾಗಿದೆ

ಚಂದ್ರಬಾಬು ನಾಯ್ಡು, ಮುಖ್ಯಮಂತ್ರಿ, ಆಂಧ್ರಪ್ರದೇಶ

ಪಾರಂಪರಿಕ ತಾಣಗಳಲ್ಲಿ ಯೋಗ ದಿನ

ನವದೆಹಲಿ (ಪಿಟಿಐ): ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು (ಎಎಸ್ಐ) ಶನಿವಾರ ದೇಶದ ವಿವಿಧ 81 ಪಾರಂಪರಿಕ ತಾಣಗಳಲ್ಲಿ ಯೋಗ ದಿನ ಆಯೋಜಿಸಿತ್ತು.

ಗುಜರಾತ್‌ನ ಆಡಾಲನ್ ಕೀ ವಾವ್, ಒಡಿಶಾದ ಕೊನಾರ್ಕ್ ಸೂರ್ಯ ದೇಗುಲ, ದೆಹಲಿ ಜಂತರ್ ಮಂತರ್, ರಾಜಸ್ಥಾನದ ಮೆಹರಾನ್‌ಗಢ ಇವುಗಳಲ್ಲಿ ಸೇರಿದ್ದವು.

ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಸೇರಿ ಹಲವು ಪ್ರಮುಖರು ಭಾಗವಹಿಸಿದ್ದರು. ಪಾರಂಪರಿಕ ತಾಣಗಳು ಎಂದು ಯುನೆಸ್ಕೊ ಪಟ್ಟಿ ಮಾಡಿರುವ ತಾಣಗಳಲ್ಲಿಯೂ ಕಾರ್ಯಕ್ರಮ ಸಂಘಟಿಸಲಾಗಿತ್ತು.

'ಯೋಗ ನೀತಿ' ಪ್ರಕಟಿಸಿದ ಉತ್ತರಾಖಂಡ

ಡೆಹ್ರಾಡೂನ್ (ಪಿಟಿಐ): ಅಂತರರಾಷ್ಟ್ರೀಯ ಯೋಗ ದಿನವಾದ ಶನಿವಾರ ಉತ್ತರಾಖಂಡ ಸರ್ಕಾರ ಯೋಗ ನೀತಿಯನ್ನು ಪ್ರಕಟಿಸಿತು. ಯೋಗ ನೀತಿ ರೂಪಿಸಿದ ಮೊದಲ ರಾಜ್ಯ ಎಂಬ ಹಿರಿಮೆಗೂ ಪಾತ್ರವಾಯಿತು.

'ರಾಜ್ಯವನ್ನು ಜಾಗತಿಕವಾಗಿ 'ದೇಹಾರೋಗ್ಯ ತಾಣ'ವಾಗಿ ರೂಪಿಸುವುದು ಈ ನೀತಿಯ ಉದ್ದೇಶ' ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದರು.

'ರಾಜ್ಯದಲ್ಲಿ ದೇಹಾರೋಗ್ಯ ರಕ್ಷಣೆ ಮತ್ತು ಯೋಗ ಕೇಂದ್ರ ಸ್ಥಾಪಿಸಲು ₹20 ಲಕ್ಷ, ಯೋಗ ಸಂಬಂಧಿತ ಕ್ಷೇತ್ರದಲ್ಲಿ ಸಂಶೋಧನೆಗೆ ₹10 ಲಕ್ಷ ಅನುದಾನ ನೀಡಲಾಗುವುದು ಎಂದರು.



ಮೈಸೂರಿನ ಅಂಬಾವಿಲಾಸ ಅರಮನೆ ಆವರಣದಲ್ಲಿ ಶನಿವಾರ 11ನೇ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಯೋಗಾಭ್ಯಾಸ ಮಾಡಿದರು –ಚಿತ್ರ: ಅನೂಪ್ ರಾಘ್ ಟಿ.

ಆಸ್ಪತ್ರೆಗಳಲ್ಲಿ 'ಯೋಗ ಮಂದಿರ' ಯೋಗ ಜಿಲ್ಲೆಯಾಗಿ ಮೈಸೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಹೆಚ್ಚಿನ ಜನರಿಗೆ ಯೋಗ ಪರಿಚಯಿಸುವ ಉದ್ದೇಶದಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ 'ಯೋಗ ಮಂದಿರ'ಗಳನ್ನು ಸ್ಥಾಪಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನಸೌಧದ ಆವರಣದಲ್ಲಿ ಆಯುಷ್ ಇಲಾಖೆಯಿಂದ ಶನಿವಾರ ನಡೆದ 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಚಾಲನೆ ನೀಡಿದರು. ದಿನೇಶ್ ಗುಂಡೂರಾವ್, ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ನಟರಾದ ಅನಿರುದ್ಧ, ಕಿಶನ್, ನಟಿ ಸಾನಿಯಾ ಅಯ್ಯರ್ ಯೋಗ ಅಭ್ಯಾಸ ಮಾಡಿದರು.

ದಿನೇಶ್ ಗುಂಡೂರಾವ್ ಮಾತನಾಡಿ, 'ವಿಶ್ವ ಮಟ್ಟದಲ್ಲಿ ಮನ್ನಣೆ ಪಡೆದಿರುವ ಯೋಗವನ್ನು ಹೆಚ್ಚಿನ ಜನರಿಗೆ ಪರಿಚಯಿಸಬೇಕಾಗಿದೆ. ಈ ಉದ್ದೇಶದಿಂದ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದು, ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಯೋಗ ಪರಿಚಯಿಸುವ ಕೇಂದ್ರಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ' ಎಂದರು.

'ಮೈಸೂರು ಜಿಲ್ಲೆಯನ್ನು ಯೋಗ ಜಿಲ್ಲೆಯಾಗಿ ಮಾಡಲು ಯೋಜನೆ ರೂಪಿಸಲಾಗಿದೆ. ದೇಶದಲ್ಲಿಯೇ ಪ್ರಥಮ ಬಾರಿಗೆ ರಾಜ್ಯದಲ್ಲಿ ಒಂದು ಜಿಲ್ಲೆಯನ್ನು ಸಂಪೂರ್ಣವಾಗಿ ಯೋಗ ಜಿಲ್ಲೆಯನ್ನಾಗಿ ರೂಪಿಸುವತ್ತ ಹೆಜ್ಜೆ ಇಟ್ಟಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಮೈಸೂರು ಜಿಲ್ಲೆಯ ಪ್ರತಿ ಮನೆಗಳಲ್ಲಿ ಒಬ್ಬರಾದರೂ ಯೋಗ ಅಭ್ಯಾಸ ನಡೆಸುವ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಲು ಗುರಿ ಹೊಂದಲಾಗಿದೆ. ರಾಜ್ಯದಲ್ಲಿ ಪರಂಪರಾಗತವಾಗಿ ಬಂದ ಅಷ್ಟಾಂಗ ಯೋಗಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು' ಎಂದೂ ಹೇಳಿದರು.

'ಆಯುಷ್ ಇಲಾಖೆಯಿಂದ ರಾಜ್ಯದ ವಿವಿಧೆಡೆ ಯೋಗ ಪಾರ್ಕ್, ಯೋಗ ಧನುಷ್, ಹಸಿರು ಯೋಗ, ಯೋಗ ಮಹಾಕುಂಭ, ಯೋಗ ಸಂಯೋಗ, ಯೋಗ ಅನ್ ಪ್ಲಗ್ಸ್‌ನಂಥ ಕಾರ್ಯಕ್ರಮ ನಡೆಯಿತು. ಹಸಿರು ಯೋಗ ಕಾರ್ಯಕ್ರಮದ ಅಡಿಯಲ್ಲಿ 1 ಲಕ್ಷ ಗಿಡಗಳನ್ನು ನೆಡಲಾಗುತ್ತಿದೆ. ಯೋಗ ಧನುಷ್ ಎಂಬ ಕಾರ್ಯಕ್ರಮದ ಮೂಲಕ 5 ಲಕ್ಷ ಜನರಿಗೆ ಯೋಗ ಶಿಷ್ಟಾಚಾರ ಹೇಳಿಕೊಡಲಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ 5 ಸಾವಿರ ಶಾಲೆಗಳಲ್ಲಿ ಯೋಗ ಶಿಷ್ಟಾಚಾರ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

ಯೋಗವು ಆತ್ಮ ಮತ್ತು ದೇಹ, ಆಲೋಚನೆ ಮತ್ತು ಕ್ರಿಯೆ, ಸಂಯಮ ಮತ್ತು ಪರಿಪೂರ್ಣತೆಯ ನಡುವಿನ ಸಮತೋಲನದ ಮಾಧ್ಯಮ

ಥಾವರಚಂದ್ ಗೆಹಲೋತ್, ರಾಜ್ಯಪಾಲ




ಸೇಲಂನ ಉಕ್ಕು ಸ್ಥಾವರ ಆವರಣದಲ್ಲಿ ಯೋಗ ನಿರತ ಎಚ್‌.ಡಿ.ಕುಮಾರಸ್ವಾಮಿ


ನೌಕಾಪಡೆ ನೆಲೆಗಳಲ್ಲಿ ಆಚರಣೆ


ಮುಂಬೈ: ಮುಂಬೈನಲ್ಲಿ ಕೇಂದ್ರ ಕಚೇರಿ ಹೊಂದಿರುವ ಪಶ್ಚಿಮ ನೌಕಾ ಕಮಾಂಡ್ (ಡಬ್ಲ್ಯುಎನ್‌ಸಿ) ಶನಿವಾರ ಯೋಗ ದಿನವನ್ನು ಆಚರಿಸಿತು.

ನೌಕಾಪಡೆ, ರಕ್ಷಣಾ ಇಲಾಖೆಯ 7000ಕ್ಕೂ ಹೆಚ್ಚು ನೌಕರರು, ಅವರ ಕುಟುಂಬ ಸದಸ್ಯರು ಯೋಗ ದಿನದಲ್ಲಿ ಭಾಗಹಿಸಿದ್ದರು. ಮುಂಬೈ, ಗುಜರಾತ್, ಗೋವ, ಕರ್ನಾಟಕದಲ್ಲಿ ಯೋಗ ದಿನ ಆಚರಣೆಗಳು ನಡೆದವು.

ಇದರ ಹೊರತಾಗಿ ಆರ್ಟ್ ಆಫ್ ಲಿವಿಂಗ್, ಭಾರತ್ ಸ್ವಾಭಿಮಾನ, ಮಹಿಳಾ ಪತಂಜಲಿ ಯೋಗ ಸಮಿತಿಗಳು ನೌಕಾಪಡೆ ಸಿಬ್ಬಂದಿಗಾಗಿ ಯೋಗ ಕಾರ್ಯಕ್ರಮ ಆಯೋಜಿಸಿದ್ದವು.







ಯೋಗ ದಿನಕ್ಕೆ ಗ್ಲಾಮರ್ ರಂಗು ನೀಡಿದ ನಟ ಮೋಹನ್‌ಲಾಲ್, ನಟಿಯರಾದ ಸೋನಾಲ್ ಚೌಹಾಣ್ ಮತ್ತು ಮಲೈಕಾ ಅರೋರಾ –ಪಿಟಿಐ ಚಿತ್ರಗಳು

ಚಿಟಿಕೆ ಸುದ್ದಿ

ಸಿ.ಎಂ ನಾಳೆ ದೆಹಲಿಗೆ: ರಾಷ್ಟ್ರಪತಿ ಭೇಟಿ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸದಸ್ಯರು ಸೋಮವಾರ ಸಂಜೆ ದೆಹಲಿಗೆ ಬರಲಿದ್ದು, ರಾಷ್ಟ್ರಪತಿ ಹಾಗೂ ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದಾರೆ.



ಸಿದ್ದರಾಮಯ್ಯ

ಬುಧವಾರದವರೆಗೆ ನವದೆಹಲಿಯಲ್ಲಿ ಇರಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ಐದು ಮಸೂದೆಗಳಿಗೆ ಅಂಗೀಕಾರ ನೀಡುವಂತೆ ಮನವಿ ಮಾಡಲಿದ್ದಾರೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಭದ್ರಾ ಮೇಲ್ದಂಡೆ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗೆ ಕಾಲಾವಕಾಶ ಕೇಳಲಾಗಿದೆ ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ.

ಈ ನಡುವೆ, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ವಿಧಾನ ಪರಿಷತ್ ನಾಮನಿರ್ದೇಶನ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮತ್ತಿತರ ವಿಷಯಗಳ ಕುರಿತು ಚರ್ಚಿಸುವ ಸಾಧ್ಯತೆ ಇದೆ.

ಹಿಂದುಳಿದ ವರ್ಗಗಳ ಆಯೋಗಕ್ಕೆ ನಾಲ್ವರ ನಾಮ ನಿರ್ದೇಶನ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ನಾಲ್ವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿ ಆದೇಶ ಹೊರಡಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ.

ನಿವೃತ್ತ ಐಜಿಪಿ ಚನ್ನಪಟ್ಟಣದ ಕೆ. ಅರ್ಕೇಶ್, ಮೈಸೂರಿನ ವಕೀಲರಾದ ಶಿವಣ್ಣ ಗೌಡ, ಮಂಗಳೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಬಿ. ಸುಮನಾ ಮತ್ತು ನಿವೃತ್ತ ಪ್ರಾಂಶುಪಾಲ, ಧಾರವಾಡದ ಸಿ.ಎಂ. ಕುಂದಗೋಳ ಅವರ ಹೆಸರನ್ನು ಮುಖ್ಯಮಂತ್ರಿ ನಾಮನಿರ್ದೇಶನ ಮಾಡಿದ್ದಾರೆ.

ಆಯೋಗದ ಅಧ್ಯಕ್ಷರನ್ನಾಗಿ ಮಾಜಿ ಅಡ್ವೊಕೇಟ್ ಜನರಲ್ ಮಧುಸೂದನ್ ಆರ್. ನಾಯಕ್ ಅವರನ್ನು ನೇಮಿಸಿ ಸರ್ಕಾರ ಜನವರಿ 31ರಂದು ಆದೇಶ ಹೊರಡಿಸಿತ್ತು.

'ಗ್ರಾ.ಪಂ. ಅಧ್ಯಕ್ಷರ ಕೆಲಸ ಆಗುತ್ತದೆ, ಶಾಸಕರದ್ದಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಶಾಸಕನಾಗಿ, ಮನೆಗಳ ಹಂಚಿಕೆಗೆ ನಾಲ್ಕು ಬಾರಿ ಪತ್ರ ಕೊಟ್ಟಿದ್ದೇನೆ. ಆದರೆ ಕೆಲಸ ಆಗಿಲ್ಲ. ಅದೇ ಪತ್ರವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷ ತೆಗೆದುಕೊಂಡು ಕೊಟ್ಟರೆ ಕೆಲಸ ಆಗುತ್ತದೆ ಅಂದರೆ ಏನರ್ಥ? ನನ್ನ ಮನವಿ ಪತ್ರಗಳನ್ನೂ ತೆಗೆದುಕೊಳ್ಳಬೇಕಲ್ಲವೇ' ಎಂದು ಆಳಂದ ಶಾಸಕರೂ ಆಗಿರುವ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ. ಆರ್. ಪಾಟೀಲ ಪ್ರಶ್ನಿಸಿದರು.

'ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಹಣ ನೀಡಿದರಷ್ಟೇ ಮನೆ ಮಂಜೂರು ಮಾಡಲಾಗುತ್ತದೆ' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಬಿ.ಆರ್. ಪಾಟೀಲ ಹೇಳಿದ್ದಾರೆ ಎನ್ನಲಾದ ಆಡಿಯೊ ಬಹಿರಂಗವಾಗಿತ್ತು.

ಈ ಬಗ್ಗೆ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ನನಗೆ ಮೊಬೈಲ್ ಬಳಸುವುದೂ ಗೊತ್ತಿಲ್ಲ. ಆಡಿಯೊ ನಾನು ಬಿಡುಗಡೆ ಮಾಡಿಲ್ಲ. ಆ ಧ್ವನಿ ನನ್ನದೆ. ನಾನು ಸತ್ಯ ಹೇಳಿದ್ದೇನೆ. ಅದರಲ್ಲಿ ತಪ್ಪೇನಿದೆ?' ಎಂದೂ ಅವರು ಪ್ರತಿಕ್ರಿಯಿಸಿದರು.

'ವಸತಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ನನಗೆ ಅನುಮಾನವಿದೆ. 5-6 ಪಂಚಾಯಿತಿಗಳಲ್ಲಿ ಹಣ ಕೊಟ್ಟು ಮನೆಗಳನ್ನು ತೆಗೆದುಕೊಂಡಿದ್ದಾರೆ. ನಾವು (ಕಾಂಗ್ರೆಸ್ ಪಕ್ಷ) ಜನಪರ ಆಡಳಿತ ಕೊಡುತ್ತೇವೆ ಎಂದು ಅಧಿಕಾರಕ್ಕೆ ಬಂದಿದ್ದು. ಆದರೆ, ಹೀಗಾಗಬಾರದಿತ್ತು' ಎಂದರು.

'ಇದು ಪ್ರಜಾಪ್ರಭುತ್ವ. ಯಾರ್‍ಯಾರಿಗೆ ಯಾವ ಅಸ್ತ್ರ ಬೇಕೊ ಅದನ್ನು ಬಳಸಿಕೊಳ್ಳುತ್ತಾರೆ. ಅದಕ್ಕೆ ನಾನು ಏನು ಮಾಡಲಿ. ಖಂಡಿತವಾಗಿಯೂ ಇದರಿಂದ ಪಕ್ಷಕ್ಕೆ ಮುಜುಗರವಾಗುತ್ತದೆ. ಪಕ್ಷ, ಸರ್ಕಾರಕ್ಕೆ ಮುಜುಗರ ಆಗಬಾರದು ಎಂದಾಗಿದ್ದರೆ ಸಚಿವರಿಗೆ ಕೊಟ್ಟ ಪತ್ರಕ್ಕೆ ಕೆಲಸ ಆಗಬೇಕಿತ್ತು. ಈ ಬಗ್ಗೆ ಸಚಿವರ ಜೊತೆ ಹಲವು ಬಾರಿ ಚರ್ಚಿಸಿದ್ದೇನೆ. ಆದರೂ ಯಾವುದೇ ಪ್ರಯೋಜನ ಆಗಿಲ್ಲ. ಭ್ರಷ್ಟಾಚಾರ ನಡೆದಿಲ್ಲ ಎಂದಾದರೆ ತನಿಖೆ ನಡೆಸಲಿ' ಎಂದರು.

'ನನಗೆ ಈ ವಿಚಾರದಿಂದ ತುಂಬಾ ಬೇಸರವಾಗಿದೆ. ಬಡವರ ಹೊಟ್ಟೆ ಮೇಲೆ ಕಲ್ಲು ಹೊಡೆಯಬಾರದು. ನಾವು ಶಾಸಕರಾದವರು ಎಲ್ಲಿ, ಏನು ಬೇಕೆಂದು ಹೇಳುತ್ತೇವೆ. ನನಗೆ ಜನರ ಬಗ್ಗೆ ಬದ್ಧತೆ ಇದೆ. ನಾನು ಏನು ಮಾತನಾಡಬೇಕೊ ಅದೆಲ್ಲವನ್ನೂ ಮಾತನಾಡಿದ್ದೇನೆ' ಎಂದೂ ಹೇಳಿದರು.

'ಮುಖ್ಯಮಂತ್ರಿ ಕರೆದರೆ ಮಾತ್ರ ಅವರ ಬಳಿ ಈ ಬಗ್ಗೆ ವಿವರಣೆ ಕೊಡುತ್ತೇನೆ. ಆದರೆ, ನಾನಾಗಿ ಅವರ ಬಳಿ ಹೋಗಲ್ಲ' ಎಂದೂ ಸ್ಪಷ್ಟಪಡಿಸಿದರು.

ವಿರೋಧ ಪಕ್ಷ ಬಿಜೆಪಿ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅವರ ಕಾಲದಲ್ಲೂ ಇಂತಹದ್ದೆಲ್ಲ ನಡೆದಿದೆ' ಎಂದರು.



ನಾನು ಸತ್ಯ ಹೇಳಿದ್ದೇನೆ. ಅದರಲ್ಲಿ ತಪ್ಪೇನಿದೆ? ಭ್ರಷ್ಟಾಚಾರ ನಡೆದಿಲ್ಲ ಎಂದಾದರೆ ತನಿಖೆ ನಡೆಸಲಿ

ಬಿ.ಆರ್. ಪಾಟೀಲ, ಕಾಂಗ್ರೆಸ್ ಶಾಸಕ

ಶಾಸಕ ಬಿ.ಆರ್.ಪಾಟೀಲ, ಸಚಿವರಾದ ಕೃಷ್ಣಬೈರೇಗೌಡ ಅವರು ಪ್ರಸ್ತಾಪಿಸಿದ ಭ್ರಷ್ಟಾಚಾರದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಬೇಕು

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಸಿ.ಎಂ ರಾಜೀನಾಮೆಗೆ ಬಿಜೆಪಿ ನಾಯಕರ ಆಗ್ರಹ

ಕಾರವಾರ/ಬೆಳಗಾವಿ: 'ಬಡವರಿಗೆ ಮಂಜೂರಾದ ಮನೆಯಲ್ಲೂ ಲಂಚ ಕೇಳುವ ಹೀನ ಸ್ಥಿತಿಗೆ ರಾಜ್ಯ ಸರ್ಕಾರ ಇಳಿದಿದ್ದು ಅರಾಜಕತೆಯ ಪರಮಾವಧಿ. ಇಂತ ಭ್ರಷ್ಟ ಸರ್ಕಾರ ನಡೆಸುವ ಬದಲು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲಿ' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಒತ್ತಾಯಿಸಿದರು.



ವಿಶ್ವೇಶ್ವರ ಹೆಗಡೆ

'ವಸತಿ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಕಾಂಗ್ರೆಸ್ ಹಿರಿಯ ಶಾಸಕ ಬಿ.ಆರ್.ಪಾಟೀಲ ಬಹಿರಂಗಪಡಿಸಿದ್ದಾರೆ. ಇದು ಕಾಂಗ್ರೆಸ್ ಭ್ರಷ್ಟಾಚಾರ ಆಡಳಿತದ ಮುಖವಾಡ ಕಳಚಿದೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.



ಜಗದೀಶ್ ಶೆಟ್ಟರ್

'ವಸತಿ ಯೋಜನೆ ಮನೆಗಳಲ್ಲಿ ಅಲ್ಪಸಂಖ್ಯಾತರಿಗೆ ಶೇ 15 ರಷ್ಟು ಮೀಸಲಾತಿ ಜಾರಿ ಮಾಡಲು ಹೊರಟಿರುವುದು ಓಲೈಕೆಯ ಪರಮಾವಧಿ. ಇದು ಸಿಎಂ, ಡಿಸಿಎಂ ಅವರ ಬೇಕಾಬಿಟ್ಟಿ ಆಡಳಿತಕ್ಕೆ ಹಿಡಿದ ಕೈಗನ್ನಡಿ' ಎಂದರು.

ಬೆಳಗಾವಿಯಲ್ಲಿ ಸಂಸದ ಜಗದೀಶ ಶೆಟ್ಟರ್ ಮಾತನಾಡಿ, 'ರಾಜೀವ್ ಗಾಂಧಿ ವಸತಿ ನಿಗಮದ ಮನೆ ಮಂಜೂರಾತಿಗೆ ಸಂಬಂಧಿಸಿ ಕಾಂಗ್ರೆಸ್‌ನ ಶಾಸಕ ಬಿ.ಆರ್.ಪಾಟೀಲ ಮಾತನಾಡಿದ ಆಡಿಯೊ ಮೂಲಕ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತೊಮ್ಮೆ ಬಯಲಾಗಿದೆ' ಎಂದರು.

'ರಾಜ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಬಿ.ಆರ್.ಪಾಟೀಲ ಅವರ ಆಡಿಯೊ, ಕೋಟ್ಯಂತರ ರೂಪಾಯಿ ಭ್ರಷ್ಟಾಚಾರ ನಡೆದಿದ್ದನ್ನು ತೋರಿಸುತ್ತದೆ. ಈ ಹಿಂದೆ ಶಾಸಕ ಬಸವರಾಜ ರಾಯರೆಡ್ಡಿ ಕೂಡ ಸರ್ಕಾರದಲ್ಲಿನ ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದರು' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತದ ಮೇಲೆ ನಿಯಂತ್ರಣ ಕಳೆದುಕೊಂಡಿದ್ದಾರೆ. ಅವರು ತಮ್ಮ ಸ್ಥಾನಕ್ಕೆ ಬೇಗ ರಾಜೀನಾಮೆ ನೀಡುವುದು ಒಳ್ಳೆಯದು' ಎಂದರು.

ಪಾಟೀಲರ ಹೇಳಿಕೆ ಸರಿ ಅಲ್ಲ– ಡಿ.ಕೆ. ಶಿವಕುಮಾರ್



'ಪಾರದರ್ಶಕವಾಗಿ ವಸತಿ ಹಂಚಿಕೆ ಆಗುವಾಗ ಫಲಾನುಭವಿ ಹಣ ನೀಡಲು ಹೇಗೆ ಸಾಧ್ಯ? ಶಾಸಕರು (ಬಿ.ಆರ್. ಪಾಟೀಲ) ಯಾವ ಉದ್ದೇಶದಲ್ಲಿ ಹೇಳಿದ್ದಾರೊ. ಇದು ಸರಿ ಅಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ನಾನು ಮಾಡಿರುವ ಆರೋಪ ನಿಜ' ಎಂದು ಶಾಸಕ ಬಿ.ಆರ್. ಪಾಟೀಲ ಅವರು ಪುನರುಚ್ಚರಿಸಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, 'ಅವರು ಏನು ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ಈ ವಿಚಾರ ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದೇನೆ. ಅವರು ಈ ವಿಚಾರವಾಗಿ ಕ್ರಮ ಕೈಗೊಳ್ಳಲಿದ್ದಾರೆ' ಎಂದರು.

'ವಸತಿ ಹಂಚುವ ನಿರ್ಧಾರ ತೆಗೆದುಕೊಳ್ಳುವವರು ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳು. ಶಾಸಕರ ಹೇಳಿಕೆಯನ್ನು ನಾನು ಖಂಡಿಸುತ್ತೇನೆ. ನಮ್ಮ ಸರ್ಕಾರದಲ್ಲಿ ಇಂತಹ ವಿಚಾರ ಇಲ್ಲ. ಈ ಬಗ್ಗೆ ಶಾಸಕರ ಜೊತೆ ನಾನು ಮತ್ತು ಮುಖ್ಯಮಂತ್ರಿ ಮಾತನಾಡುತ್ತೇವೆ' ಎಂದರು.

ತೌಡು ಕುಟ್ಟುವ ಕೆಲಸ: ಸೋಮಣ್ಣ

ಹಳೇಬೀಡು (ಹಾಸನ): 'ಖಾಲಿ ಡಬ್ಬ ಇಟ್ಟುಕೊಂಡು ತಮ್ಮ ಹುಳುಕನ್ನು ಮುಚ್ಚಿಕೊಳ್ಳಲು ಸಮಾಜಗಳನ್ನು ಎತ್ತಿ ಕಟ್ಟುತ್ತಿದ್ದಾರೆ. ಯಾರಾದರೂ ಮುಸ್ಲಿಮರು ಹೋಗಿ ವಸತಿ ಯೋಜನೆಯಲ್ಲಿ ಮೀಸಲಾತಿ ಕೊಡಿ ಎಂದು ಕೇಳಿದ್ದರಾ' ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಪ್ರಶ್ನಿಸಿದರು.

ಯೋಗ ದಿನಾಚರಣೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಮೋದಿ ಪುಣ್ಯಾತ್ಮ ಇವತ್ತು 176 ದೇಶಗಳು ಯೋಗ ದಿನ ಆಚರಿಸುವಂತೆ ಮಾಡಿದರು. ಇಂತಹ ಕೆಲಸ ಮಾಡ್ರಯ್ಯ ನಿಮ್ಮ ಮನೆ ಕಾಯೋಗ ಅಂದ್ರೆ, ಅದೆಲ್ಲಾ ಬಿಟ್ಟು ತೌಡು ಕುಟ್ಟುವ ಕೆಲಸ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಇವೆಲ್ಲಾ ಕಾನೂನು ಚೌಕಟ್ಟಿನಲ್ಲಿ ಉಳಿಯುತ್ತವೆಯೇ? ಡಾ.ಅಂಬೇಡ್ಕರ್ ಅವರು ಜಾತಿ, ಪಂಗಡಗಳ ಮೇಲೆ ವಿಂಗಡಿಸಬೇಡಿ ಎಂದು ಹೇಳಿದ್ದಾರೆ. ವೋಟ್ ಬ್ಯಾಂಕ್‌ಗೆ ಅನವಶ್ಯಕವಾದ, ಪಾಪದ ಕೆಲಸಕ್ಕೆ ಕೈಹಾಕಿದ್ದೀರಿ. ಇದು ಊರ್ಜಿತವಾಗುವುದಿಲ್ಲ. ಪ್ರಲ್ಹಾದ್ ಜೋಶಿಯವರು ಕಾನೂನು ಹೋರಾಟದ ಬಗ್ಗೆ ತಿಳಿಸಿದ್ದಾರೆ. ಅದರ ಬಗ್ಗೆ ಪಕ್ಷ ಚಿಂತನೆ ಮಾಡುತ್ತದೆ' ಎಂದರು.

ವಿಶ್ವದೆಲ್ಲೆಡೆ ಯೋಗ ದಿನದ ಸಂಭ್ರಮ

ನ್ಯೂಯಾರ್ಕ್/ಬೀಜಿಂಗ್ (ಪಿಟಿಐ): ಅಮೆರಿಕ, ಬ್ರಿಟನ್, ಚೀನಾ ಸೇರಿದಂತೆ ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಹಾಗೂ ವಿಶ್ವಸಂಸ್ಥೆಯಲ್ಲಿ 11ನೇ ಅಂತರರಾಷ್ಟ್ರೀಯ ಯೋಗ ದಿನ ಆಚರಣೆ ಯಶಸ್ವಿಯಾಗಿ ನಡೆದಿದೆ. ವಿವಿಧ ರಾಷ್ಟ್ರಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳ ಮುಂದಾಳತ್ವದಲ್ಲಿ ಯೋಗದಿನದ ಕಾರ್ಯಕ್ರಮಗಳು ನಡೆದಿದ್ದು, ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ವಿಶ್ವಸಂಸ್ಥೆಗೆ ಭಾರತದ ಕಾಯಂ ಪ್ರತಿನಿಧಿ ಆಗಿರುವ ಪಿ.ಹರೀಶ್ ಅವರ ಉಪಸ್ಥಿತಿಯಲ್ಲಿ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಯೋಗ ದಿನಾಚರಣೆ ನಡೆದಿದೆ. ರಾಯಭಾರಿಗಳು, ವಿಶ್ವಸಂಸ್ಥೆ ಅಧಿಕಾರಿಗಳು, ಸದಸ್ಯರು ಸೇರಿ 1,200 ಮಂದಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ಪ್ರತಿಷ್ಠಿತ ಟೈಮ್ಸ್ ಸ್ಕ್ವೇರ್‌ನಲ್ಲಿ ರಾಯಭಾರ ಕಚೇರಿಯಿಂದ 7 ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರಲ್ಲಿ 10 ಸಾವಿರ ಮಂದಿ ಭಾಗಿಯಾಗಿದ್ದರು. ಭಾರತದ ಖ್ಯಾತ ನಟ ಅನುಪಮ ಖೇರ್ ಕೂಡ ಪಾಲ್ಗೊಂಡಿದ್ದರು.

ಲಂಡನ್‌ನಲ್ಲೂ ಹೈಕಮಿಷನ್ ಸಹಯೋಗದಲ್ಲಿ ಯೋಗದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಚೀನಾ ರಾಜಧಾನಿ ಬೀಜಿಂಗ್‌ನಲ್ಲಿರುವ ರಾಯಭಾರ ಕಚೇರಿ ಸಂಕೀರ್ಣ, ಶಾಂಘೈ, ಪರ್ಲ್ ನದಿ ಸಮೀಪದಲ್ಲೂ ಯೋಗ ದಿನದ ಕಾರ್ಯಕ್ರಮಗಳು ನಡೆದಿವೆ. ಉಳಿದಂತೆ ಸಿಂಗಪುರ, ಜಪಾನ್, ಆಸ್ಟ್ರೇಲಿಯಾ, ನೇಪಾಳ, ಥಾಯ್ಲೆಂಡ್, ಶ್ರೀಲಂಕಾ, ಮಲೇಷ್ಯಾದಲ್ಲೂ ಯೋಗ ದಿನಾಚರಣೆ ನಡೆದಿದೆ.

ಜೈಲು ಸೇರಿ, ಜಾಮೀನು ಪಡೆದು ಅದೇ ಹುದ್ದೆಗೆ ಮರಳಿದ್ದ ಅಧಿಕಾರಿ

ಸಚಿವರ ಸೂಚನೆ ಬಳಿಕ ಕೃಷ್ಣವೇಣಿ ಅಮಾನತು

ಪ್ರಜಾವಾಣಿ ವಾರ್ತೆ



ಕೃಷ್ಣವೇಣಿ

ಮಂಗಳೂರು: ಲಂಚ ಪ್ರಕರಣದಲ್ಲಿ ಜೈಲು ಸೇರಿ, ಜಾಮೀನು ಪಡೆದು ಹೊರಬಂದು ಮತ್ತೆ ಅದೇ ಹುದ್ದೆಯಲ್ಲಿ ಮುಂದುವರಿದಿದ್ದ ಇಲ್ಲಿಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ ಕೃಷ್ಣವೇಣಿ ಅವರನ್ನು ಸರ್ಕಾರ ಅಮಾನತುಗೊಳಿಸಿದೆ.

'ಲಂಚ ಪಡೆದ ಆರೋಪದ ಮೇಲೆ 18 ದಿನ ಬಂಧನದಲ್ಲಿದ್ದ ಕೃಷ್ಣವೇಣಿ ಅವರನ್ನು ಅಮಾನತುಗೊಳಿಸದೇ ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದ್ದು, ಈ ಬಗ್ಗೆ ಸಾರ್ವಜನಿಕರಿಂದ ಟೀಕೆ ವ್ಯಕ್ತವಾಗಿದೆ. ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮುಖ್ಯ ಕಾರ್ಯದರ್ಶಿಗೆ ಶನಿವಾರ ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ ಅಮಾನತು ಆದೇಶ ಹೊರಬಿದ್ದಿದೆ.

ಚಾಲಕನ ಮೂಲಕ ₹50 ಸಾವಿರ ಲಂಚ ಪಡೆದ ಆರೋಪದ ಮೇಲೆ ಕೃಷ್ಣವೇಣಿ ಅವರನ್ನು ಲೋಕಾಯುಕ್ತ ಪೊಲೀಸರು ಮೇ 28ರಂದು ಬಂಧಿಸಿದ್ದರು. ಅವರು ಜಾಮೀನು ಪಡೆದು ಜೂನ್ 18ರಂದು ಮತ್ತೆ ಕರ್ತವ್ಯಕ್ಕೆ ಹಾಜರಾಗಿದ್ದರು.

ಯಾವುದೇ ಅಧಿಕಾರಿ 48 ಗಂಟೆಗಿಂತ ಹೆಚ್ಚು ಸಮಯ ಬಂಧನದಲ್ಲಿದ್ದರೆ, ಅವರನ್ನು ಅಮಾನತು ಮಾಡಲು ಸರ್ಕಾರ ಕ್ರಮಕೈಗೊಳ್ಳುತ್ತದೆ. ಆದರೆ, ಕೃಷ್ಣವೇಣಿ ಅವರ ವಿಚಾರದಲ್ಲಿ ಈ ನಿಯಮ ಪಾಲನೆ ಆಗಿರಲಿಲ್ಲ.

ಉಳ್ಳಾಲ ತಾಲ್ಲೂಕು ಇರಾ ಗ್ರಾಮದ ವ್ಯಕ್ತಿಯೊಬ್ಬರು ಮನೆ ನಿರ್ಮಿಸಲು ಉದ್ದೇಶಿಸಿದ್ದ ಜಾಗದಲ್ಲಿದ್ದ ಕಟ್ಟಡದ ಕಲ್ಲು ತೆಗೆದು ಸಮತಟ್ಟುಗೊಳಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ತನ್ನ ಚಾಲಕನ ಮೂಲಕ ₹50 ಸಾವಿರ ಲಂಚ ಪಡೆದ ಆರೋಪದ ಮೇರೆಗೆ ಕೃಷ್ಣವೇಣಿ, ಕಚೇರಿ ಪ್ರಥಮ ದರ್ಜೆ ಸಹಾಯಕ ಪ್ರದೀಪ್ ಕುಮಾರ್ ಆರ್., ಚಾಲಕ ಮಧು ಸಿ. ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು.

ಲಂಚ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಸಿಬ್ಬಂದಿ ಪ್ರದೀಪ್ ಅವರನ್ನು ಮೇ 28ರಂದೇ ಅಮಾನತುಗೊಳಿಸಲಾಗಿತ್ತು. ಚಾಲಕ ಮಧು ಹೊರಗುತ್ತಿಗೆ ನೌಕರನಾಗಿದ್ದರಿಂದ ಅಮಾನತು ಪ್ರಶ್ನೆ ಬರುವುದಿಲ್ಲ. ಕೃಷ್ಣವೇಣಿ ಅವರನ್ನು ಮೇ 28ರಿಂದಲೇ ಅನ್ವಯವಾಗುವಂತೆ ಅಮಾನತುಗೊಳಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

ದಕ್ಷಿಣ ಕನ್ನಡ ಹಿರಿಯ ಭೂ ವಿಜ್ಞಾನಿಯಾಗಿ ಸಂದೀಪ್ ಜಿ.ಯು. ಅವರಿಗೆ ಪ್ರಭಾರ ಹೊಣೆ ವಹಿಸಲಾಗಿದೆ.

ಲೋಕಾಯುಕ್ತ ದಾಳಿ ಮಾಹಿತಿ ಸೋರಿಕೆ - ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತರು, ಲೋಕಾಯುಕ್ತ ಪೊಲೀಸರು ನಡೆಸುತ್ತಿದ್ದ ದಾಳಿ ಕಾರ್ಯಾಚರಣೆ ವಿವರಗಳನ್ನು ಮಾಜಿ ಹೆಡ್ ಕಾನ್‌ಸ್ಟೆಬಲ್ ನಿಂಗಪ್ಪ ಸಾವಂತ ಸೋರಿಕೆ ಮಾಡಿದ್ದರ ಸುಳಿವು ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿದೆ ಎಂದು ಮೂಲಗಳು ತಿಳಿಸಿವೆ.

ಅಬಕಾರಿ ಇಲಾಖೆ ಅಧಿಕಾರಿಗಳಿಂದ ನಿಂಗಪ್ಪ ಸಾವಂತ ಹಣ ವಸೂಲಿ ಮಾಡಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು, ಮಾಹಿತಿ ಸೋರಿಕೆ ಆಗಿದ್ದರ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ.

'2024 ಮತ್ತು 2025ರಲ್ಲಿ ಲೋಕಾಯುಕ್ತವು ನಡೆಸಿದ್ದ ಹಲವು ದಾಳಿ ಕಾರ್ಯಾಚರಣೆಗಳ ವಿವರಗಳು ಸೋರಿಕೆ ಆಗಿತ್ತು. ದಾಳಿ ವೇಳೆ ಸಂಬಂಧಿತ ಅಧಿಕಾರಿಗಳು ಪರಾರಿಯಾಗಿದ್ದರು. ಅದೇ ದಿನ ಲೋಕಾಯುಕ್ತದ ಕೆಲ ಅಧಿಕಾರಿಗಳು, ನಿಂಗಪ್ಪನ ಜತೆ ಫೋನ್‌ನಲ್ಲಿ ಮಾತನಾಡಿರುವ ಕರೆ ವಿವರ ಸಿಕ್ಕಿದೆ' ಎಂದು ತಿಳಿಸಿವೆ.

'ಲೋಕಾಯುಕ್ತ ಎಸ್‌ಪಿಯಾಗಿದ್ದ ಶ್ರೀನಾಥ್ ಎಂ. ಜೋಶಿ ಜತೆಗೆ ನಿಂಗಪ್ಪ ನಗರದ ಹೋಟೆಲ್ ಒಂದರ ಲಾಬಿಯಲ್ಲಿ ಕೆಲ ಗಂಟೆ ಇದ್ದ ಮಾಹಿತಿ ಸಿಕ್ಕಿದೆ. ಜತೆಗೆ ರಾಜ್ಯ ಸರ್ಕಾರದ ಸಚಿವರೊಬ್ಬರ ಆಪ್ತ ಕಾರ್ಯದರ್ಶಿಯೂ ಅದೇ ಹೋಟೆಲ್‌ನಲ್ಲಿ ಅವರೊಂದಿಗೆ ಇದ್ದರು. ಮೂವರೂ ಒಂದೇ ಸಮಯಕ್ಕೆ ಹೊರಗೆ ಹೋಗಿದ್ದಾರೆ ಎಂಬ ವಿವರ ದೊರೆತಿದೆ' ಎಂದು ಮೂಲಗಳು ವಿವರಿಸಿವೆ.

ಮುಜುಗರ ತಂದಿದ್ದ ದಾಳಿಗಳು

- 2025ರ ಜನವರಿಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಕಚೇರಿಗಳ ಮೇಲೆ ಲೋಕಾಯುಕ್ತರು ದಾಳಿ ನಡೆಸಿದ್ದರು. ಆದರೆ ದಾಳಿಗೆ ಮುನ್ನವೇ ಇಲಾಖೆಯ ಅಧಿಕಾರಿಗಳು ಕಚೇರಿಗೆ ಬೀಗ ಹಾಕಿಕೊಂಡು ಪರಾರಿಯಾಗಿದ್ದರು
- ಹಿರಿಯ ಐಪಿಎಸ್ ಅಧಿಕಾರಿಯೊಬ್ಬರ ಕಚೇರಿ ಮತ್ತು ಮನೆ ಮೇಲೆ ಇದೇ ಮಾರ್ಚ್–ಏಪ್ರಿಲ್ ನಡುವೆ ಎರಡು ಬಾರಿ ದಾಳಿ ನಡೆಸಲಾಗಿತ್ತು. ಎರಡು ಬಾರಿಯೂ ಅಧಿಕಾರಿ ಸ್ಥಳದಿಂದ ಪರಾರಿಯಾಗಿದ್ದರು
- ಅಬಕಾರಿ ಇಲಾಖೆಯ ಬೆಂಗಳೂರು ಉಪವಿಭಾಗದ ಕಚೇರಿಗಳ ಮೇಲೆ ಎರಡನೇ ಹಂತದ ದಾಳಿ ನಡೆಸಿದಾಗ, ಒಂದು ಕಚೇರಿಗೆ ಬೀಗ ಹಾಕಲಾಗಿತ್ತು

ಚಟಿಕೆ ಸುದ್ದಿ

ಇದೇ 23 ರಂದು ಸಂಕಲ್ಪ ಸಭೆ: ಕೂಡಲಸಂಗಮ ಶ್ರೀ

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿ ಪಡೆಯುವ ಹೋರಾಟದ ಬಗ್ಗೆ ಚರ್ಚಿಸಲು ಇದೇ 23ರಂದು ಮಧ್ಯಾಹ್ನ 1ಕ್ಕೆ ಉತ್ತರ ಕನ್ನಡ ಜಿಲ್ಲೆ ಉಳವಿಯಲ್ಲಿ ಸಂಕಲ್ಪ ಸಭೆ ನಡೆಯಲಿದೆ' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸುದ್ದಿಗಾರರಿಗೆ ತಿಳಿಸಿದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

'ಇದೇ 24ರಂದು ಬೆಳಿಗ್ಗೆ 8ಕ್ಕೆ ಉಳವಿಯಲ್ಲೇ ಇಷ್ಟಲಿಂಗ ಪೂಜೆ ನೆರವೇರಿಸಲಾಗುವುದು' ಎಂದು ಅವರು ತಿಳಿಸಿದರು.

ಹುಬ್ಬಳ್ಳಿ: 30ರಂದು ಮೇಯರ್ ಆಯ್ಕೆ

ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ 24ನೇ ಅವಧಿಯ ಮೇಯರ್, ಉಪಮೇಯರ್ ಆಯ್ಕೆಗೆ ಇದೇ 30ರಂದು ಚುನಾವಣೆ ನಡೆಯಲಿದೆ. ಮೇಯರ್ ಸ್ಥಾನ ಸಾಮಾನ್ಯ ಮಹಿಳೆ, ಉಪಮೇಯರ್ ಸ್ಥಾನ ಹಿಂದುಳಿದ ವರ್ಗ 'ಬಿ'ಗೆ ಮೀಸಲಾಗಿದೆ.

'ಸಾಮಾನ್ಯ ಮಹಿಳೆ' ಮೀಸಲಾತಿ ಪ್ರಶ್ನಿಸಿ ಮಹಾನಗರ ಪಾಲಿಕೆಯ ಬಿಜೆಪಿ ಸದಸ್ಯ ಶಿವು ಮೆಣಸಿನಕಾಯಿ ನ್ಯಾಯಾಲಯದ ಮೊರೆ ಹೋಗಿದ್ದರು. ಆ ನಂತರ ಹೈಕೋರ್ಟ್‌ನ ಧಾರವಾಡ ಪೀಠ ಮೀಸಲಾತಿಗೆ ತಡೆಯಾಜ್ಞೆ ನೀಡಿತ್ತು.ಶಿವು ಮೆಣಸಿನಕಾಯಿ ತಮ್ಮ ಅರ್ಜಿ ವಾಪಸ್ ಪಡೆದಿದ್ದರಿಂದ ಈಗ ಚುನಾವಣೆಗೆ ದಿನಾಂಕ ನಿಗದಿಯಾಗಿದೆ.

ಜು.1ರಿಂದ ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್: ಪ್ರಭಾಕರ್

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): 'ಗ್ರಾಮೀಣ ಭಾಗದ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ಸೌಲಭ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 1ರಂದು ಚಾಲನೆ ನೀಡಲಿದ್ದಾರೆ' ಎಂದು ಸಿ.ಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹೇಳಿದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ಶನಿವಾರ ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪತ್ರಕರ್ತರಿಗೆ ₹ 5 ಲಕ್ಷದವರೆಗೆ ಆರೋಗ್ಯ ಚಿಕಿತ್ಸಾ ವೆಚ್ಚ ಭರಿಸುವ ಆರೋಗ್ಯ ಸಂಜೀವಿನಿ ಕಾರ್ಡ್ ಸೌಲಭ್ಯಕ್ಕೂ ಅಂದು ಸಿ.ಎಂ ಚಾಲನೆ ನೀಡಲಿದ್ದಾರೆ' ಎಂದರು.

ಪತ್ರಕರ್ತರ ವೃತ್ತಿ ಹಾಗೂ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಲಿದೆ. ಉಳಿದ ಬೇಡಿಕೆಗಳು ಶೀಘ್ರ ಈಡೇರಲಿವೆ ಎಂದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳನ್ನು ಇದೇ ವೇಳೆ ಗೌರವಿಸಲಾಯಿತು.

'ಕಪ್ಪತ್ತಗುಡ್ಡ ರಕ್ಷಣೆಗೆ ಯೋಜನೆ ರೂಪಿಸಿ'

ಹುಬ್ಬಳ್ಳಿ: 'ಗದುಗಿನ ಕಪ್ಪತ್ತಗುಡ್ಡವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಹೈಕೋರ್ಟ್ ಘೋಷಿಸಿದ್ದು ಸ್ವಾಗತಾರ್ಹ. ಸರ್ಕಾರ ಅದರ ರಕ್ಷಣೆಗೆ ಯೋಜನೆ ರೂಪಿಸಬೇಕು' ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್. ಹಿರೇಮಠ ಹೇಳಿದರು.



ಹಿರೇಮಠ

'ವಿವಿಧ ಸಸ್ಯ ಹಾಗೂ ಜೀವರಾಶಿಗಳನ್ನು ಹೊಂದಿರುವ ಕಪ್ಪತ್ತಗುಡ್ಡವನ್ನು ಉತ್ತರ ಕರ್ನಾಟಕದ ಆಮ್ಲಜನಕ ಬ್ಯಾಂಕ್ ಎಂದು ಕರೆಯುತ್ತಾರೆ. ಅದರ ಬಗ್ಗೆ ನಮ್ಮ ಸಂಘಟನೆಯ ಆಡಳಿತ ಮಂಡಳಿ ಸದಸ್ಯ ಕೆ. ಕೊಟ್ರೇಶ ಅವರು ಸಹ ಪುಸ್ತಕ(ಕಪ್ಪತಗುಡ್ಡ ಜೀವ ವೈವಿಧ್ಯ ಹಾಗೂ ಸಸ್ಯ ಪ್ರಭೇದಗಳು) ಬರೆದು ಗಮನ ಸೆಳೆದಿದ್ದರು' ಎಂದರು.

'ಕಪ್ಪತ್ತಗುಡ್ಡ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ತೋಂಟದ ಶ್ರೀಗಳು ಹಾಗೂ ಸ್ಥಳೀಯ ಜನರ ಪಾತ್ರ ಬಹುಮುಖ್ಯವಾಗಿದೆ. ಇನ್ನುಮುಂದೆ ಅಲ್ಲಿ ಯಾರಿಗೂ ಗಣಿಗಾರಿಕೆಗೆ ಅವಕಾಶ ನೀಡಬಾರದು' ಎಂದು ಆಗ್ರಹಿಸಿದರು. ಮುಖಂಡರಾದ ಲಕ್ಷ್ಮಣ ಬಕ್ಕಾಯಿ, ಶಮೀಮ ಮುಲ್ಲಾ ಇದ್ದರು.

ಜಾತಿನಿಂದನೆ: ಆರೋಪಿಗಳ ಸೆರೆ

ಸುರಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ನಾಗರಾಳ ಗ್ರಾಮದ ದಲಿತ ವಕೀಲ ದುರ್ಗಪ್ಪ ಬಸಪ್ಪ ಹೊಸಮನಿ ಅವರಿಗೆ ಜಾತಿ ನಿಂದನೆ ಮಾಡಿ, ಹಲ್ಲೆ ನಡೆಸಿ ತಲೆ ಮರೆಸಿಕೊಂಡಿದ್ದ ಆರೋಪಿಗಳನ್ನು ಶನಿವಾರ ಪೊಲೀಸರು ಬಂಧಿಸಿದ್ದಾರೆ.

ಮೂರು ದಿನಗಳಿಂದ ತಲೆ ಮರೆಸಿಕೊಂಡಿದ್ದ ಆರೋಪಿಗಳಾದ ಮಲ್ಲಯ್ಯ ಮಲ್ಲಪ್ಪ ಹುಲಕಲ್ ಮತ್ತು ಅರ್ಜುನ ಯಂಕಪ್ಪ ದೇವಡಿ ಎಂಬ ಇಬ್ಬರು ಆರೋಪಿಗಳನ್ನು ತಾಲ್ಲೂಕಿನ ಕಕ್ಕೇರಾದ ಬಸ್ ನಿಲ್ದಾಣದ ಹತ್ತಿರ ಬಂಧಿಸಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

₹300 ಕೋಟಿ ಬಾಕಿ ತೀರಿಸಿದ್ದೇವೆ: ಸಿ.ಎಂ

ಪ್ರಜಾವಾಣಿ ವಾರ್ತೆ

ತುಮಕೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ರೈತರ ಸಾಲ ಮನ್ನಾ ಮಾಡಿ ಬಾಕಿ ಉಳಿಸಿದ್ದ ₹300 ಕೋಟಿಯನ್ನು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತೀರಿಸಬೇಕಾಯಿತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ 75ನೇ ವರ್ಷದ 'ಅಮೃತ ಮಹೋತ್ಸವ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಡವರಿಗೆ ಅಕ್ಕಿ ಕೊಡುವ ಯೋಜನೆಗೆ ಕೆ.ಎನ್.ರಾಜಣ್ಣ ಅವರು 'ಅನ್ನಭಾಗ್ಯ' ಹೆಸರು ಸೂಚಿಸಿದ್ದರು. ಯೋಜನೆ ಜಾರಿಗೆ ತರುವ ಸಮಯದಲ್ಲಿ ಅದೇ ಹೆಸರಿಡಲಾಯಿತು. ಸರ್ಕಾರಿ ಶಾಲಾ ಮಕ್ಕಳಿಗೆ 'ಶೂ ಭಾಗ್ಯ' ಕಲ್ಪಿಸಲು ರಾಜಣ್ಣ ಕಾರಣ ಎಂದು ಸ್ಮರಿಸಿದರು.

ಸಿದ್ದರಾಮಯ್ಯ ಮುಂದುವರಿಯಲಿ: ಸಚಿವ ರಾಜಣ್ಣ

ತುಮಕೂರು: ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಮುಂದುವರಿಯಬೇಕು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಪುನರುಚ್ಚರಿಸಿದರು.

ರಾಜಕೀಯ ಅಧಿಕಾರ ಇದ್ದರೆ ಮಾತ್ರ ಬಡವರ ಕೆಲಸ ಮಾಡಲು ಸಾಧ್ಯ. ಸಿದ್ದರಾಮಯ್ಯ ಅಧಿಕಾರದಲ್ಲಿ ಮುಂದುವರಿದರೆ ಬಡವರ ಕೆಲಸ ಮಾಡಲು ಸಾಧ್ಯವಾಗಲಿದೆ ಎಂದು ಸಲಹೆ ಮಾಡಿದರು. 'ಚುನಾವಣೆ ರಾಜಕಾರಣದಿಂದ ಹಿಂದೆ ಸರಿಯುವುದಾಗಿ ಈಗಾಗಲೇ ಹೇಳಿದ್ದೇನೆ. ಆದರೆ ಶಕ್ತಿ ಇರುವವರೆಗೂ ಜನರ ಸೇವೆ ಮಾಡುತ್ತೇನೆ. ಕೊನೆವರೆಗೂ ಜನ ಸೇವೆ ಮಾಡಿ, ನ್ಯಾಯಕ್ಕಾಗಿ ಹೋರಾಡುತ್ತೇನೆ' ಎಂದರು.





₹1,850 ಪ್ರತಿ ತಿಂಗಳು ಊಟದ ವೆಚ್ಚಕ್ಕೆ ವಿದ್ಯಾರ್ಥಿಗೆ ನೀಡುವ ಮೊತ್ತ

ಕಲಬುರಗಿ ಜಿಲ್ಲೆಯ ಜೇವರ್ಗಿ ಹೊರವಲಯದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಯಲ್ಲಿ ಪಾಠ ಹಾಗೂ ವಾಸ್ತವ್ಯ ಒಂದೇ ಕೊಠಡಿಯಲ್ಲೇ ನಡೆಯುತ್ತಿದೆ (ಎಡಚಿತ್ರ) ಇದೇ ಶಾಲೆಯಲ್ಲಿ ಕೊಠಡಿಗಳ ಕೊರತೆ ಕಾರಣಕ್ಕೆ ಡೆಸ್ಕ್‌ಗಳನ್ನು ಹಾಕದೇ ಕೋಣೆಯೊಂದರಲ್ಲಿ ಜೋಡಿಸಿಟ್ಟಿರುವುದು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಶಿಫಾರಸಿಗೆ ಮಣೆ ಹಾಕದೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಮಿತಿ

ಕ್ರೈಸ್ ಅಡಿಯಲ್ಲಿರುವ ವಸತಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪರೀಕ್ಷೆ ನಡೆಸಿ ಅಂಕಗಳ (ಮೆರಿಟ್) ಆಧಾರದಲ್ಲಿ ಪ್ರವೇಶ ನೀಡಲಾಗುತ್ತಿದೆ. ಉಳಿಕೆಯಾಗುವ ಸೀಟುಗಳನ್ನು ಸಮಾಜ ಕಲ್ಯಾಣ ಇಲಾಖೆಯ ಸ್ಥಳೀಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರ ಶಿಫಾರಸು ಪತ್ರದ ಮೇಲೆ ಯಾವುದೇ ಅಂಕಗಳನ್ನು ಪರಿಗಣಿಸದೆ ಪ್ರವೇಶ ನೀಡುತ್ತಿರುವ ಬಗ್ಗೆ ಆಕ್ಷೇಪಣೆಗಳು ವ್ಯಕ್ತವಾದ ಕಾರಣ 6ನೇ ತರಗತಿ ಮತ್ತು ಇತರ ಯಾವುದೇ ತರಗತಿಯಲ್ಲಿ ಖಾಲಿ ಇರುವ ಸೀಟುಗಳಿಗೆ ಮೀಸಲಾತಿಗಳ ಅನ್ವಯ ಆಯ್ಕೆ ಮಾಡಲು ಆಯಾ ಜಿಲ್ಲೆಗಳ ಉಪ ವಿಭಾಗಾಧಿಕಾರಿಯ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಸರ್ಕಾರ ಇದೇ ಮೇ 13ರಂದು ಸುತ್ತೋಲೆ ಹೊರಡಿಸಿದೆ. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಸಂಬಂಧಪಟ್ಟ ಶಾಲೆಯ ಪ್ರಾಂಶುಪಾಲರು, ಹಿರಿಯ ಶಿಕ್ಷಕರೊಬ್ಬರು ಸಮಿತಿಯ ಸದಸ್ಯರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿ ಇರಲಿದ್ದಾರೆ. ಶಿಫಾರಸುಗಳನ್ನು ಪರಿಗಣಿಸದೆ ಪಾರದರ್ಶಕವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ಆಕ್ಷೇಪಣೆ, ಲೋಪವಾದರೆ ಪ್ರಾಂಶುಪಾಲರನ್ನು ಹೊಣೆಯಾಗಿಸಿ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

ಹದಗೆಟ್ಟ ಹಾಸ್ಟೆಲ್ 'ಆರೋಗ್ಯ'

ಒಂದನೇ ಪುಟದಿಂದ..

ಹಳ ಹಿಡಿದ ಆಹಾರ ಸಾಮಗ್ರಿ. ರುಚಿ ಇಲ್ಲದ ಊಟ-ಉಪಹಾರ. ನೀರಿಲ್ಲ, ಕೊಳಚೆ ಸಮಸ್ಯೆ. ಕೆಲವೆಡೆ ಭದ್ರತೆಯೇ ಇಲ್ಲ. ಅಕ್ರಮ ವಸತಿ, ಗೂಂಡಾಗಿರಿ. ಭ್ರಷ್ಟಾಚಾರದ ಕೂಪದೊಳಗೆ ಸಿಲುಕಿ ದಿಕ್ಕೆಟ್ಟಿರುವ ಹಾಸ್ಟೆಲ್‌ಗಳ 'ಆರೋಗ್ಯ'ದ ಸ್ಥಿತಿಯಿದು!

ಶತಮಾನಗಳಿಂದ ಶಿಕ್ಷಣ ವಂಚಿತ ಸಮುದಾಯದ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದವರ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರವೇ ನಿರ್ಮಿಸಿ ಕೊಟ್ಟಿರುವ ವಿದ್ಯಾರ್ಥಿನಿಲಯಗಳು ಕೆಲವೆಡೆ ದನದ ಕೊಟ್ಟಿಗೆಗಿಂತ ಕಡೆಯಾಗಿವೆ. ಮಕ್ಕಳಿಗೆ ಹಾಸ್ಟೆಲ್ ಮೂಲಕ ಉಚಿತ ವಸತಿ ಹಾಗೂ ಶಿಕ್ಷಣ ನೀಡಲು ಸರ್ಕಾರ ಪ್ರತಿವರ್ಷ ನೂರಾರು ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ಉಣ್ಣಲು ಪೌಷ್ಟಿಕಾಂಶವಿರುವ ಗುಣಮಟ್ಟದ ಆಹಾರ, ತೊಡಲು ಒಳ್ಳೆಯ ಸಮವಸ್ತ್ರ, ಓದಲು-ಬರೆಯಲು ಪುಸ್ತಕ, ಪೆನ್ನು, ಓದಲು ಮೇಜು, ಕುರ್ಚಿ, ಹಲ್ಲುಜ್ಜಲು ಪೇಸ್ಟ್, ಸ್ನಾನಕ್ಕೆ ಸೋಪು, ತಲೆಗೆ ಎಣ್ಣೆ, ಮಲಗಲು ಹಾಸಿಗೆ-ದಿಂಬು, ನಿತ್ಯ ಕರ್ಮ ಪೂರೈಸಲು ಶೌಚಾಲಯ, ಸ್ನಾನಗೃಹ... ಹೀಗೆ ವಿದ್ಯಾರ್ಥಿಗಳಿಗೆ ಅನ್ನ-ಬಟ್ಟೆಯ ಯೋಚನೆ ಇಲ್ಲದಂತೆ ಪರಿಸರ ನಿರ್ಮಾಣ ಮಾಡಲಾಗುತ್ತಿದೆ ಎಂದು ಸರ್ಕಾರ ಪ್ರತಿಯೊಂದಕ್ಕೂ ಲೆಕ್ಕ ನೀಡುತ್ತದೆ. ಆದರೆ, ಭ್ರಷ್ಟ ವ್ಯವಸ್ಥೆಯ ಕಾರಣಕ್ಕೆ ಅಲ್ಲಿನ ಪರಿಸ್ಥಿತಿ ಹತ್ತಾರು ಲೋಪದೋಷಗಳಿಂದ ರೋಗಗ್ರಸ್ತಗೊಂಡು ನರಳುತ್ತಿದೆ. ಮೂಲಸೌಕರ್ಯ ಒದಗಿಸಿ, ಒಳ್ಳೆಯ ಊಟ ಕೊಡಿ ಎಂಬುದು ಈ ವಿದ್ಯಾರ್ಥಿಗಳ ನಿತ್ಯದ ಪ್ರತಿಭಟನೆಯ ಸೊಲ್ಲು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ. ಬಿ.ಆರ್. ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾಗಾಂಧಿ, ಹುತಾತ್ಮರ ವಸತಿ ಶಾಲೆ, ಶ್ರೀ ನಾರಾಯಣ ಗುರು ಹೀಗೆ ಒಟ್ಟು 860 ವಸತಿ ಶಾಲೆ, ಕಾಲೇಜುಗಳಿವೆ. ಈ ಶಾಲೆಗಳಲ್ಲಿ 2.43 ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಶೇ 50ಕ್ಕೂ ಹೆಚ್ಚು ವಸತಿ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿವೆ.

ಅನೇಕ ವಸತಿ ಶಾಲೆಗಳಲ್ಲಿ ಮಂಚ, ಹಾಸಿಗೆ, ದಿಂಬು, ಜಮಖಾನ, ಹೊದಿಕೆ, ಸೋಲಾರ ವಾಟರ್ ಹೀಟರ್, ವಾಟರ್ ಫಿಲ್ಟರ್, ಡೈನಿಂಗ್ ಟೇಬಲ್, ಸಿಸಿಟಿವಿ ಕ್ಯಾಮೆರಾ, ಕಂಪ್ಯೂಟರ್‌ಗಳು, ಪೀಠೋಪಕರಣಗಳು, ಆಟದ ಸಾಮಗ್ರಿಗಳು, ಅಡುಗೆ ಪಾತ್ರೆ ಸಾಮಗ್ರಿಗಳು ಇತ್ಯಾದಿಗಳ ಕೊರತೆ ಇದೆ. ಅನೇಕ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಕೊಠಡಿಗಳು ಇಲ್ಲದಿದ್ದರೂ ಕಂಪ್ಯೂಟರ್ ಶಿಕ್ಷಕರಿದ್ದಾರೆ. ಕಂಪ್ಯೂಟರ್ ಇಲ್ಲದೇ ಮಕ್ಕಳಿಗೆ ಕಂಪ್ಯೂಟರ್ ವಿಜ್ಞಾನ ವಿಷಯ ಪಾಠ ಮಾಡುತ್ತಿದ್ದಾರೆ. ಇದು ವಾಸ್ತವ ಎಂದು ಹೆಸರು ಹೇಳಲು ಬಯಸದ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

27 ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಅಚ್ಚರಿಯೆಂದರೆ, 2022ರ ನಂತರ ಪ್ರಾಂಶುಪಾಲರ ಹುದ್ದೆಗೆ ಬಡ್ತಿಯನ್ನೇ ನೀಡಿಲ್ಲ. 26 ಸ್ವತಂತ್ರ ಪದವಿ ಪೂರ್ವ ಕಾಲೇಜುಗಳಿಗೆ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಹುದ್ದೆಗಳು (ಪಿಸಿಎಂಬಿ ಮತ್ತು ಪಿಸಿಎಂಸಿಎಸ್) ಮಂಜೂರಾತಿ ಆಗಿವೆ. ಆದರೆ, ಮೇಲ್ದರ್ಜೆಗೇರಿಸಿದ 81 ವಸತಿ ಕಾಲೇಜುಗಳಿಗೆ ಒಂದೇ ಒಂದು ಪ್ರಾಂಶುಪಾಲ ಮತ್ತು ಉಪನ್ಯಾಸಕ ಹುದ್ದೆ ಮಂಜೂರಾತಿ ಆಗಿಲ್ಲ. 4,735 ಶಿಕ್ಷಕರ ಹುದ್ದೆಗಳು ಭರ್ತಿ ಆಗಿದೆ ಖಾಲಿ ಇದೆ ಎನ್ನುತ್ತವೆ ಇಲಾಖೆಯ ಮೂಲಗಳು.

ಶಾಲೆಗಳಲ್ಲಿ ಶಾಲಾ ಉಸ್ತುವಾರಿ ಸಮಿತಿಗಳು, ನಿರ್ವಹಣಾ ಸಮಿತಿಗಳು ಇಲ್ಲ. ಹೀಗಾಗಿ, ವಸತಿ ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಕುಸಿದಿದೆ. ಐದು ವರ್ಷಗಳಿಂದ ಸರಿಯಾದ ಪಾಠ ಪ್ರವಚನಗಳು ನಡೆಯುತ್ತಿಲ್ಲ. ಫಲಿತಾಂಶ ಪ್ರಮಾಣ ಕುಸಿದಿದೆ. ಪ್ರತಿ ವಿದ್ಯಾರ್ಥಿಗೆ ಊಟದ ವೆಚ್ಚಕ್ಕೆ ಸರ್ಕಾರ ತಿಂಗಳಿಗೆ ಕೇವಲ ₹ 1,850 ನೀಡುತ್ತಿದೆ. ಈ ಮೊತ್ತದಲ್ಲಿ ಡಯಟ್ ಚಾರ್ಟ್‌ನಲ್ಲಿರುವಂತೆ ಸಮತೋಲಿತ ಆಹಾರ ನೀಡಲು ಸಾಧ್ಯವಿಲ್ಲ ಎಂದೂ ಅಧಿಕಾರಿ ಹೇಳಿದರು.

ಪ್ರಾಂಶುಪಾಲರಿಗೆ ಮತ್ತು ಶಿಕ್ಷಕರಿಗೆ ಇಲ್ಲಿಯವರೆಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಜಿಲ್ಲಾ ತರಬೇತಿ ಕೇಂದ್ರ (ಡಿಟಿಐ) ವತಿಯಿಂದ ತರಬೇತಿಗಳು ಮತ್ತು ಕಾರ್ಯಾಗಾರಗಳು ಆಗಿಲ್ಲ. ಬಹಳಷ್ಟು ವಸತಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಪದವಿ ಮತ್ತು ಬಿ.ಇಡ್ ತರಬೇತಿ ಪಡೆದ ಶಿಕ್ಷಕರಿದ್ದು, ವಸತಿ ಶಾಲೆಗಳಲ್ಲಿ ಆರನೇ ತರಗತಿಯಿಂದಲೇ ಆಂಗ್ಲ ಮಾಧ್ಯಮದಲ್ಲಿ ಕಲಿಸಲಾಗುತ್ತಿದೆ. ಇದು ಕೂಡಾ ಬೋಧನೆಯ ಮೇಲೆ ಪರಿಣಾಮ ಉಂಟು ಮಾಡಿ, ಗುಣಮಟ್ಟ ಕುಸಿದಿದೆ ಎನ್ನುವುದು ಶಿಕ್ಷಕರ ಪ್ರತಿಪಾದನೆ.

ಶಿಕ್ಷಣ ಇಲಾಖೆಯಲ್ಲಿ ಸಿಆರ್‌ಸಿ, ಬಿಆರ್‌ಸಿ, ಇಒ, ಬಿಇಒ, ಡಿಡಿಪಿಐ ಮೂಲಕ ನಿರಂತರ ಪರಿಶೀಲನೆ, ಮೇಲ್ವಿಚಾರಣೆ, ತನಿಖೆ ಮತ್ತು ಉಸ್ತುವಾರಿ ಆಗುತ್ತಿದೆ. ಆದರೆ, ಪ್ರತ್ಯೇಕವಾಗಿ ನಡೆಯುವ ವಸತಿ ಶಾಲೆಗಳಲ್ಲಿ ಈ ರೀತಿಯಲ್ಲಿ ಯಾವುದೇ ಪರಿಶೀಲನೆಯ ಕೆಲಸ ಆಗುತ್ತಿಲ್ಲ. ಮೇಲುಸ್ತುವಾರಿ ನೋಡಿಕೊಳ್ಳಲು ಯಾರೂ ಇಲ್ಲ. ವಸತಿನಿಲಯಗಳ ನಿಲಯಪಾಲಕರುಗಳಿಗೆ ಮತ್ತು ಸ್ಟಾಫ್ ನರ್ಸ್‌ಗಳಿಗೆ ಇಲ್ಲಿಯವರೆಗೂ ಯಾವುದೇ ತರಬೇತಿ ನೀಡಿಲ್ಲ.

ವಸತಿ ಶಾಲೆಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸಲು ಕೇಂದ್ರೀಕೃತ ಟೆಂಡರ್ ವ್ಯವಸ್ಥೆಯನ್ನು ಮಾಡಲಾಗಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ವತಿಯಿಂದಲೇ ಟೆಂಡರ್ ಕರೆದು ಜಿಲ್ಲಾವಾರು ಏಜೆನ್ಸಿಯನ್ನು ನಿಗದಿ ಮಾಡಲಾಗುತ್ತಿದೆ. ಆದರೆ, ವಸತಿನಿಲಯಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸಲು ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯಲಾಗುತ್ತಿದೆ. ಜಿಲ್ಲಾಧಿಕಾರಿ ಟೆಂಡರ್ ಕರೆದು ಅಂತಿಮಗೊಳಿಸುತ್ತಾರೆ. ಸಮಾಜ ಕಲ್ಯಾಣ ಇಲಾಖೆಯ ವಸತಿನಿಲಯಗಳಿಗೆ ಸಂಬಂಧಿಸಿದಂತೆ ವಿಕೇಂದ್ರೀಕೃತ ವ್ಯವಸ್ಥೆ ಇದ್ದರೆ, ಕ್ರೈಸ್ ಅಡಿಯಲ್ಲಿರುವ ವಸತಿ ಶಾಲೆಗಳಿಗೆ ಸಂಬಂಧಿಸಿದಂತೆ ಕೇಂದ್ರೀಕೃತ ವ್ಯವಸ್ಥೆ ಇದೆ. ಒಂದೇ ಇಲಾಖೆಯ ಅಡಿಯಲ್ಲಿ ಈ ರೀತಿಯ ಕ್ರಮವಲ್ಲ ಎನ್ನುವುದು ಅಧಿಕಾರಿಗಳ ವಾದ.

ಆಹಾರ ಪದಾರ್ಥಗಳ ಬಿಲ್ಲುಗಳನ್ನು, ಶುಚಿ ಸಂಭ್ರಮ ಕಿಟ್, ಸ್ಟೇಶನರಿ, ಸಮವಸ್ತ್ರ ಮತ್ತು ಶೂ-ಸಾಕ್ಸ್‌ಗಳ ಬಿಲ್‌ಗಳನ್ನು ಕ್ರೈಸ್ ಕಚೇರಿಯಲ್ಲಿ ಅನುಮೋದಿಸಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರು ಇದ್ದರೂ ಅವರಿಗೆ ಯಾವುದೇ ರೀತಿಯ ಅಧಿಕಾರ ಇಲ್ಲ. ವಸತಿ ಶಾಲೆಗಳಲ್ಲಿ ಸಮಸ್ಯೆ ಆದಾಗ ಮಾತ್ರ ಇಲಾಖೆ ಅಧಿಕಾರಿಗಳನ್ನು ಕಳುಹಿಸಿ ಸಮಸ್ಯೆಗಳನ್ನು ನಿವಾರಿಸಲು ಬಳಸಿಕೊಳ್ಳಲಾಗುತ್ತಿದೆ. ಆದರೆ, ಯಾವುದೇ ಅಧಿಕಾರ, ಉಸ್ತುವಾರಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನೀಡಿಲ್ಲ ಎನ್ನುವುದು ಈ ಅಧಿಕಾರಿಗಳ ಆರೋಪ.

ಕೆಲವು ಜಿಲ್ಲೆಗಳಲ್ಲಿರುವ ವಸತಿ ನಿಲಯಗಳಲ್ಲಿ ವಾರ್ಡನ್‌ಗಳ ಕೊರತೆಯಿದೆ. 3-4 ವಸತಿ ನಿಲಯಗಳನ್ನು ಒಬ್ಬರೇ ನಿರ್ವಹಣೆ ಮಾಡಬೇಕದ ಸ್ಥಿತಿ ನಿರ್ಮಾಣವಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ, ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕನಕಗಿರಿ ತಾಲ್ಲೂಕುಗಳಲ್ಲಿ ವಿದ್ಯಾರ್ಥಿಗಳಿಗೆ ಗ್ರಂಥಾಲಯ, ಗುಣಮಟ್ಟದ ಆಹಾರ, ಹಾಸಿಗೆ, ಕಂಪ್ಯೂಟರ್ ಉತ್ತಮ ಸ್ಥಿತಿಯ ಸ್ವಂತ ಕಟ್ಟಡ ಇಲ್ಲ. ಕಿಟಕಿ ಬಾಗಿಲುಗಳು ಒಡೆದು ಹೋಗಿವೆ. ಮಳೆ ಬಂದರೆ ನೀರು ಒಳಗೆ, ವಿದ್ಯಾರ್ಥಿಗಳು ಹೊರಗೆ.

'ಹಾಗೆಂದು, ಸರ್ಕಾರ ವಸತಿಶಾಲೆಗಳಿಗೆ ಕಳಪೆ ಆಹಾರ ವಿತರಿಸುತ್ತದೆ ಎಂದು ಭಾವಿಸಬೇಕಾಗಿಲ್ಲ. ಈ ವಸತಿಶಾಲೆಗಳ ಆಹಾರಗಳಿಗಾಗಿ ವ್ಯಯಿಸುವ ಹಣ, ಹಲವು ಮಧ್ಯವರ್ತಿಗಳ ನಡುವೆ ಹಂಚಿಹೋಗುತ್ತದೆ. ಅದರೊಳಗೆ ವಸತಿ ಶಾಲೆಗಳ ಮುಖ್ಯಸ್ಥರಿಂದ ಹಿಡಿದು ವಾರ್ಡನ್, ಅಡುಗೆಯವರೂ ಶಾಮೀಲಾಗಿರುತ್ತಾರೆ. ಈ ಕುರಿತಂತೆ ವಿದ್ಯಾರ್ಥಿಗಳು ಯಾರ ಬಳಿ ದೂರು ನೀಡಬೇಕು? ಯಾರ ದೂರು ನೀಡಬೇಕೋ ಅವರೇ ಈ ಅವ್ಯವಹಾರಗಳಲ್ಲಿ ಶಾಮೀಲಾದರೆ? ಕಳಪೆ ಆಹಾರ, ಅಶುಚಿತ್ವ ಇತ್ಯಾದಿಗಳ ಕುರಿತಂತೆ ದೂರುಗಳನ್ನು ನೀಡಿದರೆ ವಿದ್ಯಾರ್ಥಿಯ ವಿರುದ್ಧವೇ ಕ್ರಮ ತೆಗೆದುಕೊಂಡಿರುವ ನಿದರ್ಶನಗಳು ಸಾಕಷ್ಟಿವೆ' ಎಂದು ಪೋಷಕರೊಬ್ಬರು ಅಭಿಪ್ರಾಯ ಹಂಚಿಕೊಂಡರು.

ಕುಷ್ಟಗಿ, ಯಲಬುರ್ಗಾದಲ್ಲಿರುವ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ಸೌಲಭ್ಯಗಳು ಸಿಗುತ್ತಿಲ್ಲ. ಅನೇಕ ಬಾರಿ ಹಾಸ್ಟೆಲ್ ವಿದ್ಯಾರ್ಥಿಗಳು ಪ್ರತಿಭಟಿಸಿದರೂ ಪ್ರಯೋಜನ ಆಗಿಲ್ಲ. ಮೊರಾರ್ಜಿ ಶಾಲೆಗಳು ಸ್ವಂತ ಕಟ್ಟಡ ಇಲ್ಲದೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಕೆಲವಡೆ ವಸತಿನಿಲಯಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ ಎನ್ನುವ ಆರೋಪವಿದೆ.

ಇನ್ನು ವಿದ್ಯಾರ್ಥಿ ನಿಲಯಗಳ ಪರಿಸ್ಥಿತಿಯೂ ಭಿನ್ನವೇನೂ ಅಲ್ಲ. ಸಮಾಜ ಕಲ್ಯಾಣ ಇಲಾಖೆಯಡಿ 1,972 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 1,87,200 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ವಿದ್ಯಾರ್ಥಿ ನಿಲಯಗಳಲ್ಲಿಯೂ ಮಂಚ, ಹಾಸಿಗೆ, ದಿಂಬು, ಜಮಖಾನೆ, ಹೊದಿಕೆ, ಸೋಲಾರ್ ವಾಟರ್ ಹೀಟರ್, ವಾಟರ್ ಫಿಲ್ಟರ್, ಡೈನಿಂಗ್ ಟೇಬಲ್, ಸಿಸಿಟಿವಿ ಕ್ಯಾಮೆರಾಗಳು, ಕಂಪ್ಯೂಟರ್‌ಗಳು, ಪೀಠೋಪಕರಣಗಳ ಇತ್ಯಾದಿಗಳ ಕೊರತೆ ಇವೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಸತಿನಿಲಯಗಳಿಗೆ ಅರ್ಜಿ ಸಲ್ಲಿಸಿದ ಅರ್ಹ ಎಲ್ಲ ವಿದ್ಯಾರ್ಥಿಗಳಿಗೆ ಸ್ಥಳಾವಕಾಶದ ಆಧಾರದಲ್ಲಿ ಪ್ರವೇಶ ನೀಡುವಂತೆ ಸರ್ಕಾರ 2018ರಲ್ಲಿ ಆದೇಶ ಹೊರಡಿಸಿತ್ತು. ಆ ನಂತರ ವಿದ್ಯಾರ್ಥಿನಿಲಯಗಳಲ್ಲಿ ಮೂಲಸೌಕರ್ಯಗಳ ಕೊರತೆ ಉಂಟಾಗಿದೆ. 100 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಇರುವ ವಿದ್ಯಾರ್ಥಿ ನಿಲಯಗಳಲ್ಲಿ 150 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಹೆಚ್ಚುವರಿ ವಾಸದ ಕೊಠಡಿಗಳು, ಡೈನಿಂಗ್ ಹಾಲ್, ಊಟ, ಸ್ನಾನಗೃಹಗಳು ಮತ್ತು ಶೌಚಾಲಯಗಳನ್ನು ಒದಗಿಸಿಲ್ಲ. ಇದು ಸಮಸ್ಯೆಗೆ ಕಾರಣವಾಗಿದೆ ಎನ್ನುವುದು ಅಧಿಕಾರಿಗಳ ಸಮರ್ಥನೆ.

ಆದರೆ, 186 ವಿದ್ಯಾರ್ಥಿ ನಿಲಯಗಳಲ್ಲಿ ವಾರ್ಡನ್ ಹುದ್ದೆಗಳು ಖಾಲಿ ಇವೆ. 73 ತಾಲ್ಲೂಕುಗಳಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳು ಖಾಲಿ ಇವೆ. 75ಕ್ಕಿಂತಲೂ ಹೆಚ್ಚು ತಾಲ್ಲೂಕುಗಳಲ್ಲಿ ಸಹಾಯಕ ನಿರ್ದೇಶಕರ ಕಚೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಹೊಸದಾಗಿ ರಚನೆಯಾಗಿವ ತಾಲ್ಲೂಕುಗಳ ಪೈಕಿ 35ಕ್ಕಿಂತಲೂ ಹೆಚ್ಚು ತಾಲ್ಲೂಕುಗಳಲ್ಲಿ ಸಹಾಯಕ ನಿರ್ದೇಶಕರ ಹುದ್ದೆ ಮಂಜೂರಾತಿ ಆಗಿಲ್ಲ. ಇನ್ನು ಗ್ರೂಪ್ 'ಸಿ' ವೃಂದದ 450 ಹೆಚ್ಚು ಹುದ್ದೆಗಳು ಖಾಲಿ ಇವೆ.

ಹೊಸದಾಗಿ 200ಕ್ಕೂ ಹೆಚ್ಚು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಅಗತ್ಯವಿದೆ. ಡಯಟ್ ಚಾರ್ಟ್‌ನಂತೆ ವಿದ್ಯಾರ್ಥಿಗಳಿಗೆ ಸಮತೋಲಿತ ಆಹಾರ ಒದಗಿಸಬೇಕಾದರೆ ವಿದ್ಯಾರ್ಥಿಗಳಿಗೆ ಮಾಸಿಕ ನೀಡುತ್ತಿರುವ ವೆಚ್ಚದ ಮೊತ್ತವನ್ನು ಹೆಚ್ಚಿಸಬೇಕು. ಜಿಲ್ಲಾ ಮಟ್ಟದಲ್ಲಿ ಜಂಟಿ ನಿರ್ದೇಶಕರ, ಉಪ ನಿರ್ದೇಶಕರ ಕಚೇರಿಗಳಲ್ಲಿ ಹೆಚ್ಚುವರಿ ಗ್ರೂಪ್ 'ಸಿ' ಹುದ್ದೆಗಳನ್ನು (ಕಚೇರಿ ವ್ಯವಸ್ಥಾಪಕರು. ಎಫ್‌ಡಿಎ, ಎಸ್‌ಡಿಎ ಜವಾನ) ಭರ್ತಿ ಮಾಡಬೇಕು ಎನ್ನುವುದು ಜಿಲ್ಲಾಮಟ್ಟದ ಅಧಿಕಾರಿಗಳ ಬೇಡಿಕೆ.

ಸರ್ಕಾರ ತಾನು ಘೋಷಿಸಿರುವ ಮೂಲಸೌಕರ್ಯಗಳನ್ನು ನೀಡುತ್ತಿಲ್ಲ ಎಂಬುದು ಒಂದೆಡೆಯಾದರೆ, ಇನ್ನೊಂದು ಕಡೆ ವಸತಿನಿಲಯಗಳಲ್ಲಿ ಅಕ್ರಮ ವಾಸ, ಗೂಂಡಾಗಿರಿ, ಖರೀದಿ ಟೆಂಡರ್‌ನಲ್ಲಿ ನಡೆಯುವ ಲಕ್ಷಾಂತರ ರೂಪಾಯಿ ಭ್ರಷ್ಟಾಚಾರ ಇಡೀ ವ್ಯವಸ್ಥೆಯನ್ನು ದಯನೀಯವಾಗಿಸಿದೆ. ಕೆಲವು ವಸತಿ ನಿಲಯಗಳಲ್ಲಿ ಭದ್ರತಾ ಸಿಬ್ಬಂದಿ ಇಲ್ಲ. ಹೀಗಾಗಿ ಭದ್ರತೆಯೇ ಇಲ್ಲ. ಈ ಎಲ್ಲ ಕಾರಣಗಳಿಗೆ ಬಹಳಷ್ಟು ಪೋಷಕರು ತಮ್ಮ ಮಕ್ಕಳನ್ನು ವಸತಿನಿಲಯಗಳಿಗೆ ಸೇರಿಸಲು ಹಿಂಜರಿಯುತ್ತಾರೆ.

'ಎಲ್ಲ ವಸತಿಶಾಲೆಗಳಿಗೂ ಕನಿಷ್ಠ ತಿಂಗಳಿಗೊಮ್ಮೆಯಾದರೂ ಉನ್ನತ ತಜ್ಞರು ಭೇಟಿ ನೀಡಬೇಕು. ಎಲ್ಲ ವಸತಿ ಶಾಲೆಗಳಲ್ಲಿ ಕಡ್ಡಾಯವಾಗಿ ದೂರು ಪೆಟ್ಟಿಗೆ ಇರಬೇಕು ಮತ್ತು ಆ ಪೆಟ್ಟಿಗೆಯ ಹೊಣೆಯನ್ನು ಹಿರಿಯ ಅಧಿಕಾರಿಗಳೇ ನಿಭಾಯಿಸಬೇಕು. ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಈ ಕ್ರಮಗಳನ್ನು ತೆಗೆದುಕೊಂಡರೆ ಮಾತ್ರ ವಸತಿ ನಿಲಯಗಳು ಮತ್ತು ವಸತಿ ಶಾಲೆಯ ಒಂದಿಷ್ಟಾದರೂ ಬದಲಾಗಬಹುದು. ಇವುಗಳನ್ನು ಆಶ್ರಯಿಸಿರುವ ವಿದ್ಯಾರ್ಥಿಗಳ ಬದುಕು–ಭವಿಷ್ಯ ಸುರಕ್ಷಿತ ಆಗಬಹುದು. ಇಲ್ಲವಾದರೆ, ಈ ವಸತಿ ಶಾಲೆಗಳೇ ಈ ಮಕ್ಕಳ ಭವಿಷ್ಯವನ್ನು ನುಂಗಿ ಹಾಕಬಹುದು' ಎನ್ನುವ ಆತಂಕ ಪೋಷಕರದ್ದು. ❖



ಬೆಳಗಾವಿಯ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ಆವರಣವಿದು. ದುರಸ್ತಿ ಆಗದ ಕಾರಣ ವಿದ್ಯಾರ್ಥಿಗಳನ್ನು ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

₹ 213 ಕೋಟಿಯಲ್ಲಿ ನಾನಾ ಸೌಲಭ್ಯ

ವಸತಿ ಶಾಲೆ, ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್, ಸಮವಸ್ತ್ರ, ಶೂ ಸಾಕ್ಸ್, ಟೈ, ಬೆಲ್ಟ್, ನೋಟ್ ಬುಕ್ ಮತ್ತು ಲೇಖನಾ ಸಾಮಗ್ರಿ, ಪಠ್ಯಪುಸ್ತಕ, ನ್ಯಾಪ್ಕಿನ್ ನೀಡಲಾಗುತ್ತಿದೆ. ಡೆಸ್ಕ್ ಕಂ ಬೆಂಚ್, ಟು–ಟಯರ್ ಕಾಟ್, ಹಾಸಿಗೆ, ದಿಂಬು, ಡೈನಿಂಗ್ ಟೇಬಲ್ ಮತ್ತು ಇತರ ಮೂಲ-ಸೌಲಭ್ಯಗಳನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಯ ಆಧಾರದಲ್ಲಿ ಒದಗಿಸ-ಲಾಗುತ್ತಿದೆ. ಬೇಡಿಕೆ ಇರುವ ವಸತಿ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಿಗೆ ಡೆಸ್ಕ್ ಕಂ ಬೆಂಚ್ (ಐವರು ಕುಳಿತುಕೊಳ್ಳುವ), ಟು –ಟಯರ್ ಮಂಚ, ಹಾಸಿಗೆ, ದಿಂಬು, ಹೊದಿಕೆ, ತಟ್ಟೆ, ಲೋಟಗಳು, ಪಾತ್ರೆ ಪರಿಕರಗಳು, ನೀರು ಶುದ್ಧೀಕರಣ ಘಟಕ, ಪಾಠೋಪಕರಣ, ನರ್ಸಿಂಗ್ ಕಿಟ್, ಗ್ರೈಂಡರ್, ಪ್ರಯೋಗಾಲಯ ಸಾಮಗ್ರಿ ಹಾಗೂ ಪ್ರಾಜೆಕ್ಟರ್ ಮತ್ತು ಸ್ಕ್ರೀನ್ ಸೇರಿದಂತೆ 13 ವಿವಿಧ ಬಗೆಯ ಪರಿಕರಗಳನ್ನು ಒಂದೇ ಬಾರಿಗೆ ಒದಗಿಸಲು ಒಟ್ಟು ₹ 213 ಕೋಟಿ ವೆಚ್ಚದಲ್ಲಿ ಟೆಂಡರ್ ಆಹ್ವಾನಿಸಿ ನೀಡಲು ಆರ್ಥಿಕ ಇಲಾಖೆ ಸಮಿತಿ ನೀಡಿದೆ.

ಗುಣಮಟ್ಟದ ಆಹಾರ ಪೂರೈಕೆಗೆ ವ್ಯವಸ್ಥೆ

ವಸತಿ ಶಾಲೆ, ಕಾಲೇಜು, ವಸತಿ ನಿಲಯಗಳಲ್ಲಿ ಒಳ್ಳೆ ಊಟ ಸಿಗುತ್ತಿಲ್ಲ ಎಂಬ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆ 'ಆಹಾರ ಪಾರದರ್ಶಕತೆ ಮತ್ತು ಸಾಮಾಜಿಕ ಪರಿಶೋಧನೆ' ವ್ಯವಸ್ಥೆಯನ್ನು ಜಾರಿಗೆ ತಂದಿದೆ. ವಿದ್ಯಾರ್ಥಿಗಳಿಗೆ ಬೆಳಗಿನ ಉಪಾಹಾರ, ಮಧ್ಯಾಹ್ನ ಊಟ, ರಾತ್ರಿ ಊಟಕ್ಕೆ ಏನನ್ನು ಕೊಡಲಾಗುತ್ತಿದೆ ಎಂಬುದರ ಬಗ್ಗೆ ವಾರ್ಡನ್‌ಗಳು ಚಿತ್ರ ತೆಗೆದು, ಅದನ್ನು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ (ಟ್ವಿಟರ್)ನಲ್ಲಿ ಶಿಕ್ಷಕರು, ವಾರ್ಡನ್‌ಗಳು ಪ್ರಕಟಿಸಬೇಕು. ಪೋಸ್ಟ್ ಪರಿಶೀಲಿಸಲಿರುವ ಅಧಿಕಾರಿಗಳು, ಮೆನು, ಶುಚಿತ್ವ, ಗುಣಮಟ್ಟ ಪರಿಶೀಲಿಸಿ ಜಿಲ್ಲೆಗಳಿಗೆ ರ‍್ಯಾಂಕಿಂಗ್ ಕೊಡುತ್ತಾರೆ. ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಅವರು ಈ ವ್ಯವಸ್ಥೆಗೆ ಮುನ್ನುಡಿ ಬರೆದಿದ್ದಾರೆ.

ಕಳೆದ ವರ್ಷ ನವೆಂಬರ್‌ನಲ್ಲಿ ಚಾಮರಾಜನಗರ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪ್ರಾಯೋಗಿವಾಗಿ ಈ ಪದ್ಧತಿಯನ್ನು ಜಾರಿಗೊಳಿಸಲಾಗಿತ್ತು. ಇದೇ ಜನವರಿಯಲ್ಲಿ ಬೆಂಗಳೂರು ನಗರ, ಉಡುಪಿ, ಮೈಸೂರು, ಬಾಗಲಕೋಟೆ, ಕೋಲಾರ, ಬೆಳಗಾವಿ, ತುಮಕೂರು ಜಿಲ್ಲೆಗಳಿಗೆ ವಿಸ್ತರಣೆಗೊಂಡಿತು. ಫೆ. 6ರಂದು ಆದೇಶ ಹೊರಡಿಸಿರುವ ಇಲಾಖೆಯು ಉಳಿದ 21 ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸಿದೆ.

'ಎಸಿ'ಗೆ ಅಧಿಕಾರ–ಅಧಿಕಾರಿ ವರ್ಗಕ್ಕೆ ಬೇಸರ

ಕ್ರೈಸ್ ಅಧೀನದಲ್ಲಿರುವ ವಸತಿ ಶಾಲೆ, ಕಾಲೇಜುಗಳ ಮೇಲ್ವಿಚಾರಣೆ ಹೊಣೆಯನ್ನು ಆಯಾ ಜಿಲ್ಲೆಗಳ ಉಪ ವಿಭಾಗಾಧಿಕಾರಿಗೆ ವಹಿಸಿ ರಾಜ್ಯ ಸರ್ಕಾರ ಇದೇ ಫೆ. 28ರಂದು ಆದೇಶ ಹೊರಡಿಸಿದೆ. ವಿದ್ಯಾರ್ಥಿಗಳ ಅಕಾಲಿಕ ಮರಣ, ಆತ್ಮಹತ್ಯೆ, ಅಪಘಾತ, ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ (ಪೋಕ್ಸೊ), ಕಳಪೆ ಆಹಾರ ಪೂರೈಕೆ, ವಿದ್ಯುತ್ ಸಮಸ್ಯೆ, ಕಲುಷಿತ ನೀರು, ಕುಡಿಯುವ ನೀರಿನ ಸಮಸ್ಯೆ, ಸ್ವಂತ ಕಟ್ಟಡ ಹೊಂದಿಲ್ಲದ ವಸತಿ ಶಾಲೆಗಳಿಗೆ ಸ್ಥಳೀಯ ನಿವೇಶನವನ್ನು ಗುರುತಿಸುವುದು ಇತ್ಯಾದಿ ವಿಚಾರಗಳಲ್ಲಿ ಆಡಳಿತಾತ್ಮಕ ಮತ್ತು ಆರ್ಥಿಕ ತೀರ್ಮಾನಗಳನ್ನು ತೆಗೆದುಕೊಳ್ಳುವ 'ಆಡಳಿತಾಧಿಕಾರಿ' ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ. ಶಾಲೆಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡುವುದು, ಆಹಾರ ಗುಣಮಟ್ಟ ಪರೀಕ್ಷಿಸುವುದು, ಕರ್ತವ್ಯಲೋಪ ಎಸಗಿದ ಸಿಬ್ಬಂದಿಯನ್ನು ಅಮಾನತುಗೊಳಿಸುವುದು, ತೆಗೆದುಹಾಕುವುದು, ಶಿಸ್ತು ಕ್ರಮಕ್ಕೆ ಶಿಫಾರಸು ಮಾಡುವ ತಪಾಸಣಾ ಪ್ರಾಧಿಕಾರಿ ಕೆಲಸವನ್ನೂ ನೀಡಲಾಗಿದೆ. ಅಲ್ಲದೆ, ಶಾಲಾ ನಿರ್ವಹಣೆಗೆ ಪ್ರಾಂಶುಪಾಲರಿಗೆ ನೀಡಿರುವ ಬ್ಯಾಂಕ್ ಖಾತೆಯನ್ನು ಹೊರತುಪಡಿಸಿ ಇತರೆ ಖರ್ಚು ವೆಚ್ಚಗಳಿಗೆ (₹ 5 ಲಕ್ಷದವರೆಗೆ) ಉಪ ವಿಭಾಗಾಧಿಕಾರಿ ಅನುಮೋದನೆ ನೀಡಬೇಕು. ಈವರೆಗೆ ತಮ್ಮ ಬಳಿ ಇದ್ದ ಕೆಲವು 'ಅಧಿಕಾರ'ಗಳನ್ನು ಉಪ ವಿಭಾಗಾಧಿಕಾರಿಗಳಿಗೆ ವಹಿಸಿದ ಸರ್ಕಾರ ನಡೆ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾಮಟ್ಟದ ಕೆಲವು ಅಧಿಕಾರಿಗಳಿಗೆ ಬೇಸರ ತರಿಸಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 22-6-2000

ಧ್ವಜಾರೋಹಣ: ಪ್ರತ್ಯೇಕ ರಾಜ್ಯ ಚಳವಳಿಗೆ ಹೊಸ ತಿರುವು

ಹುಬ್ಬಳ್ಳಿ–ಧಾರವಾಡ, ಜೂನ್ 21– ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ರಚನೆಯ ಬೇಡಿಕೆಗೆ ಒತ್ತಾಯಿಸಿ ಚಳವಳಿ ನಡೆಸುತ್ತಿರುವ ಧಾರವಾಡದ ವಕೀಲರ ಸಂಘ ಮತ್ತು ವಿವಿಧ ಸಂಘ-ಸಂಸ್ಥೆಗಳ ನೇತೃತ್ವದಲ್ಲಿ ಸರ್ಕಾರಿ ಕ್ರೀಡಾಂಗಣದಲ್ಲಿ ಇಂದು 'ಉತ್ತರ ಕರ್ನಾಟಕ ರಾಜ್ಯ'ದ ಧ್ವಜಾರೋಹಣ ನಡೆಯುವ ಮೂಲಕ ಚಳವಳಿ ಹೊಸ ತಿರುವು ಪಡೆಯಿತು.

ಹುಬ್ಬಳ್ಳಿಯಲ್ಲಿ ಪ್ರತ್ಯೇಕ ರಾಜ್ಯ ಬೇಡಿಕೆಯನ್ನು ವಿರೋಧಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ಮೆರವಣಿಗೆ ನಡೆಸಿದರು.

75 ವರ್ಷಗಳ ಹಿಂದೆ

ಗುರುವಾರ, 22-6-1950

ಹಿಂದೆ ನುಂಗಿದ್ದ ಚಿನ್ನದ ಬಳೆ ಕಕ್ಕಿದ

ಬೆಂಗಳೂರು, ಜೂನ್ 21– ಒಂದೂವರೆ ವರ್ಷದ ಹಿಂದೆ ನುಂಗಿದ್ದ ಚಿನ್ನದ ಬಳೆಯನ್ನು ಸಾಯುವ ಮುನ್ನ ವಾಂತಿ ಮಾಡಿದ ಪ್ರಸಂಗವೊಂದು ವರದಿಯಾಗಿದೆ. ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿ ಚಿಕ್ಕಪಟಾಲಿಗ ಎಂಬುವನು ಎದೆ ನೋವಿನಿಂದ ನಿನ್ನೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣ ಹೊಂದಿದನು.

ಸಾಯುವ ಮುನ್ನ ವಾಂತಿ ಮಾಡಿ ಸುಮಾರು ಒಂದೂವರೆ ಸವರನ್ ತೂಕದ ಚಿನ್ನದ ಬಳೆಯೊಂದನ್ನು ಕಕ್ಕಿದ. ಆ ಬಳೆಯನ್ನು ಒಂದೂವರೆ ವರ್ಷದ ಕೆಳಗೆ ನುಂಗಿದ್ದನಂತೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಜೂನ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದ್ವಾದಶಿ ಗಂ. 25-23 **ನಕ್ಷತ್ರ:** ಭರಣಿ ಗಂ. 17-39 **ಯೋಗ:** ಸುಕರ್ಮಾ ಗಂ. 16-57, ಮಿಥುನ ಮಾಸದ 08 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 1 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 – 06-00 **ಸೂರ್ಯೋದಯ:** 06-09 **ಸೂರ್ಯಾಸ್ತ:** 06-56 **ಮುಸ್ಲಿಂ ದಿನಾಂಕ:** 25 ಜುಲ್‌ಹಿಜಾ **ಅದೃಷ್ಟ ಸಂಖ್ಯೆ:** 7, 9

ಮೇಷ: ಮಕ್ಕಳ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆ ಕೇಳಿ ಆನಂದ ಆಗಲಿದೆ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರಲಿದೆ. ನೃತ್ಯಾಭ್ಯಾಸ ಮುಂದುವರೆಸುವಂತೆ ಅಧ್ಯಾಪಕರಿಂದ ಒತ್ತಾಯ ಹೆಚ್ಚುವುದು.

ವೃಷಭ: ನಿಮ್ಮ ಕನಸಿನ ಉದ್ಯೋಗವನ್ನು ಪಡೆಯಲು ಉನ್ನತ ಓದಿನೆಡೆಗೆ ಹೆಚ್ಚು ಗಮನ ನೀಡಬೇಕಾಗುವುದು. ಚಿತ್ರಕಲೆಯಲ್ಲಿನ ನಿಮ್ಮ ಆಸಕ್ತಿಯಿಂದಾಗಿ ಹೆಚ್ಚಿನ ಕಲಿಕೆಗೆ ವಿಶೇಷ ತರಗತಿಗೆ ಹೋಗಲು ತಂದೆಯಿಂದ ಒಪ್ಪಿಗೆ ದೊರಕಲಿದೆ.

ಮಿಥುನ: ಒಣಪ್ರತಿಷ್ಠೆಯಿಂದಾಗಿ ಸಂಬಂಧಗಳು ನುಚ್ಚುನೂರಾಗುವ ಪರಿಸ್ಥಿತಿ ತಂದುಕೊಳ್ಳಬೇಡಿ. ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ. ಇನ್ನೊಬ್ಬರ ಅಭಿಪ್ರಾಯ ಪಡೆದು ಚಿಕಿತ್ಸೆ ತೆಗೆದುಕೊಳ್ಳಿ.

ಕರ್ಕಾಟಕ: ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ ವೃದ್ಧಿಯಾಗುವುದು. ಮಕ್ಕಳ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯ ಹೆಚ್ಚಲಿದೆ. ಶ್ರೀ ಶಾರದೆಯನ್ನು ಸ್ತುತಿಸುವುದರಿಂದ ಮೇಧಾಶಕ್ತಿ ಅಭಿವೃದ್ಧಿಯಾಗುವುದು.

ಸಿಂಹ: ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆ ಇರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು. ಯಾವ ಯಾಗ ಮಾಡಿದರೂ ಗುರುವಿನ ಶಾಪ ಪರಿಹಾರ ಆಗುವುದಿಲ್ಲ. ಆದ್ದರಿಂದ ಗುರುಗಳಿಗೆ ನೋವಾಗುವ ಕೆಲಸವನ್ನು ಮಾಡದಿರಿ.

ಕನ್ಯಾ: ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವ ಪ್ರಯತ್ನದಿಂದಾಗಿ ಶ್ರೀಮಂತರಾಗಬಹುದು. ನೀವು ಮಕ್ಕಳ ಶ್ರೇಯಸ್ಸಿಗಾಗಿ ತೆಗೆದುಕೊಂಡ ಕೆಲ ಕಠಿಣ ನಿರ್ಧಾರಗಳಿಂದ ಇಂದು ಉತ್ತಮ ಫಲ ನಿರೀಕ್ಷಿಸಬಹುದು.

ತುಲಾ: ಕೆಲಸದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸುವಿರಿ. ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ, ನಿಮ್ಮ ಮನೋಭಿಲಾಷೆ ಈಡೇರುವುದು. ಆಟಿಕೆಗಳ ಮಾರಾಟದವರಿಗೆ ಉತ್ತಮ ಲಾಭವಿರುವುದು.

ವೃಶ್ಚಿಕ: ದಿನದಿಂದ ದಿನಕ್ಕೆ ಹೊಸ ಹೊಸ ಪ್ರಯತ್ನವಿರಲಿ. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಭಾಗವಹಿಸುವಿರಿ. ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ಸಿಗುವ ಮುನ್ಸೂಚನೆ ಸಿಗುತ್ತದೆ.

ಧನು: ಎಲ್ಲ ಕೆಲಸಗಳಲ್ಲೂ ಧೈರ್ಯದಿಂದ ಮುನ್ನಡೆಯನ್ನು ಸಾಧಿಸುವಿರಿ. ವೃತ್ತಿಯಲ್ಲಿ ನಿಮ್ಮ ಅನುಭವ ಹಾಗೂ ಪರಿಶ್ರಮ ಸೂಕ್ತ ಸಮಯದಲ್ಲಿ ಬೆಳಕಿಗೆ ಬಂದು, ಹಿರಿಯ ಅಧಿಕಾರಿಗಳಿಂದ ಪ್ರಶಂಸೆ ಸಿಗುವುದು.

ಮಕರ: ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿರುವವರು ಇಂದು ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ರೂಢಿಸಿಕೊಳ್ಳಬೇಕಾಗಬಹುದು. ಕೊಡುಕೊಳ್ಳುವ ವ್ಯವಹಾರಗಳಲ್ಲಿ ಲಾಭ ಹೆಚ್ಚಿ, ಕೆಲಸಗಳನ್ನು ವೃದ್ಧಿಸಿಕೊಳ್ಳುವಿರಿ.

ಕುಂಭ: ತಂದೆಯ ಮನಸ್ಸಿಗೆ ನೋವಾಗುವ ಸಂಗತಿಯು ಇಂದು ನಿಮ್ಮಿಂದ ನಡೆಯಲಿದೆ. ಕಬ್ಬಿಣ ಅಥವಾ ಗ್ಲಾಸ್‌ಗಳಿಂದ ಗಾಯಗಳಾಗುವ ಲಕ್ಷಣಗಳಿವೆ. ಅಂತಹ ಕೆಲಸಗಳಲ್ಲಿ ಹೆಚ್ಚು ಗಮನವಿರಲಿ. ಹಳದಿ ಬಣ್ಣವು ಅದೃಷ್ಟ ತರಲಿದೆ.

ಮೀನ: ಸ್ವ ಉದ್ಯೋಗಿಗಳಿಗೆ ವರಮಾನದಲ್ಲಿ ಉತ್ತಮ ಸುಧಾರಣೆಯು ಕಂಡು ಬರುವುದು. ಕೂಡಿಟ್ಟ ಹಣದಿಂದ ಬಟ್ಟೆ ಅಥವಾ ಬಂಗಾರ ಖರೀದಿಸುವ ಮನಸ್ಸಾಗುವುದು, ಅಂತೆಯೇ ಮಾಡುವುದರಿಂದ ಸಂತಸವಾಗಲಿದೆ.

ಪದಬಂಧ 6081


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮೊದಲ ಸಲ ನೋಡಿದ ಮಾತ್ರದಿಂದಲೇ ಉಂಟಾಗುವ ಪ್ರೀತಿ (4)
4.ಅಡುಗೆಗೆ ಬೇಕಾದ ಸಾಮಗ್ರಿ (4)
6.ಹೆಂಡತಿಯನ್ನು ಕಳೆದು ಕೊಂಡವನು (3)
7.ಈಕೆ ದುಡ್ಡಿಲ್ಲದವಳು (3)
8.ಜನುಮದಲ್ಲೇ ರಾಕ್ಷಸನನ್ನು ಹುಡುಕಿ! (3)
10.ಮನ ಕೊನೆಗಿದ್ದಾಗಿನ ಹತೋಟಿ (3)
12.ಧ್ವನಿಯ ನಡುಕ (3)
13.ಆ ಪಾತ್ರ ಮಾಡುತ್ತಿರುವವ ಅಯೋಗ್ಯ! (3)
14.ಕೃಷ್ಣನ ಮೊಮ್ಮಗ (4)
16.ಅಂತರಂಗವಲ್ಲದ ಪ್ರಕಟನೆ (4)

ಮೇಲಿಂದ ಕೆಳಕ್ಕೆ

1. ಚರ್ಮದ ಕೆಲಸಗಾರನಿವನು (3)
2.ತಿರುಮಲದಲ್ಲಿ ಖರೀದಿಸಿದ ಎಳ್ಳು (2)
3.ಆಮೇಲೆ ಕಾಣಿಸಿದ ಕೂರ್ಮ (2)
5.ಈತ ಮಾತಿನಲ್ಲಿ ನಿಪುಣ (4)
6.ದುಃಖವು ಈ ರೀತಿ ಬಂದಿದೆ (3)
9.ಲೋಕಕ್ಕೆಲ್ಲಾ ಪೂಜ್ಯನಾದವನು (4)
11.ಕ್ಷತ್ರಿಯನು ನೋಡುತ್ತಿರುವ ತಾರೆ (3)
13.ಮನ್ಮಥನ ಇನ್ನೊಂದು ಹೆಸರು (3)
14.ಈಕೆ ಹಿರಿಯ ಸಹೋದರಿ (2)
15.ನಿಯಮಕ್ಕೆ ಒಳಪಟ್ಟವ ತಿರುಗಿ ನಿಂತಿದ್ದಾನಲ್ಲಾ? (2)



6080ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಿತಾಮಹ 3.ಮನೋಬಲ
5.ಕೀಚಕ 6.ಕಸರತ್ತು
7.ದಳಪತಿ 9.ತರದೂದು
11.ಸಡಗರ 13.ಚಾಕರ
15.ಹರಿದಾರಿ 16.ಸದ್ಭಾವನೆ

ಮೇಲಿಂದ ಕೆಳಕ್ಕೆ:
1.ಪಿಕ 2.ಹಕೀಕತ್ತು
3.ಮಕರಂದ 4.ಲಕ್ಷ್ಮಿ
6.ಕಡಿತ 8.ತಿಮಿರ
10.ದುರಾಚಾರಿ 11.ಸಮರಸ
12.ದಾಹ 14.ಆನೆ

ಸುಡೊಕು 6465

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		5	8				1	
2								
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

6464 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ಒಂದೇ ಮನೆಯಲ್ಲಿ 8 ಹಾವಿನ ಮರಿಗಳು



ನಾಗರಹಾವಿನ ಮರಿಗಳು

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಅಗ್ರಗೋಣದ ಸುಬ್ರಾಯ ಆಗೇರ ಎಂಬುವರ ಮನೆ ಆವರಣದಲ್ಲಿ ಕಾಣಿಸಿಕೊಂಡ ನಾಗರಹಾವಿನ ಎಂಟು ಮರಿಗಳನ್ನು ಉರಗ ತಜ್ಞ ಅಶೋಕ ನಾಯ್ಕ ಅವರು ರಕ್ಷಿಸಿದರು. ನಂತರ ಸುರಕ್ಷಿತ ಸ್ಥಳಕ್ಕೆ ಒಯ್ದು ಬಿಡುಗಡೆ ಮಾಡಿದರು.

'ಮಳೆಗಾಲದಲ್ಲಿ ಮೊಟ್ಟೆಯಿಂದ ಮರಿಗಳು ಹೊರಬರುತ್ತವೆ. ಬಹುತೇಕ ಸಂದರ್ಭಗಳಲ್ಲಿ ಹಾವಿನ ಮರಿಗಳು ಬೇರೆ ಪ್ರಾಣಿಗಳಿಗೆ ಆಹಾರವಾಗುತ್ತವೆ ಅಥವಾ ಪ್ರಕೃತಿ ಸಹಜವಾಗಿ ಸಾಯುತ್ತವೆ. ಒಂದೇ ಸ್ಥಳದಲ್ಲಿ ಹೆಚ್ಚು ಹಾವುಗಳು ಕಂಡರೆ, ಹೆದರಬೇಕಿಲ್ಲ' ಎಂದು ಉರಗ ತಜ್ಞ ಅಶೋಕ ನಾಯ್ಕ ತಿಳಿಸಿದ್ದಾರೆ.

ನಗರಸಭೆ ಸದಸ್ಯ ಮನೆ: ಇ.ಡಿ ಶೋಧ

ಸಾಗರ (ಶಿವಮೊಗ್ಗ): ಇಲ್ಲಿನ ಇಕ್ಕೇರಿ ರಸ್ತೆಯಲ್ಲಿರುವ ನಗರಸಭೆ ಸದಸ್ಯ, ಕಾಂಗ್ರೆಸ್‌ನ ಟಿಪ್‌ಟಾಪ್ ಬಷೀರ್ ಅವರ ನಿವಾಸದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದ್ದಾರೆ.

9 ಅಧಿಕಾರಿಗಳ ತಂಡವು ಮುಂಜಾನೆಯಿಂದ ಅಂದಾಜು 18 ಗಂಟೆಗಳವರೆಗೆ ಬಷೀರ್ ಅವರಿಗೆ ಸೇರಿದ ಆಸ್ತಿ, ಬ್ಯಾಂಕ್ ಖಾತೆ ಮತ್ತಿತರ ವಿವರಗಳನ್ನು ಪರಿಶೀಲಿಸಿದೆ.

'ಈ ಹಿಂದೆ ಆದಾಯ ತೆರಿಗೆ ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸಿದ್ದರು. ಈಗ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಪಾಸಣೆಗೆ ಬಂದಿದ್ದರು. ಅವರು ಕೇಳಿದ ಎಲ್ಲಾ ದಾಖಲೆಗಳನ್ನು ಒದಗಿಸಿದ್ದೇನೆ. ಬುಧವಾರ ಮಂಗಳೂರಿನ ಇ.ಡಿ. ಕಚೇರಿಗೆ ಬರುವಂತೆ ಸೂಚಿಸಿದ್ದಾರೆ' ಎಂದು ಬಷೀರ್ 'ಪ್ರಜಾವಾಣಿ'ಗೆ ಶನಿವಾರ ಮಾಹಿತಿ ನೀಡಿದರು.

'ಪುರುಷ ಪ್ರಧಾನ ಧೋರಣೆ ಹಿಮ್ಮೆಟ್ಟಿಸಿ'

ಮೈಸೂರು: 'ಸಮಾಜದಲ್ಲಿರುವ ಪುರುಷ ಪ್ರಧಾನ ಧೋರಣೆಯನ್ನು ಸಾಮೂಹಿಕವಾಗಿ ಹಿಮ್ಮೆಟ್ಟಿಸುವುದರಿಂದ ಮಹಿಳೆಯರು ದೌರ್ಜನ್ಯ ಮುಕ್ತರಾಗಬಹುದು' ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ರಾಷ್ಟ್ರೀಯ ಉಪಾಧ್ಯಕ್ಷೆ ಡಾ.ಸುಧಾ ಕಾಮತ್ ಪ್ರತಿಪಾದಿಸಿದರು.



ಸುಧಾ ಕಾಮತ್

ನಗರದಲ್ಲಿ ಸಂಘಟನೆಯು ಶನಿವಾರದಿಂದ ಏರ್ಪಡಿಸಿರುವ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಕರ್ತೆಯರ ಶಿಬಿರದಲ್ಲಿ ಮಾತನಾಡಿ, 'ರಾಜ್ಯದಲ್ಲಿ ಭ್ರೂಣ ಹತ್ಯೆ, ಬಾಲ್ಯ ವಿವಾಹ, ಅಪ್ರಾಪ್ತ ವಯಸ್ಕರು ಗರ್ಭಧರಿಸುವ ಪ್ರಕರಣಗಳು ಹೆಚ್ಚುತ್ತಿವೆ. ಚಿಕ್ಕ ವಯಸ್ಸಿನಲ್ಲಿ ಗರ್ಭಧರಿಸುವ ಮಕ್ಕಳ ಸಾಮಾಜಿಕ ಬೆಳವಣಿಗೆ ಕುಂಠಿತವಾಗುತ್ತದೆ. ತಾಯಿಯ ಹೊಟ್ಟೆಯಲ್ಲಿರುವಾಗಲೇ ಹೆಣ್ಣು ಮಗುವನ್ನು ಚಿವುಟಿ ಹಾಕುವ ಕೆಲಸವೂ ನಡೆಯುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ಎಂ.ಎನ್.ಮಂಜುಳಾ ಮಾತನಾಡಿದರು. ಸಂಘಟನೆ ರಾಜ್ಯ ಕಾರ್ಯದರ್ಶಿ ಎಸ್.ಶೋಭಾ ಪಾಲ್ಗೊಂಡಿದ್ದರು. 20ಕ್ಕೂ ಹೆಚ್ಚು ಜಿಲ್ಲೆಗಳಿಂದ ನೂರಾರು ಪ್ರತಿನಿಧಿಗಳು, ವಿವಿಧ ಕ್ಷೇತ್ರದ ಮಹಿಳೆಯರು ಭಾಗವಹಿಸಿದ್ದರು.

'ನಷ್ಟ ವಸೂಲಿಗೆ ಆಯುಕ್ತರ ನೇಮಿಸಿ'

ಅಕ್ರಮ ಗಣಿಗಾರಿಕೆ ಕುರಿತು ಸಿಎಂಗೆ ಸುದೀರ್ಘ ಪತ್ರ ಬರೆದ ಎಚ್.ಕೆ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಗಣಿಗಾರಿಕೆಯಿಂದ ಬೊಕ್ಕಸಕ್ಕೆ ಆಗಿರುವ ₹ 1.50 ಲಕ್ಷ ಕೋಟಿ ನಷ್ಟ ವಸೂಲಿ ಮಾಡಲು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಒಬ್ಬ ವಸೂಲಾತಿ ಆಯುಕ್ತರನ್ನು ತಕ್ಷಣ ನೇಮಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾನೂನು ಸಚಿವ ಎಚ್.ಕೆ.ಪಾಟೀಲ ಪತ್ರ ಬರೆದಿದ್ದಾರೆ.


ರಾಜ್ಯದಲ್ಲಿ 2007ರಿಂದ 2011ರವರೆಗೆ ಅಧಿಕಾರಸ್ಥರು, ರಾಜಕಾರಣಿಗಳು, ಅಧಿಕಾರಶಾಹಿಗಳು ಅಕ್ರಮ ಕೂಟ ರಚಿಸಿಕೊಂಡು ಸಂಘಟಿತರಾಗಿ ನಡೆಸಿದ ಅಕ್ರಮ ಗಣಿಗಾರಿಕೆಯ ವಿವರಗಳನ್ನು ಏಳು ಪುಟಗಳ ಪತ್ರದಲ್ಲಿ ವಿವರಿಸಿರುವ ಪಾಟೀಲರು, 'ಈ ಪ್ರಕರಣಗಳ ತನಿಖೆಗೆ ತಕ್ಷಣ ವಿಶೇಷ ನ್ಯಾಯಾಲಯ ಸ್ಥಾಪನೆ ಆಗಬೇಕು' ಎಂದು ಸಲಹೆ ನೀಡಿದ್ದಾರೆ.

'ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಈಗಾಗಲೇ ತನಿಖೆ ಪೂರ್ಣಗೊಂಡು ನ್ಯಾಯಾಲಯದ ವಿಚಾರಣೆ ಹಂತದಲ್ಲಿರುವ ಪ್ರಕರಣಗಳಿಂದ 10 ಪಟ್ಟು ಹೆಚ್ಚಿನ ಪ್ರಕರಣಗಳ ತನಿಖೆ ಒಳಪಡಲೇಬೇಕು. ಅಂತಹ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು. ತಾಂತ್ರಿಕ, ಕಾನೂನಿನ ದೌರ್ಬಲ್ಯ, ವ್ಯವಸ್ಥೆಯ ಅನುಕೂಲತೆ ಮತ್ತು ಅನುಮಾನದ ಪ್ರಯೋಜನಗಳಿಂದ ಆರೋಪಿ ಪಾರಾಗಿ ಶಿಕ್ಷೆಯನ್ನು ತಪ್ಪಿಸಿಕೊಳ್ಳಬಹುದು. ಆದರೆ, ಅಕ್ರಮವಾಗಿ ಗಳಿಸಿದ ರಾಜ್ಯದ ಸಂಪತ್ತನ್ನು ಖಜಾನೆಗೆ ವಾಪಸ್ ತರದಿದ್ದರೆ ಅದು ವ್ಯವಸ್ಥೆಯ ವಿಡಂಬನೆ ಆದಂತಾಗಲಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ವಾಣಿಜ್ಯ ತೆರಿಗೆ ವಂಚನೆ, ಅಬಕಾರಿ ಸುಂಕದ ವಂಚನೆ, ಅರಣ್ಯ ಅಭಿವೃದ್ಧಿ ಸುಂಕ ವಂಚಿಸಿದ ಅನೇಕ ಪ್ರಕರಣಗಳ ತನಿಖೆ ಸುದೀರ್ಘ 16 ವರ್ಷ ನಂತರವೂ ಶೈಶವಾವಸ್ಥೆಯಲ್ಲಿದೆ. ತಮ್ಮ ನೇತೃತ್ವದಲ್ಲಿ 2013ರಿಂದ 2018ರ ಅವಧಿಯ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವ ಸಂಪುಟ ಉಪ ಸಮಿತಿ ಕೈಗೊಂಡ ಕ್ರಮಗಳಿಂದಾಗಿ 43ಕ್ಕೂ ಹೆಚ್ಚು ಪ್ರಕರಣಗಳ ಎಫ್‌ಐಆರ್ ಆಗಿ ತನಿಖೆ ನಡೆದು ಇನ್ನೂ ನ್ಯಾಯಾಲಯಗಳಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆ ನಡೆಯುತ್ತಿದೆ. 2013ರ ನ. 18ರಂದು ಒಂಬತ್ತು ಪ್ರಕರಣಗಳನ್ನು ಸರ್ಕಾರ ಸಿಬಿಐಗೆ ವಹಿಸಿತ್ತು. ಆ ಪೈಕಿ, ಆರು ಪ್ರಕರಣಗಳನ್ನು ತನಿಖೆ ಮಾಡಲು ಸಿಬಿಐ ನಿರಾಕರಿಸಿತ್ತು. ಮೂರು ಪ್ರಕರಣಗಳಲ್ಲಿ ಮಾತ್ರ ಸಿಬಿಐ ತನಿಖೆ ನಡೆದು ನ್ಯಾಯಾಲಯಗಳಿಗೆ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ಸಿಬಿಐ ತನಿಖೆಗೆ ನಿರಾಕರಿಸಿದ್ದ ಆರು ಪ್ರಕರಣಗಳನ್ನು ಅಕ್ರಮ ಗಣಿಗಾರಿಕೆ ತನಿಖೆಗೆ ಲೋಕಾಯುಕ್ತದಡಿ ನೇಮಿಸಿದ್ದ ವಿಶೇಷ ತನಿಖಾ ದಳಕ್ಕೆ ರಾಜ್ಯ ಸರ್ಕಾರವು ವಹಿಸಿದೆ' ಎಂದು ಪತ್ರದಲ್ಲಿ ಪಾಟೀಲರು ವಿವರಿಸಿದ್ದಾರೆ.

'ಅಕ್ರಮ ಗಣಿಗಾರಿಕೆ: ಶೇ 7ರಷ್ಟು ಪ್ರಕರಣ ಮಾತ್ರ ತನಿಖೆ'

ರಾಯಚೂರು: 'ಅಕ್ರಮ ಗಣಿಗಾರಿಕೆ ಕುರಿತು 12 ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಾಗಿದ್ದರೂ ಅದರಲ್ಲಿ ಶೇ 7ರಷ್ಟು ಮಾತ್ರ ತನಿಖೆಯಾಗುತ್ತಿವೆ. ಈ ಪೈಕಿ ಶೇಕಡ 0.2ರಷ್ಟು ಪ್ರಕರಣಗಳ ತೀರ್ಪು ಬಂದಿವೆ. ಹೀಗಾಗಿ ಪ್ರಕರಣಗಳಿಗೆ ತಾರ್ಕಿಕ ಅಂತ್ಯ ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಏಳು ಪುಟಗಳ ಪತ್ರ ಬರೆದಿದ್ದೇನೆ' ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.



ಎಚ್.ಕೆ. ಪಾಟೀಲ

ಸಚಿವ ಎನ್.ಎಸ್. ಬೋಸರಾಜು ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಿಬಿಐಗೆ 9 ಪ್ರಕರಣಗಳನ್ನು ವಹಿಸಲಾಗಿದೆ. ಅದರಲ್ಲಿ ಆರು ಪ್ರಕರಣಗಳ ತನಿಖೆ ಮಾಡುವುದಿಲ್ಲ ಎಂದು ಸಿಬಿಐ ಹೇಳಿದೆ. ಎಸ್‌ಐಟಿಯಲ್ಲಿ ಒಂದೂ ಪ್ರಕರಣ ತನಿಖೆಯಾಗಿಲ್ಲ. ರಾಜಕಾರಣಿಗಳು ಹಾಗೂ ಅಧಿಕಾರಿಗಳ ಅಕ್ರಮ ಕೂಟದಿಂದಾಗಿ ಸರ್ಕಾರಕ್ಕೆ ₹ 1.40 ಲಕ್ಷ ಕೋಟಿ ಹಾನಿಯಾಗಿರುವುದನ್ನು 2017–2018ರಲ್ಲಿ ರಚಿಸಿದ ನನ್ನ ಅಧ್ಯಕ್ಷತೆಯ ಸಮಿತಿಯು ಮಾಹಿತಿಯನ್ನು ಹೊರ ಹಾಕಿದೆ. ಇದನ್ನು ಗಂಭೀರವಾಗಿ ಪರಿಗಣಿಸುವ ಉದ್ದೇಶದಿಂದ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದೇನೆ' ಹೇಳಿದರು.

'ಸಾರ್ವಜನಿಕರ ಹಣ ಪೋಲಾಗುವುದು ನಿಲ್ಲಬೇಕು. ರಾಜ್ಯದ ಹಣ ಹಿತದೃಷ್ಟಿಯಿಂದ ಪ್ರಕರಣಗಳು ತಾರ್ಕಿಕ ಅಂತ್ಯವಾಗಬೇಕು. ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು ಎನ್ನುವ ಉದ್ದೇಶದಿಂದ ಪತ್ರ ಬರೆದಿದ್ದೇನೆ' ಎಂದು ಸಮರ್ಥಿಸಿಕೊಂಡರು.

ಬಿಜೆಪಿ ಅಧ್ಯಕ್ಷರ ಹೆಸರು ಶೀಘ್ರ ಅಂತಿಮ: ಬಿ.ವೈ. ವಿಜಯೇಂದ್ರ

ಪ್ರಜಾವಾಣಿ ವಾರ್ತೆ



ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಮರುಸೇರ್ಪಡೆ ಕುರಿತು ಪಕ್ಷ ಅಥವಾ ರಾಜ್ಯ ಮಟ್ಟದಲ್ಲಿ ಯಾವುದೇ ಚರ್ಚೆಗಳು ನಡೆದಿಲ್ಲ. ಅದರ ಮಾಹಿತಿಯೂ ಇಲ್ಲ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಘಟಕದ ಅಧ್ಯಕ್ಷ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಕುರಿತು ಪಕ್ಷವು ಶೀಘ್ರದಲ್ಲೇ ನಿರ್ಧರಿಸಲಿದೆ. ಜಿಲ್ಲಾ ಘಟಕದ ಅಧ್ಯಕ್ಷರು, ರಾಜ್ಯ ಮುಖಂಡರ ಅಭಿಪ್ರಾಯ ಪಡೆದು ಅಂತಿಮಗೊಳಿಸಲಿದೆ ಎಂದು ಹಾಲಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಪಕ್ಷದ ಕಾರ್ಯಕರ್ತನಾಗಿ ದುಡಿದಿದ್ದೇನೆ. 15 ತಿಂಗಳಿನಿಂದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ. ಕೇಂದ್ರ ಮತ್ತು ರಾಜ್ಯ ನಾಯಕರಿಗೆ ಎಲ್ಲ ಮಾಹಿತಿಯನ್ನು ನೀಡಿದ್ದೇನೆ. ಯಾರು ಅಧ್ಯಕ್ಷರಾಗಬೇಕು ಎನ್ನುವುದು ವರಿಷ್ಠರ ನಿರ್ಧಾರವಾಗಲಿದೆ' ಎಂದರು.

'ನಿಮ್ಮನ್ನೇ ಮುಂದುವರಿಸುವ ವಿಶ್ವಾಸವಿದೆಯೇ' ಎಂಬ ಪ್ರಶ್ನೆಗೆ, 'ನಮ್ಮದು ರಾಷ್ಟ್ರೀಯ ಪಕ್ಷ. ವರಿಷ್ಠರು ಯಾರನ್ನು ಮಾಡಿದರೆ ಒಳ್ಳೆಯದು ಎಂಬ ನಿರ್ಧಾರ ಮಾಡುತ್ತಾರೆ' ಎಂದು ಪ್ರತಿಕ್ರಿಯಿಸಿದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ರಾಜ್ಯ ರಾಜಕಾರಣದ ಪ್ರಸ್ತುತ ಸನ್ನಿವೇಶಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದೇನೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ನಡೆದ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದ್ದೇನೆ. ಪಕ್ಷಕ್ಕೆ ಮುಂದಿನ ದಿನಗಳಲ್ಲಿ ಉತ್ತಮ ಅವಕಾಶವಿದ್ದು, ಎಲ್ಲರೂ ಒಟ್ಟಾಗಿ ಹೋಗಲು ಸೂಚಿಸಿದ್ದಾರೆ. ಒಗ್ಗಟ್ಟಿದ್ದರೆ ಮಾತ್ರ ಪಕ್ಷದ ಕಾರ್ಯಕರ್ತರು, ಜನರು ಗೌರವ ಕೊಡುತ್ತಾರೆ ಎಂಬ ಕಿವಿಮಾತು ಹೇಳಿದ್ದಾರೆ' ಎಂದು ಮಾಹಿತಿ ನೀಡಿದರು.

ಎಡಕುಮೇರಿ: ಹಳಿಗೆ ಉರುಳಿದ ಬಂಡೆ


ಬೆಂಗಳೂರು– ಮಂಗಳೂರು ರೈಲು ಮಾರ್ಗ: 5 ಗಂಟೆ ಕಾದ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ಮಂಗಳೂರು: ಪಶ್ಚಿಮ ಘಟ್ಟದ ಮೂಲಕ ಹಾದುಹೋಗುವ ಬೆಂಗಳೂರು–ಮಂಗಳೂರು ರೈಲು ಮಾರ್ಗದ ಎಡಕುಮೇರಿ ಮತ್ತು ಶಿರಿಬಾಗಿಲು ನಿಲ್ದಾಣಗಳ ನಡುವೆ ರೈಲು ಹಳಿ ಮೇಲೆ ಶನಿವಾರ ಮುಂಜಾನೆ ಬಂಡೆಗಳು ಉರುಳಿದ್ದರಿಂದ ಮೂರು ರೈಲುಗಳ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಹಳಿಗೆ ಉರುಳಿದ್ದ ಬಂಡೆಗಳನ್ನು ತೆರವುಗೊಳಿಸಿ ರೈಲು ಸಂಚಾರ ಪುನರಾರಂಭವಾಗುವವರೆಗೆ ಪ್ರಯಾಣಿಕರು ಸುಮಾರು ಐದು ಗಂಟೆ ರೈಲು ನಿಲ್ದಾಣಗಳಲ್ಲಿ ಕಾಲಕಳೆದರು. ಬೆಂಗಳೂರು ಸೆಂಟ್ರಲ್ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ - ಕಣ್ಣೂರು ಎಕ್ಸ್‌ಪ್ರೆಸ್ (ನಂ16511) ರೈಲನ್ನು ಕಡಗರವಳ್ಳಿ ನಿಲ್ದಾಣದಲ್ಲಿ, ಬೆಂಗಳೂರು (ಸರ್. ಎಂ. ವಿಶ್ವೇಶ್ವರಯ್ಯ)- ಮುರ್ಡೇಶ್ವರ ಎಕ್ಸ್‌ಪ್ರೆಸ್ (ನಂ 16585) ಮತ್ತು ವಿಜಯಪುರ - ಮಂಗಳೂರು ಸೆಂಟ್ರಲ್ ಎಕ್ಸ್‌ಪ್ರೆಸ್ (07377) ರೈಲುಗಳನ್ನು ಸಕಲೇಶಪುರ ನಿಲ್ದಾಣದಲ್ಲಿ ನಿಲ್ಲಿಸಲಾಗಿತ್ತು.

'ಮುಂಜಾನೆ 4 ಗಂಟೆ 23 ನಿಮಿಷಕ್ಕೆ ಹಳಿಗೆ ಬಂಡೆ ಮತ್ತು ಮಣ್ಣು ಬಿದ್ದಿತ್ತು. ಅವುಗಳನ್ನು ತೆರವುಗೊಳಿಸಿ ರೈಲು ಪ್ರಯಾಣ ಪುನಾರಂಭಗೊಳಿಸುವಷ್ಟರಲ್ಲಿ ಬೆಳಿಗ್ಗೆ 9 ಗಂಟೆ 10 ನಿಮಿಷ ಆಗಿತ್ತು. ಆ ಬಳಿಕವೂ ಈ ಹಳಿಯಲ್ಲಿ ರೈಲು ಗಂಟೆಗೆ ಗರಿಷ್ಠ 20 ಕಿ.ಮೀ ವೇಗದಲ್ಲಿ ಸಂಚರಿಸಲು ಮಾತ್ರ ಅನುವು ಮಾಡಿಕೊಡಲಾಗಿತ್ತು' ಎಂದು ನೈರುತ್ಯ ರೈಲ್ವೆಯ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.



ಪಶ್ಚಿಮಘಟ್ಟದ ಮೂಲಕ ಹಾದುಹೋಗುವ ಬೆಂಗಳೂರು– ಮಂಗಳೂರು ರೈಲು ಮಾರ್ಗದಲ್ಲಿ ಎಡಕುಮೇರಿ ಮತ್ತು ಶಿರಿಬಾಗಿಲು ನಿಲ್ದಾಣಗಳ ನಡುವೆ ರೈಲ್ವೆ ಹಳಿಗೆ ಭಾರಿ ಗಾತ್ರದ ಬಂಡೆ ಶನಿವಾರ ಮುಂಜಾನೆ ಉರುಳಿರುವುದು
ಚಿತ್ರ: ಜಾನೆಕೆರೆ ಆರ್. ಪರಮೇಶ್

'ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣವನ್ನು ಬೆಳಿಗ್ಗೆ 9 ಗಂಟೆ 50 ನಿಮಿಷಕ್ಕೆ ತಲುಪಬೇಕಿದ್ದ ವಿಜಯಪುರ - ಮಂಗಳೂರು ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲು ಮಧ್ಯಾಹ್ನ 3 ಗಂಟೆ 14 ನಿಮಿಷಕ್ಕೆ, ಬೆಳಿಗ್ಗೆ 8.30ಕ್ಕೆ ತಲುಪಬೇಕಿದ್ದ ಬೆಂಗಳೂರು (ಸರ್.ಎಂವಿಶ್ವೇಶ್ವರಯ್ಯ)- ಮುರ್ಡೇಶ್ವರ ಎಕ್ಸ್‌ಪ್ರೆಸ್ ರೈಲು ಮಧ್ಯಾಹ್ನ 3 ಗಂಟೆ 14 ನಿಮಿಷಕ್ಕೆ ಹಾಗೂ ಬೆಳಿಗ್ಗೆ 7 ಗಂಟೆ 10 ನಿಮಿಷಕ್ಕೆ ತಲುಪಬೇಕಿದ್ದ ಬೆಂಗಳೂರು ಸೆಂಟ್ರಲ್ (ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ) - ಕಣ್ಣೂರು ಎಕ್ಸ್‌ಪ್ರೆಸ್ ರೈಲು ಮಧ್ಯಾಹ್ನ 1 ಗಂಟೆ 51 ನಿಮಿಷಕ್ಕೆ ತಲುಪಿದೆ' ಎಂದು ಅವರು ಮಾಹಿತಿ ನೀಡಿದರು.

'ರೈಲು ನಿಲ್ದಾಣದಲ್ಲಿ ತಾಸುಗಟ್ಟಲೆ ಕಾಯಬೇಕಾಗಿ ಬಂದಿದ್ದರಿಂದ ಪ್ರಯಾಣಿಕರಿಗೆ ಉಪಾಹಾರ, ಬಿಸ್ಕೆಟ್, ಚಹಾ ಹಾಗೂ ಕುಡಿಯುವ ನೀರು ಪೂರೈಕೆಗೆ ಇಲಾಖೆ ವತಿಯಿಂದಲೇ ವ್ಯವಸ್ಥೆ ಕಲ್ಪಿಸಿದ್ದೆವು' ಎಂದು ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಬಿರುಸಿನ ಮಳೆ

ಮಡಿಕೇರಿ: ನಗರದಲ್ಲಿ ಶನಿವಾರ ಸುಮಾರು 40 ನಿಮಿಷ ಕಾಲ ಅತ್ಯಂತ ಬಿರುಸಿನಿಂದ ಮಳೆ ಸುರಿಯಿತು. ಒಮ್ಮೆಗೆ ಸುರಿದ ಭಾರಿ ಮಳೆಗೆ ರಾಜಕಾಲುವೆಗಳು, ಚರಂಡಿಗಳು ಉಕ್ಕಿ ಹರಿದವು. ಶುಕ್ರವಾರವೂ ಪೊನ್ನಂಪೇಟೆ ತಾಲ್ಲೂಕಿನ ಟ.ಶೆಟ್ಟಿಗೇರಿ ಭಾಗದಲ್ಲಿ ಕೆಲವೇ ಗಂಟೆಗಳಲ್ಲಿ 10 ಸೆಂ. ಮೀ.ನಷ್ಟು ಭಾರಿ ಮಳೆ ಸುರಿದಿತ್ತು.

ಶ್ರೀಮಂಗಲದಲ್ಲಿ 8, ಬಾಳೆಲೆಯಲ್ಲಿ 5 ಸೆಂ.ಮೀ.ನಷ್ಟು ಮಳೆಯಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	118.60	18,387	1,343
ಹಾರಂಗಿ	2,859	2,850.32	2,607	1,166
ಕಬಿನಿ	2,284.00	2,277.79	12,681	12,000
ಹೇಮಾವತಿ	2,922	2,914	8,206	2,500
ಲಿಂಗನಮಕ್ಕಿ	1,819	1,773.70	19,034	4,439
ಸೂಪಾ (ಮೀ)	564	531.87		4,500
ಮಾಣಿ	595	580.60	2,658	-
ತುಂಗಭದ್ರಾ	1,633	1,612.09	38,007	193
ಮಲಪ್ರಭಾ	2,079.5	2,054.60	4,074	194
ಘಟಪ್ರಭಾ	2175	2,117.90	11,370	127
ಭದ್ರಾ *	186	150.8	9,760	1,276
ಆಲಮಟ್ಟಿ (ಮೀ)	519.6	515.55	63,669	55,440
ನಾರಾಯಣಪುರ (ಮೀ)	492.25	490.22	50,000	42,820

* ನೆಲಮಟ್ಟದಿಂದ

'ಅಧ್ಯಕ್ಷ ಸ್ಥಾನದಿಂದ ಇಳಿಸಲಾಗದು'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ನನ್ನನ್ನು ಟೀಕಿಸುವವರಿಗೆ ಆಡಳಿತಾತ್ಮಕ, ಕಾನೂನಾತ್ಮಕ ಜ್ಞಾನವಿಲ್ಲ. ಚುನಾಯಿತ ಪ್ರತಿನಿಧಿಯಾದ ನನ್ನನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಲಾಗದು. ಅಮಾನತು ಕೂಡ ಮಾಡಲಾಗದು. ದಿಢೀರ್‌ನೇ ಆಡಳಿತಾಧಿಕಾರಿ ನೇಮಕಾತಿ ಆಗದು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

'ಚುನಾವಣೆಯಲ್ಲಿ ಸೋಲಿಸಲು ಆಗದೇ, ನನ್ನನ್ನು ವಿನಾಕಾರಣ ಟೀಕಿಸುತ್ತಾರೆ. ಪರಿಷತ್ತಿನ ಅಧ್ಯಕ್ಷನಾಗಿ ಅಲ್ಲದೇ ವೈಯಕ್ತಿಕವಾಗಿಯೂ ಚಾರಿತ್ರ್ಯ ಹರಣ ಮಾಡುತ್ತಾರೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ನನ್ನ ವಿರುದ್ಧ ಆರೋಪಿಸುವವರು ಗಾಜಿನ ಮನೆಯಲ್ಲಿ ಕೂತಿದ್ದಾರೆ. ಯಾವ ಸಂಸ್ಥೆ ನನ್ನ ಅಕ್ರಮಗಳನ್ನು ಬೊಟ್ಟು ಮಾಡಿದೆ? ಯಾವ ಆರೋಪ ಸಾಬೀತಾಗಿದೆ? ಈ ಬಗ್ಗೆ ನಾನು ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದರು. 'ನನಗೆ ನೀಡಿದ್ದ ಸಚಿವ ಸ್ಥಾನ ಹಿಂಪಡೆದಿದ್ದು ಸರಿಯಲ್ಲ. ಅದು ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಅಪಮಾನಿಸಿದಂತೆ. 'ಇದೇ 29ರಂದು ನಡೆಯುವ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಮ್ಮೇಳನದ ಅಧ್ಯಕ್ಷರನ್ನು ಘೋಷಿಸಲಾಗುವುದು. ಅಂದು ಶ್ವೇತಪತ್ರ ಹೊರಡಿಸಲಾಗುವುದು' ಎಂದರು.




ಹಿಂದಿನ 2 ಸಮ್ಮೇಳನಗಳ ಲೆಕ್ಕಪತ್ರ ಪರಿಶೋಧನೆ 3 ಹಂತಗಳಲ್ಲಿ ನಡೆದಿದೆ. ಅದರಿಂದ ವಿಳಂಬವಾಗಿದೆ. ಎಲ್ಲಾ ಲೆಕ್ಕವನ್ನು ಕೊಡಬೇಕಾದದ್ದು ಜಿಲ್ಲಾಡಳಿತ ಹೊರತು ಪರಿಷತ್ತು ಅಲ್ಲ
ಮಹೇಶ ಜೋಶಿ, ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು

ಜುಲೈ 10ರೊಳಗೆ ಒಳಮೀಸಲು ಅನುಷ್ಠಾನಗೊಳಿಸಿ: ಆಂಜನೇಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಒಳಮೀಸಲಾತಿ ಜಾರಿಗಾಗಿ ನಡೆಯುತ್ತಿರುವ ಪರಿಶಿಷ್ಟ ಜಾತಿಗಳ ಸಮೀಕ್ಷಾ ಅವಧಿಯನ್ನು ಮತ್ತೆ ವಿಸ್ತರಣೆ ಮಾಡಬಾರದು. ಆದಷ್ಟು ಬೇಗ ಸರ್ಕಾರ ವರದಿ ಸ್ವೀಕರಿಸಬೇಕು. ವಿಶೇಷ ಅಧಿವೇಶನ ಕರೆದು ಜುಲೈ 10ರೊಳಗೆ ಒಳ ಮೀಸಲಾತಿ ಅನುಷ್ಠಾನ ಮಾಡಬೇಕು' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಒತ್ತಾಯಿಸಿದರು.



ಎಚ್. ಆಂಜನೇಯ

'ಮೇ 5ರಂದು ಸಮೀಕ್ಷಾ ಕಾರ್ಯ ಆರಂಭವಾಗಿದ್ದು, ಜೂನ್ 22ರವರೆಗೂ ವಿವಿಧ ಹಂತಗಳಲ್ಲಿ ನಡೆಯಲಿದೆ. ಈಗಾಗಲೇ ರಾಜ್ಯದಾದ್ಯಂತ ಶೇ 90ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಗಣತಿ ನಡೆದಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಶೇ 50ರಷ್ಟು ಮಾತ್ರ ಪೂರ್ಣಗೊಂಡಿರುವ ಕಾರಣ ಮತ್ತೆ ಅವಧಿ ವಿಸ್ತರಿಸುವ ಮಾತುಗಳು ಕೇಳಿ ಬರುತ್ತಿವೆ. ಈಗಿರುವ ಅವಧಿಯಲ್ಲಿ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಬೇಕು. ಮತ್ತೆ ಅವಧಿ ವಿಸ್ತರಣೆ ಮಾಡಿದರೆ ಒಳಮೀಸಲಾತಿ ಅನುಷ್ಠಾನ ತಡವಾಗಲಿದೆ' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಸಮೀಕ್ಷಾ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ರಾಜ್ಯದಾದ್ಯಂತ ವ್ಯಾಪಕ ಪ್ರಚಾರ ಮಾಡಿದ್ದೇವೆ. ಆದರೂ ಕೆಲವರು ಸಮೀಕ್ಷೆಯಿಂದ ಹೊರಗುಳಿದಿದ್ದಾರೆ. ರಾಜ್ಯದಾದ್ಯಂತ 12 ಸಾವಿರ ಜನರು ಆನ್‌ಲೈನ್‌ನಲ್ಲಿ ಸಮೀಕ್ಷೆಗೆ ಮುಂದಾಗಿ ಪ್ರಕ್ರಿಯೆ ಪೂರ್ಣಗೊಳಿಸದೇ ಹಾಗೆಯೇ ಬಿಟ್ಟಿದ್ದಾರೆ. ಅರ್ಧಗಂಟೆ ಸಮಯ ಕೊಟ್ಟು ಮಾಹಿತಿ ದಾಖಲಿಸುವಷ್ಟು ತಾಳ್ಮೆ ಜನರಿಗೆ ಇಲ್ಲವಾಗಿದೆ. ಅರ್ಧ ಪ್ರಕ್ರಿಯೆ ಪೂರ್ಣಗೊಳಿಸಿದವರ ಮಾಹಿತಿ ದೊರೆತಿದ್ದು, ಅವರಿಗೆ ಕರೆ ಮಾಡಿ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ' ಎಂದರು.

'ಬೆಂಗಳೂರು ವ್ಯಾಪ್ತಿಯಲ್ಲಿ ಸರ್ಕಾರಿ ಶಾಲಾ ಶಿಕ್ಷಕರ ಕೊರತೆ ಇರುವ ಕಾರಣ ಗಣತಿ ಕಾರ್ಯದಲ್ಲಿ ಪ್ರಗತಿ ಕಂಡುಬಂದಿಲ್ಲ. ಬಿಬಿಎಂಪಿ ಸಿಬ್ಬಂದಿಯ ನಿರ್ಲಕ್ಷ್ಯದಿಂದಾಗಿ ಸಮೀಕ್ಷೆ ಸಮರ್ಪಕವಾಗಿ ನಡೆದಿಲ್ಲ. ಬಾಕಿ ಉಳಿದಿರುವ ಜನರು ಸಮರೋಪಾದಿಯಲ್ಲಿ ಗಣತಿಯಲ್ಲಿ ಪಾಲ್ಗೊಳ್ಳುವಂತೆ ಜಾಗೃತಿ ಮೂಡಿಸಲಾಗಿದೆ. ಸಮೀಕ್ಷೆಗಾಗಿ ಮತ್ತಷ್ಟು ಸಮಯ ನೀಡದೇ ಸರ್ಕಾರ ಶೀಘ್ರ ವರದಿ ಸ್ವೀಕರಿಸಿ, ಕಾನೂನು ರೂಪಿಸಿ ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿದರು.

'ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ಒಳಮೀಸಲಾತಿ ಜಾರಿಗೊಳಿಸುವ ದಿಸೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬದ್ಧತೆ ತೋರಿಸಿದ್ದಾರೆ' ಎಂದರು.

ಯಕ್ಷಗಾನ ಕಲಾವಿದ ಮುಖ್ಯಪ್ರಾಣ ಕಿನ್ನಿಗೋಳಿ ಇನ್ನಿಲ್ಲ

ಮಂಗಳೂರು: ಯಕ್ಷಗಾನದ ಹಾಸ್ಯ ಕಲಾವಿದ ಮುಖ್ಯಪ್ರಾಣ ಕಿನ್ನಿಗೋಳಿ (84) ಅವರು ಶನಿವಾರ ನಿಧನರಾದರು.



ರುಕ್ಕಯ್ಯ ಶೆಟ್ಟಿಗಾರ್ ಮತ್ತು ಸೇಸಿ ಶೆಟ್ಟಿಗಾರ್ ಅವರ ಪುತ್ರರಾದ ಮುಖ್ಯಪ್ರಾಣ 1941ರಲ್ಲಿ ಜನಿಸಿದ್ದರು. ಶೀಮಂತೂರಿನಲ್ಲಿ ವಾಸವಾಗಿದ್ದ ಅವರು ಕಿನ್ನಿಗೋಳಿಯ ಗೋಳಜೋರದ ದುರ್ಗಾಪರಮೇಶ್ವರಿ ಯಕ್ಷಗಾನ ಕಲಾಸಂಘದಲ್ಲಿ ಹವ್ಯಾಸಿ ವೇಷಧಾರಿಯಾಗಿ ಸೇವೆ ಆರಂಭಿಸಿದ್ದರು. ಶೀಮಂತೂರು ನಾರಾಯಣ ಶೆಟ್ಟಿ ಇವರ ಗುರುಗಳು. ಮಿಜಾರು ಅಣ್ಣಪ್ಪ ಅವರಿಂದಲೂ ಮಾರ್ಗದರ್ಶನ ಪಡೆದ ಮುಖ್ಯಪ್ರಾಣ ಅವರು ತೆಂಕು ಹಾಗೂ ಬಡಗುತಿಟ್ಟುಗಳೆರಡರಲ್ಲೂ ಪಾತ್ರ ನಿರ್ವಹಿಸಿದ್ದರು.

ಚೆಲುವೆ ಚಿತ್ರಾವತಿಯ ಅಡುಗೂಲಜ್ಜಿ, ಶೂದ್ರ ತಪಸ್ವಿನಿಯ ರಂಗಾಚಾರಿ, ಕಾಂಚನಶ್ರೀಯ ಪ್ರೇತ, ಸ್ವಪ್ನ ಸಾಮ್ರಾಜ್ಯದ ಶೂರಸೇನ, ಕಲಿ ಕ್ರೋಧನದ ಮಡಿವಾಳ ಮೊದಲಾದ ವೇಷಗಳು ಮುಖ್ಯಪ್ರಾಣರಿಗೆ ಖ್ಯಾತಿ ತಂದುಕೊಟ್ಟ ಪಾತ್ರಗಳು. ರಾಜ್ಯೋತ್ಸವ ಪ್ರಶಸ್ತಿ, ದೋಗ್ರ ಪೂಜಾರಿ ಪ್ರಶಸ್ತಿ ಸೇರಿ ಅನೇಕ ಪ್ರಶಸ್ತಿ ಸಂದಿವೆ.

ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್‌ನ ನೇತೃತ್ವದಲ್ಲಿ ಪ್ರತಿಭಟನೆ

'ಶೇ 20ರಷ್ಟು ಲಾಭಾಂಶ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಲ್ಲರೆ ಮದ್ಯ ಮಾರಾಟದ ಮೇಲಿನ ಲಾಭಾಂಶವನ್ನು ಶೇಕಡ 20ರಷ್ಟು ನೀಡಬೇಕು. ಸನ್ನದು ಶುಲ್ಕದ ಮೇಲೆ ವಿಧಿಸುತ್ತಿರುವ ಶೇ 15ರಷ್ಟು ಹೆಚ್ಚುವರಿ ಶುಲ್ಕಕ್ಕೆ 2025–26ನೇ ಸಾಲಿನಿಂದ ವಿನಾಯಿತಿ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್‌ನ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. '2025-26ನೇ ಸಾಲಿನ ಸನ್ನದು ಶುಲ್ಕವನ್ನು ದುಪ್ಪಟ್ಟುಗೊಳಿಸುವಂತೆ ಮೇ 15ರಂದು ಹೊರಡಿಸಿರುವ ಕರಡು ಅಧಿಸೂಚನೆ ಪರಿಷ್ಕರಿಸಬೇಕು. 2016 ರಿಂದ 2025ರವರೆಗೆ 2,936 ಸನ್ನದುಗಳು ಹೆಚ್ಚಾಗಿದ್ದು, ಮದ್ಯ ಹಾಗೂ ಬಿಯರ್ ಮಾರಾಟ ಮಾತ್ರ ಹೆಚ್ಚಾಗಿಲ್ಲ' ಎಂದು ಫೆಡರೇಷನ್‌ನ ರಾಜ್ಯ ಘಟಕದ ಅಧ್ಯಕ್ಷ ಎಸ್. ಗುರುಸ್ವಾಮಿ ತಿಳಿಸಿದರು.

'2016–17ರಲ್ಲಿ ಎಲ್ಲ ವರ್ಗದ ಸನ್ನದುಗಳಿಂದ ಒಟ್ಟು ₹591.33 ಕೋಟಿ ಶುಲ್ಕ ಸಂಗ್ರಹವಾಗಿತ್ತು. 2024–25ರಲ್ಲಿ ₹820 ಕೋಟಿಗೂ ಹೆಚ್ಚು ಶುಲ್ಕ ಸಂಗ್ರಹವಾಗಿದೆ. ಅಬಕಾರಿ ರಾಜಸ್ವ ಸಂಗ್ರಹಕ್ಕೆ ಸನ್ನದು ಶುಲ್ಕವನ್ನು ಪರಿಗಣಿಸಬಾರದು. ಕೇವಲ ಅಬಕಾರಿ ಮತ್ತು ಹೆಚ್ಚುವರಿ ಅಬಕಾರಿ ಶುಲ್ಕವನ್ನು ಮಾತ್ರ ರಾಜಸ್ವ ಸಂಗ್ರಹಕ್ಕೆ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

'ಒಂಬತ್ತು ವರ್ಷಗಳಲ್ಲಿ ಕಟ್ಟಡದ ಬಾಡಿಗೆ, ನೌಕರರ ಸಂಬಳ, ವಿದ್ಯುತ್ ಶುಲ್ಕ ಹೆಚ್ಚಾಗುತ್ತಿದೆ. ಶೇ 10ರಷ್ಟು ಲಾಭಾಂಶದಲ್ಲಿ ಸನ್ನದು ನಿರ್ವಹಿಸಲು ಆಗುತ್ತಿಲ್ಲ. ಆದ್ದರಿಂದ ಲಾಭಾಂಶವನ್ನು ಶೇ 20ರಷ್ಟು ಹೆಚ್ಚಿಸಬೇಕು. 2025–26ನೇ ಸಾಲಿನ ಸನ್ನದು ಶುಲ್ಕವನ್ನು ಎರಡು ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ಬೇಡಿಕೆಗಳನ್ನು ಈಡೇರಿಸುವಂತೆ ಅಬಕಾರಿ ಇಲಾಖೆಯ ಜಂಟಿ ಆಯುಕ್ತ ಟಿ. ನಾಗರಾಜಪ್ಪ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿದರು.

ಪ್ರತಿಭಟನೆಯಲ್ಲಿ ಫೆಡರೇಷನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಗೋವಿಂದರಾಜ್ ಹೆಗ್ಡೆ, ಕೋಶಾಧಿಕಾರಿ ಟಿ.ಎಂ. ಮೆಹರ್‌ವಾಡೆ, ವಿಭಾಗೀಯ ಅಧ್ಯಕ್ಷ ಕರುಣಾಕರ ಹೆಗ್ಡೆ, ಜಿ. ರಾಮುಲು ಬಳ್ಳಾರಿ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಪ್ರತಿಭಟನಕಾರರು ಭಾಗವಹಿಸಿದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ನಡೆದ ಪ್ರತಿಭಟನೆ ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಅಬಕಾರಿ ರಾಜಸ್ವ ಸಂಗ್ರಹಕ್ಕೆ ಸನ್ನದು ಶುಲ್ಕ ಪರಿಗಣನೆ ಬೇಡ: ಆಗ್ರಹ
- ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಕಾರರು

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹24500-25000
ಬೆಳ್ತಂಗಡಿ	₹12000-21000
ಮಧುಗಿರಿ	₹15000-22500
ಪುತ್ತೂರು	₹6000-23500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1390 (1390)
ಸೋಯಾ (ರಿಫೈನ್ಡ್)	₹1205 (1205)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1190 (1190)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹196
ಆರ್‌ಎಸ್‌ಎಸ್-5	₹190
ಗುಡ್ ಲಾಟ್	₹179

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹585
	12 ಕ್ಕೆ	₹78
ಮೈಸೂರು:	100 ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹225-544
ದ್ವಿತಳಿ (ಬಿ.ವಿ)	₹403-680

ಅಡಿಕೆ ಧಾರಣೆ

ಚಿತ್ರದುರ್ಗ		ಪುತ್ತೂರು			
ಅಪಿ	54119-54529	ಕೋಕ	20000-30500	ಬಿಳಿಗೋಟು	14100-31699
ಬೆಟ್ಟೆ	29500-29900	ಹೊಸತು	26000-47500	ಚಾಲಿ	35018-42099
ಕೆಂಪುಗೋಟು	20600-21000	ಶಿರಸಿ		ರಾಶಿ	42609-48418
ರಾಶಿ	53649-54069	ಬೆಟ್ಟೆ	28699-37269	ಚನ್ನಗಿರಿ ರಾಶಿ	44579-57299

ಇರಾನ್‌ನ ಮೂವರು ಕಮಾಂಡರ್‌ಗಳ ಹತ್ಯೆ

ಮುಂದುವರಿದ ಸಂಘರ್ಷ ● ಇಸ್‌ಫಹಾನ್ ಅಣು ಸ್ಥಾವರದ ಮೇಲೆ ಎರಡನೇ ಬಾರಿ ದಾಳಿ ಮಾಡಿದ ಇಸ್ರೇಲ್

ಟೆಲ್ ಅವೀವ್/ ಜೆರುಸಲೇಮ್ (ಎಪಿ): ಇಸ್ರೇಲ್ ಮತ್ತು ಇರಾನ್ ನಡುವಿನ ಸೇನಾ ಸಂಘರ್ಷ ಎರಡನೇ ವಾರವೂ ಮುಂದುವರಿದಿದ್ದು, ಉಭಯ ದೇಶಗಳಿಂದ ಶನಿವಾರವೂ ಕ್ಷಿಪಣಿ ಮತ್ತು ಡ್ರೋನ್‌ಗಳ ದಾಳಿಗಳು ನಡೆದಿವೆ.

ವ್ಯಾಪಕ ಬಾಂಬ್ ದಾಳಿಯಲ್ಲಿ ಇರಾನ್‌ನ ಹಿರಿಯ ಮಿಲಿಟರಿ ಅಧಿಕಾರಿ ಸೇರಿದಂತೆ ಮೂವರು ಕಮಾಂಡರ್‌ಗಳನ್ನು ಹತ್ಯೆ ಮಾಡಲಾಗಿದೆ ಮತ್ತು ಇರಾನಿನ ಅಣು ಸಂಶೋಧನಾ ಕೇಂದ್ರದ ಮೇಲೂ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಇರಾನ್ ಸೇನೆಯ ಉನ್ನತ ಅಧಿಕಾರಿ ಸಯೀದ್ ಇಜಾದಿ, ಕುದ್ಸ್ ಪಡೆಯ ಕಮಾಂಡರ್ ಬೆಹನಾಮ್ ಸೆಹ್ರಿಯಾರಿ ಹಾಗೂ ಅಮಿನ್‌ಪೌರ್ ಜುಡಾಕಿ ಹತರಾದ ಕಮಾಂಡರ್‌ಗಳು ಎಂದು ಅದು ತಿಳಿಸಿದೆ.

ಹಮಾಸ್‌ಗೆ ನೆರವು ನೀಡಿದ್ದ ಇಜಾದಿ: ‘2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ನಡೆಸಿದ ದಾಳಿಗೆ ಇಜಾದಿ ಆರ್ಥಿಕ ಮತ್ತು ಶಸ್ತ್ರಾಸ್ತ್ರದ ನೆರವು ನೀಡಿದ್ದರು. ಅವರನ್ನು ಕೋಮ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಕೊಲ್ಲಲಾಗಿದೆ. ನಮ್ಮ ಫೈಟರ್ ಜೆಟ್‌ಗಳು ಯಶಸ್ವಿಯಾಗಿ ಈ ಕಾರ್ಯ ಮಾಡಿವೆ’ ಎಂದು ಇಸ್ರೇಲ್ ಸೇನೆ ಮಾಹಿತಿ ನೀಡಿದೆ.

ಕುದ್ಸ್ ಪಡೆಯ ಕಮಾಂಡರ್ ಬೆಹನಾಮ್ ಸೆಹ್ರಿಯಾರಿ ಪಶ್ಚಿಮ ಇರಾನ್‌ನಲ್ಲಿ ಕಾರಿನಲ್ಲಿ ಸಾಗುತ್ತಿದ್ದಾಗ ಹತ್ಯೆ ಮಾಡಲಾಗಿದೆ. ಇರಾನ್ ಡ್ರೋನ್ ಪಡೆಯ ಕಮಾಂಡರ್ ಜುಡಾಕಿ ಅನ್ನೂ ರಾತ್ರಿ ದಾಳಿ ಮೂಲಕ ಕೊಲ್ಲಲಾಗಿದೆ ಎಂದು ಸೇನೆ ವಿವರಿಸಿದೆ.



ಇರಾನ್‌ನ ವೈಮಾನಿಕ ದಾಳಿಯಿಂದಾಗಿ ಬೀಟ್ ಶೆಯಾನ್ ನಗರದಲ್ಲಿ ಕಟ್ಟಡಗಳಿಗೆ ಆಗಿರುವ ಹಾನಿಯನ್ನು ಇಸ್ರೇಲ್ ಯೋಧರು ಶನಿವಾರ ಪರಿಶೀಲಿಸಿದರು

ಎಎಫ್‌ಪಿ ಚಿತ್ರ

> ನಿರಂತರ ದಾಳಿ ಮೂಲಕ ಅಣ್ವಸ್ತ್ರಗಳನ್ನು ಹೊಂದಬೇಕೆಂಬ ಇರಾನ್‌ನ ಯೋಜನೆಗಳನ್ನು ಕನಿಷ್ಠ 2–3 ಮೂರು ವರ್ಷ ವಿಳಂಬವಾಗುವಂತೆ ಮಾಡಿದ್ದೇವೆ
> **ಗಿಡಿಯಾನ್ ಝಾರ್**
> ಇಸ್ರೇಲ್ ವಿದೇಶಾಂಗ ಸಚಿವ

> ಇರಾನ್–ಇಸ್ರೇಲ್ ನಡುವಿನ ಸಂಘರ್ಷ ಹೆಚ್ಚಳವು ಪಶ್ಚಿಮ ಏಷ್ಯಾದಲ್ಲಿ ನಿರಾಶ್ರಿತರ ಸಮಸ್ಯೆಗೆ ದಾರಿ ಮಾಡಿಕೊಡುವಂತಾಗಬಾರದು
> **ವಿಶ್ವಸಂಸ್ಥೆ**

ಪ್ರಗತಿ ಸಾಧಿಸದ ಮಾತುಕತೆ

ಇರಾನ್– ಇಸ್ರೇಲ್ ನಡುವಿನ ಸೇನಾ ಸಂಘರ್ಷ ಶಮನಗೊಳಿಸುವ ನಿಟ್ಟಿನಲ್ಲಿ ಜಿನೀವಾದಲ್ಲಿ ಶುಕ್ರವಾರ ನಡೆದ ರಾಜತಾಂತ್ರಿಕ ಮಾತುಕತೆಗಳು ಪ್ರಗತಿ ಸಾಧಿಸುವಲ್ಲಿ ವಿಫಲವಾಗಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಚರ್ಚೆ ನಡೆಸುವ ಭರವಸೆಯನ್ನು ಯುರೋಪಿನ ನಾಯಕರು ವ್ಯಕ್ತಪಡಿಸಿದ್ದಾರೆ.

‘ದಾಳಿ ತಕ್ಷಣವೇ ನಿಲ್ಲಬೇಕು ಮತ್ತು ದಾಳಿ ಮಾಡಿದವರನ್ನು ಅವರ ಅಪರಾಧಗಳಿಗೆ ಹೊಣೆಗಾರರನ್ನಾಗಿ ಮಾಡಬೇಕು’ ಎಂದು ಸಭೆಯಲ್ಲಿ ಆಗ್ರಹಿಸಿದ್ದಾಗಿ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಸುದ್ದಿಗಾರರಿಗೆ ತಿಳಿಸಿದರು.

‘ಇಸ್ರೇಲ್ ದಾಳಿಯನ್ನು ಮುಂದುವರಿಸಿರುವಾಗ, ಅಮೆರಿಕದ ಜತೆ ಮಾತುಕತೆ ನಡೆಸಲು ಆಸಕ್ತಿಯಿಲ್ಲ’ ಎಂದ ಅವರು, ಮುಂದಿನ ಸುತ್ತಿನ ಮಾತುಕತೆಗೆ ಯಾವುದೇ ದಿನಾಂಕ ನಿಗದಿಯಾಗಿಲ್ಲ ಎಂದೂ ಹೇಳಿದರು.

ಎಚ್ಚರಿಕೆ: ಇಸ್ರೇಲ್ ಜತೆಗಿನ ಯುದ್ಧದಲ್ಲಿ ಅಮೆರಿಕ ಸಕ್ರಿಯವಾಗಿ ತೊಡಗಿಸಿಕೊಂಡರೆ ಅದು ಎಲ್ಲರಿಗೂ ತುಂಬಾ ಅಪಾಯಕಾರಿಯಾಗಿ ಪರಿಣಮಿಸಲಿದೆ ಎಂದು ಇರಾನ್ ಎಚ್ಚರಿಕೆ ನೀಡಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತನ್ನ ದೇಶದ ಸೇನೆ ಈ ಸಂಘರ್ಷದಲ್ಲಿ ಭಾಗವಹಿಸಬೇಕಾಗುತ್ತದೆ ಎಂದು ಈಗಾಗಲೇ ಎಚ್ಚರಿಸಿದ್ದಾರೆ. ಇದು ತುಂಬಾ ದುರದೃಷ್ಟಕರ ಸಂಗತಿ ಎಂದು ಅರಾಗ್ಚಿ ಬೇಸರ ವ್ಯಕ್ತಪಡಿಸಿದ್ದಾರೆ.

ಇರಾನ್‌ನ ಇಸ್‌ಫಹಾನ್‌ನಲ್ಲಿರುವ ಅಣು ಸ್ಥಾವರದ ಮೇಲೆ ಇಸ್ರೇಲ್ ಎರಡನೇ ಬಾರಿ ವೈಮಾನಿಕ ದಾಳಿ ನಡೆಸಿದೆ. ಅಲ್ಲದೇ, ಇರಾನ್‌ನ ಕ್ಷಿಪಣಿಗಳ ಸಂಗ್ರಹಾಗಾರದ ಮೇಲೂ ದಾಳಿ ನಡೆಸಲಾಗಿದೆ ಎಂದು ಅದು ಹೇಳಿದೆ.

ಇರಾನ್ ದಾಳಿ: ಇಸ್ರೇಲ್‌ನ ಮಿಲಿಟರಿ ತಾಣಗಳು ಹಾಗೂ ವಾಯುನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದಾಗಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಹೇಳಿದೆ. ಇರಾನ್ ಡ್ರೋನ್‌ಗಳ ದಾಳಿಯಿಂದಾಗಿ ದೇಶದ ಉತ್ತರ ಭಾಗದಲ್ಲಿನ ಹಲವಾರು ವಸತಿ ಪ್ರದೇಶಗಳಿಗೆ ಹಾನಿಯಾಗಿರುವುದನ್ನು ಇಸ್ರೇಲ್ ಖಚಿತಪಡಿಸಿದೆ

ಈ ವರೆಗೆ, ಇಸ್ರೇಲ್ ಬೇಹುಗಾರಿಕೆ ಇಲಾಖೆಯೊಂದಿಗೆ ನಂಟು ಹೊಂದಿರುವ ಆರೋಪದ ಮೇಲೆ 22 ಜನರನ್ನು ಬಂಧಿಸಿದ್ದಾಗಿ ಇರಾನ್ ಪೊಲೀಸರು ಹೇಳಿದ್ದಾರೆ.

ಉತ್ತರಾಧಿಕಾರಿ ಹುಡುಕಾಟದಲ್ಲಿ ಖಮೇನಿ?

ದುಬೈ/ಟೆಹರಾನ್: ಇಸ್ರೇಲ್ ದಾಳಿ ಶುರುವಾದಾಗಿನಿಂದ ಅಜ್ಞಾತ ಸ್ಥಳದಲ್ಲಿ ಇರುವ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ, ತಮ್ಮ ಉತ್ತರಾಧಿಕಾರಿ ಆಯ್ಕೆಗೆ ಮುಂದಾಗಿದ್ದಾರೆ ಎಂದು ಮೂಲಗಳು ಹೇಳಿವೆ.



ಆಯತೊಲ್ಲಾ ಅಲಿ ಖಮೇನಿ

ತಮ್ಮನ್ನು ಹತ್ಯೆ ಮಾಡುವುದಾಗಿ ಇಸ್ರೇಲ್ ಬೆದರಿಕೆ ಒಡ್ಡಿದ ನಂತರ, ಖಮೇನಿ ಅವರು ಉತ್ತರಾಧಿಕಾರಿ ಆಯ್ಕೆ ಕುರಿತು ಗಂಭೀರ ಚಿಂತನೆ ನಡೆಸಿದ್ದಾರೆ ಎಂದು ಹಿಂದೂಸ್ತಾನ ಟೈಮ್ಸ್ ವರದಿ ಮಾಡಿದೆ.

ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿ, ಅಲಿರೇಜಾ ಅರಾಫಿ, ಅಲಿ ಅಸ್ಗರ್ ಹೆಜಾಜಿ ಹಾಗೂ ಮೊಹಮ್ಮದ್ ಗೊಲ್ಪಯೇಗನಿ ಅವರ ಹೆಸರುಗಳು ಉತ್ತರಾಧಿಕಾರಿ ಸ್ಥಾನಕ್ಕೆ ಕೇಳಿಬರುತ್ತಿವೆ ಎಂದು ವರದಿ ಮಾಡಿದೆ.

ಮೊಜ್ತಬಾ ಅವರೇ ಉತ್ತರಾಧಿಕಾರಿಯಾಗುವ ಸಾಧ್ಯತೆ ಹೆಚ್ಚು. ಸದ್ಯ, ಅವರು ಐಆರ್‌ಜಿಸಿ ಕಾರ್ಯಾಚರಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ.

ಅಲಿರೇಜಾ ಅವರು ಖಮೇನಿ ಅವರ ಅತ್ಯಂತ ನಂಬಿಕಸ್ಥ ವ್ಯಕ್ತಿ. ಅಲಿ ಅಸ್ಗರ್ ಹೆಜಾಜಿ ಅವರು ಖಮೇನಿ ಅವರ ರಾಜಕೀಯ ವ್ಯವಹಾರಗಳ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಗೊಲ್ಪಯೇಗನಿ ಕೂಡ ಖಮೇನಿ ಅವರ ಅತ್ಯಂತ ನಂಬಿಕಸ್ಥ ವ್ಯಕ್ತಿಯಾಗಿದ್ದು, ಆಡಳಿತದ ಮೇಲೆ ಹಿಡಿತ ಹೊಂದಿದ್ದಾರೆ ಎನ್ನಲಾಗಿದೆ.



ಇರಾನ್‌ನಿಂದ ಶನಿವಾರ ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಬಂದಿಳಿದ ಅಲೀಪುರದ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರನ್ನು ಕುಟುಂಬ ಸದಸ್ಯರು ಮತ್ತು ಗೌರಿಬಿದನೂರು ಶಾಸಕ ಪುಟ್ಟಸ್ವಾಮಿಗೌಡ ತ್ರಿವರ್ಣ ಧ್ವಜ ನೀಡಿ ಸ್ವಾಗತಿಸಿದರು.

ಇರಾನ್‌ನಿಂದ ಮರಳಿದ ಅಲೀಪುರದ 16 ಜನ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ಯುದ್ಧಪೀಡಿತ ಇರಾನ್‌ನಲ್ಲಿ ಸಿಲುಕಿದ್ದ ಗೌರಿಬಿದನೂರು ತಾಲ್ಲೂಕಿನ ಅಲೀಪುರ ಗ್ರಾಮದ ವಿದ್ಯಾರ್ಥಿಗಳು ಸೇರಿದಂತೆ 16 ಜನರಿದ್ದ ಮೊದಲ ತಂಡ ಶನಿವಾರ ಸುರಕ್ಷಿತವಾಗಿ ತಾಯ್ನಾಡಿಗೆ ಬಂದಿಳಿಯಿತು.

ಇರಾನ್‌ನಿಂದ ಬೆಳಿಗ್ಗೆ ದೆಹಲಿಗೆ ಹಾಗೂ ಅಲ್ಲಿಂದ ಅಪರಾಹ್ನ 16 ಜನರ ತಂಡ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು.

ಕುಟುಂಬ ಸದಸ್ಯರು, ಗ್ರಾಮಸ್ಥರು ಹಾಗೂ ಗೌರಿಬಿದನೂರು ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಅವರು ಹೂ ಮಾಲೆ ಹಾಕಿ, ತ್ರಿವರ್ಣ ಧ್ವಜ ನೀಡಿ ಬರಮಾಡಿಕೊಂಡರು.

ಮುಂದಿನ 24 ತಾಸಿನಲ್ಲಿ ಇನ್ನೂ 69 ಮಂದಿ, ನಂತರ ಮೂರನೇ ತಂಡದಲ್ಲಿ 70 ಮಂದಿ ದೆಹಲಿಗೆ ಬಂದಿಳಿಯಲಿದ್ದಾರೆ. ಅಲ್ಲಿಂದ ಅಲೀಪುರಕ್ಕೆ ಬರಲಿದ್ದಾರೆ.

ವೈದ್ಯಕೀಯ ಮತ್ತು ಧಾರ್ಮಿಕ ವಿದ್ಯಾಭ್ಯಾಸ, ವ್ಯಾಪಾರ ಮತ್ತು ಯಾತ್ರೆಗೆ ಹೋಗಿದ್ದ ಅಲೀಪುರದ 150ಕ್ಕೂ ಹೆಚ್ಚು ಮಂದಿ ಯುದ್ಧಪೀಡಿತ ಇರಾನ್‌ನಲ್ಲಿ ಸಿಲುಕಿದ್ದಾರೆ. ಅವರನ್ನು ಸುರಕ್ಷಿತವಾಗಿ ಕರೆ ತರುವಂತೆ ಕೋರಿ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು.

ನೊಬೆಲ್ ಶಾಂತಿ ಪುರಸ್ಕಾರ : ಟ್ರಂಪ್ ನಾಮನಿರ್ದೇಶನಕ್ಕೆ ಪಾಕ್ ನಿರ್ಧಾರ

ಇಸ್ಲಾಮಾಬಾದ್ (ಪಿಟಿಐ): ‘ಭಾರತ ಪಾಕಿಸ್ತಾನ ನಡುವಿನ ಸಂಘರ್ಷ ಶಮನದಲ್ಲಿ ರಾಜತಾಂತ್ರಿಕವಾಗಿ ನಿರ್ಣಾಯಕ ಪಾತ್ರವಹಿಸಿದಕ್ಕಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು 2026ರ ನೊಬೆಲ್ ಶಾಂತಿ ಪುರಸ್ಕಾರಕ್ಕೆ ನಾಮನಿರ್ದೇಶನ ಮಾಡಲು ನಿರ್ಧರಿಸಲಾಗಿದೆ’ ಎಂದು ಪಾಕಿಸ್ತಾನ ತಿಳಿಸಿದೆ.

ಪಾಕಿಸ್ತಾನ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಅವರಿಗೆ ಟ್ರಂಪ್ ಅವರು ಶ್ವೇತಭವನದಲ್ಲಿ ಆತಿಥ್ಯ ನೀಡಿದ ಮೂರು ದಿನಗಳ ಬಳಿಕ ‘ಎಕ್ಸ್’ ಮೂಲಕ ಈ ಘೋಷಣೆ ಹೊರಬಿದ್ದಿದೆ.

‘ಪ್ರಾದೇಶಿಕ ಉದ್ವಿಗ್ನತೆ ಸೃಷ್ಟಿಯಾಗಿದ್ದ ಸಂದರ್ಭದಲ್ಲಿ ಟ್ರಂಪ್ ಅವರು ರಾಜತಾಂತ್ರಿಕವಾಗಿ ಇದಕ್ಕೆ ಪರಿಹಾರ ನೀಡಿದ್ದಾರೆ. ಅಣ್ವಸ್ತ್ರ ಹೊಂದಿರುವ ಎರಡು ರಾಷ್ಟ್ರಗಳ ನಡುವಿನ ಸಂಘರ್ಷದಿಂದ ಉಂಟಾಗಬಹುದಾಗಿದ್ದ ಅಪಾರ ನಷ್ಟವನ್ನು ತಡೆದಿದ್ದಾರೆ’ ಎಂದು ಪಾಕಿಸ್ತಾನ ಸರ್ಕಾರ ಹೇಳಿದೆ.

ನೊಬೆಲ್ ಸಿಗಲ್ಲ: ಟ್ರಂಪ್

ವಾಷಿಂಗ್ಟನ್ (ಪಿಟಿಐ): ‘ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಶಮನಗೊಳಿಸಿದ್ದಕ್ಕಾಗಿ ಮತ್ತು ರಷ್ಯಾ–ಉಕ್ರೇನ್, ಇಸ್ರೇಲ್–ಇರಾನ್ ಕದನ ನಿಲ್ಲಿಸಲು ಶ್ರಮಿಸುತ್ತಿರುವುದಕ್ಕೆ ನನಗೆ ನೊಬೆಲ್ ಶಾಂತಿ ಪುರಸ್ಕಾರ ಸಿಗುವುದಿಲ್ಲ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಜಾಲತಾಣ ‘ಟ್ರುತ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

800ಕ್ಕೂ ಹೆಚ್ಚು ಭಾರತೀಯರು ವಾಪಸ್

ಆಪರೇಷನ್ ಸಿಂಧೂ: ವಿದೇಶಾಂಗ ಇಲಾಖೆಯ ವಕ್ತಾರ ಜೈಸ್ವಾಲ್ ಮಾಹಿತಿ

ನವದೆಹಲಿ (ಪಿಟಿಐ): ‘ಆಪರೇಷನ್ ಸಿಂಧೂ’ ಕಾರ್ಯಾಚರಣೆ ಮೂಲಕ ಇರಾನ್‌ನಿಂದ ಈವರೆಗೂ 800ಕ್ಕೂ ಹೆಚ್ಚು ಭಾರತೀಯರನ್ನು ಕರೆತರಲಾಗಿದೆ ಎಂದು ಶನಿವಾರ ಭಾರತೀಯ ವಿದೇಶಾಂಗ ಇಲಾಖೆ ಮಾಹಿತಿ ನೀಡಿದೆ.

ವಿದ್ಯಾರ್ಥಿಗಳೂ ಸೇರಿದಂತೆ 800ಕ್ಕೂ ಹೆಚ್ಚು ನಾಗರಿಕರನ್ನು ಶುಕ್ರವಾರ ತಡರಾತ್ರಿ ಮತ್ತು ಶನಿವಾರ ಸಂಜೆವರೆಗೂ ದೆಹಲಿಗೆ ಕರೆತರಲಾಗಿದೆ ಎಂದು ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಶನಿವಾರ ಸಂಜೆ 4.30ರ ಸುಮಾರಿಗೆ ಇರಾನ್‌ನ ಮಶ್‌ಹದ್‌ನಿಂದ 310 ನಾಗರಿಕರನ್ನು ಕರೆತಂದ ವಿಮಾನ ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಈ ಮೂಲಕ ಶನಿವಾರ ಸಂಜೆವರೆಗೆ 827 ಮಂದಿಯನ್ನು ವಾಪಸ್ ಕರೆತರಲಾಗಿದೆ ಎಂದು ಅವರು ಹೇಳಿದ್ದಾರೆ.

‘ಆಪರೇಷನ್ ಸಿಂಧೂ’ನ ಮೊದಲ ತಂಡದಲ್ಲಿ ಬಂದ 110 ಭಾರತೀಯರನ್ನು ವಿದೇಶಾಂಗ ಖಾತೆಯ ರಾಜ್ಯ ಸಚಿವ ಕೀರ್ತಿ ವರ್ಧನ ಸಿಂಗ್ ಅವರು ಬರಮಾಡಿಕೊಂಡಿದ್ದರು. ಜೂನ್ 20ರಂದು ವಿದ್ಯಾರ್ಥಿಗಳು, ಯಾತ್ರಾರ್ಥಿಗಳು ಮತ್ತು ನಾಗರಿಕರು ಸೇರಿ 290 ಮಂದಿ ಬಂದಿದ್ದರು.

ಇದೇ ವೇಳೆ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ ಕರೆಸಿಕೊಳ್ಳಲು ಸಹಕರಿಸಿದ ಇರಾನ್ ಸರ್ಕಾರಕ್ಕೆ ವಿದೇಶಾಂಗ ಇಲಾಖೆ ಧನ್ಯವಾದ ತಿಳಿಸಿದೆ.



‘ಆಪರೇಷನ್ ಸಿಂಧೂ’ ವಿಮಾನ ಮೂಲಕ ಇರಾನ್‌ನಿಂದ ಸುರಕ್ಷಿತವಾಗಿ ನವದೆಹಲಿ ವಿಮಾನ ನಿಲ್ದಾಣಕ್ಕೆ ಕರೆತರಲಾದ ಭಾರತೀಯರು – ಪಿಟಿಐ ಚಿತ್ರ

ಭಾರತೀಯರ ಜತೆ ನೇಪಾಳ, ಲಂಕನ್ನರ ಸ್ಥಳಾಂತರ

ಟೆಹರಾನ್: ಇರಾನ್‌ನಿಂದ ಎಲ್ಲಾ ಭಾರತೀಯರನ್ನೂ ಸ್ಥಳಾಂತರ ಮಾಡಲು ಸರ್ಕಾರ ನಿರ್ಧರಿಸಿದೆ. ಭಾರತೀಯ ರಾಯಭಾರ ಕಚೇರಿ ತುರ್ತು ಸಂಪರ್ಕ ಸಂಖ್ಯೆಗಳನ್ನೂ ಪ್ರಕಟಿಸಿದೆ.

ಟೆಲಿಗ್ರಾಮ್ ಮಾಧ್ಯಮ ಮೂಲಕ ಅಥವಾ ತುರ್ತು ಸಂಪರ್ಕ ಸಂಖ್ಯೆಗಳ (+989010144557, +989128109115 +989128109109) ಮೂಲಕ ಸಂಪರ್ಕ ಮಾಡಿ ನೆರವು ಪಡೆಯಬಹುದು ಎಂದು ‘ಎಕ್ಸ್’ನಲ್ಲಿ ಇರಾನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಭಾರತೀಯರು ಮಾತ್ರವಲ್ಲದೆ ‘ಆಪರೇಷನ್ ಸಿಂಧೂ’ ಮೂಲಕ ನೇಪಾಳ ಮತ್ತು ಶ್ರೀಲಂಕಾದ ನಾಗರಿಕರನ್ನೂ ಭಾರತ ಸ್ಥಳಾಂತರ ಮಾಡುತ್ತಿದೆ. ಈಗಾಗಲೇ ಎರಡೂ ದೇಶಗಳ ವಿದೇಶಾಂಗ ಇಲಾಖೆಗಳು ತಮ್ಮ ನಾಗರಿಕರಿಗೆ ಈ ಮಾಹಿತಿ ನೀಡಿವೆ.

ಪೋಷಕರ ಆನಂದಬಾಷ್ಪ

ಯುದ್ಧಪೀಡಿತ ಇರಾನ್‌ನಿಂದ 256 ವಿದ್ಯಾರ್ಥಿಗಳನ್ನು ಹೊತ್ತು ತಂದ ಬೃಹತ್ ವಾಯು ಸ್ಥಳಾಂತರ ವಿಮಾನ ಶನಿವಾರ ಮುಂಜಾನೆ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಕಾಶ್ಮೀರ ಕಣಿವೆಯ ಬಹುತೇಕರಿದ್ದ ವಿಮಾನ ಇಳಿಯುತ್ತಿದ್ದಂತೆ ತಮ್ಮ ಮಕ್ಕಳ ಮೊಗವನ್ನು ನೋಡಿ ಪೋಷಕರ ಕಣ್ಣಲ್ಲಿ ಆನಂದಬಾಷ್ಪ ಸುರಿಯಿತು.

‘ಸುರಕ್ಷಿತವಾಗಿ ನಮ್ಮ ಮಕ್ಕಳನ್ನು ಕರೆತಂದ ಭಾರತ ಸರ್ಕಾರ ಮತ್ತು ಸಹಕರಿಸಿದ ಇರಾನ್ ಸರ್ಕಾರಕ್ಕೆ ಧನ್ಯವಾದ’ ಎಂದು ಜಮ್ಮು–ಕಾಶ್ಮೀರ ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟ ತಿಳಿಸಿದೆ.

1000ಕ್ಕೂ ಹೆಚ್ಚು ಭಾರತೀಯ ನಾಗರಿಕರನ್ನು ವಿಶೇಷ ವಿಮಾನಗಳ ಮೂಲಕ ವಾಪಸ್ ಕರೆತರ-ಲಾಗುತ್ತಿದೆ. ಅಶ್ಗಾಬಾತ್‌ನಿಂದ ಹೊರಟಿರುವ ವಿಮಾನ ಭಾನುವಾರ ಮುಂಜಾನೆ 3ಕ್ಕೆ ನವದೆಹಲಿ ತಲುಪಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸುರಕ್ಷಿತ ಸ್ಥಳಾಂತರಕ್ಕೆ ಸಹಕಾರ’

ನವದೆಹಲಿ (ಪಿಟಿಐ): ಇರಾನ್ ಮತ್ತು ಇಸ್ರೇಲ್ ನಡುವಿನ ಸೇನಾ ಸಂಘರ್ಷ ನಂತರ ಭಾರತೀಯ ನಾಗರಿಕರ ಸುರಕ್ಷಿತ ಸ್ಥಳಾಂತರ ವಿಚಾರದಲ್ಲಿ ಭಾರತದ ವಿದೇಶಾಂಗ ಇಲಾಖೆ ಜತೆ ನಿರಂತರ ಸಂಪರ್ಕದಲ್ಲಿ ಇರುವುದಾಗಿ ಭಾರತದಲ್ಲಿನ ಇಸ್ರೇಲ್ ರಾಯಭಾರಿ ರುವೇನ್ ಅಜರ್ ತಿಳಿಸಿದ್ದಾರೆ.

‘ಭಾರತ ಸರ್ಕಾರದಿಂದ ಏನೇ ಸಂದೇಶ ಬಂದರೂ ನಾಗರಿಕರ ಸುರಕ್ಷತೆ ದೃಷ್ಟಿಯಿಂದ ಗಂಭೀರವಾಗಿ ಪರಿಗಣಿಸಿದ್ದೇವೆ. ಯುದ್ಧ ಆರಂಭವಾದ ಕ್ಷಣದಿಂದಲೇ ಈ ಸಹಕಾರ ಮುಂದುವರಿದಿದೆ’ ಎಂದು ಅವರು ಶುಕ್ರವಾರ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

2.5 ಲಕ್ಷ ಟನ್ ಮಾವು ಖರೀದಿಗೆ ಕೇಂದ್ರ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿರಂತರ ಬೆಲೆ ಕುಸಿತದಿಂದ ಕಂಗೆಟ್ಟಿದ್ದ ಮಾವು ಬೆಳೆಗಾರರ ನೆರವಿಗೆ ಕೇಂದ್ರ ಸರ್ಕಾರ ಧಾವಿಸಿದೆ.

ರಾಜ್ಯದಲ್ಲಿ ಮಾವಿನ ಬೆಲೆ ಕುಸಿತದ ಹಿನ್ನಲೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ನೆರವಾಗುವಂತೆ ರಾಜ್ಯ ಸರ್ಕಾರದ ಮನವಿಗೆ ಕೇಂದ್ರ ಸಮ್ಮತಿ ನೀಡಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಪ್ರತಿ ಕೆ.ಜಿ.ಗೆ ಎರಡೆರಡು ರೂಪಾಯಿಗಳಂತೆ ಒಟ್ಟು ₹4 ವ್ಯತ್ಯಾಸ ಪಾವತಿಸಿ ಮಾರುಕಟ್ಟೆ ಚೈತನ್ಯಕ್ಕೆ ಕ್ರಮಕೈಗೊಳ್ಳಲು ಸಿದ್ಧತೆ ನಡೆಸಿವೆ.

ರಾಜ್ಯ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ವಿಡಿಯೋ ಸಂವಾದದ ಮೂಲಕ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮಾವು ಬೆಳೆಗಾರರ ಪರಿಸ್ಥಿತಿ ಮನವರಿಕೆ ಮಾಡಿಕೊಟ್ಟರು.

2025-26ನೇ ಸಾಲಿನ ಮಾರುಕಟ್ಟೆ ಋತುವಿನಲ್ಲಿ ಮಾವಿಗೆ ಪಿಡಿಪಿಎಸ್ ಯೋಜನೆಯ ಅನುಷ್ಠಾನಕ್ಕೆ ಚಲುವರಾಯಸ್ವಾಮಿ ಮಾಡಿದ ಮನವಿಗೆ ಕೇಂದ್ರ ಕೃಷಿ ಸಚಿವರು ಸಮ್ಮತಿ ನೀಡಿದರು.

2.5 ಲಕ್ಷ ಟನ್ ಮಾವು ಖರೀದಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಸೋಮವಾರ ಈ ಬಗ್ಗೆ ಅಧಿಕೃತ ಆದೇಶ ಹೊರಬೀಳುವ ನಿರೀಕ್ಷೆ ಇದೆ.

ಮಾವು ಕರ್ನಾಟಕದ ಪ್ರಮುಖ ತೋಟಗಾರಿಕಾ ಬೆಳೆಗಳಲ್ಲೊಂದಾಗಿದೆ. 2025-26ನೇ ಋತುವಿನಲ್ಲಿ 1.39 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಈ ಬಾರಿ ಅಂದಾಜು 8 ಲಕ್ಷದಿಂದ 10 ಲಕ್ಷ ಟನ್ ಮಾವು ಉತ್ಪಾದನೆಯಾಗಿದೆ. ರಾಜ್ಯದಲ್ಲಿ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಪ್ರಮುಖ ಮಾವು ಬೆಳೆ ಪ್ರದೇಶಗಳಾಗಿವೆ.

ಕರ್ನಾಟಕದಲ್ಲಿ ಮಾವಿನ ಕೊಯಿಲು ಮೇನಿಂದ ಜುಲೈವರೆಗೆ ನಡೆಯುತ್ತದೆ. ಈ ಅವಧಿಯಲ್ಲಿ, ಮಾರುಕಟ್ಟೆ ಬೆಲೆಗಳಲ್ಲಿ ಗಮನಾರ್ಹ ಏರಿಳಿತಗಳನ್ನು ಗಮನಿಸಲಾಗಿದೆ.

ಮೇ ತಿಂಗಳಲ್ಲಿ ಕೋಲಾರ, ಚಿಕ್ಕಬ-ಳ್ಳಾಪುರ ಮತ್ತು ರಾಮನಗರದ ಪ್ರಮುಖ ಮಾರುಕಟ್ಟೆ ಗಳಲ್ಲಿ ಮಾವಿನ ಹಣ್ಣಿನ ಮಾದರಿ ಬೆಲೆಗಳು ಕ್ವಿಂಟಲ್‌ಗೆ ₹1,200 ರಿಂದ ₹2,500 ರವರೆಗೆ ಇತ್ತು. ಶ್ರೀನಿವಾಸಪುರ ಮಾರುಕಟ್ಟೆಯಲ್ಲಿ ತೋತಾಪುರಿಗೆ ಪ್ರತಿ ಕ್ವಿಂಟಲ್‌ಗೆ ₹450-₹550ಕ್ಕೆ ಕುಸಿದಿದೆ.

‘ಸಕ್ಕರೆ ರಫ್ತಿಗೆ ಕೇಂದ್ರ ಅನುಮತಿ ನೀಡಲಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸಕ್ಕರೆ ರಫ್ತಿಗೆ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು. ಆಗ ಕಬ್ಬು ಬೆಳೆಗಾರರ ಹಿತ ಕಾಪಾಡಲು ಸಾಧ್ಯ’ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

‘ಮೂರು ವರ್ಷಗಳಿಂದ ಸಕ್ಕರೆ ರಫ್ತಿನ ಮೇಲೆ ಹೇರಿರುವ ನಿಷೇಧವನ್ನು ಕೈಬಿಡಬೇಕು. ರೈತರ ಕಬ್ಬಿನ ಬಿಲ್ ಪಾವತಿಗೆ ಸಕ್ಕರೆ ಕಾರ್ಖಾನೆಗಳ ಬಳಿ ಪ್ರತ್ಯೇಕ ಬಂಡವಾಳ ಇಲ್ಲ. ಸಕ್ಕರೆ ರಫ್ತಿಗೆ ಅನುಮತಿ ಸಿಕ್ಕರೆ, ಉತ್ತಮ ದರ ಸಿಗುತ್ತದೆ. ಬಾಕಿ ಬಿಲ್ ಪಾವತಿಸಬಹುದು’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ದೇಶದಲ್ಲೇ ಗಣನೀಯ ಪ್ರಮಾಣದಲ್ಲಿ ತೊಗರಿ ಬೆಳೆಯಲಾಗುತ್ತಿದೆ. ಆದರೂ, ತೊಗರಿ ಆಮದಿಗೆ ಕೇಂದ್ರ ಅನುಮತಿ ಕೊಟ್ಟಿದೆ. ಇದರಿಂದ ತೊಗರಿ ದರ ಕೆಜಿಗೆ ₹90ಕ್ಕೆ ಕುಸಿದಿದೆ. ಈರುಳ್ಳಿ ಮತ್ತು ಟೊಮೆಟೊ ದರ ಕುಸಿದು, ಅವುಗಳನ್ನು ರೈತರು ರಸ್ತೆಗೆ ಸುರಿಯುವಂತಾಗಿದೆ. ಇದರ ಬಗ್ಗೆಯೂ ಕೇಂದ್ರ ಚಿಂತನೆ ನಡೆಸಬೇಕು’ ಎಂದರು.

ಜೂನ್ 19ರ ವರೆಗೆ ₹4.59 ಲಕ್ಷ ಕೋಟಿ ಸಂಗ್ರಹ: ಕೇಂದ್ರ

ನಿವ್ವಳ ನೇರ ತೆರಿಗೆ ಸಂಗ್ರಹ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಜೂನ್ 19ರ ವರೆಗೆ ದೇಶದ ನಿವ್ವಳ ನೇರ ತೆರಿಗೆ ಸಂಗ್ರಹದಲ್ಲಿ ಶೇ 1.39ರಷ್ಟು ಇಳಿಕೆಯಾಗಿದ್ದು, ₹4.59 ಲಕ್ಷ ಕೋಟಿ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ನಿವ್ವಳ ನೇರ ತೆರಿಗೆ ಸಂಗ್ರಹವು ₹4.65 ಲಕ್ಷ ಕೋಟಿಯಷ್ಟಿತ್ತು. ಮುಂಗಡ ತೆರಿಗೆ ಸಂಗ್ರಹವು ಮಂದಗೊಂಡಿರುವುದು ಮತ್ತು ಮರುಪಾವತಿ ಹೆಚ್ಚಳವಾಗಿ-ರುವುದೇ ಸಂಗ್ರಹ ಇಳಿಕೆಗೆ ಕಾರಣ ಎಂದು ತಿಳಿಸಿದೆ.

ಮುಂಗಡ ತೆರಿಗೆ ಸಂಗ್ರಹದಲ್ಲಿ ಶೇ 3.87ರಷ್ಟು ಮಾತ್ರ ಹೆಚ್ಚಳವಾಗಿದ್ದು, ₹1.56 ಲಕ್ಷ ಕೋಟಿಯಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಮುಂಗಡ ತೆರಿಗೆ ಸಂಗ್ರಹವು ಶೇ 27ರಷ್ಟು ಏರಿಕೆ ದಾಖಲಿಸಿತ್ತು. ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಶೇ 5ರಷ್ಟು ಕಡಿಮೆಯಾಗಿದ್ದು, ₹1.73 ಲಕ್ಷ ಕೋಟಿಯಾಗಿದೆ.



ವೈಯಕ್ತಿಕ ಆದಾಯ ತೆರಿಗೆಯನ್ನು ಒಳಗೊಂಡಿರುವ ಕಾರ್ಪೊರೇಟ್‌ಯೇತರ ತೆರಿಗೆ ಸಂಗ್ರಹವು ₹2.73 ಲಕ್ಷ ಕೋಟಿಯಾಗಿದ್ದು, ಶೇ 0.7ರಷ್ಟು ಏರಿಕೆಯಾಗಿದೆ. ಷೇರು ವಹಿವಾಟು ತೆರಿಗೆಯ ಪ್ರಮಾಣದಲ್ಲಿ ಶೇ 12ರಷ್ಟು ಹೆಚ್ಚಳವಾಗಿದ್ದು, ₹13,013 ಕೋಟಿಯಾಗಿದೆ. ಮರುಪಾವತಿ (ರೀಫಂಡ್) ಶೇ 58ರಷ್ಟು ಏರಿಕೆಯಾಗಿದ್ದು, ₹86,385 ಕೋಟಿಯಾಗಿದೆ ಎಂದು ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಒಟ್ಟು ನೇರ ತೆರಿಗೆ ಸಂಗ್ರಹದಲ್ಲಿ ಶೇ 4.86ರಷ್ಟು ಏರಿಕೆಯಾಗಿದ್ದು, ₹5.45 ಲಕ್ಷ ಕೋಟಿಯಾಗಿದೆ. ಕಾರ್ಪೊರೇಟ್ ತೆರಿಗೆಯಲ್ಲಿ ಮುಂಗಡ ತೆರಿಗೆ ಸಂಗ್ರಹವು ₹1.22 ಲಕ್ಷ ಕೋಟಿಯಾಗಿದೆ. ಕಾರ್ಪೊರೇಟ್‌ಯೇತರ ತೆರಿಗೆ ಸಂಗ್ರಹದಲ್ಲಿ ಇಳಿಕೆಯಾಗಿದ್ದು, ₹33,928 ಕೋಟಿಯಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು, ನೇರ ತೆರಿಗೆ ಮೂಲಕ ₹25.20 ಲಕ್ಷ ಕೋಟಿ ಸಂಗ್ರಹಿಸಲು ಗುರಿ ಹೊಂದಿದೆ. ಇದು ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 12.7ರಷ್ಟು ಹೆಚ್ಚಳ. ಈ ಪೈಕಿ ಜೂನ್ 19ರ ವರೆಗೆ ಶೇ 18.21ರಷ್ಟು ತೆರಿಗೆ ಸಂಗ್ರಹಿಸಿದೆ. ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಮೂಲಕ ₹78 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ಜೂನ್ 13ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹಕ್ಕೆ ₹19,862 ಕೋಟಿ ಸೇರ್ಪಡೆಯಾಗಿದೆ.

ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹60.31 ಲಕ್ಷ ಕೋಟಿಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

2024ರ ಸೆಪ್ಟೆಂಬರ್‌ನಲ್ಲಿ ಮೀಸಲು ಸಂಗ್ರಹ ₹61.03 ಲಕ್ಷ ಕೋಟಿಯಾಗಿತ್ತು. ಇದು ಇದುವರೆಗಿನ ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ.

ವಿದೇಶಿ ಕರೆನ್ಸಿಯ ಒಟ್ಟು ಸಂಗ್ರಹ ಪ್ರಮಾಣ ₹15,056 ಕೋಟಿ ಹೆಚ್ಚಳವಾಗಿದ್ದು, ₹51.03 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹವು ₹7.47 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ಮೀಸಲು ₹1.62 ಲಕ್ಷ ಕೋಟಿ ಆಗಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹38,546 ಕೋಟಿಯಾಗಿದೆ ಎಂದು ತಿಳಿಸಿದೆ.

ಚಿಟಿಕೆ ಸುದ್ದಿ

ರಾಜಾ ರಘುವಂಶಿ ಹತ್ಯೆ: ಆರೋಪಿಗಳಿಗೆ ನ್ಯಾಯಾಂಗ ಬಂಧನ

ಶಿಲ್ಲಾಂಗ್ (ಪಿಟಿಐ): ಇಂದೋರ್‌ನ ಉದ್ಯಮಿ ರಾಜಾ ರಘುವಂಶಿ ಅವರ ಹತ್ಯೆಗೆ ಸಂಬಂಧಿಸಿ ಪತ್ನಿ ಸೋನಮ್ ರಘುವಂಶಿ ಮತ್ತು ಆಕೆಯ ಪ್ರಿಯಕರ ಎನ್ನಲಾದ ರಾಜ್ ಅವರನ್ನು 13 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಮೇಘಾಲಯದ ಸ್ಥಳೀಯ ನ್ಯಾಯಾಲಯವು ಶನಿವಾರ ನೀಡಿದೆ. ಈ ಇಬ್ಬರು ಆರೋಪಿಗಳ ಪೊಲೀಸ್ ಕಸ್ಟಡಿ ಅವಧಿಯು ಶನಿವಾರಕ್ಕೆ ಮುಕ್ತಾಯಗೊಂಡಿತ್ತು. ಈ ಪ್ರಕರಣ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು ಇಬ್ಬರ ಪೊಲೀಸ್ ಕಸ್ಟಡಿ ಅವಧಿಯನ್ನು ವಿಸ್ತರಿಸುವಂತೆ ಕೋರಿ ಕೊಳ್ಳಲಿಲ್ಲ. ಆದ್ದರಿಂದ ನ್ಯಾಯಾಲಯವು ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ನೀಡಿದೆ.


ಸೋನಮ್

‘ರಾಜ್ಯ ಸ್ಥಾನಮಾನ ವಿಳಂಬವಾದರೆ ‘ಸುಪ್ರೀಂ’ಗೆ ಮೊರೆ’


ಫಾರೂಕ್ ಅಬ್ದುಲ್ಲಾ

ಅನಂತನಾಗ್ (ಜಮ್ಮು–ಕಾಶ್ಮೀರ) (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನ ಮರುಸ್ಥಾಪನೆ ಮಾಡುವುದು ವಿಳಂಬವಾದರೆ ತಮ್ಮ ಪಕ್ಷವು ಸುಪ್ರೀಂ ಕೋರ್ಟ್‌ಗೆ ಹೋಗುವುದಾಗಿ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಶನಿವಾರ ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರ ಜಿಲ್ಲೆಯ ಕೊಕೆರ್ನಾಗ್‌ನಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಚುನಾವಣೆಯ ಬಳಿಕ ಜನರು ತಮ್ಮ ಸಮಸ್ಯೆಯನ್ನು ಶೀಘ್ರವೇ ಪರಿಹರಿಸುವಂತೆ ಬಯಸುತ್ತಿದ್ದಾರೆ. ಆದರೆ ರಾಜ್ಯ ಸ್ಥಾನಮಾನ ಮರುಸ್ಥಾಪನೆ ಮಾಡುವುದು ವಿಳಂಬವಾಗುತ್ತಿರುವುದರಿಂದ ನಮ್ಮ ಕಾರ್ಯಕ್ಕೆ ಅಡ್ಡಿಯಾಗುತ್ತಿದೆ. ನ್ಯಾಷನಲ್ ಕಾನ್ಫರೆನ್ಸ್‌ನ ಶಾಸಕ ಅಲ್ತಾಫ್ ಕಾಲೂ ಅವರನ್ನು ಸಚಿವರಾಗಿ ನೋಡಲು ಜನ ಬಯಸುತ್ತಿದ್ದಾರೆ. ಆದರೆ ರಾಜ್ಯಸ್ಥಾನಮಾನ ಸಿಗದೆ ಇದು ಹೇಗೆ ಸಾಧ್ಯ’ ಎಂದರು.

ಏರ್ ಇಂಡಿಯಾಗೆ ಡಿಜಿಸಿಎ ನೋಟಿಸ್

ವಿಮಾನದ ಸಿಬ್ಬಂದಿಯ ಕರ್ತವ್ಯ ಅವಧಿಯ ಮಿತಿ ಉಲ್ಲಂಘನೆ ಆರೋಪ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ/ಮುಂಬೈ: ವಿಮಾನ ಸಿಬ್ಬಂದಿಯ ಕರ್ತವ್ಯ ಅವಧಿಯ ಮಿತಿ (ಎಫ್‌ಡಿಟಿಎಲ್) ನಿಯಮ ಉಲ್ಲಂಘಿಸಿದ್ದಕ್ಕಾಗಿ ಟಾಟಾ ಸಮೂಹದ ಒಡೆತನದ ಏರ್ ಇಂಡಿಯಾ ಸಂಸ್ಥೆಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ನೋಟಿಸ್ ರವಾನಿಸಿದೆ.

ಮೇ 16 ಮತ್ತು 17ರಂದು ಬೆಂಗಳೂರು–ಲಂಡನ್ ಸಂಚರಿಸಿದ ವಿಮಾನಗಳಲ್ಲಿ ಸ್ಥಳ ಪರಿಶೀಲನೆ ನಡೆಸಿದಾಗ ನಿಯಮಗಳು ಉಲ್ಲಂಘನೆಯಾಗಿರುವುದು ಕಂಡುಬಂದಿದೆ. ಎಫ್‌ಡಿಟಿಎಲ್ ನಿಗದಿಪಡಿಸಿದ 10 ಗಂಟೆಗಳ ಮಿತಿಗಿಂತ ಹೆಚ್ಚು ಕಾಲ ಸಿಬ್ಬಂದಿ ಕೆಲಸ ನಿರ್ವಹಿಸಿರುವುದು ತಿಳಿದುಬಂದಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಏಳು ದಿನಗಳ ಒಳಗಾಗಿ ವಿವರಣೆ ನೀಡಬೇಕು ಎಂದು ಡಿಜಿಸಿಎ ಸೂಚಿಸಿದೆ.

ಪ್ರಮುಖ ಲೋಪಗಳು

- ಸಿಬ್ಬಂದಿ ನಿಯೋಜನೆ, ಪಾಳಿ ನಿಗದಿಯಲ್ಲಿ ಲೋಪ
- ಆಂತರಿಕ ಹೊಣೆಗಾರಿಕೆ ಇಲ್ಲದಿರುವುದು
- ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳದಿರುವುದು

ಭವಿಷ್ಯದಲ್ಲಿ ಈ ರೀತಿ ನಿಯಮ ಉಲ್ಲಂಘನೆಯಾದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅದು ದಂಡ, ಪರವಾನಗಿ ಅಮಾನತು ಅಥವಾ ಕಾರ್ಯಾಚರಣೆ ಪರವಾನಗಿ ವಾಪಸಾತಿಗೆ ಮಾತ್ರ ಸೀಮಿತವಾಗಿರುವುದಿಲ್ಲ ಎಂದು ಎಚ್ಚರಿಸಿದೆ.

ಏರ್ ಇಂಡಿಯಾದ ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನವು ಅಹಮದಾಬಾದ್‌ನಲ್ಲಿ ಪತನಗೊಂಡು 270 ಮಂದಿ ಸಾವಿಗೆ ಕಾರಣವಾದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ನಿರಂತರವಾಗಿ ಗಂಭೀರವಾದ ಉಲ್ಲಂಘನೆಗಳಾಗುತ್ತಿರುವುದಾಗಿ ಸ್ವತಃ ಏರ್ ಇಂಡಿಯಾ ಸಂಸ್ಥೆಯೇ ಬಹಿರಂಗಪಡಿಸಿದೆ. ವಾಯು ಮಾರ್ಗ ನಿರ್ವಹಣಾ ವ್ಯವಸ್ಥೆಯ (ಎಆರ್‌ಎಂಎಸ್) ಪರಿಶೀಲನೆಯಲ್ಲಿ ನಿಯಮ ಉಲ್ಲಂಘನೆಯಾಗಿರುವುದು ತಿಳಿದುಬಂದಿದೆ ಎಂದು ಡಿಜಿಸಿಎ ತಿಳಿಸಿದೆ.

ಎಆರ್‌ಎಂಎಸ್ ಎಂಬುದು ಸಿಬ್ಬಂದಿಯ ಪಾಳಿ ನಿಗದಿ, ವಿಮಾನಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ ಹಲವು ಕಾರ್ಯಗಳಿಗೆ ಬಳಸುವ ಸಾಫ್ಟ್‌ವೇರ್ ವೇದಿಕೆಯಾಗಿದೆ.

‘ಮೂವರ ವಿರುದ್ಧ ಕ್ರಮ ಕೈಗೊಳ್ಳಿ’

ಕರ್ತವ್ಯ ಲೋಪದ ಕಾರಣ ಏರ್ ಇಂಡಿಯಾದ ವಿಭಾಗೀಯ ಉಪಾಧ್ಯಕ್ಷ ಸೇರಿದಂತೆ ಮೂವರು ಹಿರಿಯ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಡಿಜಿಸಿಎ ಮತ್ತೊಂದು ನೋಟಿಸ್ ಮೂಲಕ ಸೂಚಿಸಿದೆ.

ವಿಮಾನದ ಸಿಬ್ಬಂದಿಯ ನಿಯೋಜನೆ, ಪಾಳಿಗಳ ನಿಗದಿಗೆ ಸಂಬಂಧಿಸಿದ ಎಲ್ಲ ರೀತಿಯ ಜವಾಬ್ದಾರಿಗಳಿಂದ ಈ ಮೂವರನ್ನು ವಿಮುಕ್ತಿಗೊಳಿಸುವಂತೆ ಆದೇಶಿಸಿದೆ.

ವಿಭಾಗೀಯ ಉಪಾಧ್ಯಕ್ಷ ಚೂರಹ್ ಸಿಂಗ್, ಚೀಫ್ ಮ್ಯಾನೇಜರ್ ಪಿಂಕಿ ಮಿತ್ತಲ್, ಸಿಬ್ಬಂದಿ ನಿಯೋಜಕ ಪಾಯಲ್ ಅರೋರಾ ಅವರು ಲೋಪಗಳಿಗೆ ನೇರ ಹೊಣೆಗಾರರು ಎಂದು ಗುರುತಿಸಲಾಗಿದೆ ಎಂದು ಡಿಜಿಸಿಎ ತಿಳಿಸಿದೆ.

ಈ ಮೂವರ ವಿರುದ್ಧ ಕೂಡಲೇ ಆಂತರಿಕ ಶಿಸ್ತುಕ್ರಮ ಜರುಗಿಸಬೇಕು. ಈ ಕುರಿತ ವರದಿಯನ್ನು 10 ದಿನಗಳ ಒಳಗಾಗಿ ಸಲ್ಲಿಸಬೇಕು ಎಂದೂ ಹೇಳಿದೆ. ಮುಂದಿನ ನೋಟಿಸ್ ನೀಡುವವರೆಗೆ ಈ ಮೂವರನ್ನು ವಿಮಾನದ ಸುರಕ್ಷತೆ ಮತ್ತು ಸಿಬ್ಬಂದಿ ನಿಯೋಜನೆಗೆ ನೇರವಾಗಿ ಸಂಬಂಧಿಸಿದ ಕೆಲಸಗಳಿಗೆ ನಿಯೋಜಿಸಬಾರದು ಎಂದು ಸೂಚಿಸಿದೆ.



ಆದೇಶ ಅನುಷ್ಠಾನಕ್ಕೆ ಬದ್ಧ: ಏರ್ ಇಂಡಿಯಾ

ಡಿಜಿಸಿಎ ಆದೇಶವನ್ನು ವಿಮಾನಯಾನ ಸಂಸ್ಥೆಯು ಅನುಷ್ಠಾನಗೊಳಿಸಲಿದೆ. ಸುರಕ್ಷತಾ ಮಾರ್ಗಸೂಚಿಗಳು ಮತ್ತು ಪ್ರಮಾಣಿತ ನಿಯಮಗಳನ್ನು ಜಾರಿಗೊಳಿಸಲು ಸಂಸ್ಥೆಯು ಬದ್ಧವಾಗಿದೆ ಎಂದು ಏರ್ ಇಂಡಿಯಾ ತಿಳಿಸಿದೆ.

ತಕ್ಷಣದಿಂದಲೇ ಕಂಪನಿಯ ಚೀಫ್ ಆಪರೇಷನ್ ಅಧಿಕಾರಿಯು ಸಮಗ್ರ ಕಾರ್ಯಾಚರಣೆ ಕೇಂದ್ರದ (ಐಒಸಿಸಿ) ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಹೇಳಿದೆ.



ಸುವರ್ಣರೇಖಾ ನದಿಯ ಪ್ರವಾಹದಿಂದಾಗಿ ಒಡಿಶಾದ ಬಾಲೇಶ್ವರ ಜಿಲ್ಲೆಯ ತಗ್ಗು ಪ್ರದೇಶದ ಗ್ರಾಮಗಳು ಶನಿವಾರ ಜಲಾವೃತಗೊಂಡಿದ್ದವು – ಪಿಟಿಐ ಚಿತ್ರ

ಪ್ರವಾಹ: 50,000 ಜನರಿಗೆ ಸಂಕಷ್ಟ

ಬಾಲೇಶ್ವರ (ಒಡಿಶಾ) (ಪಿಟಿಐ): ಜಾರ್ಖಂಡ್ ರಾಜ್ಯದಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಸುವರ್ಣರೇಖಾ ನದಿ ಉಕ್ಕಿ ಹರಿಯುತ್ತಿದೆ. ಪರಿಣಾಮವಾಗಿ ಒಡಿಶಾದ ಬಾಲೇಶ್ವರ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಿ ಗ್ರಾಮಗಳಿಗೆ ನೀರು ನುಗ್ಗಿದ್ದರಿಂದ 50,000ಕ್ಕೂ ಹೆಚ್ಚು ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಭೋಗರೈ, ಬಾಲ್ಯೆಪಾಲ್, ಬಸ್ತಾ ಭಾಗದ 17 ಪಂಚಾಯಿತಿಗಳು ಮತ್ತು ಜಲೇಶ್ವರ್ ರಾಷ್ಟ್ರೀಯ ಅಧಿಸೂಚಿತ ವಲಯದ ಅರ್ಧಭಾಗ ಜಲಾವೃತವಾಗಿವೆ. ನದಿ ಪಾತ್ರದ ಜನರಿಗೆ ಎಚ್ಚರಿಕೆ ನೀಡಿದ್ದು, ರಕ್ಷಣೆ ಮತ್ತು ಪರಿಹಾರ ಕಾರ್ಯ ಆರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಾರ್ಖಂಡ್‌ನ ಚಾಂದಿಲ್ ಅಣೆಕಟ್ಟೆಯಿಂದ ಏಕಾಏಕಿ ನೀರು ಬಿಡುಗಡೆ ಮಾಡಿದ್ದರಿಂದ ಸುವರ್ಣರೇಖಾ ನದಿ ಅಪಾಯಮಟ್ಟ ಮೀರಿ ಹರಿಯುತ್ತಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ತಿಳಿಸಿದ್ದಾರೆ.

45 ದಿನಗಳ ಬಳಿಕ ದತ್ತಾಂಶ ಅಳಿಸಿಹಾಕುವ ನಿರ್ದೇಶನಕ್ಕೆ ರಾಹುಲ್ ಆಕ್ಷೇಪ

ರಾಹುಲ್–ಇ.ಸಿ ಜಟಾಪಟಿ

ನವದೆಹಲಿ (ಪಿಟಿಐ): ಚುನಾವಣೆ ಪ್ರಕ್ರಿಯೆಗೆ ಸಂಬಂಧಿಸಿದ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ, ವೆಬ್‌ಕಾಸ್ಟಿಂಗ್ ಮತ್ತು ಇತರೆ ಫೋಟೊ, ವಿಡಿಯೊಗಳನ್ನು ಚುನಾವಣೆ ನಡೆದ 45 ದಿನದ ಬಳಿಕ ಅಳಿಸಿಹಾಕಬೇಕು ಎನ್ನುವ ಚುನಾವಣಾ ಆಯೋಗದ (ಇ.ಸಿ) ನಿರ್ದೇಶನದ ಬಗ್ಗೆ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಕಿಡಿ ಕಾರಿದ್ದಾರೆ. ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿರುವ ಅವರು, ಮತದಾರರ ಪಟ್ಟಿ, ಚುನಾವಣಾ ದತ್ತಾಂಶಗಳನ್ನು ಬಹಿರಂಗಪಡಿಸುವಂತೆ ಆಗ್ರಹಿಸಿದ್ದಾರೆ. ರಾಹುಲ್ ಅವರ ಆರೋಪಗಳನ್ನು ತಳ್ಳಿಹಾಕಿರುವ ಆಯೋಗವು, ಈ ಬೇಡಿಕೆಯು ಜನಪ್ರತಿನಿಧಿ ಕಾಯ್ದೆಯ ಉಲ್ಲಂಘನೆಯಾಗುತ್ತದೆ ಎಂದು ಪ್ರತಿಕ್ರಿಯೆ ನೀಡಿದೆ.

‘ಮ್ಯಾಚ್‌ಫಿಕ್ಸಿಂಗ್ ನಡೆದಿದೆ’



- ಕಾನೂನು ಬದಲಿಸಿ ಸಿ.ಸಿ.ಟಿ.ವಿ. ದೃಶ್ಯಾವಳಿ, ಮತದಾರರ ಪಟ್ಟಿಗಳನ್ನು ಮರೆಮಾಚಲಾಗುತ್ತಿದೆ
- ಚುನಾವಣಾ ಫೋಟೊ, ವಿಡಿಯೊ ಒಂದು ವರ್ಷದ ಬಳಿಕವಲ್ಲ, 45 ದಿನಗಳಲ್ಲೇ ನಾಶವಾಗುತ್ತಿವೆ
- ಯಾರು ಜನರ ಪ್ರಶ್ನೆಗೆ ಉತ್ತರ ನೀಡಬೇಕಿತ್ತೋ ಅವರೇ ಸಾಕ್ಷ್ಯನಾಶಕ್ಕೆ ಮುಂದಾಗಿದ್ದಾರೆ
- ಚುನಾವಣೆಗೆ ಸಂಬಂಧಿಸಿದಂತೆ ಒಳ ಒಪ್ಪಂದ ನಡೆದಿದೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ
- ಒಳ ಒಪ್ಪಂದ ನಡೆದಿರುವ ಚುನಾವಣೆಯು ಪ್ರಜಾಪ್ರಭುತ್ವದ ಪಾಲಿಗೆ ವಿಷವಾಗಿ ಪರಿಣಮಿಸುತ್ತದೆ

‘ಮತದಾರರ ಭದ್ರತೆಗೆ ಆದ್ಯತೆ’

- ದಾಖಲೆಗಳನ್ನು ಸಾರ್ವಜನಿಕಗೊಳಿಸುವುದು ಮತದಾರರ ಖಾಸಗೀತನದ ಉಲ್ಲಂಘನೆಯಾಗುತ್ತದೆ
- ಮತದಾರರ ಭದ್ರತೆ, ಪ್ರಜಾಪ್ರಭುತ್ವದ ಪ್ರಕ್ರಿಯೆಗಳ ಸುರಕ್ಷತೆಯ ವಿಚಾರದಲ್ಲಿ ರಾಜಿಯಾಗುವುದಿಲ್ಲ
- 1950–51 ಜನಪ್ರತಿನಿಧಿ ಕಾಯ್ದೆ, ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಈ ಬೇಡಿಕೆ ಉಲ್ಲಂಘಿಸುತ್ತಿದೆ
- ಯಾವ ಮತದಾರ ಯಾವ ಪಕ್ಷ/ವ್ಯಕ್ತಿಗೆ ಮತ ನೀಡಿದ್ದಾರೆಂದು ವಿಡಿಯೊದಲ್ಲಿ ಗುರುತಿಸಬಹುದು
- ಇದರಿಂದ ಮತದಾರರು ಸಮಾಜ ಘಾತುಕ ಶಕ್ತಿಗಳಿಂದ ಒತ್ತಡ, ಬೆದರಿಕೆ ಎದುರಿಸಬೇಕಾಗುತ್ತದೆ
- ಚುನಾವಣೆ ಪ್ರಕ್ರಿಯೆಯನ್ನು ರೆಕಾರ್ಡ್ ಮಾಡುವುದು ಕಡ್ಡಾಯವಲ್ಲ, ಇದು ಆಯೋಗದ ಆಂತರಿಕ ನಿರ್ವಹಣಾ ಸಾಧನವಷ್ಟೇ
- 45 ದಿನಗಳ ಒಳಗೆ ಫಲಿತಾಂಶ ಪ್ರಶ್ನಿಸಿ ಅರ್ಜಿ ಸಲ್ಲಿಕೆಯಾದರೆ, ಅಂಥ ವಿಡಿಯೊ ಅಳಿಸಿಹಾಕುವುದಿಲ್ಲ

ವಿರಳ ಗುಂಪಿನ ರಕ್ತದಾನಿಗಳ ‘ರಿಜಿಸ್ಟ್ರಿ’ ಸಿದ್ಧ



ನವದೆಹಲಿ: ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ (ಐಸಿಎಂಆರ್) ಸಹಯೋಗದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯುನೊಹಿಮಟಾಲಜಿಯು (ಎನ್‌ಐಐಎಚ್) ವಿರಳ ಗುಂಪಿನ ರಕ್ತದಾನಿಗಳ ರಿಜಿಸ್ಟ್ರಿಯನ್ನು ರಚಿಸಿದೆ.

ರಕ್ತದ ಲಭ್ಯತೆ ಬಗ್ಗೆ ಮಾಹಿತಿ ನೀಡುವ ‘ಇ–ರಕ್ತಕೋಶ’ ಆನ್‌ಲೈನ್ ವೇದಿಕೆಯಲ್ಲಿ ಈ ವಿರಳ ಗುಂಪಿನ ರಕ್ತದಾನಿಗಳ ‘ರಿಜಿಸ್ಟ್ರಿ’ಯೂ ಲಭ್ಯವಾಗುವಂತೆ ಮಾಡಲು ಆರೋಗ್ಯ ಸೇವೆಗಳ ಮಹಾನಿರ್ದೇಶಕರೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದು ಐಸಿಎಂಆರ್‌ನ ಸಿಆರ್‌ಎಚ್‌ಸಿಎಂ ನಿರ್ದೇಶಕಿ ಡಾ.ಮನೀಶಾ ಮಡಕೈಕರ್ ತಿಳಿಸಿದ್ದಾರೆ.

ಯಾರ್‍ಯಾರಿಗೆ ಉಪಯೋಗ?

- ವಿರಳ ರಕ್ತದ ಗುಂಪಿನ ರೋಗಿಗಳು
- ಥಲಸ್ಸೆಮಿಯಾ ರೋಗಿಗಳು
- ಕುಡುಗೋಲು ಕಣ ರಕ್ತಹೀನತೆ (ಸಿಕಲ್ ಸೆಲ್)ಯಿಂದ ಬಳಲುತ್ತಿರುವವರು

ವಿರಳ ರಕ್ತದ ಗುಂಪುಗಳು

- ಬಾಂಬೆ ರಕ್ತದ ಗುಂಪುಗಳು
- ಎಬಿ ನೆಗೆಟಿವ್
- ಎಬಿ ಪಾಸಿಟಿವ್
- ಎ ನೆಗೆಟಿವ್
- ಬಿ ನೆಗೆಟಿವ್
- ಒ ನೆಗೆಟಿವ್

ಅಂಕಿ ಅಂಶ

4,000 ಭಾರತದಲ್ಲಿರುವ ಪರವಾನಗಿ ಪಡೆದ ರಕ್ತನಿಧಿ ಕೇಂದ್ರಗಳ ಸಂಖ್ಯೆ

27 ದೇಶಗಳು ರಾಷ್ಟ್ರೀಯ ವಿರಳ ಗುಂಪಿನ ರಕ್ತದಾನಿಗಳ ರಿಜಿಸ್ಟ್ರಿ ಹೊಂದಿವೆ

ಸಿಇಟಿ ಕೌನ್ಸೆಲಿಂಗ್ ಮತ್ತಷ್ಟು ವಿಳಂಬ

ಕೋರ್ಸ್	ಅರ್ಹತೆ ಪಡೆದವರು
ಎಂಜಿನಿಯರಿಂಗ್	2,62,195
ಯೋಗ ಮತ್ತು ನ್ಯಾಚುರೋಪತಿ	1,98,679
ಬಿ.ಎಸ್‌ಸಿ (ಕೃಷಿ)	2,14,588
ಪಶು ವೈದ್ಯಕೀಯ	2,18,282
ಬಿ–ಫಾರ್ಮಾ	2,66,256
ಫಾರ್ಮಾ–ಡಿ	2,66,757
ಬಿ.ಎಸ್‌ಸಿ (ನರ್ಸಿಂಗ್)	2,08,171

ಒಂದನೇ ಪುಟದಿಂದ...

ಆದರೆ, ರಾಷ್ಟ್ರೀಯ ವೈದ್ಯಕೀಯ ಆಯೋಗ ಪ್ರವೇಶಕ್ಕೆ ಲಭ್ಯವಿರುವ ವೈದ್ಯಕೀಯ ಸೀಟುಗಳ ಪಟ್ಟಿ ಅಂತಿಮಗೊಳಿಸದ ಕಾರಣ ರಾಜ್ಯದಲ್ಲೂ ಸೀಟು ಹಂಚಿಕೆ ಪ್ರಕ್ರಿಯೆ ವಿಳಂಬವಾಗಿದೆ.

ಸಿಇಟಿ ಮೂಲಕ ಹಂಚಿಕೆ ಆಗುವ ಸೀಟುಗಳಲ್ಲಿ ಪಶುವೈದ್ಯಕೀಯ, ಫಾರ್ಮಾ ಸೀಟು ಹೊರತುಪಡಿಸಿದರೆ ಇತರೆ ಕೋರ್ಸ್‌ಗಳಲ್ಲಿ ಲಭ್ಯವಿರುವ ಸೀಟುಗಳ ಪಟ್ಟಿಯೂ ಅಂತಿಮಗೊಂಡಿಲ್ಲ. ಎಂಜಿನಿಯರಿಂಗ್‌ನಲ್ಲಿ ಲಭ್ಯವಿರುವ 1.35 ಲಕ್ಷ ಸೀಟುಗಳ ಕರಡು ಪಟ್ಟಿಯನ್ನು ಕೆಇಎ ಬಿಡುಗಡೆ ಮಾಡಿದೆ. ಆದರೆ, ಯೋಗ ಮತ್ತು ನ್ಯಾಚುರೋಪಥಿ, ಬಿ.ಎಸ್‌ಸಿ ಕೃಷಿ, ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಸೀಟುಗಳ ಪಟ್ಟಿಯೂ ಪ್ರಕಟವಾಗಿಲ್ಲ.

‘ವೈದ್ಯಕೀಯ ಸೀಟುಗಳ ಪಟ್ಟಿಗಾಗಿ ಕಾಯುತ್ತಿದ್ದೇವೆ. ಪಟ್ಟಿ ಪ್ರಕಟವಾದ ತಕ್ಷಣ ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಮಾಡಲಾಗುತ್ತದೆ. ನಂತರ ಒಂದೆರಡು ದಿನಗಳಲ್ಲೇ ಸಿಇಟಿ ಕೌನ್ಸೆಲಿಂಗ್ ಆರಂಭಿಸಲಾಗುವುದು. ಇದಕ್ಕೆಲ್ಲ ಒಂದು ವಾರಕ್ಕೂ ಹೆಚ್ಚು ಸಮಯ ಬೇಕಾಗುತ್ತದೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದರು.

ಇ–ಹಾಜರಾತಿ ಕಡ್ಡಾಯ

ಒಂದನೇ ಪುಟದಿಂದ...

ಯೋಜನೆ ಅನುಷ್ಠಾನಗೊಳಿಸಲು ಅಗತ್ಯವಾದ ಕೃತಕ ಬುದ್ಧಿಮತ್ತೆ ಆಧಾರಿತ ಮೊಬೈಲ್ ಹಾಗೂ ಇತರೆ ಪರಿಕರಗಳನ್ನು ರಾಜ್ಯದ 52,686 ಶಾಲೆಗಳಲ್ಲಿ ಅಳವಡಿಸಲು ₹5 ಕೋಟಿ ಅನುದಾನ ನೀಡಲಾಗಿದೆ. ಯೋಜನೆಯ ಅನುಷ್ಠಾನಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ನಿಯಮಗಳ ಪ್ರಕಾರ ಟೆಂಡರ್ ಆಹ್ವಾನಿಸುವ ಅಧಿಕಾರವನ್ನು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ ನೀಡಲಾಗಿದೆ.

ಹಲವು ಅಕ್ರಮಗಳಿಗೆ ತಡೆ: ಸರ್ಕಾರಿ ಶಾಲೆ ಮಕ್ಕಳಿಗೆ ಸರ್ಕಾರ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಮಧ್ಯಾಹ್ನದ ಬಿಸಿಯೂಟ, ಕ್ಷೀರ ಭಾಗ್ಯ ಯೋಜನೆ ಅಡಿ ಹಾಲು ವಿತರಣೆ, ವಾರಕ್ಕೆ ಆರು ದಿನಗಳು ಮೊಟ್ಟೆ, ಬಾಳೆ ಹಣ್ಣು ನೀಡುತ್ತಿದೆ. ಅದಕ್ಕಾಗಿ ಪ್ರತಿ ವರ್ಷ ₹4 ಸಾವಿರ ಕೋಟಿಗೂ ಅಧಿಕ ಮೊತ್ತ ವೆಚ್ಚ ಮಾಡಲಾಗುತ್ತಿದೆ. ಕೆಲ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇದ್ದರೂ, ಹೆಚ್ಚು ತೋರಿಸಿಕೊಂಡು ಯೋಜನೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬ ಆರೋಪಗಳು ಎದುರಾಗಿದ್ದವು.

ಮಕ್ಕಳ ಸಂಖ್ಯೆ ನಿಯಮಕ್ಕಿಂತ ಕಡಿಮೆ ಇರುವ ಶಾಲೆಯ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ, ಬೇರೆ ಶಾಲೆಗೆ ವರ್ಗಾವಣೆ ಮಾಡಲಾಗುತ್ತಿದೆ. ಇಂಥ ಸಮಯದಲ್ಲಿ ಸ್ಥಳ ನಿಯೋಜನೆಯಿಂದ ತಪ್ಪಿಸಿಕೊಳ್ಳಲು ಶಿಕ್ಷಕರು ಕೃತಕ ಹಾಜರಾತಿ ಸೃಷ್ಟಿಸುತ್ತಿರುವ ಆರೋಪವೂ ಇತ್ತು. ಖಾಸಗಿ ಶಾಲೆಗಳು ಫಲಿತಾಂಶದ ಪ್ರತಿಷ್ಠೆಗೆ ಬಿದ್ದು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ, ಅಲ್ಲೇ ಪರೀಕ್ಷೆ ಬರೆಯಿಸುತ್ತಿರುವ ಪ್ರಕರಣಗಳು ದಾಖಲಾಗಿದ್ದವು. ಕೆಲ ಅನುದಾನಿತ ಶಾಲೆಗಳಲ್ಲಿ ಮಕ್ಕಳು ದಾಖಲಾಗದಿದ್ದರೂ, ಹಾಜರಾತಿ ತೋರಿಸಿ, ಅನುದಾನ, ಶಿಕ್ಷಕರ ವೇತನ ಪಡೆಯುತ್ತಿದ್ದವು. ಇಂತಹ ಎಲ್ಲ ವಾಮಮಾರ್ಗಕ್ಕೂ ಇ–ಹಾಜರಾತಿ ಕಡಿವಾಣ ಹಾಕಲಿದೆ.

ಯೋಜನೆಯ ಪ್ರಯೋಜನೆಗಳು

- ವಿದ್ಯಾರ್ಥಿಗಳ ಹಾಜರಾತಿಯಲ್ಲಿ ನಿಖರತೆ
- ಕಡಿಮೆ ಸಮಯದಲ್ಲಿ ಹಾಜರಾತಿ ದಾಖಲು
- ಪ್ರತಿದಿನ ಶಾಲೆಗೆ ಬರುವ ಮಕ್ಕಳ ಖಚಿತತೆ
- ಮಕ್ಕಳ ಹಾಜರಾತಿ ಮೇಲಧಿಕಾರಿಗಳಿಗೆ ಲಭ್ಯ
- ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಉಪಯುಕ್ತ
- ಅನಗತ್ಯ, ಹೆಚ್ಚುವರಿ ಅನುದಾನದ ಹಂಚಿಕೆಗೆ ತಡೆ
- ಶೈಕ್ಷಣಿಕ ವ್ಯವಸ್ಥೆಯಲ್ಲಿ ಸುಧಾರಣೆಗೆ ನಾಂದಿ

ಇ–ಹಾಜರಾತಿ ಪ್ರಕ್ರಿಯೆ ಹೇಗೆ?

ಪ್ರತಿ ಶಾಲೆಯಲ್ಲೂ ವೆಕ್ಟರ್–ಆಧಾರಿತ ಸುಧಾರಿತ ತಂತ್ರಜ್ಞಾನದ ಮುಖಚರ್ಯೆ ಗುರುತಿಸುವ ಯಂತ್ರ ಅಳವಡಿಸಲಾಗುತ್ತದೆ. ಅದರಲ್ಲಿ ಸೆರೆ ಹಿಡಿದ ವಿದ್ಯಾರ್ಥಿಗಳ ದತ್ತಾಂಶವನ್ನು ಮೊಬೈಲ್ ಆ್ಯಪ್ ಮೂಲಕ ವಿಶಿಷ್ಟ ಗುರುತಿಸುವ ಸಾಧನಕ್ಕೆ ರವಾನಿಸಲಾಗುತ್ತದೆ. ಎಸ್‌ಎಟಿಎಸ್ ತಂತ್ರಾಂಶಕ್ಕೂ (ವಿದ್ಯಾರ್ಥಿ ಸಾಮರ್ಥ್ಯ ಪತ್ತೆ ವ್ಯವಸ್ಥೆ) ಸಂಪರ್ಕ ಕಲ್ಪಿಸಲಾಗಿದೆ.

ಈ ಎಲ್ಲ ಪ್ರಕ್ರಿಯೆಯ ಕೇಂದ್ರ ಘಟಕವನ್ನು ವಿಕಾಸ ಸೌಧದಲ್ಲಿ ಸ್ಥಾಪಿಸಲಾಗುತ್ತದೆ. ರಾಜ್ಯವಲಯದಿಂದ ನಿರ್ವಹಿಸಲ್ಪಡುತ್ತದೆ. ಇದು ವಿದ್ಯಾರ್ಥಿಗಳ ಗೌಪ್ಯತೆ ಮತ್ತು ಸುರಕ್ಷತೆಯನ್ನು ಖಾತ್ರಿಪಡಿಸುತ್ತದೆ

‘ಘೋಷಣೆ ಕಲೆಯಲ್ಲಷ್ಟೇ ಪ್ರಧಾನಿ ಮೋದಿ ಪರಿಣತ’

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಘೋಷಣೆಗಳನ್ನು ಸೃಷ್ಟಿಸುವ ಕಲೆಯಲ್ಲಿ ಪರಿಣತಿ ಹೊಂದಿದ್ದಾರೆಯೇ ಹೊರತು, ಸಮಸ್ಯೆಗಳಿಗೆ ಪರಿಹಾರ ನೀಡುವುದರಲ್ಲಲ್ಲ. ‘ಭಾರತದಲ್ಲೇ ತಯಾರಿಸಿ’ (ಮೇಕ್ ಇನ್ ಇಂಡಿಯಾ) ಉಪಕ್ರಮದ ಹೊರತಾಗಿಯೂ ದೇಶದ ಉತ್ಪಾದನಾ ಕ್ಷೇತ್ರವು ಅತ್ಯಂತ ಕನಿಷ್ಠ ಮಟ್ಟಕ್ಕೆ ಇಳಿದಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

‘ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗಾಗಿ ‘ಮೇಕ್ ಇನ್ ಇಂಡಿಯಾ’ದ ಭರವಸೆ ನೀಡಲಾಯಿತು. ಆದರೂ ಉತ್ಪಾದನಾ ಕ್ಷೇತ್ರದಲ್ಲಿ ದಾಖಲೆ ಪ್ರಮಾಣದಲ್ಲಿ ಕುಸಿತ ಕಾಣಲು ಕಾರಣವೇನು? ಯುವ ಸಮುದಾಯವು ಗರಿಷ್ಠ ಪ್ರಮಾಣದಲ್ಲಿ ನಿರುದ್ಯೋಗ ಸಮಸ್ಯೆ ಅನುಭವಿಸುತ್ತಿದೆ. ಚೀನಾದಿಂದ ಆಮದು ಮಾಡುತ್ತಿರುವ ಉತ್ಪನ್ನಗಳು ಯಾಕೆ ದ್ವಿಗುಣಗೊಂಡಿವೆ’ ಎಂದು ಪ್ರಶ್ನಿಸಿದ್ದಾರೆ.

‘2014ರಿಂದಲೂ ಉತ್ಪಾದನಾ ಕ್ಷೇತ್ರವು ದೇಶದ ಆರ್ಥಿಕತೆಯ ಶೇ 14ರಷ್ಟು ಕುಸಿತ ದಾಖಲಿಸಿದೆ. ಅವರಿಗೆ (ಮೋದಿ) ಹೊಸ ಆಲೋಚನೆಗಳಿಲ್ಲ. ಈಗ ಶರಣಾಗತಿಯಾಗಿದ್ದಾರೆ. ಅಬ್ಬರದ ಪ್ರಚಾರ ಪಡೆದುಕೊಂಡು ಜಾರಿಗೆ ತಂದಿದ್ದ ಪಿಎಲ್‌ಐ ಯೋಜನೆಯನ್ನು ಸದ್ದಿಲ್ಲದೇ ಹಿಂದಕ್ಕೆ ಪಡೆಯಲಾಗಿದೆ’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ನವದೆಹಲಿಯ ನೆಹರೂ ಮಾರುಕಟ್ಟೆಯಲ್ಲಿ ಶಿವಂ, ಸೈಫ್ ಹೆಸರಿನ ಮೊಬೈಲ್ ರಿಪೇರಿ ಟೆಕ್ನಿಷಿಯನ್‌ನನ್ನು ಭೇಟಿಯಾದೆ. ಇಬ್ಬರೂ ಬುದ್ಧಿವಂತರಾಗಿದ್ದು, ಉತ್ತಮ ಕೌಶಲ ಹೊಂದಿದ್ದಾರಾದರೂ ಅವಕಾಶಗಳು ಲಭ್ಯವಿಲ್ಲ’ ಎಂದು ಸಂವಾದ ನಡೆಸಿದ ವಿಡಿಯೊವನ್ನು ಅಪ್‌ಲೋಡ್ ಮಾಡಿದ್ದಾರೆ.

‘ಭಾರತದಲ್ಲೇ ತಯಾರಿಸಿ’ ಹಾಗೂ ‘ಭಾರತದಲ್ಲೇ ಜೋಡಿಸಿ’ ಎಂಬ ಎರಡರ ನಡುವಿನ ವ್ಯತ್ಯಾಸ ವಿವರಿಸಿದ ರಾಹುಲ್ ಗಾಂಧಿ, ‘ನಾವು ಅಲ್ಲಿಂದ ತರಿಸಿಕೊಂಡ ವಸ್ತುಗಳನ್ನು ಇಲ್ಲಿಯೇ ಜೋಡಿಸುತ್ತೇವೆ. ನಾವು ಯಾವುದನ್ನೂ ತಯಾರಿಸುವುದಿಲ್ಲ. ಇದರಿಂದ ಚೀನಾ ಲಾಭ ಮಾಡಿಕೊಳ್ಳುತ್ತಿದೆ’ ಎಂದರು.

> **ಸಮಾಜದಲ್ಲಿರುವ ಎಲ್ಲ ವರ್ಗದ ಜಾತಿಗಳಿಗೆ ಸಮಾನದ ಅಧಿಕಾರ ಪಾಲು ಸಿಗಬೇಕಾದರೆ ದೇಶದಾದ್ಯಂತ ಜಾತಿಗಣತಿ ನಡೆಸುವುದು ಅಗತ್ಯ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಮುಖ್ಯಾಂಶಗಳು

- ನಾನು ಜಾತಿಗಣತಿ ವಿಚಾರ ಪ್ರಸ್ತಾಪಿಸಿದ ವೇಳೆ ಕೇಂದ್ರ ಸರ್ಕಾರ ಮೆಚ್ಚಿಕೊಂಡಿರಲಿಲ್ಲ
- ಗಣತಿ ವೇಳೆ ಪಾರದರ್ಶಕತೆ ಕಾಯ್ದುಕೊಳ್ಳುವುದು ಅಗತ್ಯ

‘ಮರು ಗಣತಿಗೆ ಶಿಕ್ಷಕರ ಬಳಕೆ ಇಲ್ಲ’

ಒಂದನೇ ಪುಟದಿಂದ...

ವರದಿ ಬೇಗ ಕೊಡಿ: ನಗರದಲ್ಲಿ ನಡೆದ ಜಿಲ್ಲಾ ಮಟ್ಟದ ‘ಸಂವಿಧಾನ ಓದು ಶಿಬಿರ’ದ ಉದ್ಘಾಟನೆ ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದ ಸಚಿವ ಮಧು ಬಂಗಾರಪ್ಪ, ‘ಒಳಮೀಸಲಾತಿ ಅನುಷ್ಠಾನದ ಹಿನ್ನೆಲೆಯಲ್ಲಿ ಶೀಘ್ರವೇ ಸರ್ಕಾರಕ್ಕೆ ಸಮೀಕ್ಷಾ ವರದಿ ಸಲ್ಲಿಸಿ’ ಎಂದು ಮನವಿ ಮಾಡಿದರು.

‘ಶಾಲಾ ಶಿಕ್ಷಣ ಇಲಾಖೆಯಲ್ಲಿ ಸದ್ಯ 51,000 ಶಿಕ್ಷಕರ ಕೊರತೆ ಇದೆ. ಅದರಲ್ಲಿ 18,000 ಶಿಕ್ಷಕರ ನೇಮಕಕ್ಕೆ ಸರ್ಕಾರದ ಒಪ್ಪಿಗೆ ದೊರೆತಿದೆ. ಒಳಮೀಸಲಾತಿ ಹಂಚಿಕೆ ಕಾರ್ಯ ಪೂರ್ಣಗೊಂಡಲ್ಲಿ ನೇಮಕಾತಿಗೆ ಚಾಲನೆ ದೊರೆಯಲಿದೆ. ಸದ್ಯ ಅತಿಥಿ ಶಿಕ್ಷಕರ ನೇಮಕದ ಮೂಲಕ ಆ ಕೊರತೆ ನೀಗಿಸಿಕೊಳ್ಳಲಾಗಿದೆ’ ಎಂದು ತಿಳಿಸಿದರು.

‘ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (ಕೆಪಿಎಸ್) ಬೇಡಿಕೆ ಹೆಚ್ಚಿದೆ. ಹೀಗಾಗಿ ಅಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಹಾಗೆಯೇ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ ಎರಡು ಕೆಪಿಎಸ್ ಆರಂಭಿಸಲು ಉದ್ದೇಶಿಸಲಾಗಿದೆ’ ಎಂದು ಅವರು ಹೇಳಿದರು.

ಕತ್ತು ಹಿಸುಕಿ ಸೊಸೆ ಕೊಂದ ಮಾವ

ಫರೀದಾಬಾದ್ (ಪಿಟಿಐ): ಸೊಸೆಯನ್ನು ಹತ್ಯೆ ಮಾಡಿ, ಮೃತದೇಹವನ್ನು ಮನೆಯ ಮುಂದೆ ಹೂತು ಹಾಕಿ, ಆ ಗುಂಡಿಯನ್ನು ಕಾಂಕ್ರೀಟ್‌ನಿಂದ ಮುಚ್ಚಿಸಿದ್ದ 54 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಇಲ್ಲಿಯ ರೋಷನ್ ನಗರ ನಿವಾಸಿ ಭೂಪ್ ಸಿಂಗ್, ಏ.21ರಂದು ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಸೊಸೆ ತನ್ನೂ ಕುಮಾರ್ ಕೋಣೆಗೆ ಹೋಗಿ, ಆಕೆಯ ದುಪಟ್ಟಾವನ್ನು ಕತ್ತಿಗೆ ಸುತ್ತಿ ಹತ್ಯೆ ಮಾಡಿದ್ದಾರೆ.

‘ತನ್ನೂಳಿಂದಾಗಿ ಮನೆಯ ಸದಸ್ಯರಲ್ಲಿ ವೈಮನಸ್ಸು ಉಂಟಾಗಿತ್ತು. ಹೀಗಾಗಿ ನಾನು ಆಕೆಯನ್ನು ಕೊಂದೆ’ ಎಂದು ಭೂಪ್ ಹೇಳಿದ್ದಾರೆ. ಆದರೆ ಇದು ವರದಕ್ಷಿಣೆಗಾಗಿ ನಡೆಸಿದ ಕ್ರೌರ್ಯ ಎಂದು ಕಂಡುಬಂದಿದೆ. ಕೊಲೆಗೆ ನಿಖರ ಕಾರಣದ ಕುರಿತು ತನಿಖೆ ಮಾಡಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಭೂಪ್ ಸಿಂಗ್ ಅವರನ್ನು ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಲಯ ಆದೇಶಿಸಿದೆ.

‘ಬೇರೆ ಡಿಎನ್‌ಎ ಮಾದರಿ ನೀಡಿ’

ಅಹಮದಾಬಾದ್ (ಪಿಟಿಐ): ಅಹಮದಾಬಾದ್ ವಿಮಾನ ದುರಂತದಲ್ಲಿ ಮೃತಪಟ್ಟವರಲ್ಲಿ ಕೆಲವರ ಡಿಎನ್‌ಎ ಅವರ ಸಂಬಂಧಿಕರ ಡಿಎನ್‌ಎ ಜೊತೆ ಹೋಲಿಕೆ ಆಗದಿರುವ ಕಾರಣ, ಬೇರೆ ಸಂಬಂಧಿಕರ ಡಿಎನ್‌ಎ ಮಾದರಿಯನ್ನು ನೀಡುವಂತೆ ಸೂಚಿಸಲಾಗಿದೆ.

ಡಿಎನ್‌ಎ ಹೋಲಿಕೆಯಾಗದೆ ಮೃತದೇಹಗಳನ್ನು ಹಸ್ತಾಂತರಿಸಲು ಸಾಧ್ಯವಿಲ್ಲ ಎಂದು ಅಹಮದಾಬಾದ್ ಸಾರ್ವಜನಿಕ ಆಸ್ಪತ್ರೆಯ ಅಧಿಕಾರಿ ರಾಕೇಶ್ ಜೋಶಿ ತಿಳಿಸಿದ್ದಾರೆ.

ಎಂಟು ಕುಟುಂಬದವರ ಮೊದಲ ಡಿಎನ್‌ಎ ಮಾದರಿ ಮೃತದೇಹಗಳೊಂದಿಗೆ ತಾಳೆಯಾಗಿಲ್ಲ. ಹಾಗಾಗಿ ಮತ್ತೊಬ್ಬ ಹತ್ತಿರದ ಸಂಬಂಧಿಯ ಡಿಎನ್‌ಎ ಮಾದರಿಯನ್ನು ಕೇಳಲಾಗಿದೆ ಎಂದು ತಿಳಿಸಿದ್ದಾರೆ.

ಚಿತ್ರನಿರ್ಮಾಪಕನ ಸಾವು ದೃಢ

ಚಿತ್ರ ನಿರ್ಮಾಪಕ ಮಹೇಶ್ ಜೀರಾವಾಲ ಅವರು ಅಹಮದಾಬಾದ್ ವಿಮಾನ ದುರಂತದಲ್ಲಿಯೇ ಮೃತಪಟ್ಟಿರುವುದು ದೃಢಪಟ್ಟಿದೆ. ‘ದುರಂತ ನಡೆದ ದಿನದಿಂದ ನಾಪತ್ತೆಯಾಗಿದ್ದ ಮಹೇಶ್ ಅವರ ಡಿಎನ್‌ಎ ಮತ್ತು ಸಂಬಂಧಿಕರ ಡಿಎನ್‌ಎ ಹೋಲಿಕೆಯಾಗಿದೆ’ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ‘ವಿಮಾನ ಪತನಗೊಂಡ ವೇಳೆ ಸಮೀಪದ ರಸ್ತೆಯಲ್ಲಿ ಮಹೇಶ್ ಅವರು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

ಮಧ್ಯಂತರ ಪರಿಹಾರ ₹25 ಲಕ್ಷ ಬಿಡುಗಡೆ (ಮುಂಬೈ ವರದಿ): ವಿಮಾನ ದುರಂತದಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಗಳಿಗೆ ಮಧ್ಯಂತರ ಪರಿಹಾರವಾಗಿ ತಲಾ ₹25 ಲಕ್ಷ ಬಿಡುಗಡೆ ಮಾಡಿರುವುದಾಗಿ ಏರ್ ಇಂಡಿಯಾ ಹೇಳಿದೆ.

ಏರ್ ಇಂಡಿಯಾದ ಮಾತೃಸಂಸ್ಥೆಯಾದ ಟಾಟಾ ಸನ್ಸ್ ಈಗಾಗಲೇ ದುರಂತದಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ಘೋಷಿಸಿದೆ. ಇದರೊಂದಿಗೆ ಹೆಚ್ಚುವರಿಯಾಗಿ ₹25ಲಕ್ಷ ಮಧ್ಯಂತರ ಪರಿಹಾರ ಲಭಿಸಲಿದೆ.

ವಿಮಾನ ತುರ್ತು ಭೂಸ್ಪರ್ಶ

ಒಂದನೇ ಪುಟದಿಂದ...

ವಿಮಾನದಲ್ಲಿ ಇಂಧನ ಪ್ರಮಾಣ ತೀರಾ ಕಡಿಮೆ ಇದ್ದಿದ್ದರಿಂದ ಪೈಲಟ್ ತುರ್ತು ಸಮಸ್ಯೆಯ ಸಂದೇಶ (‘ಮೇಡೇ’ ಕರೆ) ನೀಡಿದರು. ತಕ್ಷಣವೇ ಬೆಂಗಳೂರು ನಿಲ್ದಾಣದಲ್ಲಿ ತುರ್ತು ಲ್ಯಾಂಡಿಂಗ್ ಮಾಡುವಂತೆ ‘ಎಟಿಸಿ’ ಸೂಚಿಸಿತು. ವಿಮಾನವನ್ನು 8.15ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಪೈಲಟ್ ಸುರಕ್ಷಿತವಾಗಿ ಇಳಿಸಿದರು ಎಂದು ಇಂಡಿಗೊ ವಿಮಾನದ ವಕ್ತಾರರೊಬ್ಬರು ಮಾಹಿತಿ ನೀಡಿದ್ದಾರೆ.

‘ವಿಮಾನ ತುರ್ತು ಭೂಸ್ಪರ್ಶದ ಸಂದರ್ಭದಲ್ಲಿ ಅನುಸರಿಸಬೇಕಾದ ಎಲ್ಲ ಶಿಷ್ಟಾಚಾರಗಳನ್ನು ಪಾಲಿಸಲಾಗಿತ್ತು. ಆಂಬುಲೆನ್ಸ್, ವೈದ್ಯಕೀಯ ಮತ್ತು ಅಗ್ನಿಶಾಮಕ ಸಿಬ್ಬಂದಿ ಸನ್ನದ್ಧವಾಗಿದ್ದರು’ ಎಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ. ಗುರುವಾರ ರಾತ್ರಿ 10.24ಕ್ಕೆ ಮರಳಿ ಈ ವಿಮಾನವು ಬೆಂಗಳೂರಿನಿಂದ ಚೆನ್ನೈಗೆ ಪ್ರಯಾಣಿಸಿತು ಎಂದಿದ್ದಾರೆ.

‘ಸಮಗ್ರ ವಿಶೇಷ ಮೌಲ್ಯಮಾಪನ’

ನವದೆಹಲಿ: ದೇಶದ ವಾಯುಯಾನ ವ್ಯವಸ್ಥೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲ ಸಂಕೀರ್ಣ ಮೌಲ್ಯಮಾಪನವನ್ನು ಕೈಬಿಟ್ಟು, ‘ಸಮಗ್ರ ವಿಶೇಷ ಮೌಲ್ಯಮಾಪನ’ಕ್ಕೆ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಮುಂದಾಗಿದೆ.

ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯ ಮಾನದಂಡಗಳು ಹಾಗೂ ದೇಶದ ವಾಯುಯಾನಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದನ್ನು ಖಚಿತಪಡಿಸುವ ಈ ವಿಶೇಷ ಮೌಲ್ಯಮಾಪನವು, ವಾರ್ಷಿಕ ಮೌಲ್ಯಮಾಪನಕ್ಕಿಂತ ಭಿನ್ನವಾಗಿರಲಿದೆ. ಅಹಮದಾಬಾದ್‌ನಲ್ಲಿ ಪತನಕ್ಕೀಡಾದ ವಾರದ ನಂತರ, ಡಿಜಿಸಿಎ ಫೈಜ್ ಅಹಮದ್ ಕಿದ್ವಾಯಿ ಅವರು ‘ಸಮಗ್ರ ವಿಶೇಷ ಮೌಲ್ಯಮಾಪನ’ಕ್ಕೆ ಸಂಬಂಧಿಸಿದ ವಿವರಣೆಯುಳ್ಳ ಸುತ್ತೋಲೆಯನ್ನು ಜೂನ್ 19ರಂದು ಹೊರಡಿಸಿದ್ದಾರೆ.

ಸಾಹಿತ್ಯದ ಜಗುಲಿ

ಸಾಹಿತ್ಯ ಪ್ರೇಮಿಯಾಗಿರುವ ಸಂಜನಾ ದೀದಿಯ ಕಥೆ ಇದು. ದೆಹಲಿಯಲ್ಲಿ ದೊಡ್ಡ ಮರದ ಕೆಳಗೆ ಕುಳಿತು ಪುಸ್ತಕ ಮಾರಾಟ ಮಾಡುವ ಇವರು ಈ ಜಾಗವನ್ನು ಸಾಹಿತ್ಯದ ಜಗುಲಿ ಮಾಡಿದ್ದಾರೆ.





ಆಕಾಶ್‌ದೀಪ್ ಸಾಗರ್ ಕೆ.

ಮೈಸೂರಿನಲ್ಲೊಬ್ಬ ಆಪದ್ಬಾಂಧವ

• ಕೆ.ನರಸಿಂಹಮೂರ್ತಿ

ಆಗಸ್ಟ್ 15, ಸುಮಾರು ಒಂದು ದಶಕಕ್ಕೂ ಹಿಂದೆ...

ಮೈಸೂರಿನ ಪಡುವಾರಹಳ್ಳಿಯ ಸರ್ಕಾರಿ ಶಾಲೆ. ಸ್ವಾತಂತ್ರ್ಯ ದಿನಾಚರಣೆಗೆ ಸಂಭ್ರಮದ ಸಿದ್ಧತೆ ನಡೆದಿತ್ತು. ದಿಢೀರನೆ ನಡೆದ ಘಟನೆಯೊಂದು ಎಲ್ಲರನ್ನೂ ದಿಗ್ಭ್ರಾಂತರನ್ನಾಗಿಸಿತ್ತು. ರಾಷ್ಟ್ರ ಧ್ವಜವನ್ನು ಕಟ್ಟಲು ಸುಮಾರು 15 ಅಡಿ ಎತ್ತರದ ಧ್ವಜಸ್ತಂಭವನ್ನು ಏರಿದ್ದ ಬಾಲಕಿಯೊಬ್ಬಳ ಕುತ್ತಿಗೆಗೆ ಧ್ವಜದ ಹಗ್ಗ ಸಿಲುಕಿ ನೇತಾಡತೊಡಗಿದ್ದಳು. ಜೀವ ಬಾಯಿಗೆ ಬಂದಿತ್ತು. ದೇಹ ನೀಲಿ ಬಣ್ಣಕ್ಕೆ ತಿರುಗುತ್ತಿತ್ತು. ಸಿಬ್ಬಂದಿಯ ಚೀರಾಟ ಕೇಳಿ ಶಾಲೆಯ ಹೊರಗಿದ್ದವರೂ ಧಾವಿಸಿ ಬಂದಿದ್ದರು.

ಪಿತೃತ್ವ ರಜೆ ಪಡೆದಿದ್ದ ಆಕಾಶ್‌ದೀಪ್ ಸಾಗರ್ ಕೆ. ಅವರೂ ಮನೆ ಕಂದಾಯ ಕಟ್ಟಲು ಅಗತ್ಯವಿದ್ದ ದಾಖಲೆ ಪತ್ರಗಳ ಜೆರಾಕ್ಸ್ ಮಾಡಿಸಿಕೊಂಡು ಆ ದಾರಿಯಲ್ಲೇ ಹೊರಟಿದ್ದರು. ವಿಷಯ ತಿಳಿದು ಶಾಲೆಯೊಳಕ್ಕೆ ಹೋಗಿದ್ದರು. ಬಾಲಕಿಯನ್ನು ನೋಡುತ್ತಲೇ ಧ್ವಜಸ್ತಂಭದತ್ತ ಧಾವಿಸಿದ ಅವರು ಅಲ್ಲಿಯೇ ಇದ್ದ ಒಬ್ಬರನ್ನು ತಮ್ಮ ಭುಜದ ಮೇಲೆ ಹತ್ತಿಸಿಕೊಂಡು, ಹಗ್ಗ ಕತ್ತರಿಸುವಂತೆ ಹೇಳಿ ಆಕೆಯನ್ನು ಕೆಳಕ್ಕಿಳಿಸಿದರು.

‘ಬಾಲಕಿಯ ಜೀವ ಹೋಗಿದೆ’ ಎಂದವರೇ ಹೆಚ್ಚು. ಆದರೆ ಆಕಾಶ್, ಆಕೆಯ ಕಣ್ಣರೆಪ್ಪೆಗಳ ಸಣ್ಣ ಅದುರುವಿಕೆಯನ್ನು ಗಮನಿಸಿ, ‘ಜೀವವಿದೆ’ ಎಂದರು. ಅವರೊಂದಿಗೇ ಇದ್ದ, ವಿಕ್ರಂ ಆಸ್ಪತ್ರೆಯ ಆಂಬುಲೆನ್ಸ್ ಡ್ರೈವರ್ ಹಾಗೂ ಸಂಬಂಧಿ ರಾಜೇಶ್, ‘ನೀವು ಕೈಜೋಡಿಸಿದರೆ ಕೂಡಲೇ ಆಸ್ಪತ್ರೆಗೆ ಸಾಗಿಸೋಣ’ ಎಂದರು.

ಕೂಡಲೇ ಆಕಾಶ್ ಬಾಲಕಿಯನ್ನು ಎತ್ತಿಕೊಂಡರು. ಆಂಬುಲೆನ್ಸ್ ಆಸ್ಪತ್ರೆಯತ್ತ ಧಾವಿಸಿತು. ಆಕೆಯ ಜೀವ ಉಳಿಯಿತು. ಅವರ ಪಿತೃತ್ವ ರಜೆಯೂ ಸಾರ್ಥಕವಾಯಿತು. ಆಕೆ ಈಗ ಗೃಹಿಣಿಯಾಗಿದ್ದಾರೆ.

ಈ ಘಟನೆ ನಡೆದು ಒಂದು ದಶಕ ಮೀರಿದೆ. ಆಗ ಅದು ದೊಡ್ಡ ಸುದ್ದಿಯಾಗಿತ್ತು. ವರ್ಷ ಮರೆತಿರುವ ಆಕಾಶ್ ಒಂದನ್ನು ಮಾತ್ರ ನೆನೆಪಿಟ್ಟುಕೊಂಡಿದ್ದಾರೆ. ಬಾಲಕಿಯನ್ನು ರಕ್ಷಿಸುವಾಗ, ಅವರ ಬೈಕಿನ ಪಾಕೆಟ್‌ನಲ್ಲಿ ಮನೆಯ ದಾಖಲೆಗಳು ಹಾಗೂ ಸಾವಿರಾರು ರೂಪಾಯಿ ಇತ್ತು. ಆಸ್ಪತ್ರೆಯಿಂದ ವಾಪಸು ಬಂದು ನೋಡಿದಾಗ ಎಲ್ಲವೂ ಇದ್ದಲ್ಲಿಯೇ ಇತ್ತು!

‘ಬಾಲಕಿಯ ಅದೃಷ್ಟ ಚೆನ್ನಾಗಿತ್ತು. ಹುಲ್ಲು ಕತ್ತರಿಸುವ ಕೂಲಿಯಾಳು ಅಲ್ಲೇ ಇದ್ದುದರಿಂದ ಧ್ವಜಸ್ತಂಭದ ಹಗ್ಗ ಕತ್ತರಿಸಲು ಚಾಕು ಹುಡುಕುವ ಸಮಯವೂ ಉಳಿಯಿತು. ಆಂಬುಲೆನ್ಸ್ ಸೈರನ್ ಕೆಟ್ಟಿದ್ದರೂ ನಾನು ಅತಿವೇಗದಲ್ಲಿ ಓಡಿಸಿದೆ. ಪ್ರತಿದಿನ ಊಟಕ್ಕೆ ಹೊರಗೆ ಹೋಗುತ್ತಿದ್ದ ಎಮರ್ಜೆನ್ಸಿ ವಾರ್ಡಿನ ವೈದ್ಯರು ಅಂದು ತಾವಿದ್ದ ಸ್ಥಳಕ್ಕೇ ಊಟ ತರಿಸಿಕೊಂಡು ಊಟ ಮಾಡುತ್ತಿದ್ದರು. ಎಲ್ಲವೂ ಆಕೆಯ ಜೀವ ಉಳಿಸಲೆಂದೇ ಏರ್ಪಾಡು ಮಾಡಿದಂತಿತ್ತು’ ಎಂದು ನೆನಪಿಸಿಕೊಳ್ಳುತ್ತಾರೆ ರಾಜೇಶ್.

2024ರ ಜುಲೈ ತಿಂಗಳ ಒಂದು ದಿನ...

ನಾಗಮಂಗಲದ ಆದಿಚುಂಚನಗಿರಿ ಮಠದಿಂದ ಹೊರಬಂದು ಮೈಸೂರಿನ ಕಡೆಗೆ ತೆರಳಲೆಂದು ಆಕಾಶ್, ಗೆಳೆಯ ಸಂದೀಪ್ ಅರಸ್ ಜೊತೆ ನಿಂತಿದ್ದ ವೇಳೆ ಕಾರೊಂದು ಬಲಕ್ಕೋ ಅಥವಾ ನೇರ ಹೋಗುವುದೋ ಎಂಬ ಗೊಂದಲದಿಂದ ನಿಧಾನವಾಯಿತು. ಹಿಂದೆ ವೇಗವಾಗಿ ಬರುತ್ತಿದ್ದ ಬೈಕ್ ಸವಾರರು, ನಿಯಂತ್ರಣ ತಪ್ಪಿ ಕಾರಿಗೆ ಅಪ್ಪಳಿಸಿ ಬಿದ್ದರು. ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಕಾರಿನವನು ಹೆದರಿ ನಿಲ್ಲಿಸದೇ ಪರಾರಿಯಾದ.

ಒಂದು ಕ್ಷಣ ಅವಾಕ್ಕಾದರೂ ಆಕಾಶ್ ಓಡಿ, ಬಿದ್ದವರನ್ನು ಶುಶ್ರೂಷೆ ಮಾಡತೊಡಗಿದರು. ಆಂಬುಲೆನ್ಸ್‌ಗೆ ಕರೆ ಮಾಡುವಂತೆ ಗೆಳೆಯನಿಗೆ ಹೇಳಿದರು. ಒಬ್ಬರು ಪ್ರಜ್ಞಾಹೀನರಾಗಿದ್ದರು. ಗಾಯಗೊಂಡ ಮತ್ತೊಬ್ಬರು ಏಳಲಾಗದೆ ದೂರ ಕುಳಿತಿದ್ದರು. ಅಷ್ಟರಲ್ಲಿ ಆಂಬುಲೆನ್ಸ್ ಬಂತು. ಇಬ್ಬರನ್ನೂ ಅದರೊಳಕ್ಕೆ ಸೇರಿಸಿ ಆಕಾಶ್ ಹೊರಟರು.

‘ಬಹುಶಃ ಆಕಾಶ್ ಕಾಳಜಿ ವಹಿಸಿ ಅವರನ್ನು ಉಪಚರಿಸಲು ಓಡಿರದಿದ್ದರೆ ನಾನೂ ಹೋಗುತ್ತಿರಲಿಲ್ಲ. ಅಪಘಾತದ ಗಾಯಾಳುಗಳನ್ನು ನೋಡಲು ನನಗೆ ತುಂಬಾ ಭಯ ಮತ್ತು ಸಂಕಟ. ನಾವು ಹೋಗಿರಲಿಲ್ಲವೆಂದರೆ ಬೇರೆಯವರೂ ಕೈ ಜೋಡಿಸುತ್ತಿದ್ದುದು ಅನುಮಾನ. ಅದು ಜನನಿಬಿಡ ಪ್ರದೇಶವಲ್ಲ. ಹೀಗೆ ಆಕಾಶ್ ಸಮಯಪ್ರಜ್ಞೆಯಿಂದ ಜೀವವೊಂದು (ಅಥವಾ ಎರಡು) ಉಳಿಯಿತು’ ಎಂದು ಅಂದಿನ ಘಟನೆಯನ್ನು ಸಂದೀಪ್ ಸ್ಮರಿಸುತ್ತಾರೆ.

ವಾಣಿಜ್ಯ ತೆರಿಗೆ ಇಲಾಖೆಯ ಮೈಸೂರು ವಿಭಾಗದಲ್ಲಿ ಇನ್‌ಸ್ಪೆಕ್ಟರ್ ಆಗಿರುವ 42ರ ವಯಸ್ಸಿನ ಆಕಾಶ್, ಗೋಕುಲಂ ಬಡಾವಣೆಯ 2ನೇ ಹಂತದ ನಿವಾಸಿ. ಬಹಳ ವರ್ಷಗಳ ಹಿಂದೆ ಅಪಘಾತವೊಂದರಲ್ಲಿ ಅಣ್ಣ ಅರವಿಂದ ಸಾಗರ್ ಅವರನ್ನು ಕಳೆದುಕೊಂಡವರು. ಕಾವೇರಿ ವಿವಾದ ಭುಗಿಲೆದ್ದ ವೇಳೆ, ಬೆಂಗಳೂರಿನಲ್ಲಿ ಕರ್ತವ್ಯದಲ್ಲಿದ್ದ ತಂದೆಯನ್ನು ಮಂಡ್ಯದವರೆಗೂ ಕರೆದೊಯ್ಯಲು ಸ್ನೇಹಿತನ ಬೈಕ್‌ನಲ್ಲಿ ತೆರಳುತ್ತಿದ್ದಾಗ ಅಪಘಾತದಲ್ಲಿ ಅವರು ಮೃತಪಟ್ಟಿದ್ದರು.

11ನೇ ಪುಟಕ್ಕೆ...

ರೈತ ಸುರಿಸುವ ಬೆವರಿನ ಸೊಗಡನ್ನು ಮಾವಿನ ಮೂಲಕವೇ ದೇಶದಾಚೆಗೂ ಸಾರಿದ ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಈಗ ಮಾವಿನ ಘಮಲು. ಅದರಲ್ಲೂ ಮೇ, ಜೂನ್, ಜುಲೈನಲ್ಲಿ ಎಲ್ಲೆಲ್ಲೂ ಮಾವಿನದ್ದೇ ಸುವಾಸನೆ. ಏಕೆಂದರೆ ಇದು ಸುಗ್ಗಿ ಸಮಯ. ‘ಮಾವಿನ ಮಡಿಲು’ ಖ್ಯಾತಿಯ ಊರಿನಲ್ಲಿ ‘ಹಣ್ಣುಗಳ ರಾಜ’ನ ದರ್ಬಾರ್ ಹೇಗಿದೆ ಗೊತ್ತಾ?



ಮಾವು ಬದುಕು... ಭಾವನೆ...



ತೋಟದಿಂದ ಮಾರುಕಟ್ಟೆಗೆ ಸಾಗಿಸಲು ಮಾವಿನ ಕಾಯಿಗಳನ್ನು ಬಾಕ್ಸ್‌ಗಳಲ್ಲಿ ಜೋಡಿಸಿಟ್ಟಿರುವುದು

• ಕೆ.ಓಂಕಾರಮೂರ್ತಿ

ಕೋಲಾರ ಜಿಲ್ಲೆಯಲ್ಲಿ ನೀರಿಗೆ ಕೊರತೆ ಇದ್ದರೂ ರೈತರ ಉತ್ಸಾಹ ಮಾತ್ರ ಅಪರಿಮಿತ. ಕಷ್ಟ ಸಹಿಷ್ಣುಗಳ ಕೃಷಿ ಪ್ರೀತಿ ಅಪಾರ. ಟೊಮೆಟೊ, ಮಾವು, ರೇಷ್ಮೆ ಕೃಷಿ, ಹೈನುಗಾರಿಕೆಯಲ್ಲಿನ ಇವರ ಸಾಧನೆ, ಕೀರ್ತಿ ದೇಶದಾಚೆಗೂ ಹಬ್ಬಿದೆ.

ರಾಜ್ಯದಲ್ಲಿ ಅತಿ ಹೆಚ್ಚು ಮಾವು ಬೆಳೆಯುವ ಜಿಲ್ಲೆಗಳಲ್ಲಿ ಕೋಲಾರ ಮುಂಚೂಣಿಯಲ್ಲಿದೆ. ಅದರಲ್ಲೂ ಶ್ರೀನಿವಾಸಪುರ ಪ್ರಸಿದ್ಧಿ ಪಡೆದುಕೊಂಡಿದೆ. ಪಟ್ಟಣ ಪ್ರವೇಶಿಸುವ ಮುನ್ನವೇ ‘ಮಾವಿನ ಹಣ್ಣಿನ ನಗರಿಗೆ ಸ್ವಾಗತ’ ಎಂಬ ದೊಡ್ಡ ಫಲಕ ಎದುರಾಗುತ್ತದೆ. ಸ್ವಲ್ಪ ದೂರ ಸಾಗಿದರೆ ಏಷ್ಯಾದಲ್ಲೇ ಹೆಸರಾದ ಮಾವಿನ ಮಂಡಿ ಸಿಗುತ್ತದೆ.

ಇಲ್ಲಿನ ಜನರು ಮಾವಿನ ಕೃಷಿಯಲ್ಲೇ ಬದುಕು ಕಟ್ಟಿಕೊಂಡಿದ್ದಾರೆ. ಅವರ ಪಾಲಿಗೆ ಇದು ಬರೀ ಬೆಳೆಯಲ್ಲ; ಭಾವನೆ. ಒಂದೂ ನದಿ ಇಲ್ಲದ, ಯಾವುದೇ ನೀರಾವರಿ ಯೋಜನೆಗಳು ಇಲ್ಲದ ಜಿಲ್ಲೆಯ ರೈತರ ಜೀವನವನ್ನು ಹಸನಾಗಿಸಿದೆ ಈ ಮಾವು. ಇದೇ ಬೆಳೆ ನಂಬಿಕೊಂಡು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದ್ದಾರೆ, ಮದುವೆ ಮಾಡಿಸಿದ್ದಾರೆ, ಮನೆ ಕಟ್ಟಿಕೊಂಡಿದ್ದಾರೆ. ರೈತರಷ್ಟೇ ಅಲ್ಲ; ಮಂಡಿ ಮಾಲೀಕರು, ವರ್ತಕರು, ಮಧ್ಯವರ್ತಿಗಳು, ಸಾಗಣೆ ವಾಹನಗಳ ಮಾಲೀಕರು, ಚಾಲಕರು, ಕೂಲಿಕಾರರು ಸೇರಿದಂತೆ ಸಾವಿರಾರು ಜನರ ಬದುಕಿಗೆ ಇದು ಆಸರೆಯಾಗಿದೆ.

ರಾಜ್ಯದಲ್ಲಿ ಸುಮಾರು ಒಂದೂವರೆ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಅದರಲ್ಲಿ ಕೋಲಾರ ಜಿಲ್ಲೆಯಲ್ಲಿ 54 ಸಾವಿರ ಹೆಕ್ಟೇರ್ ಪ್ರದೇಶವಿದೆ. ಈ ಪೈಕಿ ಶ್ರೀನಿವಾಸಪುರ ತಾಲ್ಲೂಕಿನಲ್ಲೇ 48 ಸಾವಿರ ಹೆಕ್ಟೇರ್‌ನಲ್ಲಿ ಮಾವಿನ ಕೃಷಿ ನಡೆಯುತ್ತದೆ.

ಅಂತರ್ಜಲ ಮಟ್ಟ ಪಾತಾಳಕ್ಕೆ ಕುಸಿದಾಗಲೂ, ಜಲಕ್ಷಾಮದ ನಡುವೆಯೂ ಮಾವು ಬೆಳೆಯುತ್ತಿದ್ದಾರೆ. ಇಂಥ ಜಿಲ್ಲೆಯ ಕಷ್ಟ ಸಹಿಷ್ಣುಗಳ ಕೃಷಿ ಪ್ರೀತಿ ಮೇರೆ ಮೀರಿದ್ದು. ಒಂದು ಬೆಳೆಯ ವಹಿವಾಟು ಇಡೀ ಶ್ರೀನಿವಾಸಪುರ ತಾಲ್ಲೂಕಿನ ಚಿತ್ರಣ ಬದಲಾಯಿಸಿದೆ. ಧಾರಣೆಯ ಹಗ್ಗಜಗ್ಗಾಟ, ಕೀಟಬಾಧೆ, ಅಕಾಲಿಕ ಮಳೆ, ವಿಪರೀತ ಬಿಸಿಲಿನಿಂದ ತೊಂದರೆ ಅನುಭವಿಸುತ್ತಿದ್ದರೂ ಮಾವು ಬೆಳೆಯೇ ಇವರ ಜೀವಾಳ, ಬಂಡವಾಳ.

ಸುಗ್ಗಿ ವೇಳೆ ಹೊರ ಜಿಲ್ಲೆ, ಹೊರ ರಾಜ್ಯ ಹಾಗೂ ವಿದೇಶಕ್ಕೆ ಪ್ರತಿನಿತ್ಯ ಮಾವು ರಫ್ತಾಗುತ್ತದೆ. ಮುಖ್ಯವಾಗಿ ರಾಜಸ್ಥಾನ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗುಜರಾತ್, ಪಶ್ಚಿಮ ಬಂಗಾಳ, ಮಹಾರಾಷ್ಟ್ರಕ್ಕೆ ಪೂರೈಕೆಯಾಗುತ್ತದೆ. ಹಿಂದೆ ಬಾಂಗ್ಲಾದೇಶ, ಪಾಕಿಸ್ತಾನ ಸೇರಿದಂತೆ ಹಲವು ದೇಶಗಳಿಗೆ ರಫ್ತಾಗುತ್ತಿತ್ತು. ಕೋಲಾರ ಜಿಲ್ಲೆಯಲ್ಲಿ ಮೇ ತಿಂಗಳ ಕೊನೆಯ ವಾರದಿಂದ ಜುಲೈ ಅಂತ್ಯದ ಅವಧಿಯು ಮಾವು ಹಂಗಾಮು, ಸುಗ್ಗಿ.

ಈ ಅವಧಿಯಲ್ಲಿ ಶ್ರೀನಿವಾಸಪುರ ಎಪಿಎಂಸಿ ಹಾಗೂ ಮಾವಿನ ಮಂಡಿ ಸದಾ ಗಿಜಿಗುಡುತ್ತಿರುತ್ತದೆ. ನಿತ್ಯ ನೂರಾರು ಲಾರಿಗಳು ದೇಶದ ವಿವಿಧೆಡೆಯಿಂದ ಬಂದು ಹೋಗುತ್ತವೆ. ರೈತರು, ಹಮಾಲಿಗಳು, ವ್ಯಾಪಾರಿಗಳು ಸೇರಿದಂತೆ ಸುಮಾರು ಮೂರು ಸಾವಿರ ಜನ ಬರುತ್ತಾರೆ. ನಿತ್ಯ 900 ಟನ್ ಮಾವು ವಹಿವಾಟು ನಡೆಯುತ್ತದೆ. ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯುವ ಮಾವು ಮೇಳಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಮಾವಿನ ಪ್ಯಾಕಿಂಗ್ ಮಾಡಿ ವಿದೇಶಗಳಿಗೆ ವಿಮಾನಗಳಲ್ಲಿ ಕಳಿಸುತ್ತಾರೆ.

ಆಂಧ್ರಪ್ರದೇಶದ ಕೃಷ್ಣಗಿರಿ, ಚಿತ್ತೂರಿನಲ್ಲಿ ಜ್ಯೂಸ್ ಫ್ಯಾಕ್ಟರಿಗಳಿದ್ದು ಅಲ್ಲಿಗೂ ಮಾವು ಸಾಗಿಸುತ್ತಾರೆ. ಅಲ್ಲಿ ನೂರಾರು ಕಾರ್ಖಾನೆಗಳು ಇವೆ. ಸಾಮಾನ್ಯವಾಗಿ ಕಳಪೆ ಗುಣಮಟ್ಟದ ಹಣ್ಣುಗಳು, ಹೆಚ್ಚು ಬಾಳಿಕೆ ಬಾರದ ಹಣ್ಣುಗಳನ್ನು ಈ ಉದ್ದೇಶಕ್ಕೆ ಬಳಸುತ್ತಾರೆ. ಆದರೆ, ಈಚೆಗೆ ಆಯಾ ರಾಜ್ಯಗಳಲ್ಲಿಯೇ ಹೆಚ್ಚು ಮಾವು ಬೆಳೆಯುತ್ತಿದ್ದು, ಕೋಲಾರ ಜಿಲ್ಲೆಯ ಮಾವು ಖರೀದಿಗೆ ಬರುತ್ತಿಲ್ಲ. ಆಂಧ್ರದಲ್ಲಿ ಕೋಲಾರ ಜಿಲ್ಲೆಯ ತೋತಾಪುರಿ ಮಾವಿಗೆ ನಿರ್ಬಂಧ ಕೂಡ ಹೇರಿದ್ದಾರೆ. ಶ್ರೀನಿವಾಸಪುರ ಹಾಗೂ ಜಿಲ್ಲೆಯ ವಿವಿಧೆಡೆ ಜ್ಯೂಸ್ ಫ್ಯಾಕ್ಟರಿಗಳಿದ್ದು, ಅಲ್ಲಿಗೂ ಸಾಗಿಸಲಾಗುತ್ತಿದೆ. ಒಳ್ಳೆಯ ಗುಣಮಟ್ಟದ ಮಾವಿನ ಹಣ್ಣನ್ನು ಮಾಲೂರಿನ ಇನೋವಾ ಅಗ್ರಿ ಬಯೋಪಾರ್ಕ್ (ಫುಡ್ ಪಾರ್ಕ್) ಮೂಲಕ ಗಾಮಾ ಪ್ರಕ್ರಿಯೆಗೆ ಒಳಪಡಿಸಿ ಅಮೆರಿಕ, ಆಸ್ಟ್ರೇಲಿಯಾಕ್ಕೆ ಸಾಗಿಸಲಾಗುತ್ತದೆ. ಆದರೆ, ಹವಾಮಾನ ವೈಪರೀತ್ಯ ಕಾರಣ ಗುಣಮಟ್ಟದ ಹಣ್ಣು ಈಚೆಗೆ ಸಿಗುತ್ತಿಲ್ಲ.

ಅರವತ್ತು ವರ್ಷಗಳಿಂದ ಶ್ರೀನಿವಾಸಪುರ ರೈತರು ಮಾವಿನ ಕೃಷಿಯಲ್ಲಿ ತೊಡಗಿದ್ದಾರೆ. ಹಿಂದೆ ನಾಲ್ಕೈದು ತಳಿಗಳನ್ನು ಬೆಳೆಯುತ್ತಿದ್ದರು. ಈಗ ಇಪ್ಪತ್ತಕ್ಕೂ ಅಧಿಕ ತಳಿ ಬೆಳೆಯಲಾಗುತ್ತಿದೆ. ಮಲ್ಲಿಕಾ, ನೀಲಂ, ಬೇನಿಷಾ, ತೋತಾಪುರಿ, ಬಾದಾಮಿ (ಅಲ್ಫೋನ್ಸೊ), ರಸಪುರಿ, ಲಡ್ಡು, ಖುದ್ದೂಸ್, ದಿಲ್ ಪಸಂದ್, ಬಡಾ ಗುಲಾಬ್, ಹಿಮಾಮ್ ಪಸಂದ್, ಕೆಂಟ್, ರತ್ನ, ಕಾಲಾಪಾಡ್, ಮಲಗೂಬಾ, ಸಕ್ಕರೆ ಗುತ್ತಿ, ರಾಜಗಿರ, ಸೇಂದೂರ ಪ್ರಮುಖ ತಳಿಗಳು. ಆಮ್ಲೆಟ್ ಕಾಯಿಯನ್ನು ಉಪ್ಪಿನಕಾಯಿಗೆ ಬಳಸುತ್ತಾರೆ. ತೋತಾಪುರಿ ತಳಿ ಮಾವಿನ ಹಣ್ಣನ್ನು ರಸ ತಯಾರಿಸಲು ಬಳಸುತ್ತಾರೆ. ಮಾವು ಮಳೆಯಾಶ್ರಿತ ಬೆಳೆಯಾಗಿದ್ದು ನೀರಾವರಿ ಲಭಿಸಿದರೆ ಇಳುವರಿ, ಗುಣಮಟ್ಟ, ತೂಕ, ರಸ ಹೆಚ್ಚುತ್ತದೆ. ಶ್ರೀನಿವಾಸಪುರವಲ್ಲದೇ ಕೋಲಾರ, ಮುಳಬಾಗಿಲಿನಲ್ಲೂ ಹೆಚ್ಚು ಮಾವು ಬೆಳೆಯುತ್ತಾರೆ.

ಮನೆಗಳಲ್ಲೇ ವಾಣಿಜ್ಯ ಚಟುವಟಿಕೆ

ದೇಶ ವಿದೇಶಗಳಿಗೆ, ಕಾರ್ಖಾನೆಗಳಿಗೆ ಮಾವು ಸರಬರಾಜು ಮೂಲಕ ದೊಡ್ಡ ಮಟ್ಟದ ಆರ್ಥಿಕ ವಹಿವಾಟು ಒಂದೆಡೆಯಾದರೆ, ಮತ್ತೊಂದೆಡೆ ಮನೆಗಳಲ್ಲಿ ಗುಡಿ ಕೈಗಾರಿಕೆಗಳಿಂದ ಚಿಕ್ಕಪುಟ್ಟ ವಹಿವಾಟು ನಡೆಸಲಾಗುತ್ತದೆ. ಶ್ರೀನಿವಾಸಪುರದ ಹಲವರು ಮಾವಿನ ಕಾಯಿಯಿಂದ ಉಪ್ಪಿನಕಾಯಿ, ಆಮ್ ಚೂರ್ ಮತ್ತು ಆಮ್ ಪಾಪಡ್ ಮಾಡಿ ಮಾರಾಟ ನಡೆಸುತ್ತಾರೆ. ಆಮ್ ಚೂರ್ ಅನ್ನು ಬೆಂಗಳೂರು, ಚಿಂತಾಮಣಿ, ಕೋಲಾರ, ಮದನಪಲ್ಲಿ (ಆಂಧ್ರ ಪ್ರದೇಶ) ಸೇರಿದಂತೆ ಹಲವು ಕಡೆಗಳಿಂದ ಬರುವ ಸಣ್ಣ ವ್ಯಾಪಾರಿಗಳು ಕೆ.ಜಿಗೆ ಸರಾಸರಿ ₹ 60 ದರದಲ್ಲಿ ಖರೀದಿಸುತ್ತಾರೆ. ಈ ಚಟುವಟಿಕೆ ಸ್ಥಳೀಯ ಜನರಿಗೆ ಆರ್ಥಿಕವಾಗಿ ನೆರವಾಗುತ್ತಿದೆ. ಕೆಲವು ಕುಟುಂಬಗಳು ದಿನಕ್ಕೆ ₹ 500ರಿಂದ ₹ 1,000 ವರೆಗೆ ಗಳಿಸುತ್ತಿವೆ.

ಮಾವು ಅಭಿವೃದ್ಧಿ ಕೇಂದ್ರ

ಶ್ರೀನಿವಾಸಪುರ ತಾಲ್ಲೂಕಿನ ಹೊಗಳಗೆರೆ ಸಮೀಪ ಮಾವು ಅಭಿವೃದ್ಧಿ ಕೇಂದ್ರ ಇದೆ. ಈ ಕೇಂದ್ರವು ಆನ್‌ಲೈನ್ ಮಾವು ವಹಿವಾಟಿಗೆ ಸಹಾಯ ಮಾಡುತ್ತದೆ. ಮಾವು ಬೆಳೆಗಾರರಿಗೆ ವಹಿವಾಟು ನಡೆಸಲು ಅಗತ್ಯವಾದ ತರಬೇತಿ, ಮಾರ್ಗದರ್ಶನ ಹಾಗೂ ನೆರವು ನೀಡುತ್ತಿದೆ.

ಈ ಬಾರಿ ಹವಾಮಾನ ವೈಪರೀತ್ಯ ಕಾರಣ ಫಸಲು ತಗ್ಗಿದೆ. ಜೊತೆಗೆ ಧಾರಣೆಯಲ್ಲಿ ತೀವ್ರ ಕುಸಿತವಾಗಿದೆ. ಮಾವಿನ ಗುಣಮಟ್ಟವೂ ಅಷ್ಟಕಷ್ಟೆ. ಹೀಗಾಗಿ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆಂಧ್ರಪ್ರದೇಶ ಮಾದರಿಯಲ್ಲಿ ಬೆಂಬಲ ಬೆಲೆ ಘೋಷಿಸುವಂತೆ ಆಗ್ರಹಿಸಿ ಪ್ರತಿಭಟನೆ, ಬಂದ್ ಕೂಡ ನಡೆಸಿದ್ದಾರೆ.

ತೋತಾಪುರಿ ಮಾವಿನ ತಳಿ ಈಗಷ್ಟೇ ಮಾರುಕಟ್ಟೆಗೆ ಬರುತ್ತಿದ್ದು, ಧಾರಣೆ ತೀರಾ ಕುಸಿದಿದೆ. ಟನ್ ಮಾವಿಗೆ ₹ 3 ಸಾವಿರವರೆಗೆ ಕುಸಿದಿದೆ. ಕಳೆದ ಬಾರಿ ₹ 25 ಸಾವಿರವರೆಗೆ ಇತ್ತು. ಸೇಂದೂರ, ಬೇನಿಷಾ, ನೀಲಂ, ರಾಜಗಿರಗಳ ದರ ಕೂಡ ತಗ್ಗಿದೆ. ಮಲ್ಲಿಕಾ, ಬಾದಾಮಿ ರುಚಿ ಹೆಚ್ಚು. ಇದಕ್ಕೆ ಟನ್‌ಗೆ ₹ 20 ಸಾವಿರದವರೆಗೆ ಇದೆ. ದರ ಏರಿಳಿತದ ನಡುವೆ ಮಾವು ಬೆಳೆದು ಕೆಲವರು ಲಕ್ಷಾಧಿಪತಿಯಾಗಿರುವವರೂ ಇದ್ದಾರೆ, ಸಾಲ ಮಾಡಿ ಸಂಕಷ್ಟಕ್ಕೆ ಸಿಲುಕಿದವರೂ ಇದ್ದಾರೆ.

ಬೆಲೆ ಕುಸಿತ ಇಡೀ ವ್ಯವಸ್ಥೆಯನ್ನು ಕುಗ್ಗಿಸುತ್ತದೆ. ಬೆಳೆಗಾರರು ಅಷ್ಟೇ ಅಲ್ಲ; ವ್ಯಾಪಾರಸ್ಥರು, ಮಂಡಿ ಮಾಲೀಕರು, ದಲ್ಲಾಳಿಗಳು, ಕೂಲಿ ಕಾರ್ಮಿಕರು, ಹಮಾಲರು ಸಂಕಷ್ಟಕ್ಕೆ ಸಿಲುಕುತ್ತಾರೆ.

ಶೇಕಡ 60ರಷ್ಟು ರೈತರು ತಮ್ಮ ತೋಟಗಳನ್ನು ಗುತ್ತಿಗೆಗೆ ಕೊಟ್ಟು ಬಿಡುತ್ತಾರೆ. ಮಾವಿನ ಹೂ ಬಿಟ್ಟಾಗಲೇ ವ್ಯಾಪಾರಸ್ಥರು ಬಂದು ಗುತ್ತಿಗೆ ಪಡೆಯುತ್ತಾರೆ. ನಂತರ ಮಾವಿನ ಕಾಯಿ ಕೊಯ್ದು ಮಾರಾಟ ಮಾಡುತ್ತಾರೆ. ಹಲವು ವರ್ತಕರು ರೈತರಿಂದ ಮುಂಗಡವಾಗಿ ಮಾವಿನ ಕಾಯಿ ಖರೀದಿಸುತ್ತಾರೆ.

‘ಮಾವಿನ ಸುಗ್ಗಿ ಮುಗಿದ ಮೇಲೆ ನೀರಾವರಿ ಇರುವವರು ತೋಟದಲ್ಲಿ ಟೊಮೆಟೊ, ಕೋಸು, ತರಕಾರಿ, ಸೊಪ್ಪು ಬೆಳೆಯುತ್ತಾರೆ. ಅವುಗಳಿಗೆ ಔಷಧಿ ಹೊಡೆಯುವ ಕಾರಣ ಮಾವಿನ ಗುಣಮಟ್ಟ ಕಡಿಮೆಯಾಗುತ್ತದೆ. ಇನ್ನು ಕೆಲವರು ರಾಗಿ, ಅವರೆ, ತೊಗರಿ ಬೆಳೆಯುತ್ತಾರೆ.

12ನೇ ಪುಟಕ್ಕೆ...



ಬದುಕು ಬದಲಾಯಿಸಿದ ಮಾವು!

ಶ್ರೀನಿವಾಸಪುರ ತಾಲ್ಲೂಕಿನ ಶೇಕಡ 70ರಷ್ಟು ರೈತರ ಬದುಕು ಮಾವಿನ ಬೆಳೆ ಮೇಲೆ ಅವಲಂಬಿತವಾಗಿದೆ. ರಾಜ್ಯದ ಒಟ್ಟು ಮಾವಿನ ಬೆಳೆ ಪ್ರಮಾಣದ ಮೂರನೇ ಒಂದು ಭಾಗ ಶ್ರೀನಿವಾಸಪುರದಲ್ಲೇ ಇದೆ. 50ಕ್ಕೂ ಅಧಿಕ ವರ್ಷಗಳಿಂದ ಮಾವು ನಂಬಿ ಇಲ್ಲಿನ ಜನರ ಜೀವನ ಸಾಗಿದೆ. ಒಂದು ಎಕರೆಯಿಂದ ಹಿಡಿದು ನೂರು ಎಕರೆಯವರೆಗೆ ಮಾವಿನ ತೋಟ ಹೊಂದಿರುವ ರೈತರು ಇಲ್ಲಿದ್ದಾರೆ ಎಂದು ಜಿಲ್ಲಾ ಮಾವು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನೀಲಟೂರು ಚಿನ್ನಪ್ಪರೆಡ್ಡಿ ಹೇಳುತ್ತಾರೆ.


ಮನೆ ನಿರ್ಮಾಣ ಇರಬಹುದು, ಮಕ್ಕಳ ವಿದ್ಯಾಭ್ಯಾಸ ಆಗಿರಬಹುದು, ಆಸ್ಪತ್ರೆ ಖರ್ಚು, ಮನೆ ಕಾರ್ಯವು ಮಾವಿನ ಋತುವಿನ ಮೇಲೆ ಅವಲಂಬಿತವಾಗಿದೆ. ‘ಚಿಕ್ಕಂದಿನಿಂದಲೂ ಗಮನಿಸಿಕೊಂಡು ಬಂದಿದ್ದೇನೆ. ಮಾವಿನ ಹಂಗಾಮಿನಲ್ಲಿ ಉತ್ತಮ ಧಾರಣೆ ಸಿಕ್ಕರೆ ಮಗಳ ಮದುವೆ ಮಾಡುವುದು, ಮನೆ ಕಟ್ಟುವ ಕಾರ್ಯ ನಡೆಯುತ್ತದೆ.

ನನ್ನ ಬಳಿ ಹತ್ತು ಎಕರೆ ಮಾವಿನ ತೋಟವಿದೆ. ಬೆಂಗಳೂರಿನ ಮಾವಿನ ಮೇಳ, ವಿವಿಧ ಮಾರುಕಟ್ಟೆ, ಆನ್‌ಲೈನ್ ಮೂಲಕ ಮಾರಾಟ ಮಾಡುತ್ತೇನೆ. ಈ ಮೂಲಕವೇ ನಮ್ಮ ಸಂಸಾರ ನಡೆಯುತ್ತಿದೆ. ಆದರೆ, ನಾಲ್ಕೈದು ವರ್ಷಗಳಿಂದ ಹಮಾಮಾನ ವೈಪರೀತ್ಯದಿಂದ ಇಳುವರಿ ಬಿದ್ದು ಹೋಗಿದೆ. ಪ್ರಕೃತಿ ಮುನಿಸಿಕೊಂಡಿದೆ, ಧಾರಣೆ ತಗ್ಗಿದ್ದು, ಸಂಕಷ್ಟಕ್ಕೆ ಸಿಲುಕಿದ್ದೇವೆ. ಫಸಲಿಗೆ ಅನುಗುಣವಾಗಿ ಜಿಲ್ಲೆಯಲ್ಲಿ ಕೈಗಾರಿಕೆಗಳು ಇಲ್ಲ. ಹೈಟೆಕ್ ಸಂಸ್ಕರಣಾ ಘಟಕ ಒಂದೂ ಇಲ್ಲ. ಖಾಸಗಿ ಫ್ಯಾಕ್ಟರಿಗಳು ಇದ್ದರೂ ಅವುಗಳೇ ಸಮಸ್ಯೆಯಲ್ಲಿವೆ’ ಎನ್ನುತ್ತಾರೆ.



ಶ್ರೀನಿವಾಸಪುರದ ಮಾವಿನ ಮಂಡಿಯಲ್ಲಿ ಬಲು ಜೋರಾಗಿದೆ ಮಾವು ಮಾರಾಟ

ಇದು ಅಂತಿಂಥ ಮಾವಲ್ಲ. ಇದನ್ನು ಕೆ.ಜಿ.ಯಲ್ಲಲ್ಲ ಸೇರಿನಲ್ಲಿ ಅಳೆದು ಮಾರಾಟ ಮಾಡುತ್ತಾರೆ. ನೈಸರ್ಗಿಕವಾಗಿ ಬೆಳೆಯುವ ಇವುಗಳು ನೋಡಲಿಕ್ಕೆ ಸಿಗುವುದೇ ಅಪರೂಪ. ಹುಣಸೆನಾಡಿನಲ್ಲಿ ಇವುಗಳನ್ನು ಹೆಚ್ಚಾಗಿ ಹುಣಸೆ ಹಣ್ಣಿನ ತೊಕ್ಕಿನಲ್ಲಿ ಬಳಸುತ್ತಾರೆ. ಈ ಕಲ್ ಮಾವಿನ ಎಲೆಗಳನ್ನೂ ಹಲವರು ಆಹಾರ ಖಾದ್ಯವಾಗಿಯೂ ಬಳಸುತ್ತಾರೆ.



ಕಾನನದಲ್ಲಿ ಕಲ್ ಮಾವ್ ಅರಸುತ್ತಾ...

• ಸ್ವರೂಪ್ ಕೊಟ್ಟೂರು

‘ಕಲ್ ಮಾವ್ ಬೇಕಾ ಕಲ್ ಮಾವ್. ಬೇಗ ಬೇಗ ಬರ್ರಿ.. ಸ್ವಲ್ಪ ಇದಾವೆ; ಮತ್ತೆ ಸಿಕ್ತಾವೋ ಇಲ್ವೋ ಗೊತ್ತಿಲ್ಲ. ಬನ್ನಿ ಬನ್ನಿ..’ ಹೀಗೆ ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಶಿವಪುರದಲ್ಲಿ ಅಂಜಿನಪ್ಪ ಜನರನ್ನು ತಾವಿದ್ದ ಸ್ಥಳದಿಂದಲೇ ಕೂಗಿ ಕೂಗಿ ಕರೆಯುತ್ತಿದ್ದರು. ಅರೆ ಕ್ಷಣದಲ್ಲೇ ಮಹಿಳೆಯರು ನಾ ಮುಂದು ತಾ ಮುಂದು ಎನ್ನುತ್ತಾ ಅಂಜಿನಪ್ಪರನ್ನು ಮುತ್ತಿಕೊಂಡರು. ಸಣ್ಣ ಬುಟ್ಟಿಯೊಳಗಿಂದ ಸೇರನ್ನು ಹೊರ ತೆಗೆದ ಅವರು ಕಾಯಿ ಅಳೆಯಲು ಶುರುಮಾಡಿದರು! ಸ್ವಲ್ಪವೂ ಚೌಕಾಸಿ ಮಾಡದೆ ಹೇಳಿದಷ್ಟು ದುಡ್ಡು ಕೊಟ್ಟು ಉತ್ಸಾಹದಿಂದಲೇ ಅದನ್ನು ಜನರು ಖರೀದಿಸುತ್ತಿದ್ದರು. ಮಾವನ್ನು ಕೆ.ಜಿ. ಇಲ್ಲವೆ ಡಜನ್ ಲೆಕ್ಕದಲ್ಲಿ ಮಾರುವುದು ರೂಢಿ. ಇದೇನಿದು ಸೇರಿನಿಂದ ಅಳೆಯುವುದು ಎನ್ನುವ ಕುತೂಹಲ ಬೇರೆ. ಮರುಕ್ಷಣ, ಕಿಕ್ಕಿರಿದ ಮಹಿಳೆಯರ ಗುಂಪು ಸೀಳಿಕೊಂಡು ಹೋಗಿ ‘ಹೇಗಿವೆ ಕಲ್ ಮಾವು ತೋರಿಸಿ...?’ ಅಂದೆ. ‘ಇವೇ ನೋಡಿ’ ಎಂದು ಕೈಯಲ್ಲಿ ಹಿಡಿದು ತೋರಿಸಿದ್ದು ನೆಲ್ಲಿಕಾಯಿ ಗಾತ್ರದ ಕಸುಗಾಯಿಗಳನ್ನು!.


ಇವು ಏತಕ್ಕೆ? ಎಲ್ಲಿ ಬೆಳೆದಿದ್ದೀರಿ? ಸಸಿಗಳು ಸಿಗಬಹುದಾ?.. ಹೀಗೆ ಪ್ರಶ್ನೆಗಳ ಸುರಿಮಳೆಗೈದೆ. ಅಲ್ಲೇ ಇದ್ದ ಶಿವಪುರದ ನಾಗೇಂದ್ರಜ್ಜ ‘ಇದು ಬೆಳೆಸುವ ಸಸ್ಯವಲ್ಲ. ಪ್ರಯತ್ನಿಸಿದರೂ ಬೆಳೆಯುವುದಿಲ್ಲ. ನೈಸರ್ಗಿಕವಾಗಿಯೇ ಬೆಳೆಯುತ್ತವೆ. ನಮ್ಮೂರಿನ ಕಾಡಿನಲ್ಲಿ ಅಲ್ಲಲ್ಲಿ ಇವೆ’ ಎನ್ನುತ್ತಾ ಸೀದಾ ಕರೆದೊಯ್ದಿದ್ದು ಎನ್.ಎಚ್ 50ಕ್ಕೆ ಹೊಂದಿಕೊಂಡಿರುವ ಕ್ವಾಟೆ ಕಲ್ಲು ಗುಡ್ಡಕ್ಕೆ. ಈ ಗುಡ್ಡ ಮಾತ್ರವಲ್ಲದೇ ಅದರಾಚೆಯ ಘಾಟಿನ ಗುಡ್ಡ, ಗೋಣೆಪ್ಪನ ಗುಡ್ಡಗಳನ್ನು ಹತ್ತಿ ಇಳಿದು, ಬೆವರು ಸುರಿಸಿದ ಮೇಲೆ ನೋಡಲಿಕ್ಕೆ ಸಿಕ್ಕಿದ್ದು ಐದಾರು ಕಲ್ಲು ಮಾವಿನ ಮರಗಳಷ್ಟೆ.

ಯುಗಾದಿ ಆಸುಪಾಸು ಸೀಜನ್..

ಸಾಕಷ್ಟು ಜನಕ್ಕೆ ಅದರಲ್ಲೂ ಇಂದಿನವರಿಗೆ ಈ ಗಿಡ, ಮಾವು ಅಪರಿಚಿತವೇ. ಬಯಲು ಸೀಮೆಯಲ್ಲಿ ಅದರಲ್ಲೂ ಕಲ್ಲುಗಳಿಂದ ಆವೃತ್ತವಾದ ಬೆಟ್ಟಗುಡ್ಡಗಳಲ್ಲಿ ವಿರಳವಾಗಿ ಕಾಣಸಿಗುತ್ತವೆ. ಇವು ಗುಹೆ-ಗಹ್ವರಗಳ ಆಜುಬಾಜು, ದೊಡ್ಡ ಗಾತ್ರದ ಕಲ್ಲುಗಳ ಸಂದಿಗೊಂದಿಗಳಲ್ಲಿ ಇಲ್ಲವೆ ಕಲ್ಲು ಗುಂಡುಗಳನ್ನೇ ಅವಲಂಬಿಸಿ ಬಲು ಸೊಂಪಾಗಿ ಬೆಳೆಯುತ್ತವೆ. ಅದಕ್ಕಾಗಿಯೇ ಇದಕ್ಕೆ ಸ್ಥಳೀಯವಾಗಿ ಕಲ್ಲು ಮಾವು ಎಂಬ ಹೆಸರು ಬಂದಿದೆ. ಇನ್ನು ತತ್‌ಕ್ಷಣಕ್ಕೆ ಬ್ಯಾಟಿ [ಬಿರ್ಚ್] ಮರದಂತೆ ಕಾಣುವ ಈ ಮರದ ರೆಂಬೆಕೊಂಬೆಗಳು ಟೊಳ್ಳು. ಕಾಂಡ ಹೆಬ್ಬಾವು ಚರ್ಮ ಹೋಲುತ್ತದೆ. ಮರದ ಬಿಳಿ ತೊಗಟೆಯ ಮೇಲ್ಮೈ ಅತ್ಯಂತ ನಯವಾಗಿದ್ದು, ಹಾವಿನ ಪೊರೆಯ ರೀತಿ ಸಿಪ್ಪೆ ಸುಲಿದಿರುತ್ತದೆ. ಈ ದಿನಗಳಲ್ಲಿ ಇದು ಕಡು ಹಸಿರು ಎಲೆ, ಕಾಯಿಗಳಿಂದ ಮೈದುಂಬಿರುತ್ತದೆ. ಅದರಲ್ಲೂ ವಿಶೇಷವಾಗಿ ಯುಗಾದಿ ಎಡಬಲದಲ್ಲಿ ಕಾಯಿಗಳು ಗೊಂಚಲು ಗೊಂಚಲಾಗಿ ಬಿಟ್ಟು, ಆ ಭಾರಕ್ಕೆ ಗೆಲ್ಲುಗಳು ನೆಲದೆಡೆ ಬಾಗಿರುತ್ತವೆ.

13ನೇ ಪುಟಕ್ಕೆ...

ಮಲೆನಾಡಿನಲ್ಲಿ ಅಣಬೆಗಳ ಚಿತ್ತಾರ






• ದತ್ತಾತ್ರೇಯ ಭಟ್ಟ ಕಣ್ಣಿಪಾಲ

ಮೊದಲ ಮಳೆ ಬಂತು ಎಂದರೆ ನಾನು ಮೊದಲು ಓಡುವುದು ಕಾಡಿನಕಡೆಗೆ. ನೆಲದಲ್ಲಿ ಮಳೆಯ ತಂಪು ಹನಿಗಳ ನಡುವೆ ಹದವಾದ ಮಣ್ಣಿನ ಗಂಧ ಮುಂಗಾರಿನ ಸ್ವಾಗತದ ಪರಿಮಳ ಬೀರುತ್ತದೆ. ಮುಗಿಲೆತ್ತರದ ಮರಗಳ ನಡುವೆ ಹಾಸಿದ ನೆರಳು, ಒಣಗಿದ ತರಗೆಲೆಗಳ ನಡುವೆ ಮರವನ್ನು ತಬ್ಬಿ ಬಳಕುವ ಬಳ್ಳಿಯ ಜೋಕಾಲಿ. ವಟಗುಟ್ಟುವ ಕಪ್ಪೆಗಳ ನಡುವೆ ಒಂದೇ ಸಮನೆ ಉಲಿಯುವ ಜೀರುಂಡೆ, ಹಕ್ಕಿಗಳ ಕಲರವವೆಂದರೆ ಋತುಮಾನದ ರಂಗಸ್ಥಳವೇ ಆಗಿಬಿಡುತ್ತದೆ. ಮುರಿದು ಬಿದ್ದ ಒಣಗಿದ ಮರದ ಮೈ ತುಂಬಾ ಮೊಳೆತ ಬಣ್ಣ ಬಣ್ಣದ ಅಣಬೆಗಳು, ಆಹಾ! ಒಂದಕ್ಕಿಂತ ಒಂದು ಭಿನ್ನ ಮತ್ತು ಆಕರ್ಷಕ.

ವರ್ಣಪಾರದರ್ಶಿಕೆಯ ಶೃಂಗಾರದ ಸೊಗಸು ಅನುಭವಿಸಲು ನೂರುಕಣ್ಣು ಸಾಲದು. ಹುಲ್ಲು ಹಾಸಿನ ನಡುವೆ ತಲೆ ಎತ್ತಿದ ಬಿಳಿ ಅಣಬೆ, ಮರದ ಬುಡದಲ್ಲಿ ಬ್ರೆಡ್ ಬೇಯಿಸಿಟ್ಟ ಹಾಗೆ ಕಾಣುವ ಅಣಬೆ, ಪಕ್ಕದಲ್ಲಿ ತಿರುಗಿ ನೋಡಿದರೆ ಎತ್ತರದ ಒಣಗಿದ ಹೊಳೆಗೇರು ಮರದ ಮೈ ತುಂಬಾ ಹಾಲಿನ ಬಣ್ಣದ ಸೇವಂತಿಗೆ ಹೂ ಕ್ರಮವಾಗಿ ಜೋಡಿಸಿಟ್ಟ ಹಾಗೆ ಪ್ರಕೃತಿಯೇ ಸುಂದರವಾಗಿ ಅಲಂಕರಿಸಿದೆ. ಮನುಷ್ಯರ ಮುಖ ಕಣ್ಣು ಕಿವಿ ಹೃದಯದಂತೆ ದೇಹದ ಭಾಗವಲ್ಲದೇ, ಪ್ರಾಣಿಗಳ ಆಕೃತಿಗಳ ಹಾಗೂ ಅಣಬೆಗಳು ಮೈದಳೆಯುತ್ತವೆ. ಮಣ್ಣಿನಲ್ಲಿ ಬಿದ್ದು ಹೊರಳಾಡಲು ಆಗದ ಕಪ್ಪು ಜಂಬೇಮರದ ತುಂಬಾ ಬಿಳಿಯ ಮುತ್ತಗಳು ಪೋಣಿಸಿದ ಹಾಗೆ ಅಣಬೆಗಳು ಹುಟ್ಟಿವೆ. ದೂರದಲ್ಲಿ ಭಾವನಾತ್ಮಕವಾಗಿ ಬದುಕಿನ ಭಾಷ್ಯ ಹೊರಟಂತೆ ಇರುವ ಮೂರು ತಲೆಮಾರಿನ ಹಾಗೆ ಕಾಣುವ ಬಿಳಿಕೊಡೆಗಳು ವಾರಗಟ್ಟಲೆಯಾದರೂ ಅರಳಿಕೊಂಡೇ ಇರುವವವು. ಕೆಲವು ಅಣಬೆಗಳು ದಪ್ಪವಾಗಿ ಇದ್ದರೆ, ಇನ್ನು ಕೆಲವು ಮೃದುವಾದ ಮುಟ್ಟಿದರೆ ಕೈಗಂಟುವ ಬಣ್ಣದ ನವಿಲುಗರಿಯಂತಿವೆ.



ಮರಿ ಅಣಬೆಯೊಂದು ಕಾಲಿಡುವ ಜಾಗದಲ್ಲಿ ಗೊತ್ತಿಲ್ಲದೇ ಮುದ್ದೆಯಾದಾಗ ಕಾಲಿಗಂಟಿದ ಕೇಸರಿ ಬಣ್ಣ ತೊಳೆದುಕೊಳ್ಳಲು ಬಹಳ ಕಾಲವೇ ಬೇಕಾಯಿತು. ನಿಸರ್ಗ ಎಲ್ಲಾ ಆಕೃತಿಗಳನ್ನು ವಿವಿಧ ವಿನ್ಯಾಸದಲ್ಲಿ ಕಡೆದು ನಿಲ್ಲಿಸುವ ಈ ಅಣಬೆಗಳ ವಿಶ್ವರೂಪ ಮಳೆಗಾಲದಲ್ಲಿ ಒಂದು ತಿಂಗಳು ಕಣ್ಣಿಗೆ ಹಬ್ಬ ನೀಡುವುದರಲ್ಲಿ ಸಂದೇಹವಿಲ್ಲ. ವನವಾಸಿಗಳು ಕಾಡಿನ ಅಣಬೆಗಳಲ್ಲಿ ಕೆಲವು ಅಣಬೆಗಳನ್ನು ಆಹಾರವಾಗಿ ಬಳಸುತ್ತಾರೆ. ಇನ್ನು ಕೆಲವು ವಿಷದ ಅಣಬೆಗಳೂ ಇವೆ ಎಂದು ಗುರುತಿಸಿ ದೂರ ಇಡುತ್ತಾರೆ. ಈ ಅಣಬೆಗಳಲ್ಲಿ ಕೆಲವು ಗಂಟೆಗಳ ಆಯುಷ್ಯ ಹೊಂದಿದ್ದರೆ, ಇನ್ನು ಕೆಲವು ವಾರಗಟ್ಟಲೆ ಅರಳಿಕೊಂಡು ಗಮನಸೆಳೆಯುತ್ತವೆ. ಮರಕ್ಕೆ ಮೊಳೆತ ಅಣಬೆಗಳಂತೂ ತಿಂಗಳು ಹಾಗೇ ಉಳಿದ ಜೋರು ಮಳೆ ಬಂದಮೇಲೆ ಕರಗಿ ಹೋಗುತ್ತವೆ. ಈ ಅಣಬೆಗಳು ಅರಳಿದಾಗ ವಿವಿಧ ಕೀಟಗಳು ಆಹಾರಕ್ಕೆ ಅಣಬೆಗಳನ್ನು ಆಶ್ರಯಿಸುತ್ತವೆ. ಇನ್ನು ಕೆಲವು ಇರುವೆಗಳು ಈ ಅಣಬೆಗಳನ್ನು ತಿನ್ನುತ್ತವೆ. ಈ ಅಣಬೆಗಳ ಮಾಯಾಲೋಕದಲ್ಲಿ ಕರಗಿ ಹೋದರೆ ಬರುವಾಗ ಬೆತ್ತದ ಮುಳ್ಳು ತಾಗಿ ರಕ್ತ ಸೋರಿ, ಇಂಬಳಗಳ ಕಾಟದಲ್ಲಿ ಮನೆಯ ದಾರಿಯೇ ತಪ್ಪಿ ಹೋಗುತ್ತದೆ. ಆದರೂ ಬಣ್ಣ ಬಣ್ಣದ ಅಣಬೆಗಳು ಅರಳಿ ನಿಂತ ಖುಷಿಗೆ ಮನಸ್ಸು ಕುಣಿದಾಡುತ್ತದೆ. ❖

...ಆಪದ್ಬಾಂಧವ

10ನೇಪುಟದಿಂದ...

'ಅಪಘಾತದಲ್ಲಿ ಅಣ್ಣನನ್ನು ಕಳೆದುಕೊಂಡ ಸಂಕಟ ಬಾಧಿಸತೊಡಗಿತ್ತು. ಅಂದಿನಿಂದ ಗಾಯಾಳುಗಳಿಗೆ ನೆರವಾಗತೊಡಗಿದೆ. ಹಲವರ ಪ್ರಾಣ ಉಳಿಸಿದ್ದೇನೆ. ರಕ್ಷಿಸಿದ ಗಾಯಾಳುಗಳ ಬಗ್ಗೆ ಲೆಕ್ಕವಿಟ್ಟಿಲ್ಲ. ಹಣ ಪಡೆಯದೆ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವ ಆಟೊರಿಕ್ಷಾ ಚಾಲಕರ ಬೆಂಬಲವನ್ನು ಮಾತ್ರ ಮರೆಯಲಾರೆ' ಎನ್ನುತ್ತಾರೆ. ಕಿರಿಯ ಸಹೋದರ, ಸಿನಿಮಾ ನಿರ್ದೇಶಕ ಅಜುರ್ನ್ ಸಾಗರ್ ಅವರನ್ನೂ ಇತ್ತೀಚೆಗೆ ಕಳೆದುಕೊಂಡು, ಇಡೀ ಕುಟುಂಬದ ಹೊಣೆಗಾರಿಕೆ ಹೊತ್ತಿರುವ ಅವರಿಗೂ ಸಾವು, ಅಪಘಾತದ ಭಯ ಇದ್ದೇ ಇದೆ.

ಅನುಕಂಪದ ಆಧಾರದಲ್ಲಿ ತಂದೆಯ ಕೆಲಸವನ್ನು ಪಡೆದಿರುವ ಅವರು ಬಿಕಾಂ. ಎಂಬಿಎ ಪದವೀಧರರು. ರಾತ್ರಿಪಾಳಿಯಲ್ಲಿ ಹೆದ್ದಾರಿಯಲ್ಲಿ ವಾಹನಗಳ ತಪಾಸಣೆ ಸಂದರ್ಭದಲ್ಲೂ ಅವರು ಅಪಘಾತದ ಸಂತ್ರಸ್ತರಿಗೆ ನೆರವಾಗಿದ್ದಾರೆ. ನಾಲ್ಕು ವರ್ಷದ ಹಿಂದೆ, ಮಂಡ್ಯದಲ್ಲಿ ರಾತ್ರಿ ವೇಳೆ ದುಷ್ಕರ್ಮಿಗಳಿಂದ ಹಲ್ಲೆಗೆ ಒಳಗಾಗಿ ರಕ್ಷಣೆ ಕೋರಿ ಬಂದ ವ್ಯಕ್ತಿಯೊಬ್ಬರಿಗೆ ಅವರು ತಮ್ಮ ಅಧಿಕಾರಿಯ ಸಮ್ಮುಖದಲ್ಲೇ ನೆರವಾಗಿದ್ದರು. ಪೊಲೀಸರಿಗೆ ಕರೆ ಮಾಡಿ, ಆಸ್ಪತ್ರೆಗೆ ದಾಖಲಿಸಿದ್ದರು.

ಗರ್ಭಿಣಿಯ ಜೀವ ಉಳಿಸಿದರು...



'ಕಚೇರಿಗೆ ಬರುವಾಗ ಅಪಘಾತಕ್ಕೊಳಗಾದ ವಿಷಯ ಗೊತ್ತಾಗುತ್ತಲೇ ಸಿಬ್ಬಂದಿಯೊಂದಿಗೆ ಧಾವಿಸಿದ್ದ ಆಕಾಶ್ ಅವರು ಪ್ರಜ್ಞಾಹೀನಳಾಗಿದ್ದ ನನ್ನನ್ನು ಆಸ್ಪತ್ರೆಗೆ ದಾಖಲಿಸಿದ್ದರು. ನನ್ನ ಪತಿಯು ಬರುವವರೆಗೂ ಇದ್ದು, ಆತಂಕಿತರಾಗಿದ್ದ ಅವರಿಗೂ ಧೈರ್ಯ ತುಂಬುವಲ್ಲಿ ನೆರವಾಗಿದ್ದರು. ಆಗ ನಾನು ಏಳೂವರೆ ತಿಂಗಳ ಗರ್ಭಿಣಿಯಾಗಿದ್ದೆ. ಅಪಘಾತವಾದಾಗ ಯಾವ ಬಂಧುವೂ ಇಲ್ಲವೆಂಬ ಅನಾಥಪ್ರಜ್ಞೆಯನ್ನು ನಿವಾರಿಸಿದ ಆಪದ್ಬಾಂಧವ' ಎಂದು ಆಕಾಶ್ ಅವರ ಸಹೋದ್ಯೋಗಿ ಅಧಿಕಾರಿ ಹೇಳುತ್ತಾರೆ.

ಆಕಾಶ್ ಸಹೋದ್ಯೋಗಿಗಳು, ಸ್ನೇಹಿತರ ನಡುವೆಯೂ ಆಪದ್ಬಾಂಧವನೇ ಆಗಿದ್ದಾರೆ. ಗೆಳೆಯರಿಗೆ ಅನಾರೋಗ್ಯವಾದರೆ, ದಾಂಪತ್ಯದಲ್ಲಿ ಕಲಹ ಬಂದರೆ, ರಕ್ತ ಬೇಕಾದರೆ, ರಾತ್ರಿ ವೇಳೆ ಯಾರದ್ದಾದರೂ ವಾಹನ ಕೆಟ್ಟು ನಿಂತರೂ ಅವರಿಗೆ ಕರೆಗಳು ಬರುತ್ತವೆ. ಬಾಡಿಬಿಲ್ಡರ್ ಆಗಿರುವ ಅವರ ದೇಹ ಉಕ್ಕಿನಂತಿದೆ. ಮನಸು ಮಾತ್ರ ಬೆಣ್ಣೆ.

'ಹೀಗೆ ಸಹಾಯ ಮಾಡುವುದರಿಂದ ಏನಾದರೂ ತೊಂದರೆಯಾಗಿದೆಯೇ' ಎಂಬ ಪ್ರಶ್ನೆಗೆ ಅವರು 'ಇಲ್ಲ'ವೆನ್ನುತ್ತಾರೆ. 'ಪೊಲೀಸರಿಗೆ, ಆಂಬುಲೆನ್ಸ್‌ಗೆ ಮಾಹಿತಿ ನೀಡುವುದರಿಂದ ಯಾವ ತೊಂದರೆಯೂ ಆಗದು' ಎಂಬುದು ಅವರ ಪ್ರತಿಪಾದನೆ.

ಅಪಘಾತದ ಗಾಯಾಳುಗಳನ್ನು ನೋಡುತ್ತಾ ನಿಲ್ಲುವವರೇ ಹೆಚ್ಚು. ಬಹುತೇಕರಿಗೆ ಅಪಘಾತ ಹೇಗಾಯಿತೆಂದು ತಿಳಿದುಕೊಳ್ಳುವ ಕುತೂಹಲ. ಗಾಯಾಳುಗಳ ನರಳಾಟವನ್ನು ಫೋಟೊ, ವಿಡಿಯೊ ಮಾಡಿಕೊಂಡು, ಸೋಶಿಯಲ್ ಮೀಡಿಯಾಗಳಲ್ಲಿ ಶೇರ್ ಮಾಡಿದರಷ್ಟೇ ಖುಷಿ. ಗಾಯಾಳುಗಳತ್ತ ಗಮನ ಕೊಡುವವರು ತುಂಬಾ ಕಡಿಮೆ. ಪೊಲೀಸರಿಗೆ, ಆಂಬುಲೆನ್ಸ್‌ಗೆ ಕರೆ ಮಾಡಲಾರರು. 'ನಮಗೇಕೆ ಇದೆಲ್ಲಾ' ಎಂಬ ಭಾವನೆಯ ಜೊತೆಗೆ 'ನೆರವಾದರೆ ಏನು ತೊಂದರೆ ಎದುರಿಸಬೇಕಾಗುತ್ತದೋ' ಎಂಬ ಭಯ. ಜೀವವನ್ನು ಉಳಿಸಬಹುದಾದ ಮಹತ್ವದ ಕ್ಷಣಗಳು ಹೀಗೆ ಜನರ ಕಣ್ಣಮುಂದೆಯೇ ಜಾರಿ ಹೋಗುತ್ತವೆ. ಎಷ್ಟೋ ಕಡೆ, ಜನ ನೋಡನೋಡುತ್ತಲೇ ಗಾಯಾಳುಗಳು ಕೊನೆಯುಸಿರೆಳೆಯುವುದೂ ಉಂಟು.

ಇದು ಇಂದಿನ ಜನರ ಧೋರಣೆಯಷ್ಟೇ. ಯಾರನ್ನು ದೂಷಿಸುವುದು? ಅದಕ್ಕಿಂತಲೂ ನಾವೇ ಮುಂದೆ ನಡೆದು ಗಾಯಾಳುವಿಗೆ ನಮ್ಮ ಕೈಲಾದಷ್ಟು ನೆರವಾಗುವುದೇ ಸಮಯಪ್ರಜ್ಞೆ, ಮಾನವೀಯತೆ. ಅಂಥ ಮಾನವೀಯತೆಯ ಜೀವಂತ ಸಾಕ್ಷಿಯಂತೆ ಮೈಸೂರಿನ ಆಕಾಶ್ ಕಾಣುತ್ತಾರೆ. ❖

ಕಲ್ಲು ಕಾನನದ ನಡುವೆ ಅರಳಿ ತೀರ್ಥ ಯಾನ

• ವೆಂಕಟೇಶ ಪಾಟೀಲ

'ಅರಳಿ ತೀರ್ಥ'–ಇದು ಐತಿಹಾಸಿಕ, ಬಾದಾಮಿ ಪರಿಸರದಲ್ಲಿರುವ ಒಂದು ಸುಂದರ ಸ್ಥಳ. ಜನರಿಗೆ ಹೆಚ್ಚು ಪರಿಚಯವಿಲ್ಲದ ಪ್ರಶಾಂತ ತಾಣ. ಈ ಪ್ರದೇಶದ ಕುರಿತು ಕೇಳಿದ್ದ ನನಗೆ ನೋಡಬೇಕೆಂಬ ಹಂಬಲ ಇದ್ದೇ ಇತ್ತು. ಅದೊಂದು ದಿನ ಆ ಸ್ಥಳವನ್ನು ನೋಡಬೇಕೆಂದು ಏಕಾಂಗಿಯಾಗಿ ನಡೆದೇಬಿಟ್ಟೆ.

ಬಾದಾಮಿ ಪರಿಸರ ನನಗೇನೂ ಹೊಸದಲ್ಲ. ಆದರೆ ನಾನು ಸಂದರ್ಶಿಸಿದ ಪ್ರತಿ ಬಾರಿಯೂ ಹೊಸದಾಗಿ ಕಾಣುವುದು. ಅಲ್ಲಿನ ಬೃಹತ್ ಬಂಡೆಗಳು ನೋಡಿದಷ್ಟು ಬಾರಿಯೂ ಹೊಸ ನೋಟಕ್ಕೆ ಎಡೆಮಾಡಿಕೊಡುವವು. ಚಾಲುಕ್ಯರ ಕಾಲದ ಇಲ್ಲಿನ ಸ್ಮಾರಕಗಳನ್ನು, ಶಿಲ್ಪಗಳನ್ನು ನೋಡಿದರೆ ಬಗೆದಷ್ಟೂ ಆಳ ಎಂಬಂತೆ ಐತಿಹಾಸಿಕ ನೆಲೆಯಲ್ಲಿ ಮಾತ್ರವಲ್ಲದೆ, ಸೌಂದರ್ಯದ ನೆಲೆಯಲ್ಲಿಯೂ ಆಪ್ಯಾಯಮಾನವಾಗಿ ಪೂರ್ಣದೃಷ್ಟಿಯೊಂದು ನಮ್ಮೊಳಗೆ ತೆರೆದುಕೊಳ್ಳುವುದು. ಇಲ್ಲಿನ ಮೇಣ ಬಸದಿ, ವಸ್ತುಸಂಗ್ರಹಾಲಯ, ಬಂಡೆಗಳ ಮಧ್ಯೆ ಹಾಯ್ದುಹೋದಾಗ ಎತ್ತರದ ಬೆಟ್ಟದ ಮೇಲೆ ಸಿಗುವ ಮೇಲಣ ಶಿವಾಲಯ, ಕೆಳಗಣ ಶಿವಾಲಯ, ಎರಡಂತಸ್ತಿನ ಮಂಟಪ, ಕನ್ನಡದ ಮೊದಲ ತ್ರಿಪದಿ ಶಾಸನವಾದ ಕಪ್ಪೆ ಅರಭಟ್ಟನ ಶಾಸನ, ಅಗಸ್ತ್ಯತೀರ್ಥದ ಪರಿಸರದಲ್ಲಿನ ಪೂರ್ವದ ಬೆಟ್ಟಕ್ಕೆ ಹೊಂದಿಕೊಂಡಂತೆ ಕಾಣುವ ಭೂತನಾಥ ಗುಡಿಗಳ ಗುಂಪು - ಹೀಗೆ ಹತ್ತು ಹಲವು ಪ್ರದೇಶಗಳನ್ನು ಹಲವಾರು ಬಾರಿ ನೋಡಿ ಆನಂದಿಸಿದ್ದೆ. ಈಗ ನಾನು ಹುಡುಕಿಕೊಂಡು ಹೊರಟ 'ಅರಳಿ ತೀರ್ಥ'ದ ದಾರಿ ಹೊಸತು. ಆದ್ದರಿಂದ ಭಾರತೀಯ ಪುರಾತತ್ವ ಇಲಾಖೆಯ ಸಿಬ್ಬಂದಿಯೊಬ್ಬರನ್ನು ಆ ಪ್ರದೇಶದ ಕುರಿತು ವಿಚಾರಿಸಿ, ಆ ದಿಶೆಯಲ್ಲಿ ಮುನ್ನಡೆದೆ. ಮ್ಯೂಸಿಯಂನಿಂದ ಹೊರಟು ಭೂತನಾಥ ಗುಡಿಗಳ ಹಿಂದಿನ ಬೆಟ್ಟದ ಕಡೆಗೆ ಹೆಜ್ಜೆ ಹಾಕಿದೆ.

ಅದೊಂದು ನಿರ್ಜನ ಪ್ರದೇಶ. ಕೆಂಪುಮರಳು ಶಿಲೆಯಿಂದ ರಚಿತವಾದ ಬಂಡೆಗಳಿಂದ ಕೂಡಿದ ಬೆಟ್ಟ ಪ್ರದೇಶ. ವಿರಳವೆನಿಸಿದರೂ ಮರಗಳಿಂದ ಆವೃತವಾಗಿ ನೋಟಕ್ಕೆ ತುಂಬಿಕೊಳ್ಳುವ ಹಸಿರು. ಅತ್ಯಂತ ದುರ್ಗಮ ಅಲ್ಲದಿದ್ದರೂ ಅಲ್ಲಲ್ಲಿ ಮುಳ್ಳು-ಕಂಟಿಗಳಿಂದ ಕೂಡಿ ಹತ್ತಿರ ಹೋದಾಗ ಮಾತ್ರ ತೆರೆದುಕೊಳ್ಳುವ ದಾರಿ. ಪ್ರಾಕೃತಿಕವಾಗಿ ನಿರ್ಮಾಣವಾದ ಚಪ್ಪಡಿಕಲ್ಲುಗಳಿಂದ ಕೂಡಿದ ದಾರಿ ನನ್ನ ಅಂದಿನ ಏಕಾಂಗಿ ಪಯಣಕ್ಕೆ ಸವಾಲಾಗಿ ತೋರುತ್ತಿತ್ತು. ಆದರೂ ನಾನು ಹುಡುಕಿಕೊಂಡು ಹೊರಟ ಸ್ಥಳವನ್ನು ನೋಡಬೇಕೆಂಬ ಗಾಢವಾದ ಹಂಬಲದಿಂದ ಮುನ್ನಡೆದೆ. ನೀರವ ಮೌನ ತುಂಬಿದ ಆ ಪ್ರದೇಶದಲ್ಲಿ ಆಗಾಗ ಚಿಕ್ಕ ಹಕ್ಕಿಗಳ ಕೂಗು. ಒಂದೇ ಅಳತೆಯಲ್ಲಿ ಹರಡಿದ ಪರಿಚಿತವೆನಿಸಿದರೂ ಭಯತರುವ ಶಬ್ದ. ಕೊಂಚ ಭಯದಲ್ಲಿಯೇ ಸುಮಾರು ಅರ್ಧ ಕಿಲೋಮೀಟರ್ ಸಾಗಿದೆ. ಎತ್ತರಕ್ಕೆ ಹೋದಂತೆಲ್ಲ ಅಲ್ಲಲ್ಲಿ ಸಿಗುವ ಬಯಲು, ಆ ಬಯಲಲ್ಲಿ ನಿಂತು ನೋಡಿದರೆ ರುದ್ರರಮಣೀಯವಾಗಿ ಕಾಣುವ ಬೆಟ್ಟ, ಬಂಡೆಗಳು. ಅಲ್ಲಿಂದ ಹತ್ತಿರದ ಬೆಟ್ಟದ ತುದಿಯಲ್ಲಿ ಕಾಣುವ ಪ್ರಾಚೀನ ಸ್ಮಾರಕ. ಅದನ್ನೇ ಕೇಂದ್ರವಾಗಿಸಿಕೊಂಡು ಬೆಟ್ಟದ ಮೇಲೆ ಹೋದೆ. ಆ ಎತ್ತರದ ಮೇಲಿಂದ ಅಲ್ಲಿನ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳುತ್ತಿರುವಾಗಲೇ ನಾನು ನಿಂತ ಸ್ಥಳದಿಂದ ಅನತಿ ದೂರದಲ್ಲಿ ಚಿಕ್ಕ ಹೊಂಡ ಕಾಣಿಸಿತು. ಅಚ್ಚರಿ ಎಂಬಂತೆ ಅಲ್ಲಿನ ಚಿಕ್ಕ ಗವಿಯಲ್ಲಿ ಕೆತ್ತಲಾದ ಪ್ರಾಚೀನ ಮೂರ್ತಿಗಳು ಕಾಣಿಸಿದವು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಆಯಾಸವೆಲ್ಲ ಕರಗಿತು. ನಾನು ಹುಡುಕಿಕೊಂಡು ಹೊರಟ 'ಅರಳಿ ತೀರ್ಥ' ಸ್ಥಳವನ್ನು ತಲುಪಿದ್ದೆ.




ಬೆಟ್ಟದ ಮೇಲಿರುವ ಚಿಕ್ಕ ಹೊಂಡವೇ ಈ 'ಅರಳಿ ತೀರ್ಥ'. ಅಷ್ಟೇನೂ ಆಳವಲ್ಲದ ತಿಳಿನೀರಿನಿಂದ ಆವೃತವಾದ ಈ ಹೊಂಡ ಅಲ್ಲಲ್ಲಿ ಪಾಚಿ ಮತ್ತು ಜಲಸಸ್ಯಗಳಿಂದ ಕೂಡಿ ಮೋಹಕವಾಗಿದೆ. ಆಗಸದ ಮೇಘಗಳ ಓಟವನ್ನು ಸ್ಫುಟವಾಗಿ ನಮ್ಮ ನೋಟಕ್ಕೆ ತೆರೆದಿಡುವ ಈ 'ತೀರ್ಥ' (ಹೊಂಡ) ಅಲ್ಲಿನ ಪರಿಸರದ ಒಂದು ಚಿಕ್ಕ ಕನ್ನಡಿಯಂತೆ ತೋರುವುದು.

ಕೆಂಪು ಮರಳುಶಿಲೆಗಳಿಂದ ಆಚ್ಛಾದಿತವಾದ 'ಅರಳಿ ತೀರ್ಥ' ಬೆಟ್ಟ ಪ್ರದೇಶವು ನೈಸರ್ಗಿಕ ಗುಹೆಗಳ ರಚನೆಗಳಿಂದ ಕೂಡಿದೆ. ಪ್ರಾಕೃತಿಕವಾಗಿ ಭಿತ್ತಿನಂತೆ ನಿರ್ಮಾಣವಾದ ರಚನೆಗಳು ಸಹಜವಾಗಿಯೇ ತೆರೆದ ಚಿಕ್ಕ ಗವಿ ವಿನ್ಯಾಸವನ್ನು ರೂಪಿಸಿವೆ. ಈ ಬಗೆಯ ಬಂಡೆಯ ರಚನೆಗಳ ಮೇಲೆ ಅನೇಕ ಶಿಲ್ಪಗಳಿವೆ. ಇಲ್ಲಿರುವ ಸುಮಾರು 25 ಅಡಿಗಳಷ್ಟು ಅಗಲವಾದ ತೆರೆದ ಗವಿಯ ಒಳಭಿತ್ತಿಯ ಮೇಲೆ ಗಣೇಶ, ಅನಂತಶಯನ, ಮಹಿಷಾಸುರಮರ್ಧಿನಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರ ಹಾಗೂ ಸೂರ್ಯದೇವನ ಮೂರ್ತಿಗಳಿವೆ. ಅಲ್ಲಲ್ಲಿ ಮಾಡುಗಳ ರಚನೆಯಲ್ಲಿ ಭಕ್ತಶಿಲ್ಪಗಳಿವೆ.

ಪ್ರತಿಮಾ ಶಾಸ್ತ್ರದ ನೆಲೆಯಲ್ಲಿ ಶಿಲ್ಪಗಳನ್ನು ಪ್ರಮಾಣಬದ್ಧವಾಗಿ ರಚಿಸಲಾಗಿದೆ. ಹೆಚ್ಚುಕಡಿಮೆ ಎರಡೂವರೆ ಅಡಿ ಎತ್ತರದ ಅಳತೆಯ ಒಳಹೊರಗೆ ರಚನೆಗೊಂಡ ಶಿಲ್ಪಗಳು ಒಂದೇ ಸಾಲಿನಲ್ಲಿ ಕಾಣುವಂತಿವೆ. ಇಲ್ಲಿರುವ ಶಿಲ್ಪಗಳಲ್ಲಿ ನನಗೆ ಸೂರ್ಯದೇವನ ಶಿಲ್ಪ ಅತ್ಯಂತ ಮೋಹಕವಾಗಿ ಕಂಡಿತು. ವಿಶೇಷವೆಂಬಂತೆ ಎಂಟು ಕೈಗಳಿರುವ ಸೂರ್ಯದೇವನು ಖಡ್ಗ, ಢಾಲು, ಬಿಲ್ಲು, ಬಾಣ, ತ್ರಿಶೂಲಗಳಲ್ಲದೆ ಕಮಲದ ಹೂವನ್ನು ಹಿಡಿದು ಸಾರಥಿಯೊಡನೆ ಸಪ್ತಕುದುರೆಗಳಿರುವ ರಥದಲ್ಲಿ ಕಮಲದ ಪೀಠದ ಮೇಲೆ ನಿಂತಿದ್ದಾನೆ. ಅವನ ಪಕ್ಕದಲ್ಲಿ ಚಾಮರಧಾರಿಣಿ ಶಿಲ್ಪಗಳಿವೆ. ಈ ಸೂರ್ಯದೇವನ ಎಡಗಡೆಯ ಭಿತ್ತಿಯಲ್ಲಿ ಶಾಸನವೊಂದಿದೆ. ಈ ಶಾಸನವನ್ನು ನೋಡುತ್ತಿದ್ದಂತೆ ನನ್ನಲ್ಲಿ ಮತ್ತಷ್ಟು ಕುತೂಹಲ ಗರಿಗೆದರಿತು.

17ನೇ ಶತಮಾನಕ್ಕೆ ಸಂಬಂಧಿಸಿದ ಶಾಸನವು ದೇವನಾಗರಿ ಲಿಪಿಯಲ್ಲಿದ್ದು 'ಕೊಲ್ಲಾಪುರದ ಮಹಾಲಕ್ಷ್ಮಿಯ ಭಕ್ತನಾದ ಹಾರೀತ ಕುಲದ ರವಿದೇವ ತ್ರಿದಂಡಿಗೆ ಮಂಗಳವಾಗಲಿ' ಎಂದು ಉಲ್ಲೇಖಿಸುತ್ತದೆ. ಈ ಕುರಿತು ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಸಾರಾಂಗ ಪ್ರಕಟಣೆಯ 'ಬಾಗಲಕೋಟೆ ಜಿಲ್ಲೆಯ ಶಾಸನ ಸಂಪುಟ'ವನ್ನು ನೋಡಬಹುದಾಗಿದೆ.

ಬೆಟ್ಟದ ತುದಿಯಲ್ಲಿ ನಸುಗೆಂಪು ಬಣ್ಣದ ಚೌಕಾಕಾರದ ಹಳೆಯ ಆಲಯವೊಂದಿದೆ. ಅದರಲ್ಲಿ ಯಾವುದೇ ಮೂರ್ತಿಯಿಲ್ಲ. ಬೆಟ್ಟದ ಮೇಲೆ ಸಾಗಿದರೆ ವಿಶಾಲವಾದ ಸುಂದರ ಬಯಲು ಪ್ರದೇಶ ಸಿಗುವುದು. ಅಲ್ಲಿಂದಲೇ ಬಾದಾಮಿ ನಗರ ಹಾಗೂ ಅಗಸ್ತ್ಯತೀರ್ಥ ಪರಿಸರದ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳಬಹುದು. ಒಂದು ಬಗೆಯ ದೃಶ್ಯ ಸಂವೇದನೆ ಅದು. ನನ್ನಲ್ಲಿ ಅವ್ಯಕ್ತ ಅನುಭೂತಿ ನೆಲೆಗೊಂಡಿತ್ತು. ಒಲ್ಲದ ಮನಸ್ಸಿನಿಂದಲೇ ನನ್ನ ಪಯಣಕ್ಕೆ ವಿರಾಮ ನೀಡಿ ಅಲ್ಲಿಂದ ಮರಳಿದೆ. ❖



ಮುನ್ನೋಟ 22-06-2025 ರಿಂದ 28-06-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕೆಲವರಿಗೆ ಸಂಗೀತದಲ್ಲಿ ಆಸಕ್ತಿ ಬಹಳ ಹೆಚ್ಚಾಗುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯ ಮೇಲೆ ಹಿರಿಯರು ಪ್ರಭಾವ ಬೀರುವರು. ಹೈನುಗಾರಿಕೆ ಮಾಡುವವರಿಗೆ ಅಭಿವೃದ್ಧಿ ಇದೆ. ತಾಯಿಗಾಗಿ ಒಡವೆ ಮತ್ತು ವಸ್ತುಗಳನ್ನು ಕೊಳ್ಳುವಿರಿ. ಕೃಷಿಯಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ದೇಹ ಸೌಂದರ್ಯದ ಬಗ್ಗೆ ಗಮನ ಕಡಿಮೆಯಾಗುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಕೃಷಿಯಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ. ಕ್ರೀಡಾಪಟುಗಳು ಸಿಕ್ಕ ಅವಕಾಶಗಳನ್ನು ಬಳಸಿ ಕೊಳ್ಳಲು ವಿಫಲರಾಗುವರು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ಮೂತ್ರಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಜತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆತ್ಮವಿಶ್ವಾಸದಿಂದ ಮುನ್ನಡೆಯುವಿರಿ. ಆದಾಯವು ಉತ್ತಮವಾಗಿರುತ್ತದೆ. ಬಂಧುಗಳಿಂದ ನಿಮ್ಮ ಒಳ್ಳೆಯ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಸಂಗೀತ ವಿದ್ಯಾರ್ಥಿಗಳಿಗೆ ಬಹಳ ಯಶಸ್ಸು ಲಭಿಸುತ್ತದೆ. ಮೂಳೆಗೆ ಸಂಬಂಧಿಸಿದ ದೋಷಗಳು ಕೆಲವರನ್ನು ಕಾಡಬಹುದು. ಉದ್ಯೋಗದಲ್ಲಿ ಇದ್ದ ಒತ್ತಡಗಳು ಸ್ವಲ್ಪ ಕಡಿಮೆಯಾಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವೃತ್ತಿಯಲ್ಲಿ ಮೇಲ್ದರ್ಜೆಗೆ ಏರುವ ಬಗ್ಗೆ ಸಾಕಷ್ಟು ಚಿಂತನೆ ನಡೆಸುವಿರಿ. ಆದಾಯವು ಕಡಿಮೆ ಇರುತ್ತದೆ. ಸಂಸಾರದಲ್ಲಿ ಸುಖ ಮತ್ತು ಸಂತೋಷವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಸಿಗುವುದಿಲ್ಲ. ಪಿತ್ತವಿಕಾರಗಳು ಕೆಲವರನ್ನು ಕಾಡಬಹುದು. ಕೆಲವರಿಗೆ ಅನಿರೀಕ್ಷಿತ ವಿದೇಶಿ ಪ್ರಯಾಣ ಯೋಗವಿದೆ. ವೃತ್ತಿಯಲ್ಲಿದ್ದ ಗೊಂದಲಗಳು ನಿವಾರಣೆಯಾಗಿ ಹೊಸ ಸ್ಥಾನ ಸಿಗುವ ಸಾಧ್ಯತೆಯಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಮನಸ್ಸಿನಲ್ಲಿ ಆಲಸಿತನವಿರುತ್ತದೆ. ಆದಾಯವು ಸ್ವಲ್ಪ ಉತ್ತಮವಾಗಿರುತ್ತದೆ. ನಿಮ್ಮೆಲ್ಲ ಕೆಲಸಗಳಿಗೆ ತಂದೆಯ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಬಹಳ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ರಾಜಕಾರಣಿಗಳಿಗೆ ಅನಿರೀಕ್ಷಿತವಾಗಿ ಜನ ಬೆಂಬಲ ದೊರೆಯುತ್ತದೆ. ಕೆಲವರಿಗೆ ವಿದೇಶಕ್ಕೆ ಹೋಗಿ ಬರುವ ಕನಸು ನನಸಾಗುತ್ತದೆ. ಕಬ್ಬಿಣದ ವ್ಯಾಪಾರಿಗಳಿಗೆ ಸ್ವಲ್ಪ ಹಿನ್ನಡೆಯಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ದ್ವಂದ್ವ ನಿರ್ಧಾರದಲ್ಲಿರುತ್ತೀರಿ. ಆದಾಯವು ಕಡಿಮೆ ಇರುತ್ತದೆ. ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಇರುತ್ತದೆ. ಮೂಳೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯ ಆಲಸಿತನವು ನಿಮ್ಮನ್ನು ಕೆರಳಿಸುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಶ್ರೀಮಂತನಾಗಬೇಕೆಂಬ ಬಯಕೆ ಹೆಚ್ಚಾಗುತ್ತದೆ. ಆದಾಯವು ಕಡಿಮೆ ಇರುತ್ತದೆ. ಎಲ್ಲರ ಸಹಕಾರ ದೊರೆತು ನಿಮ್ಮ ಕೆಲಸಗಳು ಸುಗಮವಾಗಿ ಆಗುತ್ತವೆ. ವಿದೇಶದಲ್ಲಿ ಓದುತ್ತಿರುವವರಿಗೆ ಹೆಚ್ಚಿನ ಸೌಲಭ್ಯ ದೊರೆಯುತ್ತದೆ. ಅನುವಂಶೀಯ ಕಾಯಿಲೆಗಳು ಕೆಲವರನ್ನು ಕಾಡಬಹುದು. ವೃತ್ತಿಯಲ್ಲಿ ಹೆಚ್ಚಿನ ಆದಾಯ ದೊರೆಯುವ ಸಾಧ್ಯತೆಗಳಿವೆ. ಸಂಗಾತಿಯಿಂದ ಈಗ ಸಮಾಧಾನದ ಮಾತುಗಳು ಮತ್ತು ಆರ್ಥಿಕ ಸಹಾಯ ದೊರೆಯುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆಲಸಿತನ ಮೈದುಂಬಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಮಕ್ಕಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ವಿದೇಶದಲ್ಲಿರುವವರು ಈಗ ಸ್ವದೇಶದಲ್ಲಿ ಸ್ಥಿರಾಸ್ತಿಯನ್ನು ಮಾಡಬಹುದು. ಕೆಲವು ಮಹಿಳೆಯರಿಗೆ ಆರೋಗ್ಯ ಸಮಸ್ಯೆಯಾಗಬಹುದು. ಮಹಿಳೆಯರ ಜತೆ ಮಾಡಿದ ವ್ಯವಹಾರಗಳು ನಷ್ಟಕ್ಕೆ ಕಾರಣವಾಗುತ್ತವೆ. ಸಂಗಾತಿಯ ಖರ್ಚು ಚಿಂತೆಗೀಡುಮಾಡುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆತ್ಮವಿಶ್ವಾಸವನ್ನು ಹೆಚ್ಚು ಮಾಡಿಕೊಳ್ಳುವಿರಿ. ಆದಾಯವು ಕಡಿಮೆ ಇದ್ದರೂ, ತೊಂದರೆ ಇರುವುದಿಲ್ಲ. ನಿಮ್ಮ ಕೆಲಸಗಳಿಗೆ ಬಂಧುಗಳು ತೊಂದರೆ ಮಾಡಬಹುದು. ನಿಮ್ಮ ಕೆಲವು ಪ್ರಬಂಧಗಳಿಗೆ ವಿದೇಶಿ ಮನ್ನಣೆ ದೊರೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸ್ತ್ರೀಯರ ಜತೆ ಮಾಡುವ ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಶ್ರಮಪಟ್ಟು ಕೆಲಸ ಮಾಡಿ ಹೆಸರು ಗಳಿಸುವಿರಿ. ವಿದೇಶದಲ್ಲಿರುವವರಿಗೆ ಆದಾಯ ಹೆಚ್ಚುತ್ತದೆ. ನಿಮ್ಮ ವೈರಿಗಳನ್ನು ಗುರುತಿಸುವಿರಿ. ಭೂ ಸಂಬಂಧಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ನರಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯೊಂದಿಗೆ ಅನುಬಂಧ ಉತ್ತಮವಾಗಿರುತ್ತದೆ. ಕೃಷಿಯಿಂದ ಅಷ್ಟು ಲಾಭವಿರುವುದಿಲ್ಲ. ವೃತ್ತಿಯಲ್ಲಿ ಒತ್ತಡಗಳು ಕಡಿಮೆಯಾಗಿ ಸಂತೋಷದ ವಾತಾವರಣವಿರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಸಾಮಾನ್ಯ ಮಟ್ಟದಲ್ಲಿ ಇರುತ್ತದೆ. ಬಹಳ ಚುರುಕಾಗಿ ಕೆಲಸ ಕಾರ್ಯಗಳನ್ನು ಮಾಡುವಿರಿ. ನಿಮಗೆ ಹಿರಿಯರ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಪಿತ್ತವಿಕಾರಗಳು ಕೆಲವರಲ್ಲಿ ಕಾಣಿಸಿಕೊಳ್ಳಬಹುದು. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಸ್ವಲ್ಪ ಎಚ್ಚರದಿಂದಿರಿ. ತಂದೆಯ ಸಹಕಾರದಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅನುಕೂಲವಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಅಲಂಕಾರದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಕಟ್ಟಡ ನಿರ್ಮಾಣಕಾರರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮಕ್ಕಳಿಂದ ನಿಮಗೆ ಆರ್ಥಿಕ ಸಹಕಾರ ಸಿಗುತ್ತದೆ. ಶೀತ ಅಥವಾ ಪಿತ್ತೋಷ್ಣಗಳು ನಿಮ್ಮನ್ನು ಕಾಡಬಹುದು.

ಪದಬಂಧ 2897

ಮೇಲಿನಿಂದ ಕೆಳಕ್ಕೆ
1. ಆಕಸ್ಮಿಕವಾಗಿ ನಡೆದರೂ ಪರಿಣಾಮ ನೋವು ಸಾವು, ಆಘಾತ 4
2. ಕತ್ತಲೆಯನ್ನೋಡಿಸುವ ಶಿವ 5
3. ನಡೆದದ್ದು ನಡೆದ ಸ್ಥಳದಿಂದಲೇ ಆಕಾಶವಾಣಿ ಟಿವಿಗಳಿಂದ ಬಿತ್ತರ 5
4. ಅಚ್ಚ ಕನ್ನಡದ ದ್ರವರೂಪದ ರಸಂ 4
6. ರಾಷ್ಟ್ರಾಡಳಿತ ಸೂತ್ರ ಸಂಹಿತೆ 4
8. ವಿಷ್ಣು ಶಿವ ಒಟ್ಟಿಗೆ ಸೇರಿದ್ದಾರೆ 5
10. ದಶರಥ ಮಗನ ಹದಿಮೂರು ಅಕ್ಷರಗಳ ಮಂತ್ರ ಮೋಕ್ಷಕ್ಕೆ ಹಾದಿ ಎಂಬ ನಂಬಿಕೆ 5
12. ಸದಾ ಸಂಚರಿಸುವ ಪಾದ 3
13. ಮಳೆಯ ಮುನ್ಸೂಚನೆ ಕೊಡುವ ಕರಿ ಮೇಘ 3
14. ಜೇನಿನಂತೆ ತೊಟ್ಟಿಕ್ಕುವ ಪದ್ಯ ಪ್ರಕಾರ 5
15. ಬೃಹತ್ತಾದ ಶರೀರ 4
16. ಸೂತ್ರದಿಂದ ಗಾಳಿಯಲ್ಲಿ ಹಾರಿಸಿದ್ದು ಪಲ್ಟಿ ಹೊಡೆದು ವಾಪಸ್ಸಾಗಿದೆ 5
17. ಹಾಸ್ಯ ಮಾಡುವ ಮದನ, ಜೋ ಎನ್ನುವ ಮಗ 4
19. ಪಂಚಾಂಗದಲ್ಲಿ ವರ್ಷ ವರ್ಷಕ್ಕೆ ದ್ರವ್ಯಗಳನ್ನು ನೋಡಿಕೊಳ್ಳುವ ಒಡೆಯ 4

ಎಡದಿಂದ ಬಲಕ್ಕೆ
1. ಮದುಮಕ್ಕಳು ಆಕಾಶದಲ್ಲಿ ನೋಡುವ ತಾರೆ ವಸಿಷ್ಠ ಪತ್ನಿ 4
3. ಕಣ್ಣಾಲಿಗಳಿಂದ ನೀರು ಹರಿಸುವ ನದಿ 4
5. ಹೆಚ್ಚು ಅಥವಾ ಕಡಿಮೆಯಿಲ್ಲದ ಚಿಕ್ಕ ಚೊಕ್ಕ ಕುಟುಂಬ 5
7. ಕೊಲ್ಲು ಕೊಲ್ಲು ಎಂದು ಹಿಂದು ಮುಂದಾಗಿ ಹೇಳಿದಾಗ ಉಂಟಾಗುವ ಕ್ಷೋಭೆ, ತಳಮಳ 4
9. ಸಹಸ್ರಾರು ಸಂಖ್ಯೆಯಲ್ಲಿ ಜನ ಬಂದಿದ್ದರೆ ಎಷ್ಟು ಎಂದು ಹೇಳುವಿರಿ? 4
11. ನಾಟಕ, ಗೀತೆ, ಸಾಹಿತ್ಯ ಇತ್ಯಾದಿಗಳನ್ನು ಸೃಷ್ಟಿಸಿದಾತ 5
14. ಈಕೆ ಐಶ್ವರ್ಯದ ಯಜಮಾನಿ, ವಿಷ್ಣು ಪತ್ನಿ 5
17. ಮೆಲ್ಲಗೆ ಮಾತನಾಡುವ ಜಾಯಮಾನವಲ್ಲ- ಎತ್ತರದ ಕೂಗು 4
18. ಸ್ವಾದಿಷ್ಟ ನಾಲಿಗೆಗೆ ಸವಿ 4
20. ಹಂದಿಯ ಆಕಾರ ದೈವ ಸ್ವರೂಪ 5
21. ನೆತ್ತರಿನ ಕೊಡುಗೆ, ಮಹಾ ಕೊಡುಗೆ 4
22. ತಗಡು ಶೀಟಿನ ಮೇಲೆ ಮಳೆ ಹನಿ ಬಿದ್ದ ಶಬ್ದ 4



ಪದಬಂಧ ಉತ್ತರ -2896

ಮೇಲಿಂದ ಕೆಳಕ್ಕೆ
1. ಜನಗಣತಿ 2.ವಸತಿಹೀನ 3.ಮರಕೋತಿ 4.ಪ್ರಪಿತಾಮಹ 9.ಸ್ಥಿರತೆ 11.ಲಲನೆ 12.ಮೋಹಿನಿ 13.ಮಯೂರ 14.ಮದನಕಾಮ 15.ರಸಪೂರಿತ 16.ಜನರಕ್ಷಣೆ 17. ಮಧುಚಂದ್ರ

ಎಡದಿಂದ ಬಲಕ್ಕೆ
1.ಜಲೋದ್ಭವ 3.ಮಹಾವಿಪ್ರ 5.ಸಲಹೆಗಾರ 6. ಗರ್ಭವತಿ 7.ಕೋಲುತಾತಾ 8.ಹೀನಾಯಸ್ಥಿತಿ 10.ತಿಲದಾನ 12.ಮೋಹ 13.ಮಮತೆ 14.ಮನೆ 15.ರಜನಿಜ 17. ಮರಗೆಲಸ 18.ನವವಧು 19.ಪೂರ್ವಾಪರ 20.ಚಂದ್ರಚಕೋರಿ 21.ಮಹಾರುದ್ರ 22.ತಪಾಸಣೆ

ಮಂಡಿಹೌಸ್‌ನ ಸಂಜನಾ ದೀದಿ ಸಾಹಿತ್ಯ ಸೇವೆ



ದೆಹಲಿಯ ಮಂಡಿಹೌಸ್ ಬಳಿ ಮರದ ಕೆಳಗೆ ಪುಸ್ತಕ ಮಾರಾಟ ನಿರತ ಸಂಜನಾ ತಿವಾರಿ

ದೆಹಲಿಯ ಮಂಡಿಹೌಸ್‌ನ ಎಲ್ಲಾ ಕಲಾಪ್ರಿಯರಿಗೆ ಇವರು ಸಂಜನಾ ದೀದಿ ಎಂದೇ ಚಿರಪರಿತರು. ಓದಿನ ಗೀಳಿನೊಂದಿಗೆ ಸಾಹಿತ್ಯ ಪ್ರೇಮಿಯಾಗಿರುವ ಇವರು ಮೂವತ್ತು ವರ್ಷಗಳಿಂದ ಇಲ್ಲಿನ ಶ್ರೀರಾಮ್ ಸೆಂಟರ್‌ನ ಎದುರಿರುವ ದೊಡ್ಡ ಮರದ ಕೆಳಗೆ ಕುಳಿತು ಪುಸ್ತಕ ಮಾರಾಟ ಮಾಡುತ್ತಿದ್ದಾರೆ. ಜತೆಗೆ ತಮ್ಮದೇ ಪ್ರಕಾಶನದಿಂದ ನೂರಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಈ ಮರದಡಿಯೇ ಸಾಹಿತ್ಯ ಚರ್ಚೆ, ಕವನ ವಾಚನ. ಈ ಜಾಗವೀಗ ಅಕ್ಷರಶಃ ಸಾಹಿತ್ಯದ ಜಗುಲಿ.

• ವಿಕ್ರಮ ವಿಸಾಜಿ

ಹೊರನಾಡ ಸಾಹಿತ್ಯ

ದೆಹಲಿಯ ಮಂಡಿಹೌಸ್ ಒಂದು ಸಾಂಸ್ಕೃತಿಕ ತಾಣ. ಬೆಂಗಳೂರಿನ ಟೌನ್ ಹಾಲ್‌ನ ಸುತ್ತಮುತ್ತಲಿನ ಪರಿಸರವಿದ್ದಂತೆ. ಸಾಹಿತ್ಯ, ಕಲೆ, ಸಂಗೀತ, ನಟನೆ ಕುರಿತ ಕನಸುಗಣ್ಣಿನ ಹುಡುಗ–ಹುಡುಗಿಯರ ನೆಲೆಯಿದು. ಇಲ್ಲಿಯೇ ಆಸುಪಾಸಿನಲ್ಲಿ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ, ಸಾಹಿತ್ಯ ಅಕಾಡೆಮಿ, ಸಂಗೀತ ಮತ್ತು ನಾಟಕ ಅಕಾಡೆಮಿ, ಲಲಿತಕಲಾ ಅಕಾಡೆಮಿ, ಶ್ರೀರಾಮ್ ಸೆಂಟರ್ ಫಾರ್ ಪರ್‌ಫಾರ್ಮಿಂಗ್ ಆರ್ಟ್ಸ್, ತ್ರಿವೇಣಿ ಥಿಯೇಟರ್, ಎಲ್‌ಟಿಜಿ ಥಿಯೇಟರ್, ಕಾಮಿನಿ ಥಿಯೇಟರ್, ದೂರದರ್ಶನ... ಹೀಗೆ ಹಲವಾರು ಸೃಜನಶೀಲ ಕೇಂದ್ರಗಳು ಸಿಗುತ್ತವೆ.

ಇಲ್ಲಿ ನಿರಂತರ ನಾಟಕ, ಚಿತ್ರಕಲಾ ಪ್ರದರ್ಶನಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ನಡೆಯುತ್ತಲೇ ಇರುವವು. ಇಲ್ಲಿ ಕಲಿತ ಅನೇಕರು ತಮ್ಮ ಕಲಾ ಜೀವನದಲ್ಲಿ ದೊಡ್ಡ ದೊಡ್ಡ ಸಾಧನೆ ಮಾಡಿದ್ದಾರೆ. ಈ ಶ್ರೀರಾಮ್ ಸೆಂಟರ್‌ನ ಎದುರು ದೊಡ್ಡದೊಂದು ಮರವಿದೆ. ಆ ಮರದ ಕೆಳಗೆ ಕಳೆದ ಮೂವತ್ತು ವರ್ಷಗಳಿಂದ ಪುಸ್ತಕ ಮಾರಾಟ ಮಾಡುತ್ತಿರುವ ಹೆಣ್ಣುಮಗಳು ಸಂಜನಾ ತಿವಾರಿ. ಮಂಡಿಹೌಸ್‌ನ ಎಲ್ಲಾ ಕಲಾಪ್ರಿಯರಿಗೆ ಈಕೆ ಸಂಜನಾ ದೀದಿ (ಅಕ್ಕ). ಎಳೆಯರಲ್ಲಿ ಅನೇಕರು ತಮ್ಮ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಂಡದ್ದು ಇಲ್ಲಿನ ಪುಸ್ತಕಗಳಿಂದ. ಇಲ್ಲಿ ನಡೆಯುವ ಹರಟೆಗಳಿಂದ. ಯಾವುದನ್ನು ಓದಬೇಕು? ಹೇಗೆ ಓದಬೇಕು? ಎಂಬ ಬೀದಿಬದಿಯ ಚರ್ಚೆಗಳಿಂದ. ಹಿಂದಿ ಸಾಹಿತ್ಯದ ಮುಖ್ಯ ಕೃತಿಗಳು ಇಲ್ಲಿ ಲಭ್ಯ. ಮುಖ್ಯವಾಗಿ ಕಾವ್ಯ, ನಾಟಕ, ಕಥೆ, ಕಾದಂಬರಿ, ಆತ್ಮಕಥೆ ಮತ್ತು ವಿಮರ್ಶೆಯ ಕೆಲ ಪುಸ್ತಕಗಳು. ಬೆಳಿಗ್ಗೆ ಹತ್ತು ಗಂಟೆಗೆ ಆರಂಭವಾಗುವ ಈ ಬೀದಿಬದಿಯ ಪುಸ್ತಕದಂಗಡಿ ರಾತ್ರಿ ಹತ್ತು ಗಂಟೆಯ ತನಕ ತೆರೆದಿರುತ್ತದೆ. ಇದಕ್ಕಾಗಿ ಸಂಜನಾ ದೀದಿ ನಿತ್ಯ ಇಪ್ಪತ್ತೈದು ಕಿಲೋಮೀಟರ್ ಪ್ರಯಾಣ ಮಾಡಿ ತಮ್ಮ ಪುಸ್ತಕಗಳ ಗಂಟಿನೊಂದಿಗೆ ಇಲ್ಲಿಗೆ ಬಂದು ತಂಗುವರು. ರಸ್ತೆಯಲ್ಲಿ ಪುಸ್ತಕಗಳನ್ನು ಹರವಿಕೊಂಡು ಕೂರುವರು. ಹಿಂದಿಯ ಪ್ರಸಿದ್ಧ ಲೇಖಕರು, ರಂಗಭೂಮಿಯ ಕಲಾವಿದರು ಎಲ್ಲರಿಗೂ ಸಂಜನಾ ದೀದಿ ಎಂದರೆ ಎಲ್ಲಿಲ್ಲದ ಅಕ್ಕರೆ ಮತ್ತು ಗೌರವ.

ಸಂಜನಾ ದೀದಿಯ ಈ ಪಯಣ ಸರಳವೇನಾಗಿರಲಿಲ್ಲ. ಆಕೆ ಬಿಹಾರಿನ ಸಿವಾನ್ ಊರಿನವರು. ಹತ್ತನೇ ತರಗತಿ ಓದುತ್ತಿರುವಾಗಲೇ ರಾಧೇಶ್ಯಾಮ್ ತಿವಾರಿ ಜೊತೆ ಲಗ್ನ. ಪತಿ ಕೂಡ ಹಿಂದಿಯ ಕವಿ. ಜೀವನ ಸಾಗಿಸಲು ಇಬ್ಬರೂ ಬಂದಿದ್ದು ದೆಹಲಿಗೆ. ರಾಧೇಶ್ಯಾಮ್ ತಿವಾರಿಯವರು ಪತ್ರಕರ್ತರಾಗಿ ಕೆಲಸ ಮಾಡುತ್ತಿದ್ದರು. ಓದಿನ ಹುಚ್ಚು ಹತ್ತಿಸಿಕೊಂಡಿದ್ದ ಸಂಜನಾ ಮೊದಲು ಕೆಲಸಕ್ಕೆ ಸೇರಿದ್ದು ಹಿಂದಿಯ ಪ್ರತಿಷ್ಠಿತ ವಾಣಿ ಪ್ರಕಾಶನದಲ್ಲಿ ಪುಸ್ತಕ ಮಾರಾಟಗಾರ್ತಿಯಾಗಿ. ಅಲ್ಲಿ ಕೆಲಸ ಮಾಡುವ ಉದ್ದೇಶವೇ ಹೊಸ ಹೊಸ ಪುಸ್ತಕಗಳನ್ನು ಓದಬಹುದಲ್ಲ ಎಂಬ ಕಾರಣಕ್ಕಾಗಿ. ಆದರೆ ಇದು ಕಷ್ಟವಾಗುತ್ತಿತ್ತು. ಕೊನೆಗೆ ತಾನೇ ಪುಸ್ತಕಗಳ ಮಾರಾಟಗಾರ್ತಿಯಾಗಿ ಶ್ರೀರಾಮ್ ಸೆಂಟರಿನ ಕಾಲುದಾರಿಯ ಮೇಲೆ ಕುಳಿತುಬಿಟ್ಟರು. ನಿಧಾನಕ್ಕೆ ಜನ ಜಮಾವಣೆ ಆಗ ತೊಡಗಿದರು. ಪುಸ್ತಕಗಳು ಮಾರಾಟವಾಗ ತೊಡಗಿದವು. ಜೊತೆಗೆ ಕಷ್ಟಗಳು ಕೂಡ ಹೆಚ್ಚಾದವು. ಶ್ರೀರಾಮ್ ಸೆಂಟರಿನ ಆಡಳಿತಾಧಿಕಾರಿ ಇಲ್ಲಿಂದ ಎತ್ತಂಗಡಿ ಮಾಡುವಂತೆ ದಬಾಯಿಸಿದರು. ದೆಹಲಿ ಕಾರ್ಪೋರೇಷನ್ನಿನವರು ಪುಸ್ತಕಗಳನ್ನು ಗಂಟುಮೂಟೆ ಕಟ್ಟಿಕೊಂಡು ಪೊಲೀಸ್ ಠಾಣೆಗೆ ಕರೆದೊಯ್ದರು. ಸಂಜನಾ ಯಾರಿಗೂ ಜಗ್ಗಲಿಲ್ಲ. ಮಂಡಿಹೌಸ್‌ನ ಲೇಖಕರು, ಕಲಾವಿದರು ಆಕೆಯ ಬೆನ್ನಿಗೆ ನಿಂತಿದ್ದರು. ಇದರಿಂದ ಮೂವತ್ತು ವರ್ಷವಾದರೂ ಆಕೆ ತನ್ನ ನೆಲೆಯನ್ನು ಬದಲಾಯಿಸಲಿಲ್ಲ. ಇಲ್ಲಿನ ಲೇಖಕರು ಕಲಾವಿದರೆ ತನ್ನ ಕುಟುಂಬ, ಮಂಡಿಹೌಸ್ ತನ್ನ ನಿಜವಾದ ಮನೆ ಎನ್ನುತ್ತಾರೆ ಸಂಜನಾ.

ಗಂಡನ ಚಿಕ್ಕ ವೇತನ ಮತ್ತು ತನ್ನ ಗಳಿಕೆಯಿಂದಲೇ ಸಂಜನಾ ಮಕ್ಕಳನ್ನು ಓದಿಸಿದರು. ಮಗ ಈಗ ಒಳ್ಳೆಯ ವೈದ್ಯ. ಮಗಳು ಸಂಸ್ಥೆಯೊಂದರಲ್ಲಿ ವಿಜ್ಞಾನಿ. ಅಳಿಯ ಐಪಿಎಸ್ ಅಧಿಕಾರಿ. ಕೂತು ತಿನ್ನಲು, ತಿರುಗಾಡಲು ಯಾವ ಕೊರತೆಯೂ ಇಲ್ಲ. ಆದರೆ ತಾನು ಮತ್ತು ತನ್ನ ಮಕ್ಕಳು ಮಂಡಿಹೌಸ್‌ನ ಈ ರಸ್ತೆಯಿಂದಲೇ ಎದ್ದು ಬಂದಿದ್ದರಿಂದ ಆಕೆಗೆ ಕೊನೆ ಉಸಿರುರುವವರೆಗೂ ಇಲ್ಲಿಯೇ ಪುಸ್ತಕಗಳನ್ನು ಮಾರುವ ಆಸೆ. ಸಾವು ಮಾತ್ರ ತನ್ನನ್ನು ಈ ಮರದ ನೆರಳಿನಿಂದ ದೂರ ಮಾಡಬಹುದು ಎನ್ನುತ್ತಾರೆ. ದೆಹಲಿಯ ಚಳಿ, ಬಿಸಿಲು, ಮಳೆಯ ಅಟಾಟೋಪ ಗೊತ್ತಿದ್ದವರಿಗೆ ಬೀದಿ ಬದಿಯ ಪುಸ್ತಕ ವ್ಯಾಪಾರದ ಕಷ್ಟ ಸುಖಗಳು ಬೇಗ ಗೊತ್ತಾಗುತ್ತವೆ. ಆಕೆ ಹೇಳುವುದು ಇವ್ಯಾವುದು ಕಷ್ಟವೇ ಅಲ್ಲ. ನಾನು ಹಣ ಗಳಿಸಲಿಕ್ಕಿಲ್ಲ. ಆದರೆ ನನ್ನ ಮಕ್ಕಳು ಒಳ್ಳೆಯ ವಿದ್ಯಾವಂತರಾದರು. ಅನೇಕ ಲೇಖಕರು ಕಲಾವಿದರು ಪ್ರೀತಿ ತೋರಿದರು. ಹೊಸಬರು ವಿಶ್ವಾಸವಿಟ್ಟರು. ಇದಕ್ಕಿಂತ ದೊಡ್ಡ ಸುಖ ಜೀವನದಲ್ಲಿ ಏನಿದೆ? ಅಂತ ನೆಮ್ಮದಿಯ ನಗೆ ಸೂಸಿದರು.

ಇದಿಷ್ಟೇ ಆಗಿದ್ದರೆ ಎಲ್ಲರಂತೆ ಸಂಜನಾ ಕೂಡ ಅನ್ನಬಹುದಿತ್ತು. ಆಕೆ ಇನ್ನಷ್ಟು ಹೊಸ ಕನಸು ಕಂಡರು. ತನ್ನ ಚಿಕ್ಕ ಸ್ಥಳದಲ್ಲಿಯೇ ಹೊಸ ಕವಿಗಳನ್ನು ಕರೆಸಿ ಕವಿತೆ ಓದಿಸಿದರು. ಕೆಲವೊಮ್ಮೆ ಭಾಷಣ. ಇಲ್ಲಿ ಸೇರುವ ಜನ ಕಂಡು ಹಿರಿಯ ಲೇಖಕರು ಕೂಡ ಕಾರ್ಯಕ್ರಮದ ಭಾಗವಾಗತೊಡಗಿದರು. ಹಿಂದಿಯ ಪ್ರಸಿದ್ಧ ಕವಿ ಮಂಗಲೇಶ್ ದಬರಾಲ್ ಬಂದು ಕವಿತೆ ಓದಿ ಎಳೆಯರೊಂದಿಗೆ ಹರಟಿದರು. ಮಾನವ್ ಕೌಲ್ ಬಂದು ತಮ್ಮ ರಂಗಭೂಮಿಯ ಅನುಭವಗಳನ್ನು ಹಂಚಿಕೊಂಡರು. ಈಗ ಆಕೆಗೆ ಜನ ಜಂಗುಳಿಯನ್ನು ಸಂಭಾಳಿಸುವುದು ಕಷ್ಟವಾಗತೊಡಗಿತ್ತು. ನಂತರ ಕೆಲವರ ಸಹಕಾರದಿಂದ ಪಕ್ಕದಲ್ಲೇ ಇರುವ ತ್ರಿವೇಣಿ ಥಿಯೇಟರನ್ನು ಒಂದು ದಿನದ ಬಾಡಿಗೆ ಪಡೆದು ಕಾರ್ಯಕ್ರಮಗಳನ್ನು ನಡೆಸತೊಡಗಿದರು. ತಿಂಗಳಿಗೆ ಒಂದಿಲ್ಲೊಂದು ಕಾರ್ಯಕ್ರಮ ನಡೆಯುತ್ತಲೇ ಇರುತ್ತದೆ. ಮುಖ್ಯವಾಗಿ ಹೊಸಬರ ಕಾವ್ಯ ವಾಚನ, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ. ಈಗ ಈ ಕಾರ್ಯಕ್ರಮದ ಒಟ್ಟು ಹೆಸರು 'ಸ' ಸೆ ಸಂಜನಾ ಸಾಹಿತ್ಯೋತ್ಸವ್. ಹೊಸ ತಲೆಮಾರಿನ ಲೇಖಕರಿಗೆ ಇದೊಂದು ಮುಖ್ಯ ವೇದಿಕೆ. ಕಾರ್ಯಕ್ರಮದ ಜೊತೆಗೆ ಪುಸ್ತಕ ಮಾರಾಟ ಮತ್ತು ಪ್ರದರ್ಶನ. ಆಕೆ ಮಾತ್ರ ವೇದಿಕೆಯ ಮೇಲೆ ಕೂರುವುದಿಲ್ಲ. ಎಲ್ಲಾ ವ್ಯವಸ್ಥೆಗಳನ್ನು ನೋಡಿಕೊಳ್ಳುವುದರಲ್ಲಿ ವ್ಯಸ್ತರು.

ಮಂಡಿಹೌಸ್‌ನ ಸಾಂಸ್ಕೃತಿಕ ವಾತಾವರಣವನ್ನು ಶ್ರೀಮಂತಗೊಳಿಸಿದ್ದು ಸಂಜನಾ ದೀದಿಯ ಬೀದಿಬದಿಯ ಕನಸುಗಳು. ಸಂಜನಾ ದೀದಿ ಕೆಲ ದಿನಗಳಿಂದ ದುಃಖದಲ್ಲಿದ್ದರು. ಇದಕ್ಕೆ ಕಾರಣ ಅವರ ಕಣ್ಣೆದುರೇ ಬೆಳೆದ ತರುಣ ಲೇಖಕ ಇರ್ಷಾದ್ ಖಾನ್ ಸಿಕಂದರ್‌ನ ಅಕಾಲಿಕ ಸಾವು. ಆತನ ನೆನಪಿನಲ್ಲಿ ಒಂದು ಕಾರ್ಯಕ್ರಮ ಸಂಘಟಿಸಿದರು. ಈಗ ತನಗೆ ಪರಿಚಿತವಿರುವ ಲೇಖಕರು, ಕಲಾವಿದರು, ಪತ್ರಕರ್ತರ ಬಳಿ ಆಕೆ ಹಣ ಸಂಗ್ರಹಿಸಿ ಇರ್ಷಾದ್ ಖಾನ್ ಸಿಕಂದರ್ ಅವರ ಬಡಕುಟುಂಬಕ್ಕೆ ನೆರವಾಗುವ ಕಾರ್ಯದಲ್ಲಿ ತೊಡಗಿದ್ದಾರೆ.

ತನ್ನಂತೆಯೇ ದೆಹಲಿಗೆ ಹೊಸ ಕನಸುಗಳನ್ನು ಹೊತ್ತು ಬರುವ ತರುಣ–ತರುಣಿಯರಿಗೆ ಸಂಜನಾ ದೀದಿಯ ಮಡಿಲಲ್ಲಿ ಸದಾ ಆಸರೆಯಿದೆ. ಆಕೆ ಪುಸ್ತಕ ಮಾರಾಟಕ್ಕಾಗಿ ಯಾರನ್ನೂ ನೇಮಿಸಿಕೊಂಡಿಲ್ಲ. ಒಬ್ಬಂಟಿಯಾಗಿ ತನ್ನ ಕೆಲಸ ತಾನು ಮಾಡುವುದರಲ್ಲಿಯೇ ಸುಖವಿದೆ ಎನ್ನುತ್ತಾರೆ. ಸಾಹಿತ್ಯೋತ್ಸವ ಮಾಡುವಾಗ ಎಲ್ಲೆಲ್ಲಿಂದಲೋ ನೆರವು ಹರಿದು ಬರುತ್ತದೆ. ಆಕೆಗೇ ಅಚ್ಚರಿ. ದೆಹಲಿ ತನಗೆ ಕೊಟ್ಟಿರುವುದನ್ನು ಹಿಂತಿರುಗಿಸಲು ಈ ಜನ್ಮ ಸಾಲದೆನ್ನುತ್ತಾರೆ ಸಂಜನಾ. ದೆಹಲಿಯ ಋಣದ ಭಾರ ಬೇಗ ಕಳೆಯುವುದಿಲ್ಲ ಅಂತ ಕಣ್ಣಂಚಿನಲ್ಲಿ ಜಾರುವ ಹನಿಯನ್ನು ತಡೆದುಕೊಂಡರು. ಸಂಜನಾ ದೀದಿಯ ಸಾಹಸಗಳು ಈಗ ಮಂಡಿಹೌಸ್‌ನ ಹೆಮ್ಮೆಯ ಸಂಗತಿಗಳಾಗಿಬಿಟ್ಟಿವೆ. ❖

ಪ್ರಕಾಶನದತ್ತ...

ಸಂಜನಾರ ಕನಸು ಕಾಲ ಕಳೆದಂತೆ ಬೆಳೆಯಿತು. ಪ್ರತಿಷ್ಠಿತ ಸಂಸ್ಥೆಗಳು ಹೊಸಬರ ಕೃತಿಗಳನ್ನು ಪ್ರಕಟಿಸುವುದಿಲ್ಲ. ಹೊಸಬರು ಬೆಳೆಯುವುದು, ಇತರರ ಗಮನಕ್ಕೆ ಬರುವುದು ಹೇಗೆ? ಆಗ ಸಂಜನಾ ಸಾಲ ಮಾಡಿ ಹೊಸಬರ ಪುಸ್ತಕಗಳ ಪ್ರಕಟಣೆಗೆ ಇಳಿದರು. ಸ್ವತಃ ಒಂದು ಪ್ರಕಾಶನ ಸಂಸ್ಥೆ ಸ್ಥಾಪಿಸಿದರು. ಆ ಪ್ರಕಾಶನ ಸಂಸ್ಥೆಯ ಹೆಸರು 'ಸಂಜನಾ ಬುಕ್ಸ್'. ಇಲ್ಲಿಯವರೆಗೆ ಅವರು ಪ್ರಕಟಿಸಿದ ಪುಸ್ತಕಗಳ ಸಂಖ್ಯೆ ಎರಡನೂರು ದಾಟಿದೆ. ಈಗ ಒಂದು ಪ್ರತಿಭಾವಂತರ ಪಡೆಯೇ ಸಂಜನಾ ದೀದಿಯ ಹಿಂದಿದೆ. ಸಾಹಿತ್ಯೋತ್ಸವದ ರೂಪುರೇಷೆಗಳನ್ನು ಹಾಕುವುದು, ಸಂಘಟಿಸುವುದು, ನಡೆಸುವುದು ಈ ಗುಂಪು.



ಸಂಜನಾ ದೀದಿಯೊಂದಿಗೆ ಸಾಹಿತ್ಯ ಚರ್ಚೆಯಲ್ಲಿ ಓದುಗರು

ಮಾವು ಬದುಕು... ಭಾವನೆ...



ಶ್ರೀನಿವಾಸಪುರದ ಮಾವು ಮಂಡಿಯಲ್ಲಿ ಮಾವು ಜೋಡಿಸುತ್ತಿರುವ ವರ್ತಕ

10ನೇ ಪುಟದಿಂದ...

ಮಾವಿನ ಗಿಡಗಳ ಮಧ್ಯೆ ಈ ಬೆಳೆ ಬೆಳೆಯುವುದರಿಂದ ಯಾವುದೇ ತೊಂದರೆ ಇಲ್ಲ. ಮಾವಿನ ಕಾಯಿ ಬಿಟ್ಟಾಗ ಸಾಮಾನ್ಯವಾಗಿ ಬೇರೆ ಯಾವುದೇ ಬೆಳೆ ಬೆಳೆಯಲು ಯಾರೂ ಮುಂದಾಗಲ್ಲ. ಡಿಸೆಂಬರ್ ವೇಳೆಗೆ ಹೂವು ಬಿಡುತ್ತವೆ. ಕಟಾವು ಮಾಡುವಾಗ ಕಾರ್ಮಿಕರಿಗೆ ಹಾಗೂ ಸಾಗಣೆಗೆ ಹೆಚ್ಚು ವೆಚ್ಚ ತಗುಲುತ್ತದೆ' ಎಂದು ಹೇಳುತ್ತಾರೆ ಮಾವು ಬೆಳೆಗಾರ ತೊಟ್ಲಿ ಗ್ರಾಮದ ಟಿ.ವಿ.ರಮೇಶ್.

'ನಾವು ಬೆಳೆಯುವ ಮಾವಿಗೆ ಉತ್ತಮ ದರ ಸಿಗಬೇಕಾದರೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಇರಬೇಕು. ಸಂಗ್ರಹ, ಸಂಸ್ಕರಣಾ ಕೇಂದ್ರ ಬೇಕು. ಉತ್ತಮ ಮೂಲಸೌಕರ್ಯ ಒದಗಿಸಬೇಕು. ಸಾಗಣೆ, ಸಂಚಾರ ವ್ಯವಸ್ಥೆ ಸಮರ್ಪಕವಾಗಿರಬೇಕು. ರೈತರ ಆಧಾರಸ್ತಂಭ ಎನಿಸಿರುವ ಶ್ರೀನಿವಾಸಪುರ ಎಪಿಎಂಸಿ ಮಾರುಕಟ್ಟೆಯನ್ನು ಹೈಟೆಕ್ ಆಗಿಸಬೇಕು. ವಾಣಿಜ್ಯ ಕೇಂದ್ರವನ್ನಾಗಿ ಪರಿವರ್ತಿಸಬೇಕು' ಎಂದು ಒತ್ತಾಯಿಸುತ್ತಾರೆ ಮಾವು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಸಂಚಾಲಕ ಬಿ.ಎ.ಸೈಯದ್ ಫಾರೂಕ್.

ಮೌಲ್ಯವರ್ಧಿತ ಸೇವೆಗಳನ್ನು ಕಲ್ಪಿಸಲು ಸರ್ಕಾರವು ಜ್ಯೂಸ್ ಫ್ಯಾಕ್ಟರಿ, ಕೋಲ್ಡ್ ಸ್ಟೋರೇಜ್, ಸಂಸ್ಕರಣಾ ಘಟಕ ನಿರ್ಮಿಸಬೇಕು ಎಂಬುದು ಈ ಭಾಗದ ಮಾವು ಬೆಳೆಗಾರರ ಒತ್ತಾಯ ಕೂಡ.

ವಿವಿಧ ರಾಜ್ಯಗಳಿಂದ ಬರುವ ವ್ಯಾಪಾರಸ್ಥರು, ಕಾರ್ಮಿಕರು ಸುಗ್ಗಿ ಸಮಯದಲ್ಲಿ ಸುಮಾರು ಮೂರು ತಿಂಗಳು ಎಪಿಎಂಸಿಯಲ್ಲಿಯೇ ವಾಸ್ತವ್ಯ ಹೂಡುತ್ತಾರೆ. ಮಾವು ಬಾಕ್ಸ್ ಪ್ಯಾಕಿಂಗ್, ಲೋಡಿಂಗ್, ಮಾರುಕಟ್ಟೆ ನಿರ್ವಹಣೆ ಸೇರಿದಂತೆ ಹಲವು ಕೆಲಸಗಳಿಗೆ ಕಾರ್ಮಿಕರು ಬರುತ್ತಾರೆ. ಅವರಿಗೆ ವಸತಿ, ಶೌಚಾಲಯ, ಶುದ್ಧ ಕುಡಿಯುವ ನೀರು, ಕ್ಯಾಂಟೀನ್, ಎಟಿಎಂ ವ್ಯವಸ್ಥೆ, ಬ್ಯಾಂಕ್ ವ್ಯವಸ್ಥೆ ಒದಗಿಸಬೇಕಿದೆ.



ಮಾವಿನ ಹಣ್ಣಿನ ನಗರಿಗೆ ಸ್ವಾಗತ... ಶ್ರೀನಿವಾಸಪುರ ಪಟ್ಟಣದ ಅನತಿ ದೂರದಲ್ಲಿ ಅಳವಡಿಸಿರುವ ಫಲಕ

ಸುಮಾರು 19 ಎಕರೆಯಲ್ಲಿ ಎಪಿಎಂಸಿ ಹರಡಿಕೊಂಡಿದೆ. ಕಳೆದ ವರ್ಷ ಈ ಎಪಿಎಂಸಿಗೆ ಎರಡೂ ಲಕ್ಷಕ್ಕೂ ಅಧಿಕ ಕ್ವಿಂಟಲ್ ಮಾವಿನ ಆವಕವಾಗಿ ಕೋಟ್ಯಂತರ ರೂಪಾಯಿ ವಹಿವಾಟು ನಡೆದಿತ್ತು. ಸುಮಾರು ₹ 37 ಲಕ್ಷ ಸೆಸ್ ಸಂಗ್ರಹವಾಗಿತ್ತು. ಈ ಬಾರಿ ನಿತ್ಯ 8 ಸಾವಿರ ಕ್ವಿಂಟಲ್‌ವರೆಗೆ ಮಾವಿನ ಆವಕವಾಗುತ್ತಿದೆ. ಕಳೆದ ಹಂಗಾಮಿಗೆ ಹೋಲಿಸಿದರೆ ಕಡಿಮೆ. ಇದಲ್ಲದೇ, ಎಪಿಎಂಸಿ ಹೊರಗಡೆಯೂ ವ್ಯಾಪಾರಿಗಳು ವಹಿವಾಟು ನಡೆಸುತ್ತಾರೆ.

ಮಾವು ಹಂಗಾಮು ಅವಧಿಯಲ್ಲಿ ಆರ್ಥಿಕ ಚಟುವಟಿಕೆ ಹೆಚ್ಚುವುದು ಒಂದುಕಡೆಯಾದರೆ, ಸ್ವಚ್ಛತೆ ಕಾಪಾಡಿಕೊಳ್ಳುವುದೂ ದೊಡ್ಡ ಸವಾಲು. ಮಂಡಿ ಸುತ್ತಲಿನ ನಿವಾಸಿಗಳ ಪಾಡು ಹೇಳತೀರದು. ವ್ಯಾಪಾರಿಗಳು, ರೈತರು ಕೊಳೆತ ಹಣ್ಣುಗಳನ್ನು ಎಲ್ಲಿ ಬೇಕೋ ಅಲ್ಲಿ ಎಸೆದು ಹೋಗುತ್ತಾರೆ, ತ್ಯಾಜ್ಯದ ಬೆಟ್ಟವೇ ನಿರ್ಮಾಣವಾಗುತ್ತದೆ. ಇದರಿಂದ ದುರ್ವಾಸನೆ ಜೊತೆಗೆ ಸೊಳ್ಳೆ, ನೊಣ, ಇಲಿ, ಹೆಗ್ಗಣ ನಾಯಿ ಕಾಟ ಹೆಚ್ಚುತ್ತದೆ. ಇದನ್ನು ನಿಭಾಯಿಸುವುದು ದೊಡ್ಡ ತಲೆನೋವಿನ ಕೆಲಸವಾಗುತ್ತದೆ ಎನ್ನುತ್ತಾರೆ ಪುರಸಭೆ ಅಧಿಕಾರಿಗಳು ಹಾಗೂ ಪೌರಕಾರ್ಮಿಕರು.

ಇಲ್ಲಿನ ಬಗೆ ಬಗೆಯ ಮಾವಿನ ಹಣ್ಣಿ ರುಚಿಗೆ ಮನಸೋತವರು ಮಾತ್ರ ಮಾವಿನ ಹಂಗಾಮಿಗಾಗಿ ಕಾಯುತ್ತಿರುತ್ತಾರೆ. ❖

ಕಥೆ

ಟಿ.ಎಂ.ರಮೇಶ ಅವರ
ಮಾ ವಿಷಾದ

prajavani.net/short-story

ಕವನ

ಇಂದುವಾರ ಉಮಾಕಾಂತ ಭಟ್ಟ ಅವರ
ಆಗಿ-ಬರಲಿಲ್ಲ ಈ ಬಾಳಾಟ

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಮೂಡುವೆಣ್ಣು

ಮೂಡುವೆಣ್ಣು (ನಾ). ಪೂರ್ವದಿಕ್ಕಿನ ಹೆಣ್ಣು

ಕುವೆಂಪು ಅವರು ಸೂರ್ಯೋದಯವನ್ನು 'ಮೂಡುವೆಣ್ಣು' ಪದದಿಂದ ಹೀಗೆ ವರ್ಣಿಸಿದ್ದಾರೆ:

ಪೂರ್ವದಿಕ್ಕಿನ ಹೆಣ್ಣಿನ ನಿದ್ದೆಗಣ್ಣು ತನ್ನ ಇರುಳು ಎವೆಯ ಕಪ್ಪು ರೆಪ್ಪೆಯನ್ನು ಅರಳಿಸಲು ಬಾನು ಮತ್ತು ಭುವಿಯ ಬೆಸುಗೆ ಹರಿಯಿತು.

**'ಮೂಡುವೆಣ್ಣಿನ ನಿದ್ದೆಗಣ್ಣು ತನ್ನಿರುಳೆವೆಯ
ಕರ್ಪುರೆಪ್ಪೆಯನರಳಿಸಲ್ ಬೆಸುಗೆ ಬಿರ್ಚಿದುದೊ
ಬಾನ್ ಭುವಿಗೆನಲ್.'**

ಮದನನುರಿ

ಮದನನುರಿ (ನಾ). ಕಾಮದಿಂದ ಉಂಟಾದ ಜ್ವಾಲೆ

ಚಿತ್ರಾಂಗದೆಯ ರೂಪು ಲಾವಣ್ಯಕ್ಕೆ ಮನಸೋತ ಅರ್ಜುನನು 'ನಿನ್ನ ಸಂಗವೆ ಪರಮ ಮಂಗಲ' ಎಂದು ಹೇಳುವನು. ತುಂಬು ಹಂಬಲದ ನೇತ್ರ ಸೂತ್ರದಿಂದ ಬಂಧಿಸಿ ಎಳೆಯುವಂತೆ ನೋಡುವನು. ಆಗ ಚಿತ್ರಾಂಗದೆ ಕಾಮಜ್ವಾಲೆಗೆ ಒಳಗಾದುದನ್ನು ಕುವೆಂಪು 'ಮದನನುರಿ' ಪದದಿಂದ ಹೀಗೆ ಬಣ್ಣಿಸಿದ್ದಾರೆ:

**'ಮದನನುರಿ
ಗಾತ್ರ ಸಂಪೂರ್ಣದಲಿ ನಾಳನಾಳಂಬೊಕ್ಕು
ದಹಿಸಿದತ್ತೊಡನೊಡನೆ'**

ಚೆಂಬಳದಿ


ಚೆಂಬಳದಿ (ನಾ). ಕೆಂಪು ಮಿಶ್ರಿತವಾದ ಹಳದಿಯ ಬಣ್ಣ

ಕುವೆಂಪು ಅವರು - ಬಾನು ಮತ್ತು ಭುವಿಯ ಬೆಸುಗೆ ಹರಿದು ಹೊಮ್ಮಿದ ಬೆಳಕಿನ ಹೊನಲನ್ನು- 'ಚೆಂಬಳದಿ' ಎಂದು ಹೀಗೆ ವರ್ಣಿಸಿದ್ದಾರೆ:

**'ಬಿರುಕುದೋರ್ದುಳ್ಕಿದುದು ಪೊನಲ್
ಚೆಂಬಳದಿಯಾ, ಮತಂಗನ ಪೆಸರ
ಮಡುವಿನೊಳ್
ನೀರು ಓಕುಳಿಯಾಯ್ತು.'**

ಮೊದಲ ಓದು

ವಿಜ್ಞಾನದ ರೋಚಕ ಕಥೆಯುಳ್ಳ ಕೃತಿ



ಭೌತ ವಿಜ್ಞಾನದ ಬೆನ್ನೇರಿ
ಲೇ: ರೋಹಿತ್ ವಿ. ಸಾಗರ
ಪ್ರ: ಬೆನಕ ಬುಕ್ಸ್ ಬ್ಯಾಂಕ್
ಸಂ: 73384 37666

ತಲೆಮೇಲೆ ಬಿದ್ದ ಸೇಬು ನ್ಯೂಟನ್‌ಗೆ ಗುರುತ್ವಾಕರ್ಷಣದ ನಿಯಮ ವಿವರಿಸಲು ನೆರವಾಯಿತು. ಬಾತ್ ಟಬ್‌ನಲ್ಲಿ ಇಳಿದಾಗ ನೀರು ಹೊರಚೆಲ್ಲಿದ್ದು ಬಯಾನ್ಸಿ ತತ್ವವನ್ನು ಜಗತ್ತಿಗೆ ನೀಡಲು ಆರ್ಕಿಮಿಡೀಸ್‌ಗೆ ಸಾಧ್ಯವಾಯಿತು. ವಿಜ್ಞಾನವೇ ಕೌತುಕ. ಜಗತ್ತನ್ನು ಬೆರಗುಗಣ್ಣಿನಿಂದ ನೋಡಿದ ವಿಜ್ಞಾನಿಗಳು ಹಲವು ಮೌಢ್ಯಗಳನ್ನು ನಿವಾರಿಸಿ ವೈಜ್ಞಾನಿಕವಾಗಿ ಪ್ರಪಂಚವನ್ನು ನೋಡುವಂತೆ ಕಣ್ಣು ತೆರೆಸಿದ್ದಾರೆ. ಇಂಥ ಭೌತವಿಜ್ಞಾನದ ಹಲವು ಸಂಶೋಧನೆಗಳನ್ನು ಕನ್ನಡದಲ್ಲಿ ನೀಡುವ ಕೃತಿಯೊಂದನ್ನು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಲೇಖಕ ರೋಹಿತ್ ವಿ. ಸಾಗರ ರಚಿಸಿದ್ದಾರೆ.


'ಭೌತ ವಿಜ್ಞಾನದ ಬೆನ್ನೇರಿ– ನಿಸರ್ಗದಲ್ಲೊಂದು ಸವಾರಿ' ಎಂಬ ಶೀರ್ಷಿಕೆಯ ಈ ಕೃತಿಯಲ್ಲಿ ವೈಜ್ಞಾನಿಕ ಆವಿಷ್ಕಾರ ಒಳಗೊಂಡ 20 ಲೇಖನಗಳಿವೆ. ವಿಜ್ಞಾನ ಕಬ್ಬಿಣದ ಕಡಲೆ ಎಂದುಕೊಂಡವರಿಗೆ ಹಲವು ಪ್ರಮುಖ ಅನ್ವೇಷಣೆಗಳನ್ನು ಸರಳವಾಗಿ ತಿಳಿಸುವ ಪ್ರಯತ್ನ ಮಾಡಲಾಗಿದೆ. ವಿದ್ಯಾರ್ಥಿಗಳು, ಜನಸಾಮಾನ್ಯರ ಭಾಷೆಯಲ್ಲೇ ರೋಹಿತ್ ಅವರು ಭೌತವಿಜ್ಞಾನವನ್ನು ಸರಳವಾಗಿ ವಿವರಿಸಿದ್ದಾರೆ.

ಗುರುತ್ವಾಕರ್ಷಣೆ, ಸೂರ್ಯನ ಸುತ್ತ ಗ್ರಹಗಳ ಚಲನೆ, ಬೆಳಕಿನ ವಿಸ್ಮಯ, ವಿದ್ಯುತ್ ಸಂಶೋಧನೆ, ನ್ಯಾನೊ ತಂತ್ರಜ್ಞಾನ, ನಿಸರ್ಗದ ರಹಸ್ಯ, ಬಾಹ್ಯಾಕಾಶ, ಖಗೋಳ, ಅಣುಬಾಂಬ್, ಇಂಧನ ಹೀಗೆ ಹಲವು ವಿಷಯಗಳನ್ನು ಅವರು ಇದರಲ್ಲಿ ಚರ್ಚಿಸಿದ್ದಾರೆ. ವಿಜ್ಞಾನದ ಮಹತ್ವ ಸಾರುತ್ತಲೇ ಹಲವು ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿದ್ದಾರೆ.

ಕಾರು ವೇಗವಾಗಿ ಹೋಗಬೇಕೆಂದರೆ ಆಕ್ಸಲರೇಟ್ ಒತ್ತಬೇಕು ಎಂಬುದು ಜ್ಞಾನ. ಆದರೆ ಅದು ಹೇಗೆ ಕೆಲಸ ಮಾಡಲಿದೆ ಎಂದು ಆಲೋಚಸಲು ಆರಂಭಿಸಿದರೆ ವಿಜ್ಞಾನ ಎಂಬುದರ ಉದಾಹರಣೆಯೊಂದಿಗೆ ವಿಜ್ಞಾನದ ಮೂಲ ಸಿದ್ಧಾಂತವನ್ನು ಮನಮುಟ್ಟುವಂತೆ ವಿವರಿಸಿದ್ದಾರೆ. ವಿಜ್ಞಾನವನ್ನೂ ಕನ್ನಡದಲ್ಲಿ ಸರಳವಾಗಿ ತಿಳಿಸುವ ಪ್ರಯತ್ನ ಈ ಕೃತಿಯಲ್ಲಿ ಕಂಡುಬರುತ್ತದೆ.

ಪು: 132 ₹160

ಗ್ರಾಮ್ಯ ಭಾರತದ ಮೌಢ್ಯದ ಕಥನ



ಎಲಿಪ್ಯಾಡ್
ಲೇ: ಭಗೀರಥ
ಪ್ರ: ಟೋಟಲ್ ಕನ್ನಡ
ಸಂ: 9686152902

ಯಲವಳ್ಳಿ ಎಂಬ ಕಾಲ್ಪನಿಕ ಹಳ್ಳಿಯ ಮೂಲಕ ಧಾರ್ಮಿಕ ಆಚರಣೆ ಹಾಗೂ ಮೂಢನಂಬಿಕೆಗಳನ್ನು ಮಾನವೀಯ ನೆಲೆಯಲ್ಲಿ ಕಟ್ಟಿಕೊಟ್ಟಿರುವ ಕಾದಂಬರಿ 'ಎಲಿಪ್ಯಾಡ್'.

ಭಾರತದ ಯಾವುದೇ ಹಳ್ಳಿಯ ಪ್ರತಿರೂಪದಂತೆ ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಇದು ಪುಟ್ಟ ಕಾದಂಬರಿಯಾದರೂ, ಅಸಂಖ್ಯಾತ ಪಾತ್ರಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಊರಿನ ಎಲ್ಲರಿಗೂ ಕಾದಂಬರಿಯೊಳಗೆ ಸ್ಥಾನ ಕಲ್ಪಿಸುವ ಪ್ರಯತ್ನವನ್ನು ಕಾದಂಬರಿಕಾರ ಮಾಡಿದ್ದಾರೆ.


ಕಾದಂಬರಿಯ ಮುಖ್ಯ ಪಾತ್ರ ರಾಣಿ, ಎಲ್ಲಿಂದಲೊ ಬಂದು ತುಂಗನ ಹೆಂಡತಿಯಾಗಿ ಯಲವಳ್ಳಿ ಸೇರಿದವಳು. ಅವಳಿಗೆ ಜತೆಯಾಗುವ 'ಅರ್ಜುನ' ಎನ್ನುವ ಆನೆ ಹಾಗೂ ಅದರ ಮಾವುತ ಕೋಗಿಲೆ ಕೂಡ ಕಾದಂಬರಿಯ ತುಂಬಾ ಆವರಿಸಿಕೊಂಡಿದ್ದಾರೆ. ಅವರ ಮೂಲಕ ಗ್ರಾಮ್ಯ ಭಾರತವು ಈ ಕಾದಂಬರಿಯಲ್ಲಿ ಅನಾವರಣಗೊಂಡಿದೆ.

ಗ್ರಾಮ್ಯ ಭಾಷೆಯ ಸರಳ ನಿರೂಪಣೆಯಿಂದ ಕೂಡಿರುವ ಸಾಮಾನ್ಯ ಶೈಲಿಯ ಕಥೆಯನ್ನು ಹೊಂದಿರುವ ಕೃತಿಯೊಳಗೆ ಜಾತಕ, ಸೂತಕ, ನಂಬಿಕೆ, ಮೂಢನಂಬಿಕೆ, ಆಚರಣೆ, ಅನಾಚಾರ ಎಲ್ಲವೂ ಸೇರಿಕೊಂಡಿವೆ. ಅದರ ಜೊತೆಗೆ ಜೂಜು ಹಾಗೂ ಬಹಿರ್ದೆಸೆಯಂತಹ ಪಿಡುಗುಗಳು ಕೊನೆಗೊಳ್ಳಬೇಕು ಎನ್ನುವ ಕಾದಂಬರಿಕಾರರ ಆಶಯವೂ ಇಲ್ಲಿ ಕಾಣಿಸಿಕೊಳ್ಳುತ್ತದೆ.

ಚಿತ್ರಕತೆಯಂತೆ ಸಾಗುವ ನಿರೂಪಣಾ ಶೈಲಿಯು ಕೆಲವೊಮ್ಮೆ ಓದುಗರಿಗೆ ಗೊಂದಲ ಉಂಟುಮಾಡಿದರೂ, ಕಾದಂಬರಿ ಓದುತ್ತಾ ಸಾಗಿದಂತೆ ಉತ್ತರ ಸಿಗುತ್ತದೆ. ಹನ್ನೊಂದು ಅಧ್ಯಾಯಗಳಿದ್ದು, ಕಥೆಯ ಈ ವಿಗಂಡಣೆ ಓದನ್ನು ಸುಲಭವಾಗಿಸುತ್ತವೆ.

ಪು: 140 ₹100

ಮಹಮದ್ ಇಮಾಂ ಬದುಕಿನ ಪರಿಚಯ



ಮಾನವತೆಯ ಬೆಳಕು
ಸಂ: ಎನ್.ಟಿ. ಎರ್ರಿಸ್ವಾಮಿ, ದಾದಾಪೀರ್ ನವಿಲೇಹಾಳ್
ಪ್ರ: ಜೆ.ಎಂ. ಇಮಾಂ ಟ್ರಸ್ಟ್
ಸಂ: 9980240916

ಜಗಳೂರು ಮಹಮದ್ ಇಮಾಂ ಅವರ ಕುರಿತು ಬೇರೆ ಬೇರೆ ಲೇಖಕರು ಬರೆದ ದೀರ್ಘಕಾಲದ ಬರಹಗಳ ಸಂಗ್ರಹ 'ಮಾನವತೆಯ ಬೆಳಕು'. ಸ್ವಾತಂತ್ರ್ಯ ಪೂರ್ವದಲ್ಲಿಯೇ ಸ್ಥಳೀಯ ಸಂಸ್ಥೆ ಪ್ರತಿನಿಧಿಸುವ ಮೂಲಕ ರಾಜಕೀಯ ಜೀವನಕ್ಕೆ ಇಮಾಂ ತೆರೆದುಕೊಳ್ಳುತ್ತಾರೆ. ನಂತರ ಚಿತ್ರದುರ್ಗ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸಚಿವರಾಗಿ ಹಲವು ಖಾತೆಗಳನ್ನು ನಿರ್ವಹಿಸಿದವರು. ವೃತ್ತಿಯಿಂದ ವಕೀಲ ಪ್ರವೃತ್ತಿಯಿಂದ ಲೇಖಕರಾದ ಅವರು ಸ್ವಾತಂತ್ರ್ಯೋತ್ತರ ರಾಜಕೀಯದಲ್ಲಿಯೂ ಸಕ್ರಿಯರಾಗಿದ್ದರು. ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿಯೂ ಕೆಲಸ ಮಾಡಿದ್ದಾರೆ.

ಇಮಾಂ 15.2.1892ರಲ್ಲಿ ಜಗಳೂರು ತಾಲ್ಲೂಕಿನ ಮರೇನಹಳ್ಳಿಯಲ್ಲಿ ಸಾಹುಕಾರ್ ಬಡೇ ಸಾಬ್ ಅವರ ಎರಡನೇ ಮಗನಾಗಿ ಜನಿಸಿದರು. ಭೂಗರ್ಭಶಾಸ್ತ್ರದಲ್ಲಿ ಪದವಿ ಪಡೆದ ಅವರು ಅಂದಿನ ಮದ್ರಾಸಿನಲ್ಲಿ ಕಾನೂನು ಪದವಿಯನ್ನು ಪೂರ್ಣಗೊಳಿಸಿದರು. 1924ರಲ್ಲಿ ಬೆಳಗಾವಿಯಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನದಲ್ಲಿ ಭಾಗವಹಿಸಿದ್ದಾರೆ. 'ಗಾಂಧೀಜಿಯವರು ಮಾಡಿದ ಭಾಷಣದಿಂದ ಅವರು ಪ್ರೇರಿತರಾದರು. ಆದರೆ ಅವರು ಕಾಂಗ್ರೆಸ್ ಪಕ್ಷವನ್ನು ಸೇರಲಿಲ್ಲ' ಎಂದು ಪ್ರೊ. ಜೆ.ಎಸ್. ಸದಾನಂದ ತಮ್ಮ 'ಶ್ರೀ ಜಗಳೂರು ಮಹಮ್ಮದ್ ಇಮಾಮ್: ಪರಿಚಯ' ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಸಾಮಾನ್ಯರ ಪಾಲಿಗೆ ಇಮ್ಮಣ್ಣ ಆಗಿದ್ದ ಇಮಾಂ ಅವರ 82ನೇ ಜನ್ಮ ದಿನಕ್ಕೆ ಶುಭ ಕೋರಿ ಅಂದಿನ ಉಪರಾಷ್ಟ್ರಪತಿ ಬಸಪ್ಪ ದಾನಪ್ಪ ಜತ್ತಿ ಬರೆದ ಪತ್ರವೂ ಸೇರಿ, ಮಾಜಿ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪ ಅವರ 'ನಾ ಕಂಡ ಜಗಳೂರು ಇಮಾಂ ಸಾಹೇಬರು', ಕೆಂಗಲ್ ಹನುಮಂತಯ್ಯ ಅವರ 'ಕರ್ನಾಟಕ ಏಕೀಕರಣ ಪುರುಷ', ಕಡಿದಾಳ್ ಮಂಜಪ್ಪ ಅವರ 'ಮುಷಿರ್–ಉಲ್–ಮುಲ್ಕ್ ಜೆ. ಮಹಮದ್ ಇಮಾಮರು' ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಮಲ್ಲಾಡಿಹಳ್ಳಿ ರಾಘವೇಂದ್ರ ಗುರೂಜಿ, ಪಾಟೀಲ ಪುಟ್ಟಪ್ಪ, ಜಿ.ಪಿ. ರಾಜರತ್ನಂ ಸೇರಿದಂತೆ ಅನೇಕ ಲೇಖಕರ 65ಕ್ಕೂ ಅಧಿಕ ಲೇಖನಗಳಿಂದ ಈ ಗ್ರಂಥ ರೂಪಿತಗೊಂಡಿದೆ.

ಪು: 492 ₹500



ಆ್ಯಮ್‌ಸ್ಟರ್‌ಡ್ಯಾಮ್‌ನ ವಿಹಂಗಮ ನೋಟ. ಇಲ್ಲಿನ ಕಾಲುವೆಗಳಲ್ಲಿ ಬೋಟ್‌ನಲ್ಲಿನ ಪಯಣವೇ ಹೊಸ ಅನುಭವ

ಉತ್ತರದ ವೆನಿಸ್ ಆ್ಯಮ್‌ಸ್ಟರ್‌ಡ್ಯಾಮ್

ಇಟಲಿಯ ವೆನಿಸ್ ಕಾಲುವೆಗಳ ನಗರ ಎಂದೇ ಖ್ಯಾತಿ ಪಡೆದಿದೆ. ನೆದರ್ಲೆಂಡ್ಸ್‌ನಲ್ಲೂ ಇಂತಹ ಒಂದು ಕಾಲುವೆಗಳ ನಗರವಿದೆ. ಯುನೆಸ್ಕೋದಿಂದ ವಿಶ್ವ ಪರಂಪರೆಯ ತಾಣ ಎಂದೂ ಗುರುತಿಸಿಕೊಂಡಿರುವ ಈ ಪ್ರದೇಶದಲ್ಲಿ ಸೈಕಲ್‌ಗಳೇ ಬಹುಮುಖ್ಯ ಸಾರಿಗೆ ವ್ಯವಸ್ಥೆಯಾಗಿದೆ. ಇಲ್ಲಿನ ಪ್ರವಾಸದ ಅನುಭವ ಈ ಲೇಖನದಲ್ಲಿ...



ವಿಶ್ವ ಪ್ರಸಿದ್ಧ ರಿಜ್ಕ್ಸ್ ಮ್ಯೂಸಿಯಂ

• ಕೆ.ಪಿ.ಸತ್ಯನಾರಾಯಣ

ಆ್ಯಮ್‌ಸ್ಟರ್‌ಡ್ಯಾಮ್ ನಗರವನ್ನು ನೋಡದಿದ್ದರೆ ಯೂರೋಪಿನ ಪ್ರವಾಸ ಅಪೂರ್ಣವೆಂದೇ ಹೇಳಬಹುದು. ಹೆಚ್ಚಿನ ಸಂಖ್ಯೆಯ ಕಾಲುವೆಗಳನ್ನು ಹೊಂದಿರುವುದರಿಂದ ಹಾಗೂ ಇಲ್ಲಿಯೂ ಪ್ರವಾಸಿಗರಿಗಾಗಿ ಅನೇಕ ರೀತಿಯ ದೋಣಿ ವಿಹಾರದ ಅನುಕೂಲವಿರುವುದರಿಂದ ಆ್ಯಮ್‌ಸ್ಟರ್‌ಡ್ಯಾಮ್ ನಗರವನ್ನು 'ಉತ್ತರದ ವೆನಿಸ್' ಎಂದು ಕರೆಯಲಾಗುತ್ತದೆ. ಕಾಲುವೆಗಳ ನಗರ ವೆನಿಸ್ ಇಟಲಿಯಲ್ಲಿರುವುದಾದರೆ, ಆ್ಯಮ್‌ಸ್ಟರ್‌ಡ್ಯಾಮ್ ನೆದರ್ಲೆಂಡ್ಸ್ ಅಥವಾ ಹಾಲೆಂಡ್‌ನ ಉತ್ತರ ಭಾಗದ ಡಚ್ ಪ್ರಾಂತ್ಯದಲ್ಲಿದೆ. ಕಲೆ ಹಾಗೂ ಸಾಂಸ್ಕೃತಿಕ ಮಹತ್ವದ ಕಾರಣದಿಂದಾಗಿ ಯುನೆಸ್ಕೋದಿಂದ ವಿಶ್ವ ಪರಂಪರೆಯ ತಾಣವಾಗಿಯೂ ಈ ಪ್ರದೇಶ ಗುರುತಿಸಿಕೊಂಡಿದೆ.

ನೆದರ್ಲೆಂಡ್ಸ್‌ನ ವಾಣಿಜ್ಯ ರಾಜಧಾನಿ ಹಾಗೂ ಯುರೋಪ್‌ನ ಪ್ರಮುಖ ಹಣಕಾಸು ಮತ್ತು ವ್ಯಾಪಾರ ಕೇಂದ್ರಗಳಲ್ಲಿ ಒಂದಾಗಿರುವ ಆ್ಯಮ್‌ಸ್ಟರ್‌ಡ್ಯಾಮ್ ಅನ್ನು ವಿಶ್ವದ ಪ್ರಮುಖ ವಾಣಿಜ್ಯ ನಗರಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಅನೇಕ ದೊಡ್ಡ ಡಚ್ ಸಂಸ್ಥೆಗಳು ಈ ನಗರದಲ್ಲಿ ತಮ್ಮ ಪ್ರಧಾನ ಕಚೇರಿಯನ್ನು ಹೊಂದಿವೆ. ಇದಲ್ಲದೆ ಪ್ರಪಂಚದ ಅನೇಕ ದೊಡ್ಡ ಕಂಪನಿಗಳು ಇಲ್ಲಿ ತಮ್ಮ ಕಚೇರಿಗಳನ್ನು ಸ್ಥಾಪಿಸಿವೆ. ವಿಶ್ವದ ಬಹುಮುಖ್ಯ ಕಂಪನಿಗಳಾದ ಉಬರ್, ನೆಟ್‌ಫ್ಲಿಕ್ಸ್ ಮತ್ತು ಟೆಸ್ಲಾ ಮುಂತಾದವು ತಮ್ಮ ಯುರೋಪಿಯನ್ ಪ್ರಧಾನ ಕಚೇರಿಯನ್ನು ಈ ನಗರದಲ್ಲಿ ಸ್ಥಾಪಿಸಿವೆ. 1602ರಲ್ಲಿ ಸ್ಥಾಪನೆಯಾದ ಆ್ಯಮ್‌ಸ್ಟರ್‌ಡ್ಯಾಮ್ ಸ್ಟಾಕ್ ಎಕ್ಸ್‌ಚೇಂಜ್ ವಿಶ್ವದ ಅತ್ಯಂತ ಹಳೆಯ ಸೆಕ್ಯುರಿಟೀಸ್ ಮಾರುಕಟ್ಟೆ ಎಂಬ ಖ್ಯಾತಿಯನ್ನು ಹೊಂದಿದೆ.

ಉತ್ತಮ ಪರಿಸರ ಮತ್ತು ಮೂಲಸೌಕರ್ಯ ಹಾಗೂ ಗುಣಮಟ್ಟದ ಜೀವನಶೈಲಿಯಲ್ಲಿ ಆ್ಯಮ್‌ಸ್ಟರ್‌ಡ್ಯಾಮ್ ಅನ್ನು ಅತ್ಯುತ್ತಮ ನಗರವೆಂದು ಪರಿಗಣಿಸಲಾಗಿದೆ. ಇಲ್ಲಿನ ಬಂದರು ಯುರೋಪ್‌ನಲ್ಲಿ ಐದನೇ ಅತಿ ದೊಡ್ಡ ಬಂದರು ಆಗಿದೆ. ಇಲ್ಲಿನ ವಿಮಾನ ನಿಲ್ದಾಣವಾದ ಶಿಫೋಲ್, ನೆದರ್ಲೆಂಡ್ಸ್‌ನ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣವಾಗಿದ್ದು, ಯುರೋಪ್‌ನಲ್ಲಿ ಮೂರನೇ ಮತ್ತು ವಿಶ್ವದಲ್ಲಿ 11 ನೇ ಸ್ಥಾನದಲ್ಲಿದೆ. ಸುಮಾರು 180 ರಾಷ್ಟ್ರೀಯತೆಗಳನ್ನು ಪ್ರತಿನಿಧಿಸುವ ಈ ಡಚ್ ರಾಜಧಾನಿಯು ಪ್ರಪಂಚದ ಬಹುಸಂಸ್ಕೃತಿಯ ನಗರಗಳಲ್ಲಿ ಒಂದಾಗಿದೆ. ಆದರೆ ಅದೇ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿ, ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ವಲಸೆ ಸಮಸ್ಯೆ ಮತ್ತು ಜನಾಂಗೀಯ ತಿಕ್ಕಾಟಗಳು ಬಿಡಿಸಲಾಗದ ಕಗ್ಗಂಟಾಗಿದೆ.

ಆ್ಯಮ್‌ಸ್ಟರ್‌ಡ್ಯಾಮ್ ನಗರವು ನೆದರ್ಲೆಂಡ್ಸ್‌ನ ಸಾಂಸ್ಕೃತಿಕ ರಾಜಧಾನಿಯೂ ಆಗಿದೆ. 17ನೇ ಶತಮಾನದ ಸುಪ್ರಸಿದ್ಧ ವರ್ಣ ಚಿತ್ರ ಕಲಾಕಾರರಾದ ರೆಂಬ್ರಾಂಟ್ ಮತ್ತು ವಿನ್ಸೆಂಟ್ ವ್ಯಾನ್‌ಗಾಗ್, ತತ್ವಶಾಸ್ತ್ರಜ್ಞರಾದ ಬರೂಚ್ ಸ್ಪಿನೋಜಾ, ಜಾನ್ ಲಾಕ್, ರೆನೆ ಡೆಸ್ಕರ್ಟೆಸ್ ಮೊದಲಾದವರು ನೆಲೆ ಕಂಡಿದ್ದು ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿಯೇ. ವಿಶ್ವ ಪ್ರಸಿದ್ಧ ರಿಜ್ಕ್ಸ್ ಮ್ಯೂಸಿಯಂ, ವ್ಯಾನ್ ಗಾಗ್ ಮ್ಯೂಸಿಯಂ, ಆನ್ನೆ ಫ್ರಾಂಕ್ ಹೌಸ್‌ನಂತಹ ಕಲೆ ಮತ್ತು ಸಂಸ್ಕೃತಿಯ ಮಹತ್ವದ ಸ್ಥಳಗಳಿಗೆ ಭೇಟಿ ನೀಡದೆ ಆ್ಯಮ್‌ಸ್ಟರ್‌ಡ್ಯಾಮ್ ಪ್ರವಾಸವು ಪೂರ್ಣಗೊಳ್ಳುವುದಿಲ್ಲ. ಹಳೆಯ ಕೋಟೆಗಳು, ಸುಂದರವಾದ ಜಲ ಸಾರಿಗೆಯ ಕಾಲುವೆಗಳು, ಸುಂದರ ಬೀದಿಗಳು, ಜಗತ್ಪ್ರಸಿದ್ಧ ವಸ್ತುಸಂಗ್ರಹಾಲಯಗಳು ಈ ನಗರದ ಆಕರ್ಷಣೆಗಳಲ್ಲಿ ಮುಖ್ಯವಾದವು.

12ನೇ ಶತಮಾನದಲ್ಲಿ ಆ್ಯಮ್ಸ್ಟೆಲ್ ನದಿಯ ತಟದಲ್ಲಿದ್ದ ಒಂದು ಸಣ್ಣ ಮೀನುಗಾರಿಕಾ ಗ್ರಾಮವು 17ನೇ ಶತಮಾನದ ಡಚ್ ಸುವರ್ಣ ಯುಗದಲ್ಲಿ ಆ್ಯಮ್‌ಸ್ಟರ್‌ಡ್ಯಾಮ್ ಎಂಬ ದೊಡ್ಡ ನಗರವಾಗಿ ಬೆಳೆದು, ವಿಶ್ವದ ಪ್ರಮುಖ ಬಂದರುಗಳಲ್ಲಿ ಒಂದಾಯಿತು. 17ನೇ ಶತಮಾನದಲ್ಲಿ ಆ್ಯಮ್ಸ್ಟೆಲ್ ನದಿಗೆ ಕಟ್ಟಿದ ಅಣೆಕಟ್ಟೆಯಿಂದಾಗಿ ನಗರವು ಪ್ರವಾಹಪೀಡಿತವಾಗುವುದು ತಪ್ಪಿತಲ್ಲದೆ, ಕಾಲುವೆಗಳನ್ನು ನಿರ್ಮಿಸಿ ನೀರು ಹರಿಸುವುದರ ಮೂಲಕ ನಗರದ ಆಕರ್ಷಣೆಯನ್ನೂ ಹೆಚ್ಚಿಸಿ ಪ್ರವಾಸಿ ತಾಣವನ್ನಾಗಿ ಮಾಡಿದ ನಗರ ನಿರ್ಮಾತೃಗಳ ಮುಂದಾಲೋಚನೆಯನ್ನು ಮೆಚ್ಚಲೇಬೇಕು. ಆ್ಯಮ್‌ಸ್ಟರ್‌ಡ್ಯಾಮ್‌ನ ಪ್ರಮುಖ ಆಕರ್ಷಣೆಗಳಲ್ಲಿ ಈ ಐತಿಹಾಸಿಕ ಕಾಲುವೆಗಳು ಸೇರಿವೆ. ಬಗೆಬಗೆಯ ಹೆಸರುಗಳನ್ನು ಹೊಂದಿರುವ ಕಾಲುವೆಗಳು ನಗರದ ತುಂಬಾ ಹರಡಿಕೊಂಡಿವೆ. ಈ ಕಾಲುವೆಗಳಲ್ಲಿ ನೌಕಾ ವಿಹಾರ ಮಾಡುವುದು ಪ್ರವಾಸಿಗರಿಗೆ ಸಂತಸದಾಯಕ ಅನುಭವವನ್ನು ನೀಡುತ್ತದೆ. ವಿವಿಧ ಬಗೆಯ ದೋಣಿಗಳು, ಕ್ರೂಸ್‌ಗಳು ಪ್ರವಾಸಿಗರ ಬಜೆಟ್ಟಿಗೆ ತಕ್ಕಂತೆ ಸೇವೆ ಒದಗಿಸುತ್ತವೆ.



ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ಸೈಕಲ್‌ಗಳೇ ಮುಖ್ಯವಾದ ಸಾರಿಗೆ ವ್ಯವಸ್ಥೆ

ಆ್ಯಮ್‌ಸ್ಟರ್‌ಡ್ಯಾಮ್ ಯುರೋಪಿನ ಅತ್ಯಂತ ಸುಸ್ಥಿರ ನಗರಗಳಲ್ಲಿ ಒಂದಾಗಿದೆ. ಅದರ ಸುಂದರವಾದ, ತಟದಲ್ಲಿ ಮರಗಳಿಂದ ಕೂಡಿದ ಕಾಲುವೆಗಳು, ಪ್ರಸಿದ್ಧ ಉದ್ಯಾನವನಗಳು ಪ್ರವಾಸಿಗರಿಗೆ ಅಹ್ಲಾದಕರ ಅನುಭವವನ್ನು ನೀಡುವಲ್ಲಿ ಸಹಕರಿಸುತ್ತವೆ. ಸೈಕ್ಲಿಂಗ್ ಆ್ಯಮ್‌ಸ್ಟರ್‌ಡ್ಯಾಮ್ ನಗರದ ಒಂದು ಬಹು ಮುಖ್ಯ ಸಾರಿಗೆ ವ್ಯವಸ್ಥೆಯಾಗಿದ್ದು, ಒಟ್ಟಾರೆ ನಾಲ್ಕು ನೂರು ಕಿಲೋಮೀಟರ್ ಉದ್ದವಿರುವ ಹಲವಾರು ಬೈಕಿಂಗ್ ಪಥಗಳು ಮತ್ತು ಲೇನ್‌ಗಳು ನಗರದಾದ್ಯಂತ ಹರಡಿಕೊಂಡಿವೆ. ಎಲ್ಲಿ ನೋಡಿದರಲ್ಲಿ ಸೈಕಲ್‌ಗಳು ಅಸಂಖ್ಯ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಸೈಕಲ್‌ಗಳ ಪಾರ್ಕಿಂಗ್‌ಗಾಗಿಯೇ ಮೀಸಲಾದ ಸ್ಥಳಗಳು ಎಲ್ಲೆಡೆ ಕಂಡು ಬರುತ್ತವೆ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಸೈಕಲ್ ಬಳಕೆದಾರರನ್ನು ಹೊಂದಿರುವ ನಗರವಾಗಿ ಆ್ಯಮ್‌ಸ್ಟರ್‌ಡ್ಯಾಮ್ ಪ್ರಸಿದ್ಧವಾಗಿದೆ. ಪರಿಸರ ಪ್ರಜ್ಞೆಯ ಮನೋಭಾವವು ಇಲ್ಲಿನ ಜನರ ಜೀವನ ವಿಧಾನದಲ್ಲಿ ಆಳವಾಗಿ ಬೇರೂರಿದೆ. ಸ್ಥಳೀಯರಿಂದ ಹಾಗೂ ಪ್ರವಾಸಿಗರಿಂದ ಸದಾ ತುಂಬಿರುವ ನಗರ ಉಲ್ಲಾಸಮಯ ವಾತಾವರಣದಿಂದ ಕೂಡಿರುತ್ತದೆ.

ನೆದರ್ಲೆಂಡ್ಸ್ ದೇಶವು ಅತ್ಯುತ್ತಮ ಸಾರಿಗೆ ಸಂಪರ್ಕ ಜಾಲವನ್ನು ಹೊಂದಿದೆ. ರೈಲಿನ ಮೂಲಕ, ಟ್ಯಾಕ್ಸಿಗಳ ಮೂಲಕ, ಬಾಡಿಗೆ ಬೈಕುಗಳು ಅಥವಾ ಬಸ್‌ನಲ್ಲಿ ಪ್ರಯಾಣವನ್ನು ಸಂಯೋಜಿಸಿ ಇಡೀ ದೇಶವನ್ನು ಸುತ್ತಲು ಸಾಧ್ಯ. ಆ್ಯಮ್‌ಸ್ಟರ್‌ಡ್ಯಾಮ್‌ಗೆ ಭೇಟಿ ನೀಡಿದ ಅನುಭವ ಬಹುಕಾಲ ನಮ್ಮ ಮನದಲ್ಲಿ ಸುಂದರ ನೆನಪುಗಳಾಗಿ ಉಳಿಯುತ್ತದೆ.

ಆ್ಯಮ್‌ಸ್ಟರ್‌ಡ್ಯಾಮ್ ತಲುಪಲು ಹತ್ತಿರದ ವಿಮಾನ ನಿಲ್ದಾಣ ಶಿಪೋಲ್ - ನಗರ ಕೇಂದ್ರ ಭಾಗದಿಂದ ಹದಿನಾರು ಕಿಲೋಮೀಟರ್ ದೂರವಿದೆ. ರೋಟರ್‌ದಾಮ್ (ಸುಮಾರು 60 ಕಿ.ಮೀ)ಹಾಗೂ ಐಂಡೋವೆನ್ (ಸುಮಾರು 110 ಕಿ.ಮೀ) ವಿಮಾನ ನಿಲ್ದಾಣಗಳಿಂದಲೂ ರಸ್ತೆ ಅಥವಾ ರೈಲು ಮಾರ್ಗವಾಗಿ ಬರಬಹುದು.



ಕಲ್ ಮಾವು

ಕಲ್ ಮಾವ್...

10ನೇ ಪುಟದಿಂದ...

ರುಚಿ ನೂರು ತರಹ..

ಈ ಮರಗಳಲ್ಲಿ ಚಿಗುರು, ಕಾಯಿ ಒಟ್ಟೊಟ್ಟಿಗೆ ಬಿಟ್ಟು ಸೋಜಿಗ ತರುತ್ತದೆ. ಅರಳಿ ಮರದ ಎಲೆಯನ್ನು ಹೋಲುವ ಇದರ ಎಲೆ ಮೂಸಿದರೆ ನಿಂಬೆಗಿಡದ ಎಲೆಯ ಸುವಾಸನೆಯೂ, ರುಚಿ ನೋಡಿದರೆ ಒಗರು ಮಿಶ್ರಿತ ಹುಳಿ ಇಲ್ಲವೆ ಬಿಲ್ವಪತ್ರೆ ತಿಂದಂತೆ ಅನಿಸುತ್ತದೆ. ಗೋಲಿಗುಂಡು ಗಾತ್ರದ ಕಾಯಿಯ ಕೆರೆದರೆ ಅಂಟಿನಂತಹ ಹಾಲು ಉತ್ಪತ್ತಿ ಆಗಿ, ಅದನ್ನು ಮೂಸಿದರೆ ಥೇಟ್ ಮಾವಿನ ಕೇರಿನ ವಾಸನೆ ಬರುತ್ತದೆ. ಹಾಗೆ ಕಾಯಿಯ ಅಗೆದರೆ ಚೂಯಿಂಗ್ ಗಮ್‌ನಂತೆ ಆಗಿ ಲೋಳೆ ಲೋಳೆ ಬರುತ್ತದೆ. ಬೀಜದ ಭಾಗ ಸ್ವಲ್ಪ ಗಟ್ಟಿಯಾಗಿರುತ್ತದೆ. ಇದು ಹಣ್ಣಾಗದೇ ಅರಿಸಿನ ಬಣ್ಣಕ್ಕೆ ತಿರುಗಿ, ಬತ್ತಿ ಹೋಗುತ್ತದೆ.

ಹುಣಸೆ ಉಪ್ಪಿನಕಾಯಿಯಲ್ಲಿ ಸೈ..

ಹೆಂಗಳೆಯರು ಕಲ್ಲು ಮಾವು ಕೊಳ್ಳುವ ಮುಖ್ಯ ಉದ್ದೇಶವೇ ಹುಣಸೆ ಉಪ್ಪಿನಕಾಯಿ/ ಚಟ್ನಿಯಲ್ಲಿ ಬೆರೆಸಲು. ಹೇಳಿಕೇಳಿ ಹುಣಸೆ ನಾಡು. ಹುಣಸೆ ಹಣ್ಣಿನ ತೊಕ್ಕಿಗೆ ಇಲ್ಲಿಯ ಆಹಾರದಲ್ಲಿ ಪ್ರಮುಖ ಸ್ಥಾನ. ಈ ತೊಕ್ಕಿನಲ್ಲಿ ಈ ಕಲ್ಲು ಮಾವು ಬೆರೆಸಿದರೆ ಅದರ ಹದ, ಸ್ವಾದ ನೂರ್ಮಡಿಸುತ್ತದೆ. ಅದಕ್ಕಾಗಿ ಈ ಕಲ್ಲು ಮಾವಿಗೆ ಎಲ್ಲಿಲ್ಲದ ಬೇಡಿಕೆ. ಕಲ್ಲು ಮಾವನ್ನು ಉಪ್ಪಿನಲ್ಲಿ ನೆನೆ ಹಾಕಿ ಒಂದೆರೆಡು ದಿನ ಕೊಳೆ ಬಿಟ್ಟು ನಂತರ ನೆರಳಲ್ಲಿ ಒಣಗಿಸಿ, ಅರೆಬರೆ ಜಜ್ಜಿ ಹುಣಸೆ ಉಪ್ಪಿನಕಾಯಿಯಲ್ಲಿ ಹಾಕಿ ರುಬ್ಬುತ್ತಾರೆ. ಆಗ ತೊಕ್ಕಿನ ರುಚಿಯೇ ಬದಲಾಗುವುದರ ಜೊತೆಗೆ ವಿಶೇಷ ಪರಿಮಳ ಸೂಸಿ, ಘಮಾಡಿಸುತ್ತದೆ. ಇದರ ಎಲೆಗಳನ್ನೂ ಹಲವರು ಆಹಾರ ಖಾದ್ಯವಾಗಿ ಬಳಸುತ್ತಾರೆ. ಅಂಚಿನಲ್ಲಿ ಎಣ್ಣೆ ಹಾಕಿ ಎಲೆಗಳನ್ನು ಫ್ರೈ ಮಾಡಬೇಕು. ನಂತರ ಶೇಂಗಾ, ಕೊಬ್ಬರಿ, ಪುದಿನ, ಬೆಳ್ಳುಳ್ಳಿ ಹುರಿದು ಒಗ್ಗರಣೆ ಕೊಟ್ಟು ರುಚಿಗೆ ತಕ್ಕಷ್ಟು ಬೆಲ್ಲ, ಉಪ್ಪು,ಎಲೆ ಸೇರಿಸಿ ಮಿಕ್ಸಿಗೆ ಹಾಕಬೇಕು. ಇಲ್ಲವೇ ಒಳಕಲ್ಲಲ್ಲಿ ಕುಟ್ಟಿ ಚಟ್ನಿ ಮಾಡಬಹುದು. ಆಗ ಬೀಜ ಸಮೇತ ಸಣ್ಣಗೆ ಆಗುತ್ತದೆ. ಹೀಗೆ ಸಿದ್ಧವಾದ ಚಟ್ನಿಯನ್ನು ರೊಟ್ಟಿ, ಚಪಾತಿ, ಮುದ್ದೆ, ಅನ್ನದೊಂದಿಗೆ ಸೇವಿಸುತ್ತಾರೆ.

ಎಲ್ಲೆಲ್ಲಿ ಕಾಣಬಹುದು?

ಸಾಮಾನ್ಯವಾಗಿ ಕಲ್ಲುಗುಂಡುಗಳಿಂದ ಕೂಡಿರುವ ಬೆಟ್ಟ-ಗುಡ್ಡಗಳಲ್ಲಿ ಈ ಮರಗಳನ್ನು ಕಾಣಬಹುದು. ಅತ್ಯಂತ ದುರ್ಲಬ ಮರಗಳಾಗಿದ್ದು, ಬಳ್ಳಾರಿ ಜಿಲ್ಲೆಯ ಸಂಡೂರು, ಕೂಡ್ಲಿಗಿ ತಾಲ್ಲೂಕುಗಳ ಬೆಟ್ಟಗುಡ್ಡಗಳಲ್ಲಿ ಈ ಮರಗಳು ಕಂಡು ಬರುತ್ತವೆ. ಮರಗಳ ಬಗ್ಗೆ ಅರಣ್ಯದ ನಂಟು ಇರುವವರಲ್ಲಿ ಮಾಹಿತಿ ಇರುತ್ತದೆ. ಇಲ್ಲದಿದ್ದರೆ ಕಾಡು ಸುತ್ತಾಟದಲ್ಲಿ ಸೂಕ್ಷ್ಮವಾಗಿ ಗಮನಹರಿಸಿದರೆ ಸಿಗಬಹುದು. ಇನ್ನು ಈ ಮರದ ಸುತ್ತಲೂ ವಿಶೇಷವಾದ ಪರಿಮಳ ಇರುತ್ತದೆ. 'ಇದಕ್ಕಾಗಿ ಬೆಟ್ಟಗುಡ್ಡಗಳನ್ನು ಹತ್ತಿ ಇಳಿಯಬೇಕು; ಕಲ್ಲು ಪೊಟರೆಗಳಲ್ಲಿ ಬೆದಕಬೇಕು. ಕಾಡು ಪ್ರಾಣಿಗಳ ಭಯದಿಂದ ಈ ಮಾವು ಹುಡುಕಿಕೊಂಡು ಹೋಗುವವರು ವಿರಳ. ಮರಗಳನ್ನು ಗೊತ್ತು ಮಾಡಿಟ್ಟುಕೊಂಡವರಷ್ಟೇ ಈ ಕಾಯಿಗಳನ್ನು ಸಲೀಸಾಗಿ ತರಲಿದ್ದು, ಸಹಜವಾಗಿ ಡಿಮ್ಯಾಂಡ್. ಈಗ ಇದರ ಬೆಲೆ ಸೇರಿಗೆ ನೂರು ರುಪಾಯಿ ಮೀರಿದೆ' ಎನ್ನುತ್ತಾರೆ ಸಂಡೂರಿನ ಚಾರಣಿಗ ಜಟ್ಟಿಂಗರಾಜ್.

'ಇದು ಬರ್ಸೆರೇಸಿ ಕುಟುಂಬಕ್ಕೆ ಸೇರಿದ್ದು, ಕನ್ನಡದಲ್ಲಿ ಕಾಡು, ಕಲ್ಲು ಮಾವೆಂದು, ತೆಲುಗಿನಲ್ಲಿ ಕೊಂಡ ಮಾಮಿಡಿ ಎಂತಲೂ ಕರೆಯುತ್ತಾರೆ. ಇದು ಮುಖ್ಯವಾಗಿ ದಕ್ಷಿಣ ಭಾರತ, ಶ್ರೀಲಂಕಾದಲ್ಲಿ ಕಂಡು ಬರುತ್ತದೆ. ಒಣ ಹವೆಗೆ ಕನಿಷ್ಠ ನೀರು ಬಳಸಿಕೊಂಡು ಗುಡ್ಡಗಾಡುಗಳಲ್ಲಿ 10-20 ಮೀಟರ್ ಎತ್ತರ ಬೆಳೆಯುತ್ತದೆ. ಇದರ ಎಲೆ, ಬೇರು, ತೊಗಟೆಯನ್ನು ಸಾಂಪ್ರದಾಯಿಕ ಔಷಧಿಯಲ್ಲಿ ಬಳಸಲಾಗುತ್ತದೆ. ಗಾಯ ಗುಣಪಡಿಸಲು, ಉರಿಯೂತ, ಜ್ವರ ನಿವಾರಕ, ಅಜೀರ್ಣ, ಉತ್ಕರ್ಷಣ ನಿರೋಧಕ, ಬ್ಯಾಕ್ಟೀರಿಯಾ ಕೊಲ್ಲುವ ಗುಣಗಳನ್ನು ಹೊಂದಿರುವ ಕಾರಣಕ್ಕೆ ಜನರು ಇದನ್ನು ಬಳಸುತ್ತಾರೆ. ಇದರ ಬಗ್ಗೆ ಇನ್ನೂ ಸಾಕಷ್ಟು ಅಧ್ಯಯನ ಆಗಬೇಕಿದೆ' ಎನ್ನುತ್ತಾರೆ ದಾವಣಗೆರೆ ವಿವಿಯ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಂತೋಷ ಕುಮಾರ್.

ನಮ್ಮೂರ ಕಡೆಗೆ ಬಂದಾಗ ಮರೆಯದೇ ಈ ಕಲ್ಲುಮಾವಿನ ಉಪ್ಪಿನಕಾಯಿಯ ರುಚಿಯನ್ನು ಸವಿಯುವುದನ್ನು ಮರೆಯಬೇಡಿ.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಜಗತ್ತಿನ ಮೊಟ್ಟ ಮೊದಲ ಮಾಯಾಚೌಕ

8	1	6	= 15
3	5	7	= 15
4	9	2	= 15
= 15	= 15	= 15	= 15

ಬಾಣಲೆಯಿಂದ ಬೆಂಕಿಗೆ!

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಒಂದೂರಿನಲ್ಲಿ ನೆರೆ ಬಂದಿತ್ತು. ವ್ಯಕ್ತಿಯೊಬ್ಬ ನಡುಗಡ್ಡೆಯಲ್ಲಿ ಸಿಲುಕಿಕೊಂಡಿದ್ದ. ನಿಮಿಷಗಳು ಉರುಳಿದಂತೆ ನೀರು ಹೆಚ್ಚುತ್ತಲೇ ಇತ್ತು. ಇದರಿಂದ ಗಾಬರಿಗೊಂಡ ಆತ ಕಾಪಾಡಿ ಎಂದು ಕೂಗತೊಡಗಿದ. ಸುತ್ತ ಯಾರೂ ಇಲ್ಲದೇ ಇದ್ದ ಕಾರಣ ಆತನ ಕೂಗು ಯಾರಿಗೂ ಕೇಳಿಸಲಿಲ್ಲ. ಆಗ ನೀರಿನೊಳಗೆ ಏನೋ ಚಲಿಸಿದಂತೆ ಕಾಣಿಸಿತು. ನೋಡ ನೋಡುತ್ತಿದ್ದಂತೆಯೇ ದೊಡ್ಡ ಮೊಸಳೆಯೊಂದು ನೀರಿನೊಳಗಿಂದ ಹೊರಬಂತು. ಆಗ ಆ ವ್ಯಕ್ತಿ ಮೊಸಳೆಯಿಂದ ತನ್ನನ್ನು ಕಾಪಾಡಿ ಎಂದು ಮತ್ತೆ ಕೂಗಿಕೊಂಡ. ಆತನ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದ ರೀತಿಯಾಗಿತ್ತು.

ಪದಗಿರಕಿ ಆಟ

ಇಲ್ಲಿ ಕೊಟ್ಟಿರುವ ಮೊದಲ ಪದದ ಅಕ್ಷರಗಳೇ ನಂತರದ ಪದದ ಅಕ್ಷರಗಳಾಗಿವೆ. ಎರಡನ್ನೂ ಕೂಡಿಸಿ ಓದಿದಾಗ ಒಂದು ಚಿಕ್ಕ ವಾಕ್ಯವಾಗುತ್ತದೆ.

1	ಬಹಳ ಹಳಬ
2	ಪ್ರಥಮ ಪ್ರಮಥ
3	ರವಿಮಾಮನ ಮಾವಿನಮರ
4	ಮಾನವರ ವರಮಾನ
5	ಸರಿಹೋದ ಸಹೋದರಿ
6	ಸಸ್ಯದ ಸದಸ್ಯ
7	ಬಿಡಾಡಿ ದನ ದಡಾನ ಬಿಡಿ
8	ನಮಗ ಮಗನ ಗಮನ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡೂ ಪದಗಳನ್ನು ಕೂಡಿಸಿ ಒಂದೇ ಪದ ಮಾಡಿ

1	ವಾನರ	ಗಸಿ	
2	ನಕುಲ	ಮಾವ	
3	ಹವನ	ದಯ	
4	ಕಡಬು	ಗರಿ	
5	ಜನನ	ಲಾಯ	
6	ಯೋಗಿಯ	ಕಾಕ	
7	ಕವನ	ಲಾಭ	
8	ಸುಮಾರು	ಸರಿ	
9	ಮರಡು	ಹಣ್ಣು	
10	ಹರಿಸು	ಕಸ	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿರುವ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅಪೇಕ್ಷಾ ಡಿ. ನಾಯ್ಕ
ನವನಗರ



ಜೀವ ಆರ್.ಪಿ.
ಕೆ.ಆರ್.ಪೇಟೆ



ಪ್ರಥಮ್ ಎಸ್.
ಉಡುಪಿ



ಭುವನ್ ಎಸ್.ಎನ್.
ಬೆಂಗಳೂರು



ಅಭಿಮನ್ಯತ ಬಿ.
ಯಾದಗಿರಿ



ಸ್ಕಂದ ಡಿ.ಜಿ.
ಕಲಬುರಗಿ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಾದೆ ಗುರ್ತಿಸು

ಇಲ್ಲಿ ಕೊಟ್ಟಿರುವ ಅಕ್ಷರಗಳನ್ನು ಮರುಜೋಡಿಸಿ ಒಂದು ಗಾದೆ ಮಾತು ಮಾಡಿ

ಕ	ದಾ	ರ	ಟ	ಸಂ	ಬಂ	ಗ	ವೆಂ	ಣ	ಟ	ಮ	ಕ

ಉತ್ತರ:

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ನೇರ	+	ಹಳೆ	+	ಣ್ಣು	=	
2	ಮಾನ	+	ಮದ	+	ತು	=	
3	ದರಿ	+	ಕಡಿ	+	ತಿಂ	=	
4	ಕರ	+	ಕೆಲ	+	ಬೆ	=	
5	ನಿಧಿ	+	ಸೋಯಾ	+	ಗಾಂ	=	



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1.ನಾಮಕರಣ 2.ಮರುಗಣತಿ
3.ಕಾಗೆಯಗೂಡು 4.ವರ್ಣಪಟಲ
5.ಕಣ್ಣಿನರೆಪ್ಪೆ

ಚಿಕ್ಕಲೆಕ್ಕ:
1X2X3 = 6
1 + 2 + 3 = 6

ಜಾಣಪದ ಆಟ:
1.ಅಪ್ಪಣೆ 2.ತಾಯಿತ
3.ಕಾಲುವೆ 4.ಮಾವುತ
5.ಹಣತೆ 6.ಮಂದಿರ
7.ಕರಡಿ 8.ಮರಣ 9.ಶಿರಸಿ
10.ಸರಣಿ

ಡೈಮಂಡ್ ಲೀಗ್: 2 ವರ್ಷಗಳಲ್ಲಿ ಮೊದಲ ಪ್ರಶಸ್ತಿ ಗೆದ್ದ ನೀರಜ್

ಪ್ಯಾರಿಸ್ (ಪಿಟಿಐ): ಭಾರತದ ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಅವರು ಎರಡು ವರ್ಷಗಳಲ್ಲಿ ಮೊದಲ ಡೈಮಂಡ್ ಲೀಗ್ ಪ್ರಶಸ್ತಿ ಗೆದ್ದುಕೊಂಡರು. ಶುಕ್ರವಾರ ರಾತ್ರಿ ಇಲ್ಲಿ ನಡೆದ ಕೂಟದಲ್ಲಿ ಅವರು ಜರ್ಮನಿಯ ಪ್ರತಿಸ್ಪರ್ಧಿ ಜೂಲಿಯನ್ ವೆಬರ್ ಅವರನ್ನು ಹಿಂದೆಹಾಕಿ ಅಗ್ರಸ್ಥಾನ ಪಡೆದರು.

ಮುಖ್ಯಾಂಶಗಳು

- ಮೊದಲ ಪ್ರಯತ್ನದಲ್ಲೇ 88.16 ಮೀಟರ್ ದೂರ ಭರ್ಚಿ ಎಸೆದ ಚೋಪ್ರಾ
- ಜರ್ಮನಿಯ ಜೂಲಿಯನ್ ವೆಬರ್‌ಗೆ ಎರಡನೇ ಸ್ಥಾನ
- ಬ್ರೆಜಿಲ್‌ನ ಲೂಯಿಸ್ ಮೌರಿಸಿಯೊಗೆ ಮೂರನೇ ಸ್ಥಾನ

ಎಂಟು ಮಂದಿಯಿದ್ದ ಕಣದಲ್ಲಿ, 27 ವರ್ಷ ವಯಸ್ಸಿನ ಚೋಪ್ರಾ ತಮ್ಮ ಮೊದಲ ಯತ್ನದಲ್ಲೇ ಭರ್ಚಿಯನ್ನು 88.16 ಮೀ. ದೂರ ಎಸೆದರು. ಅವರ ಎರಡನೇ ಥ್ರೋ 85.10 ಮೀ. ಎಂದು ದಾಖಲಾಯಿತು. ನಂತರದ ಮೂರು ಯತ್ನಗಳು ಫೌಲ್ ಆದವು. ಆರನೇ ಹಾಗೂ ಕೊನೆಯ ಯತ್ನದಲ್ಲಿ ಅವರು 82.89 ಮೀ. ದೂರ ಎಸೆದರು.

ಈ ಹಿಂದೆ ವಿವಿಧ ಕೂಟಗಳಲ್ಲಿ 90 ಮೀ. ಗಿಂತ ದೂರ ದಾಖಲಿಸಿದ ಐವರು ಇಲ್ಲಿ ಕಣದಲ್ಲಿದ್ದರೂ ಯಾರೂ ಚೋಪ್ರಾ ಅವರ ಮೊದಲ ಯತ್ನ (88.16 ಮೀ.) ದಾಟಲಿಲ್ಲ. ವೆಬರ್ ತಮ್ಮ ಮೊದಲ ಯತ್ನದಲ್ಲಿ 87.88 ಮೀ. ದೂರ ಎಸೆದಿದ್ದು ಅದೇ ಅವರ ಉತ್ತಮ ಪ್ರದರ್ಶನ ಎನಿಸಿತು. ಬ್ರೆಜಿಲ್‌ನ ಲೂಯಿಸ್ ಮೌರಿಸಿಯೊ ಡ ಸಿಲ್ವ ಮೂರನೇ ಯತ್ನದಲ್ಲಿ 86.62 ಮೀ. ಎಸೆದು ಮೂರನೇ ಸ್ಥಾನ ಗಳಿಸಿದರು.

'ನನ್ನ ಥ್ರೊ ಬಗ್ಗೆ ಸಮಾಧಾನವಿದೆ. ನನ್ನ ರನ್‌ಅಪ್ ಇಂದು ವೇಗವಾಗಿತ್ತು. ಫಲಿತಾಂಶ ಮತ್ತು ಮೊದಲ ಸ್ಥಾನ ಪಡೆದಿದ್ದಕ್ಕೆ ಸಂಸತವಾಗಿದೆ' ಎಂದು ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದಿರುವ ಹರಿಯಾಣದ ಅಥ್ಲೀಟ್ ಹೇಳಿದರು.

ಇದಕ್ಕಿಂತ ಮೊದಲು, ಸ್ವಿಜರ್ಲೆಂಡ್‌ನ ಲೂಸಾನ್‌ನಲ್ಲಿ ಚೋಪ್ರಾ (2023ರ ಜೂನ್‌ನಲ್ಲಿ) ಕೊನೆಯ ಬಾರಿ ಡೈಮಂಡ್ ಲೀಗ್ ಪ್ರಶಸ್ತಿ ಗೆದ್ದುಕೊಂಡಿದ್ದರು. ಇದರ ನಂತರ ಅವರು ಆರು ಡೈಮಂಡ್ ಲೀಗ್ ಕೂಟಗಳಲ್ಲಿ ಎರಡನೇ ಸ್ಥಾನ ಪಡೆದಿದ್ದರು.

ಪ್ರತಿಷ್ಠಿತ ಪ್ಯಾರಿಸ್ ಲೆಗ್‌ನಲ್ಲಿ ಇದು ಅವರಿಗೆ ಮೊದಲ ಗೆಲುವು. 2017ರಲ್ಲಿ ಜೂನಿಯರ್ ವಿಶ್ವ ಚಾಂಪಿಯನ್ ಆಗಿದ್ದ ವೇಳೆ ಅವರು ಈ ಕೂಟದಲ್ಲಿ ಸ್ಪರ್ಧಿಸಿದ್ದು ಐದನೇ ಸ್ಥಾನ (84.67 ಮೀ.) ಗಳಿಸಿದ್ದರು.

'ಮೂರು ದಿನಗಳ ನಂತರ, ಇದೇ 24ರಂದು ಒಸ್ಟ್ರಾವದಲ್ಲಿ (ಗೋಲ್ಡನ್ ಸ್ಪೈಕ್ ಅಥ್ಲೆಟಿಕ್ ಕೂಟ) ಸ್ಪರ್ಧಿಸಲಿದ್ದೇನೆ' ಎಂದು ಅವರು ಮುಂದಿನ ಕೂಟದ ಬಗ್ಗೆ ತಿಳಿಸಿದರು. ಬೆಂಗಳೂರಿನಲ್ಲಿ ಜುಲೈ 5ರಂದು ತಮ್ಮದೇ ಆಯೋಜನೆಯಲ್ಲಿ ನಡೆಯಲಿರುವ ಎನ್‌ಸಿ ಕ್ಲಾಸಿಕ್ ಜಾವೆಲಿನ್ ಸ್ಪರ್ಧೆಯಲ್ಲೂ ಕಣಕ್ಕಿಳಿಯಲಿದ್ದಾರೆ. ಈ ಕೂಟವನ್ನು ವಿಶ್ವ ಅಥ್ಲೆಟಿಕ್ಸ್, ಕೆಟಗರಿ 'ಎ' ಸ್ಪರ್ಧೆ ಎಂದು ಗುರುತಿಸಿದೆ.

ಮೇ 16ರಂದು ನಡೆದ ದೋಹಾ ಡೈಮಂಡ್ ಲೀಗ್‌ನಲ್ಲಿ ಚೋಪ್ರಾ ಮೊದಲ ಬಾರಿ 90 ಮೀ. ಗಡಿ ದಾಟಿ 90.23 ಮೀ. ಎಸೆದಿದ್ದರು. ಆದರೆ ಅಲ್ಲಿ ವೆಬರ್ (91.06) ಅವರ ನಂತರ ಎರಡನೇ ಸ್ಥಾನ ಗಳಿಸಬೇಕಾಯಿತು.



ನೀರಜ್ ಚೋಪ್ರಾ

ಅದ್ವಿಕ್, ನಕ್ಷತ್ರಾ ರನ್ನರ್ ಅಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರಿಯಾಣದ ಗುರುಗ್ರಾಮದಲ್ಲಿ ಶನಿವಾರ ಮುಕ್ತಾಯಗೊಂಡ 9 ವರ್ಷದೊಳಗಿನವರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಓಪನ್ ವಿಭಾಗದಲ್ಲಿ ಕರ್ನಾಟಕದ ಆದ್ವಿಕ್ ಅಭಿನವ್ ಕೃಷ್ಣ ರನ್ನರ್ ಅಪ್ ಸ್ಥಾನ ಪಡೆದಿದ್ದಾರೆ. ಬಾಲಕಿಯರ ವಿಭಾಗದಲ್ಲಿ ನಕ್ಷತ್ರಾ ಗುಮುದವೆಲ್ಲಿ ಕೂಡ ರನ್ನರ್ ಅಪ್ ಆಗಿದ್ದಾರೆ.



ಆದ್ವಿಕ್ ಅಭಿನವ್ ಕೃಷ್ಣ



ಅಯಾನ್ ಫುಟಾಣೆ

ಓಪನ್ ವಿಭಾಗದಲ್ಲಿ ಒಡಿಶಾದ ಸಾತ್ವಿಕ್ ಸ್ವೇನ್ 11 ಸುತ್ತುಗಳ ನಂತರ 10 ಪಾಯಿಂಟ್ಸ್ ಗಳಿಸಿ ಮೊದಲಿಗನಾದರೆ, ಆದ್ವಿಕ್ 9.5 ಪಾಯಿಂಟ್ಸ್ ಕಲೆಹಾಕಿ ಎರಡನೇ ಸ್ಥಾನ ಪಡೆದಿದ್ದಾರೆ. ಅದ್ವಿಕ್ 9ನೇ ಶ್ರೇಯಾಂಕ ಪಡೆದಿದ್ದರು. ಕರ್ನಾಟಕದ ಮತ್ತೊಬ್ಬ ಆಟಗಾರ ಅಯಾನ್ ಫುಟಾಣೆ (8.5 ಪಾಯಿಂಟ್ಸ್) ನಾಲ್ಕನೇ ಸ್ಥಾನ ಗಳಿಸಿದ್ದಾರೆ.



ನಕ್ಷತ್ರಾ

ಬಾಲಕಿಯರ ವಿಭಾಗದಲ್ಲಿ ಮಹಾರಾಷ್ಟ್ರದ ಗಿರಿಶಾ ಪ್ರಸನ್ನ ಪೈ (10.5) ಮೊದಲ ಸ್ಥಾನ ಪಡೆದರೆ, ನಕ್ಷತ್ರಾ (9.5) ಎರಡನೇ ಸ್ಥಾನ ಗಳಿಸಿದರು. ನಕ್ಷತ್ರಾ, ಆದ್ವಿಕ್ ಮತ್ತು ಅಯಾನ್ ಬೆಂಗಳೂರು ನಗರದ ಚೆಸ್ ಪಟುಗಳಾಗಿದ್ದಾರೆ.

ಚಿಟಿಕೆ ಸುದ್ದಿ

ಲೈವ್ ರೇಟಿಂಗ್: 5ನೇ ಸ್ಥಾನಕ್ಕೆ ಪ್ರಜ್ಞಾನಂದ




ಪ್ರಜ್ಞಾನಂದ

ನವದೆಹಲಿ: ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ವಿಶ್ವ ಚೆಸ್ ಚಾಂಪಿಯನ್ ಆಗಿರುವ ಸ್ವದೇಶದ ಗುಕೇಶ್ ಅವರನ್ನು ಲೈವ್ ರೇಟಿಂಗ್‌ನಲ್ಲಿ ಹಿಂದೆಹಾಕಿದ್ದಾರೆ.

ಹಾಲಿ ರೇಟಿಂಗ್ ಪ್ರಕಾರ ವಿಶ್ವಕಪ್ ರನ್ನರ್ ಅಪ್ ಪ್ರಜ್ಞಾನಂದ ಅವರು 2777.2 ರೇಟಿಂಗ್ ಪಾಯಿಂಟ್ಸ್ ಗಳಿಸಿ ಐದನೇ ಸ್ಥಾನಕ್ಕೆ ಏರಿದ್ದಾರೆ. ಗುಕೇಶ್ ಅವರು 2776.6 ರೇಟಿಂಗ್ ಪಾಯಿಂಟ್ಸ್ ಗಳಿಸಿ ಆರನೇ ಸ್ಥಾನಕ್ಕೆ ಸರಿದಿದ್ದಾರೆ.

2700 ಚೆಸ್.ಕಾಮ್ ಪ್ರಕಾರ ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ (2780.7) ಅವರು ನಾಲ್ಕನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ವಿಶ್ವ ಚೆಸ್‌ನಲ್ಲಿ ಭಾರತ ಸಾಧಿಸುತ್ತಿರುವ ಪ್ರಗತಿಗೆ ಈ ಪೈಪೋಟಿ ನಿದರ್ಶನವಾಗಿದೆ.

ಹಾಕಿ: ದೆಹಲಿ ಪಬ್ಲಿಕ್ ಸ್ಕೂಲ್‌ಗೆ ಜಯ



ಬೆಂಗಳೂರು: ದೆಹಲಿ ಪಬ್ಲಿಕ್ ಸ್ಕೂಲ್ ಹಾಕಿ ಕ್ಲಬ್ ತಂಡವು ಇಲ್ಲಿ ನಡೆಯುತ್ತಿರುವ 94ನೇ ತಿರುವಾಂಕೂರ್ ಹಾಕಿ ಟೂರ್ನಿಯ ಪಂದ್ಯದಲ್ಲಿ ರೈಸಿಂಗ್ ಸ್ಟಾರ್ ಹಾಕಿ ಕ್ಲಬ್ ಎದುರು 3–2ರಿಂದ ಜಯಿಸಿತು.

ಕೆಎಸ್‌ಎಚ್‌ಎ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮತ್ತೊಂದು ಪಂದ್ಯದಲ್ಲಿ ಆರ್‌ಡಬ್ಲ್ಯುಎಫ್‌ಎಸ್‌ಎ (ರೈಲು ಗಾಲಿ ಕಾರ್ಖಾನೆ ಸ್ಪೋರ್ಟ್ಸ್ ಅಸೋಸಿಯೇಷನ್) ತಂಡವು ಬ್ಲ್ಯೂ ಸ್ಟಾರ್ ಹಾಕಿ ಕ್ಲಬ್ 'ಬಿ' ಎದುರು 8–0 ಅಂತರದಿಂದ ಗೆಲುವು ಸಾಧಿಸಿತು.

ಏಷ್ಯನ್ ಕುಸ್ತಿ ಭಾರತದ ಪ್ರಾಬಲ್ಯ

ವಿಯೆಟ್ನಾಂ (ಪಿಟಿಐ): ಭಾರತದ ಮಹಿಳಾ ಕುಸ್ತಿಪಟುಗಳು ಇಲ್ಲಿ ನಡೆಯುತ್ತಿರುವ 23 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಾಬಲ್ಯ ಮೆರೆದಿದ್ದಾರೆ. ನಾಲ್ಕು ಚಿನ್ನ ಮತ್ತು ಐದು ಬೆಳ್ಳಿ ಸೇರಿದಂತೆ 10 ವಿಭಾಗಗಳಲ್ಲಿ ತಲಾ ಒಂದು ಪದಕವನ್ನು ಗೆಲ್ಲುವ ಮೂಲಕ ತಂಡ ಪ್ರಶಸ್ತಿಯನ್ನು ಗೆದ್ದರು.

ಪ್ರಿಯಾಂಶಿ ಪ್ರಜಾಪತ್ (50 ಕೆ.ಜಿ), ರೀನಾ (55 ಕೆ.ಜಿ), ಸೃಷ್ಟಿ (68 ಕೆ.ಜಿ) ಮತ್ತು ಪ್ರಿಯಾ (76 ಕೆ.ಜಿ) ಚಿನ್ನದ ಪದಕ ಗೆದ್ದರು. ನೇಹಾ ಶರ್ಮಾ (57 ಕೆ.ಜಿ), ತನ್ವಿ (59 ಕೆ.ಜಿ), ಪ್ರಗತಿ (62 ಕೆ.ಜಿ), ಶಿಕ್ಷಾ (65 ಕೆ.ಜಿ), ಮತ್ತು ಜ್ಯೋತಿ ಬೆರ್ವಾಲ್ (72 ಕೆಜಿ) ಬೆಳ್ಳಿ ಪದಕಗಳನ್ನು ಗೆದ್ದರೆ, ಹಿನಾಬೆನ್ ಖಲೀಫಾ (53 ಕೆಜಿ) ಕಂಚಿನ ಪದಕವನ್ನು ಗೆದ್ದರು.

ಗ್ರೀಕೊ-ರೋಮನ್ ಶೈಲಿಯಲ್ಲಿ ಸುಮಿತ್ 63 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದರೆ, ನಿತೇಶ್ (97 ಕೆಜಿ) ಮತ್ತು ಅಂಕಿತ್ ಗುಲಿಯಾ (72 ಕೆಜಿ) ಕಂಚಿನ ಪದಕಗಳನ್ನು ಗೆದ್ದರು.

ರಿಷಭ್ ಶತಕ; ಇಂಗ್ಲೆಂಡ್ ಮರುಹೋರಾಟ

ಗಿಲ್–ಪಂತ್ ದ್ವಿಶತಕದ ಜೊತೆಯಾಟ; ಪೋಪ್ ಅಜೇಯ ಶತಕ, ಬೂಮ್ರಾ ಮಿಂಚು

• ಸಿಡ್ನಿ ಕಿರಣ್

ಲೀಡ್ಸ್: ಕ್ರಿಕೆಟ್‌ನ ಎಲ್ಲ ಮಾದರಿಗಳಲ್ಲಿಯೂ ಟೆಸ್ಟ್ ಅಗಾಧ ಸವಾಲಿನದ್ದು ಎಂದು ಹೇಳಲಾಗುತ್ತದೆ. ಏಕೆಂದರೆ ಅಪಾರವಾದ ಏಕಾಗ್ರತೆ ಮತ್ತು ನಿರಂತರವಾಗಿ ಒಂದೇ ಲಯದಲ್ಲಿ ಆಡಬೇಕು. ಒಂದಿಷ್ಟು ಸಮತೋಲನ ತಪ್ಪಿದರೂ ಇನಿಂಗ್ಸ್ ಕೈಜಾರುತ್ತದೆ. ಈ ಮಾತಿಗೆ ತಕ್ಕ ಉದಾಹರಣೆಯೆಂದರೆ ಶನಿವಾರ ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್.

ಹೆಡಿಂಗ್ಲೆಯಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನವಾದ ಶುಕ್ರವಾರ ಬೆಳಿಗ್ಗೆಯಿಂದ ಎರಡನೇ ದಿನದ ಮೊದಲ ಅವಧಿಯ ಬಹುತೇಕ ಭಾಗದಲ್ಲಿ ಪಾರಮ್ಯ ಮೆರೆದಿದ್ದು ಭಾರತ. ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರ ಸುಂದರ ಶತಕ. ನಾಯಕ ಶುಭಮನ್ ಗಿಲ್ ಅವರ ಅಜೇಯ ಶತಕವು ಮೊದಲ ದಿನದ ಹೈಲೈಟ್ ಆಗಿದ್ದವು. ಉಪನಾಯಕ ರಿಷಭ್ ಪಂತ್ (ಅಜೇಯ 65) ಕೂಡ ಮಿಂಚಿದ್ದರು. ದಿನದಾಟದ ಅಂತ್ಯಕ್ಕೆ ಭಾರತದ ಸ್ಕೋರ್ 3 ವಿಕೆಟ್‌ಗಳಿಗೆ 359 ರನ್‌ಗಳಾಗಿದ್ದವು.

ಕ್ರೀಸ್‌ನಲ್ಲಿ ಉಳಿದಿದ್ದ ಪಂತ್ ಮತ್ತು ಗಿಲ್ ಅವರು ಶನಿವಾರವೂ ತಮ್ಮ ಆಟ ಮುಂದುವರಿಸಿದರು. ಅವರಿಬ್ಬರ ಅಂದ, ಚೆಂದ ಮತ್ತು ವೇಗದ ಆಟಕ್ಕೆ ರನ್‌ಗಳು ಹರಿದುಬರತೊಡಗಿದವು. ಇದರಿಂದಾಗಿ ತಂಡವು 600 ರನ್‌ಗಳ ಮೊತ್ತ ಮುಟ್ಟುವ ನಿರೀಕ್ಷೆ ಗರಿಗೆದರಿತ್ತು. ತುಸು ತಂಪಾಗಿದ್ದ ವಾತಾವರಣದಲ್ಲಿ, ಮೋಡವೂ ಆವರಿಸಿತ್ತು. ಬೌಲರ್‌ಗಳು ಹೊಸ ಚೆಂಡಿನಲ್ಲಿ ಚುರುಕಾದ ದಾಳಿ ಸಂಘಟಿಸಿದರು. ಆದರೆ ಗಿಲ್ ಮತ್ತು ಪಂತ್ ಅವರ ಏಕಾಗ್ರತೆ ಭಂಗ ಬರಲಿಲ್ಲ.

ಗಿಲ್ ಅವರ ಸೊಗಸಾದ ಹೊಡೆತಗಳು ಕಣ್ಮನ ಸೆಳೆದವು. ಇನ್ನೊಂದೆಡೆ ಪಂತ್ ಅವರ ಅಸಾಂಪ್ರದಾಯಿಕ ಹೊಡೆತಗಳ ಸಾಹಸದ್ದೇ ಭಯವಿತ್ತು. ಆದರೆ ಅವರಿಗೆ ಯಾವ ಭಯವೂ ಇರಲಿಲ್ಲ. ಚಾಣಾಕ್ಷತೆಯಿಂದ ಎಸೆತಗಳನ್ನು ಆಯ್ಕೆ ಮಾಡಿ ತಮ್ಮ 'ಜಿಮ್ನಾಸ್ಟಿಕ್ಸ್ ಕೌಶಲ' ತೋರಿಸಿಯೇ ಬಿಟ್ಟರು. ಸ್ಕೂಪ್, ರಿವರ್ಸ್ ಸ್ಕೂಪ್ ಇತ್ಯಾದಿ ಹೊಡೆತಗಳನ್ನು ಆಡಿದರು. ಈ ನಡುವೆ ದಿನದ ಮೊದಲ ಒಂದು ಗಂಟೆಯು ಸರಿದುಹೋಗಿದ್ದು ಗೊತ್ತೇ ಆಗಲಿಲ್ಲ. ಈ ಅವಧಿಯು ಬ್ಯಾಟಿಂಗ್‌ಗೆ ಸವಾಲಿನದಾಗಿತ್ತು.

ಪಂತ್ 90ರ ಗಡಿ ದಾಟಿದಾಗ ಅಭಿಮಾನಿಗಳಲ್ಲಿ ತುಸು ಒತ್ತಡದ ಛಾಯೆ ಆವರಿಸಿತ್ತು. ಪಂತ್ ಅವರ ಹೆಸರಲ್ಲಿ 'ನರ್ವಸ್ ನೈಂಟಿ' ದಾಖಲೆಗಳಿರುವುದೇ ಅದಕ್ಕೆ ಕಾರಣ. ಈ ಸಲವೂ ಅವರು ತಮ್ಮ ಹುಡುಗಾಟ ಬಿಡಲಿಲ್ಲ. ಶತಕ ಪೂರೈಸಲು ಬೇಕಾಗಿದ್ದ ರನ್‌ಗಳನ್ನು ಸಿಂಗಲ್ ಹ್ಯಾಂಡ್ ಸಿಕ್ಸರ್‌ನಿಂದಲೇ ಪೂರೈಸಿದರು. ಸ್ಪಿನ್ನರ್ ಶೋಯಬ್ ಬಷೀರ್ ಎಸೆತವನ್ನು ಬೌಂಡರಿಗೆರೆ ದಾಟಿಸಿ, ಟೆಸ್ಟ್‌ನಲ್ಲಿ 7ನೇ ಶತಕ ದಾಖಲಿಸಿದರು. ಇದರೊಂದಿಗೆ ಗಿಲ್ ಅವರೊಂದಿಗಿನ ಜೊತೆಯಾಟದಲ್ಲಿ 209 ರನ್‌ಗಳನ್ನು ಸೇರಿಸಿದರು.


ಈ ಹಂತದಲ್ಲಿ ಗಿಲ್ ಪ್ರಯೋಗಿಸಿದ ಅವಸರದ ಹೊಡೆತದಿಂದಾಗಿ ಬೃಹತ್ ಮೊತ್ತದ ನಿರೀಕ್ಷೆಗೆ ಕಡಿವಾಣ ಬಿತ್ತು. ಬಷೀರ್ ಎಸೆತವನ್ನು ಸಿಕ್ಸರ್‌ಗೆ ಎತ್ತುವ ಪ್ರಯತ್ನದಲ್ಲಿ ಗಿಲ್ ಬೌಂಡರಿ ಲೈನ್ ಫೀಲ್ಡರ್‌ಗೆ ಕ್ಯಾಚ್ ಆದರು. 147 ರನ್ ಗಳಿಸಿದ್ದ ಗಿಲ್ ನಿರ್ಗಮಿಸಿದರು. ಕ್ರೀಸ್‌ನಲ್ಲಿದ್ದ ಪಂತ್ ಒಂದಿಷ್ಟು ಬೀಸಾಟವಾಡಿದರು. ನಂತರ ಅವರೂ ಔಟಾದರು. ಎಂಟು ವರ್ಷಗಳ ನಂತರ ತಂಡಕ್ಕೆ ಮರಳಿರುವ ಕರುಣ್ ನಾಯರ್ ಖಾತೆ ತೆರೆಯಲಿಲ್ಲ. ಕೆಳಕ್ರಮಾಂಕದ ಬ್ಯಾಟರ್‌ಗಳು ಹೆಚ್ಚು ಹೊತ್ತು ಆಡಲಿಲ್ಲ. ಅದರಿಂದಾಗಿ 113 ಓವರ್‌ಗಳಲ್ಲಿ 471 ರನ್‌ಗಳಿಗೆ ಭಾರತದ ಇನಿಂಗ್ಸ್‌ಗೆ ತೆರೆಬಿತ್ತು. ಮೂವರು ಬ್ಯಾಟರ್‌ಗಳು ಶತಕ ಬಾರಿಸಿದರೂ ದಾಖಲಾದ ಕಡಿಮೆ ಇನಿಂಗ್ಸ್ ಮೊತ್ತ ಇದಾಗಿದೆ. ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಮತ್ತು ಜೋಶ್ ಟಂಗ್ ತಲಾ ನಾಲ್ಕು ವಿಕೆಟ್ ಗಳಿಸಿದರು.

ಪೋಪ್ ಶತಕ: ಇಂಗ್ಲೆಂಡ್ ಬ್ಯಾಟಿಂಗ್ ಆರಂಭಿಸುವ ಮುನ್ನ ಮಳೆ ಬಂದ ಕಾರಣ ತುಸು ವಿಳಂಬವಾಗಿ ಆಟ ಆರಂಭವಾಯಿತು. ಒಲಿ ಪೋಪ್ (ಔಟಾಗದೇ 100;131ಎ, 4x13)) ಶತಕದ ಮೂಲಕ ಇಂಗ್ಲೆಂಡ್ ಮರುಹೋರಾಟಕ್ಕೆ ಬಲತುಂಬಿದರು. ಎರಡನೇ ದಿನದಾಟದ ಅಂತ್ಯಕ್ಕೆ ಮೂರು ವಿಕೆಟ್‌ಗೆ 209 ರನ್ ಗಳಿಸಿದೆ.

ಪಂದ್ಯ ಶುರುವಾದ ಮೊದಲ ಓವರ್‌ನಲ್ಲಿಯೇ ಜಸ್‌ಪ್ರೀತ್ ಬೂಮ್ರಾ ಅವರು ಜ್ಯಾಕ್ ಕ್ರಾಲಿ ವಿಕೆಟ್ ಕಬಳಿಸಿದರು. ಆದರೆ, ಬೆನ್ ಡಕೆಟ್ (62;94ಎ) ಮತ್ತು ಪೋಪ್ ತಂಡದ ಕುಸಿತಕ್ಕೆ ಆಸ್ಪದ ನೀಡದೇ ಚೆಂದದ ಇನಿಂಗ್ಸ್ ಕಟ್ಟಿದರು. ಮೊದಲ ವಿಕೆಟ್‌ಗೆ 122 ರನ್ ಸೇರಿಸಿ ಮರುಹೋರಾಟಕ್ಕೆ ಬಲ ತುಂಬಿದರು. ಡಕೆಟ್ ಮತ್ತು ಜೋ ರೂಟ್ (28) ಅವರ ವಿಕೆಟ್‌ಗಳೂ ಬೂಮ್ರಾ ಪಾಲಾದವು.



ಒಲಿ ಪೋಪ್



ಭಾರತದ ವಿಕೆಟ್‌ಕೀಪರ್‌ಗಳ ಟೆಸ್ಟ್ ಶತಕಗಳು

- 7 ರಿಷಭ್ ಪಂತ್
- 6 ಮಹೇಂದ್ರಸಿಂಗ್ ಧೋನಿ
- 3 ವೃದ್ಧಿಮಾನ್ ಸಹಾ

ಶತಕ ಸಿಡಿಸಿದ ಸಂಭ್ರಮದಲ್ಲಿ ಲಾಗ ಹಾಕಿದ ರಿಷಭ್ ಪಂತ್ ಎಪಿ/ಪಿಟಿಐ ಚಿತ್ರ

ಒಂದೇ ಇನಿಂಗ್ಸ್‌ನಲ್ಲಿ ಭಾರತದ ಮೂವರ ಶತಕ

ಬ್ಯಾಟರ್‌ಗಳು	ಎದುರಾಳಿ	ಸ್ಥಳ	ವರ್ಷ
ಗಾವಸ್ಕರ್, ಶ್ರೀಕಾಂತ್, ಮೋಹಿಂದರ್	ಆಸ್ಟ್ರೇಲಿಯಾ	ಸಿಡ್ನಿ	1986
ದ್ರಾವಿಡ್, ತೆಂಡೂಲ್ಕರ್, ಗಂಗೂಲಿ	ಇಂಗ್ಲೆಂಡ್	ಹೆಡಿಂಗ್ಲೆ	2002
ಸೆಹ್ವಾಗ್, ದ್ರಾವಿಡ್, ಕೈಫ್	ವೆಸ್ಟ್ ಇಂಡೀಸ್	ಗ್ರಾಸ್ ಐಲೆಟ್	2006
ಜೈಸ್ವಾಲ್, ಗಿಲ್, ಪಂತ್	ಇಂಗ್ಲೆಂಡ್	ಹೆಡಿಂಗ್ಲೆ	2025

ಸ್ಕೋರ್ ಕಾರ್ಡ್

1ನೇ ಇನಿಂಗ್ಸ್: ಭಾರತ 471 (113 ಓವರುಗಳಲ್ಲಿ)
ಶುಕ್ರವಾರ: 3ಕ್ಕೆ 359 (85 ಓವರ್)

ಗಿಲ್ ಸಿ ಟಂಗ್ ಬಿ ಬಷೀರ್ 147 (227ಎ, 4x19, 6x1)
ಪಂತ್ ಎಲ್‌ಬಿಡಬ್ಲ್ಯು ಬಿ ಟಂಗ್ 134 (178ಎ, 4x12, 6x6)
ಕರುಣ್ ಸಿ ಪೋಪ್ ಬಿ ಸ್ಟೋಕ್ಸ್ 0 (4ಎ)
ಜಡೇಜ ಬಿ ಟಂಗ್ 11 (15ಎ, 4x2)
ಶಾರ್ದೂಲ್ ಸಿ ಸ್ಮಿತ್ ಬಿ ಸ್ಟೋಕ್ಸ್ 1 (8ಎ)
ಬೂಮ್ರಾ ಬಿ ಬ್ರೂಕ್ ಬಿ ಟಂಗ್ 0 (5ಎ)
ಸಿರಾಜ್ ಔಟಾಗದೇ 3 (7ಎ)
ಪ್ರಸಿದ್ಧ ಬಿ ಟಂಗ್ 1 (3ಎ)
ಇತರೆ: 31 (ಬೈ 1, ಲೆಗ್‌ಬೈ 14, ನೋಬಾಲ್ 9, ವೈಡ್ 2, ಪೆನಾಲ್ಟಿ 5)
ವಿಕೆಟ್ ಪತನ: 4–430 (ಶುಭಮನ್ ಗಿಲ್, 101.5), 5–447 (ಕರುಣ್ ನಾಯರ್, 104.6), 6–453 (ರಿಷಭ್ ಪಂತ್, 107.2), 7–454 (ಶಾರ್ದೂಲ್ ಠಾಕೂರ್, 108.4), 8–458 (ಜಸ್‌ಪ್ರೀತ್ ಬೂಮ್ರಾ, 110.4), 9–469 (ರವೀಂದ್ರ ಜಡೇಜ, 112.1), 10–471 (ಪ್ರಸಿದ್ಧ ಕೃಷ್ಣ, 112.6)
ಬೌಲಿಂಗ್: ಕ್ರಿಸ್ ವೋಕ್ಸ್ 24–4–103–0; ಬ್ರೈಡನ್ ಕಾರ್ಸ್ 22–5–96–1; ಜೋಶ್ ಟಂಗ್ 20–0–86–4; ಬೆನ್ ಸ್ಟೋಕ್ಸ್ 20–2–66–4; ಶೋಯೆಬ್ ಬಷೀರ್ 27–6–100–1

ಇಂಗ್ಲೆಂಡ್ 3 ಕ್ಕೆ 209 (49 ಓವರ್)

ಕ್ರಾಲಿ ಸಿ ನಾಯರ್ ಬಿ ಬೂಮ್ರಾ 4 (6ಎ, 4x1)
ಡಕೆಟ್ ಬಿ ಬೂಮ್ರಾ 62 (94ಎ, 4x9)
ಪೋಪ್ ಬ್ಯಾಟಿಂಗ್ 100 (131ಎ 4x13)
ರೂಟ್ ಸಿ ನಾಯರ್ ಬಿ ಬೂಮ್ರಾ 28 (58ಎ, 4x2)
ಹ್ಯಾರಿ ಬ್ರೂಕ್ ಔಟಾಗದೇ 0 (12ಎ)
ಇತರೆ: 15 (ಲೆಗ್‌ಬೈ 7, ನೋಬಾಲ್ 7, ವೈಡ್ 1)
ವಿಕೆಟ್ ಪತನ: 1–4 (ಜ್ಯಾಕ್ ಕ್ರಾಲಿ, 0.6), 2–126 (ಬೆನ್ ಡಕೆಟ್, 28.3), 3-206 (ಜೋ ರೂಟ್, 46.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 13–2–48–3; ಮೊಹಮ್ಮದ್ ಸಿರಾಜ್ 14–0–50–0; ಪ್ರಸಿದ್ಧ ಕೃಷ್ಣ 10–0–56–0; ರವೀಂದ್ರ ಜಡೇಜ 9–2–25–0, ಶಾರ್ದೂಲ್ ಠಾಕೂರ್ 3–0–23–0

ಸ್ಟುಪಿಡ್‌ನಿಂದ ಸೂಪರ್‌ವರೆಗೆ...

ಲೀಡ್ಸ್: ರಿಷಭ್ ಪಂತ್ ಅವರನ್ನು ಸ್ಟುಪಿಡ್..ಸ್ಟುಪಿಡ್..ಸ್ಟುಪಿಡ್.. ಎಂದು ಕೆಲವು ತಿಂಗಳುಗಳ ಹಿಂದಷ್ಟೇ ತಮ್ಮ ಕಾಮೆಂಟ್ರಿಯಲ್ಲಿ ಬೈಯ್ದಿದ್ದ ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಅವರು ಶನಿವಾರ 'ಸೂಪರ್..' ಎಂದರು.

ಹೆಡಿಂಗ್ಲೆಯಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ರಿಷಭ್ ಶತಕ ಪೂರೈಸಿದಾಗ ಕಾಮೆಂಟ್ರಿ ಮಾಡುತ್ತಿದ್ದ ಗಾವಸ್ಕರ್ ಸಂತಸ ವ್ಯಕ್ತಪಡಿಸಿದರು. 'ಸೂಪರ್..' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕೆಲವು ತಿಂಗಳುಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟೆಸ್ಟ್ ಸರಣಿಯ ಪಂದ್ಯಗಳಲ್ಲಿ ರಿಷಭ್ ಅವರು ವೈಫಲ್ಯ ಅನುಭವಿಸಿ ದ್ದರು. ಅನಗತ್ಯ ಹೊಡೆತಗಳಿಗೆ ಪ್ರಯತ್ನಿಸಿ ಔಟಾಗಿದ್ದರು. ಇದರಿಂದಾಗಿ ಅಸಮಾಧಾನ ಗೊಂಡಿದ್ದ ಗಾವಸ್ಕರ್ ಅವರು ಪಂದ್ಯವೊಂದರಲ್ಲಿ ರಿಷಭ್ ಔಟಾದಾಗ ಸ್ಟುಪಿಡ್ (ಮೂರ್ಖ) ಎಂದು ಹೇಳಿದ್ದರು. ಅವರ ಮಾತು ಸಾಮಾಜಿಕ ಜಾಲತಾಣಗಳಲ್ಲಿ ಕೆಲವರ ಅಸಮಾಧಾನಕ್ಕೂ ಕಾರಣವಾಗಿತ್ತು. ಇದೀಗ ಅವರೇ ಮೆಚ್ಚಿ ನುಡಿಯುವಂತೆ ಪಂತ್ ಸಾಧನೆ ಮಾಡಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕ ಗಳಿಸಿದ ಭಾರತೀಯ ವಿಕೆಟ್‌ಕೀಪರ್–ಬ್ಯಾಟರ್ ಎಂಬ ಹೆಗ್ಗಳಿಕೆಗೆ ರಿಷಭ್ ಪಂತ್ ಅವರು ಪಾತ್ರರಾದರು. ಈ ಹಾದಿಯಲ್ಲಿ ಮಹೇಂದ್ರಸಿಂಗ್ ಧೋನಿ ಅವರ ದಾಖಲೆ ಮೀರಿದರು.

ಎಫ್‌ಐಎಚ್ ಪ್ರೊ ಲೀಗ್ ಹಾಕಿ: ಬೆಲ್ಜಿಯಂ ವಿರುದ್ಧ ಮುಗ್ಗರಿಸಿದ ಭಾರತ

ಪುರುಷರ ತಂಡಕ್ಕೆ ಸತತ ಏಳನೇ ಸೋಲು

ಆ್ಯಂಟ್‌ವರ್ಪ್ (ಬೆಲ್ಜಿಯಂ), (ಪಿಟಿಐ): ನೀರಸ ಪ್ರದರ್ಶನ ಮುಂದುವರಿಸಿರುವ ಭಾರತ ಪುರುಷರ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಯುರೋಪಿನ ಲೆಗ್‌ನಲ್ಲಿ ಸತತ ಏಳನೇ ಸೋಲು ಕಂಡಿದೆ.

ಒಲಿಂಪಿಕ್ಸ್ ಕಂಚು ವಿಜೇತ ಭಾರತ ತಂಡವು ಶನಿವಾರ ನಡೆದ ಪಂದ್ಯದಲ್ಲಿ 3–6 ಗೋಲುಗಳಿಂದ ವಿಶ್ವದ ಮೂರನೇ ಕ್ರಮಾಂಕದ ಬೆಲ್ಜಿಯಂ ತಂಡಕ್ಕೆ ಮಣಿಯಿತು. ಭಾನುವಾರ ರಿವರ್ಸ್ ಲೆಗ್‌ನಲ್ಲಿ ಇದೇ ತಂಡವನ್ನು ಭಾರತ ಎದುರಿಸಲಿದೆ.

ಆರ್ಥರ್ ವ್ಯಾನ್ ಡೊರೆನ್ ಮೊದಲ ನಿಮಿಷದಲ್ಲೇ ಗೋಲು ಗಳಿಸಿ ಬೆಲ್ಜಿಯಂ ತಂಡಕ್ಕೆ ಮುನ್ನಡೆ ಒದಗಿಸಿದರು. ಅಲೆಕ್ಸಾಂಡರ್ ಹೆಂಡ್ರಿಕ್ಸ್ 28ನೇ ನಿಮಿಷದಲ್ಲಿ ಗೋಲು ದಾಖಲಿಸಿದ್ದರಿಂದ ವಿರಾಮದ ವೇಳೆಗೆ ಬೆಲ್ಜಿಯಂ 2–0 ಮುನ್ನಡೆ ಪಡೆಯಿತು. 36ನೇ ನಿಮಿಷದಲ್ಲಿ ದಿಲ್‌ಪ್ರೀತ್ ಸಿಂಗ್ ಮತ್ತು 38ನೇ ನಿಮಿಷದಲ್ಲಿ ಮನ್‌ದೀಪ್ ಸಿಂಗ್ ಚೆಂಡನ್ನು ಗುರಿ ಸೇರಿಸಿದ್ದರಿಂದ ಮತ್ತೆ ತಂಡಗಳ ಸ್ಕೋರ್ 2–2 ಸಮಬಲಗೊಂಡಿತು. ಆದರೆ, ಕೊನೆಯ ಕ್ವಾರ್ಟರ್‌ನಲ್ಲಿ ಬೆಲ್ಜಿಯಂ ತಂಡದ ರೋಮನ್ ಡುವೆಕೋಟ್ (49ನೇ), ಥೈಬಿಯು ಸ್ಟಾಕ್‌ಬ್ರೂಕ್ಸ್ (53ನೇ) ಮತ್ತು ವ್ಯಾನ್ ಡೊರೆನ್ (54ನೇ) ಅವರು ಐದು ನಿಮಿಷಗಳ ಅಂತರದಲ್ಲಿ ನಾಲ್ಕು ಗೋಲು ಗಳಿಸಿದರು.

56ನೇ ನಿಮಿಷದಲ್ಲಿ ಅಮಿತ್ ರೋಹಿದಾಸ್ ಗೋಲು ತಂದಿತ್ತು, ಭಾರತದ ಹಿನ್ನಡೆ ಕೊಂಚ ತಗ್ಗಿಸಿದರು. ಆದರೆ, ಕೊನೆಯ ಕ್ಷಣದಲ್ಲಿ ಟಾಮ್ ಬೂನ್ (59ನೇ) ಮತ್ತೊಂದು ಗೋಲು ಗಳಿಸಿದರು.



ಭಾರತದ ಮನ್‌ದೀಪ್ ಸಿಂಗ್ 'ಎಕ್ಸ್' ಚಿತ್ರ

ವನಿತೆಯರಿಗೂ ನಿರಾಸೆ

ಆ್ಯಂಟ್‌ವರ್ಪ್ (ಬೆಲ್ಜಿಯಂ) (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಕಳಪೆ ಆಟ ಮುಂದುವರಿಸಿರುವ ಭಾರತ ಮಹಿಳಾ ತಂಡ, ಶನಿವಾರ ನಡೆದ ಪಂದ್ಯದಲ್ಲಿ 1–5ರಿಂದ ಆತಿಥೇಯ ಬೆಲ್ಜಿಯಂ ತಂಡಕ್ಕೆ ಮಣಿಯಿತು.

ಇದು ಯುರೋಪಿಯನ್ ಲೆಗ್‌ನಲ್ಲಿ ಭಾರತ ಮಹಿಳಾ ಹಾಕಿ ತಂಡಕ್ಕೆ ಸತತ ಐದನೇ ಸೋಲು.

ದೀಪಿಕಾ ಅವರು (6ನೇ ನಿ.) ಪಂದ್ಯದ ಆರಂಭದಲ್ಲೇ ಗೋಲು ಗಳಿಸಿ ಭಾರತಕ್ಕೆ ಮುನ್ನಡೆ ಒದಗಿಸಿದರು. ಆದರೆ, ಉತ್ತರಾರ್ಧದಲ್ಲಿ ಪುಟಿದೆದ್ದ ಬೆಲ್ಜಿಯಂ, ಸತತ ಐದು ಗೋಲು ಗಳಿಸಿತು. ಈಚೆಗೆ ಲಂಡನ್‌ನಲ್ಲಿ ನಡೆದ ಪಂದ್ಯಗಳಲ್ಲಿ ಆಸ್ಟ್ರೇಲಿಯಾ ಎದುರು 2–3, 1–2 ಮತ್ತು ಅರ್ಜೆಂಟೀನಾ ಎದುರು 1–4, 0–2 ರಿಂದ ಪರಾಭವಗೊಂಡು ಬಸವಳಿದಿದ್ದ ಸಲೀಮಾ ಟೆಟೆ ಪಡೆ, ಗೆಲುವಿನ ಹಳಿಗೆ ಮರಳುವಲ್ಲಿ ಮತ್ತೆ ವಿಫಲವಾಯಿತು.

ಏಷ್ಯನ್ ಸ್ನೂಕರ್: ಪಂಕಜ್, ಚಾವ್ಲಾ ನಾಯಕತ್ವ

ಕೊಲಂಬೊ: ದಿಗ್ಗಜ ಪಂಕಜ್ ಅದ್ವಾನಿ ಮತ್ತು ವಿಶ್ವ 6–ರೆಡ್ ಸ್ನೂಕರ್ ಚಾಂಪಿಯನ್ ಕಮಲ್ ಚಾವ್ಲಾ ಅವರು ಭಾನುವಾರ ಆರಂಭವಾಗಲಿರುವ ಎಸಿಬಿಎಸ್ ಏಷ್ಯನ್ 6–ರೆಡ್ ಸ್ನೂಕರ್ ಚಾಂಪಿಯನ್‌ಷಿಪ್ ಮತ್ತು ಏಷ್ಯನ್ ಟೀಮ್ ಸ್ನೂಕರ್ (15–ರೆಡ್) ಚಾಂಪಿಯನ್‌ಷಿಪ್ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.



ಪಂಕಜ್ ಅದ್ವಾನಿ



ಕಮಲ್ ಚಾವ್ಲಾ

ಇವರಿಬ್ಬರಲ್ಲದೇ ಹಾಲಿ ರಾಷ್ಟ್ರೀಯ ಚಾಂಪಿಯನ್ ಪಾರಸ್ ಗುಪ್ತಾ ಮತ್ತು ಪುಷ್ಪೇಂದರ್ ಸಿಂಗ್ ಅವರೂ ಸ್ಪರ್ಧೆಯಲ್ಲಿದ್ದಾರೆ. ಟೀಮ್ ಚಾಂಪಿಯನ್‌ಷಿಪ್ ವಿಭಾಗದಲ್ಲಿ ಪಂಕಜ್ ಅದ್ವಾನಿ ಅವರು ಭಾರತವನ್ನು ಚಾಂಪಿಯನ್ ಪಟ್ಟಕ್ಕೇರಿಸುವ ಛಲದಲ್ಲಿದ್ದಾರೆ. ಅವರೊಂದಿಗೆ ಬ್ರಿಜೇಶ್ ದಮಾನಿ ಅವರು ತಂಡದಲ್ಲಿದ್ದಾರೆ. ಈ ತಂಡವು ಎರಡು ವರ್ಷಗಳ ಹಿಂದೆ ಇರಾನ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿತ್ತು. ಇವರೊಂದಿಗೆ ವಿಶ್ವ ಗೇಮ್ಸ್ ಚಿನ್ನದ ಪದಕ ವಿಜೇತ ಆದಿತ್ಯ ಮೆಹ್ತಾ ಕೂಡ ಕಣದಲ್ಲಿದ್ದಾರೆ.

ಭಾರತ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಫೆಡರೇಷನ್ ಪ್ರಕಟಿಸಿರುವ ತಂಡ ಇಂತಿದೆ; ಏಷ್ಯನ್ 6–ರೆಡ್ ಸ್ನೂಕರ್ (ಜೂನ್ 22–26): ಕಮಲ್ ಚಾವ್ಲಾ, ಪಾರಸ್ ಗುಪ್ತಾ, ಪುಷ್ಪೇಂದರ್ ಸಿಂಗ್. 15–ರೆಡ್ ಸ್ನೂಕರ್ ಟೀಮ್ (ಜೂನ್ 26–28): ಪಂಕಜ್ ಅದ್ವಾನಿ, ಬ್ರಿಜೇಶ್ ದಮಾನಿ, ಆದಿತ್ಯ ಮೆಹ್ತಾ.

'ಚೀಫ್ ಜಸ್ಟೀಸ್ ಕಪ್' ಪ್ರದಾನ



ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆದ 'ಚೀಫ್ ಜಸ್ಟೀಸ್ ಕಪ್' ರೇಸ್‌ನಲ್ಲಿ ಗೆದ್ದ ರಾಂಕ್ವೆಲಿನೊ ಕುದುರೆಯ ಮಾಲೀಕರಾದ ಎಸ್.ಆರ್.ಸನಾಸ್, ಕಿಶೋರ್ ಎಂ.ಡಿಂಗ್ರ ಮತ್ತು ಅಶೋಕ್ ರಾನ್‌ಪಿಸ್ ಅವರಿಗೆ ಕರ್ನಾಟಕದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಟ್ರೋಫಿ ಪ್ರದಾನ ಮಾಡಿದರು. ಬಿಟಿಸಿ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆರ್. ಮಂಜುನಾಥ್ ರಮೇಶ್, ವ್ಯವಸ್ಥಾಪಕ ಸಮಿತಿಯ ಸದಸ್ಯರಾದ ಚದುರಂಗ ಕಾಂತರಾಜ್ ಅರಸ್ ಮತ್ತು ಸ್ಟೀವರ್ಡ್ ಕೆ.ಎ. ಜಗದೀಶ್ ಪಾಲ್ಗೊಂಡಿದ್ದರು

ಲಂಕಾ- ಬಾಂಗ್ಲಾ ನಡುವಣ ಟೆಸ್ಟ್ ಡ್ರಾ • ಕೊನೆಯ ಪಂದ್ಯ ಆಡಿದ ಮ್ಯಾಥ್ಯೂಸ್

ಎರಡು ಇನಿಂಗ್ಸ್‌ನಲ್ಲೂ ಶಾಂತೊ ಶತಕ

ಗಾಲೆ, ಶ್ರೀಲಂಕಾ (ಎಎಫ್‌ಪಿ): ಮಳೆಯಿಂದ ಅಡಚಣೆಯಾದ ಬಾಂಗ್ಲಾದೇಶ ಮತ್ತು ಶ್ರೀಲಂಕಾ ನಡುವಿನ ಮೊದಲ ಟೆಸ್ಟ್ ಪಂದ್ಯವು ಡ್ರಾನಲ್ಲಿ ಮುಕ್ತಾಯವಾಯಿತು.

ಗೆಲುವಿಗೆ 37 ಓವರ್‌ಗಳಲ್ಲಿ 296 ರನ್‌ಗಳ ಗುರಿ ಬೆನ್ನಟ್ಟಿದ ಆತಿಥೇಯ ತಂಡವು 32 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 72 ರನ್ ಗಳಿಸಿತು. ನಂತರದಲ್ಲಿ ಉಭಯ ತಂಡಗಳ ನಾಯಕರು ಡ್ರಾಕ್ಕೆ ಒಪ್ಪಿಕೊಂಡರು. ಇದರೊಂದಿಗೆ ತವರಿನ ಹೊರಗೆ ಅಪರೂಪದ ಗೆಲುವು ಸಾಧಿಸುವ ಅವಕಾಶ ಬಾಂಗ್ಲಾ ತಂಡದ ಕೈತಪ್ಪಿತು.

ಮೊದಲ ಇನಿಂಗ್ಸ್‌ನಲ್ಲಿ 10 ರನ್‌ಗಳ ಮುನ್ನಡೆ ಪಡೆದಿದ್ದ ಪ್ರವಾಸಿ ತಂಡವು, ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 285 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ನಾಯಕ ನಜ್ಮುಲ್ ಹುಸೇನ್ ಶಾಂತೊ ಎರಡು ಇನಿಂಗ್ಸ್‌ನಲ್ಲೂ (148 ಮತ್ತು ಔಟಾಗದೇ 125) ಶತಕ ದಾಖಲಿಸಿ ಮಿಂಚಿದರು. 2023ರಲ್ಲಿ ಅಫ್ಗಾನಿಸ್ತಾನದ ವಿರುದ್ಧವೂ ಶಾಂತೊ ಡಬಲ್ ಶತಕದ ಸಾಧನೆ ಮೆರೆದಿದ್ದರು.

ಮಳೆ ಬಿಡುವು ನೀಡಿದ ಬಳಿಕ ಆಟ ಪುನರಾರಂಭವಾದಾಗ ಬಾಂಗ್ಲಾ ತಂಡವು 247 ರನ್‌ಗಳ ಮುನ್ನಡೆ ಪಡೆದಿತ್ತು. ಆ ವೇಳೆಗೆ ದಿನದಾಟ ಮುಗಿಯಲು ಇನ್ನೂ 50 ಓವರ್‌ಗಳು ಬಾಕಿಯಿತ್ತು. ಈ ಹಂತದಲ್ಲಿ ಡಿಕ್ಲೇರ್ ಮಾಡಿದ್ದರೆ ಫಲಿತಾಂಶ ಹೊರಬರುವ ಸಾಧ್ಯತೆ ಇತ್ತು.

ಮ್ಯಾಥ್ಯೂಸ್‌ಗೆ ವಿದಾಯ ಪಂದ್ಯ: ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದ ಲಂಕಾದ ಆಲ್‌ರೌಂಡರ್ ಏಂಜಲೊ ಮ್ಯಾಥ್ಯೂಸ್ ಅವರು ತಮ್ಮ ವೃತ್ತಿ ಜೀವನದ 119ನೇ ಮತ್ತು ಅಂತಿಮ ಪಂದ್ಯದ ಕೊನೆಯ ಇನಿಂಗ್ಸ್‌ನಲ್ಲಿ 8 ರನ್ ಗಳಿಸಿ ಔಟಾದರು. ಅವರಿಗೆ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟಿ ಗೌರವ ನೀಡಿದರು.

ಸರಣಿಯ ಎರಡನೇ ಮತ್ತು ಕೊನೆಯ ಟೆಸ್ಟ್ ಪಂದ್ಯ ಕೊಲಂಬೊದಲ್ಲಿ ಇದೇ 25ರಂದು ಆರಂಭವಾಗಲಿದೆ. ನಂತರದಲ್ಲಿ ಉಭಯ ತಂಡಗಳ ನಡುವೆ ತಲಾ ಮೂರು ಏಕದಿನ ಮತ್ತು ಟಿ20 ಪಂದ್ಯಗಳು ನಡೆಯಲಿವೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಬಾಂಗ್ಲಾದೇಶ 153.4 ಓವರ್‌ಗಳಲ್ಲಿ 495. ಶ್ರೀಲಂಕಾ 131.2 ಓವರ್‌ಗಳಲ್ಲಿ 485. ಎರಡನೇ ಇನಿಂಗ್ಸ್: ಬಾಂಗ್ಲಾದೇಶ 87 ಓವರ್‌ಗಳಲ್ಲಿ 6ಕ್ಕೆ 285 ಡಿಕ್ಲೇರ್ಡ್ (ನಜ್ಮುಲ್ ಹುಸೇನ್ ಶಾಂತೊ ಔಟಾಗದೇ 125, ಶಾದ್ಮನ್ ಇಸ್ಲಾಂ 76; ತರಿಂದು ರತ್ನಾಯಕೆ 102ಕ್ಕೆ 3). ಶ್ರೀಲಂಕಾ 32 ಓವರ್‌ಗಳಲ್ಲಿ 4ಕ್ಕೆ 72 (ಪಥುಮ್ ನಿಸ್ಸಾಂಕ 24; ತೈಜುಲ್ ಇಸ್ಲಾಂ 23ಕ್ಕೆ 3). ಫಲಿತಾಂಶ: ಪಂದ್ಯ ಡ್ರಾ. ಪಂದ್ಯದ ಆಟಗಾರ: ನಜ್ಮುಲ್ ಹುಸೇನ್ ಶಾಂತೊ.



ಶತಕ ದಾಖಲಿಸಿದ ನಜ್ಮುಲ್ ಹುಸೇನ್ ಶಾಂತೊ ಎಎಫ್‌ಪಿ ಚಿತ್ರ

4 ರಾಷ್ಟ್ರಗಳ ಹಾಕಿ: ಜರ್ಮನಿಗೆ ಮಣಿದ ಭಾರತ



ಬರ್ಲಿನ್ (ಪಿಟಿಐ): ಭಾರತ ಜೂನಿಯರ್ ಹಾಕಿ ತಂಡವು ಶನಿವಾರ ನಡೆದ ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಜರ್ಮನಿ ಎದುರು 1–7 ಗೋಲುಗಳಿಂದ ಸೋಲನುಭವಿಸಿತು. ಆ ಮೂಲಕ ಟೂರ್ನಿಯಲ್ಲಿ ನಿರಾಶಾದಾಯಕ ಆರಂಭ ಪಡೆಯಿತು.

ಹಾಸ್ಬಾಕ್ ಬೆನ್ ಹ್ಯಾಟ್ರಿಕ್ (25, 51 ಮತ್ತು 54ನೇ ನಿಮಿಷ) ಗೋಲುಗಳನ್ನು ಬಾರಿಸಿ ಆತಿಥೇಯ ತಂಡದ ಗೆಲುವಿನಲ್ಲಿ ಮಿಂಚಿದರು. ನಿಕೊ ಕಿಸ್ಟಿನ್ (4ನೇ ನಿಮಿಷ), ಅಲೆಕ್ ವಾನ್ ಶ್ವೆರಿನ್ (5ನೇ ನಿಮಿಷ) ಮತ್ತು ಪಾಲ್ ಬೆಬಿಕ್ (39ನೇ ನಿಮಿಷ) ಉಳಿದ ಗೋಲುಗಳನ್ನು ಗಳಿಸಿದರು. ಆನಂದ್ ಕುಶ್ವಾಹ (50ನೇ ನಿಮಿಷ) ಭಾರತ ಜೂನಿಯರ್ ತಂಡದ ಏಕೈಕ ಗೋಲನ್ನು ಗಳಿಸಿದರು.

ಬೆಂಗಳೂರು ರೇಸ್

ಸಾವರಿನ್ ನೈಟ್ ಗೆಲ್ಲುವ ನಿರೀಕ್ಷೆ


ಜವಾರೆ ಎಸ್ ಪೂನಾವಾಲ ಕೋಲ್ಟ್ಸ್ ಚಾಂಪಿಯನ್‌ಶಿಪ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಾವರಿನ್ ನೈಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸಾಟಿನ್ ಲಾಸ್ 5, ಸ್ಟಾರ್ ಸಿಂಪೋನಿ 6, ಆಬ್ಸೊಲ್ಯೂಟ್ ಕೆಟ್ರಿನಾ 7
2ನೇ ರೇಸ್: ಆಂಡ್ರೆ 1, ಈನಾಡಿ 3, ಸಿಗಾರ್ ಗೆಲಾಕ್ಸಿ 2
3ನೇ ರೇಸ್: ನೋಬಲ್ ಕಾಸ್ 4, ಲೆಜೆಂಡರಿ ಇಂಪ್ಯಾಕ್ಟ್ 3, ಫೆಲಿಸಾ 1
4ನೇ ರೇಸ್: ಸ್ಟೆಂಟೋರಿಯನ್ 1, ಆರ್ಟ್ ಆಫ್ ರೊಮಾನ್ಸ್ 9, ಮಾಂಟೇರಿಯೊ 2
5ನೇ ರೇಸ್: ಈಗಲ್ ಡೇ 10, ಆರ್ಕೇಡಿಯನ್ 3, ಸೀಕ್ರೆಟ್ ಸೇಂಟ್ 6
6ನೇ ರೇಸ್: ಸಾವರಿನ್ ಕಿಂಗ್ 14, ಸಿಸಿಯಾನ್ 13, ಸರ್ಕಲ್ ಆಫ್ ಡ್ರೀಮ್ಸ್ 3
7ನೇ ರೇಸ್: ಡಿಫೆನ್ಸ್ ಕೌನ್ಸೆಲ್ 5, ಫ್ಲಾಶ್ 1, ಎಕ್ಲಿಪ್ಸ್ ಪರ್ಲ್ 7
8ನೇ ರೇಸ್: ರಾಕ್ ಬ್ಯಾಂಕ್ 3, ಸ್ಟಾರ್ಮ್ ಶ್ಯಾಡೊ 8, ಮ್ಯಾಗ್ನೆಟಿಕ್ 1

ಉತ್ತಮ ಬೆಟ್: ಈಗಲ್ ಡೇ

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
4,5,6,7,8	3,4,5	6,7,8

ಟೆನಿಸ್: ಸಬಲೆಂಕಾಗೆ ಮಾರ್ಕೆತಾ ಆಘಾತ



ಮಾರ್ಕೆತಾ

ಬರ್ಲಿನ್ (ಎಪಿ): ಜೆಕ್ ರಿಪಬ್ಲಿಕ್‌ನ ಮಾರ್ಕೆತಾ ವೊಂಡ್ರೊಸೋವಾ ಅವರು ಜರ್ಮನಿ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಅರಿನಾ ಸಬಲೆಂಕಾಗೆ ಆಘಾತ ನೀಡಿದರು.

ಮಹಿಳೆಯರ ಸಿಂಗಲ್ಸ್‌ನ ಪಂದ್ಯದಲ್ಲಿ ವೊಂಡ್ರೊಸೋವಾ 6-2, 6-4ರ ಸೆಟ್‌ಗಳಿಂದ ಬೆಲರೂಸ್‌ನ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿ ಫೈನಲ್ ಪ್ರವೇಶಿಸಿದರು. ಭಾನುವಾರ ನಡೆಯುವ ಪ್ರಶಸ್ತಿ ಸುತ್ತಿನಲ್ಲಿ ವೊಂಡ್ರೊಸೋವಾ ಅವರು ಚೀನಾದ ಆಟಗಾರ್ತಿ ವಾಂಗ್ ಕ್ಸಿನ್ಯು ಅವರನ್ನು ಎದುರಿಸಲಿದ್ದಾರೆ.